# ಕರ್ನಾಟಕದ ಶಿಕ್ಷಣ ಕ್ರಮದಲ್ಲಿ ಭಾಷೆ, ಮಹಿಳೆಯರ ಸ್ಥಾನಮಾನ ಹಾಗೂ ಕೋಮು ಸಾಮರಸ್ಯ

– ಒಂದು ಅಧ್ಯಯನ

ಪಿ.ಎಚ್.ಡಿ. ಪದವಿಗಾಗಿ

ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ

*ಸಂಶೋಧಕ*

ಬಿ. ಭಾಸ್ಕರ ರಾವ್

'ಸನ್ನಿಧಿ', ಬೈಲಕೆರೆ, ಉಡುಪಿ, ಉಡುಪಿ ಜಿಲ್ಲೆ

*ಸಂಶೋಧನ ಮಾರ್ಗದರ್ಶಕರು*

ಡಾ. ಮಹಾಬಲೇಶ್ವರ ರಾವ್

ಪ್ರಾಂಶುಪಾಲರು, ಡಾ. ಟಿ.ಎಂ.ಎ. ಪೈ ಶಿಕ್ಷಣ ಮಹಾವಿದ್ಯಾಲಯ

ಉಡುಪಿ, ಉಡುಪಿ ಜಿಲ್ಲೆ, ಕರ್ನಾಟಕ

ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೦೧೦

ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ

ಎಂ.ಜಿ.ಎಂ. ಕಾಲೇಜು, ಅಂಚೆ ಕುಂಜಿಬೆಟ್ಟು, ಉಡುಪಿ – ೫೭೬ ೧೦೨

Page 16

# ಕರ್ನಾಟಕದ ಶಿಕ್ಷಣ ಕ್ರಮದಲ್ಲಿ ಭಾಷೆ, ಮಹಿಳೆಯರ ಸ್ಥಾನಮಾನ ಹಾಗೂ ಕೋಮು ಸಾಮರಸ್ಯ

– ಒಂದು ಅಧ್ಯಯನ

**ಪಿ.ಎಚ್.ಡಿ. ಪದವಿಗಾಗಿ**

**ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ**

*ಸಂಶೋಧಕ*

**ಬಿ. ಭಾಸ್ಕರ ರಾವ್**

'ಸನ್ನಿಧಿ', ಬೈಲಕೆರೆ, ಉಡುಪಿ, ಉಡುಪಿ ಜಿಲ್ಲೆ

*ಸಂಶೋಧನ ಮಾರ್ಗದರ್ಶಕರು*

**ಡಾ। ಮಹಾಬಲೇಶ್ವರ ರಾವ್**

ಪ್ರಾಂಶುಪಾಲರು, ಡಾ। ಟಿ.ಎಂ.ಎ. ಪೈ ಶಿಕ್ಷಣ ಮಹಾವಿದ್ಯಾಲಯ

ಉಡುಪಿ, ಉಡುಪಿ ಜಿಲ್ಲೆ, ಕರ್ನಾಟಕ

**ಕನ್ನಡ ವಿಶ್ವವಿದ್ಯಾಲಯ, ಹಂಪಿ**

೨೦೧೦

**ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ**

ಎಂ.ಜಿ.ಎಂ. ಕಾಲೇಜು, ಅಂಚೆ ಕುಂಜಿಬೆಟ್ಟು, ಉಡುಪಿ – ೫೭೬ ೧೦೨

## ಪ್ರಮಾಣ ಪತ್ರ

ನಾನು ಬಿ. ಭಾಸ್ಕರ ರಾವ್, **ಕರ್ನಾಟಕದ ಶಿಕ್ಷಣ ಕ್ರಮದಲ್ಲಿ ಭಾಷೆ, ಮಹಿಳೆಯರ ಸ್ಥಾನಮಾನ ಹಾಗೂ ಕೋಮು ಸಾಮರಸ್ಯ** ಎಂಬ ವಿಷಯದ ಕುರಿತು ಪ್ರೊ. ಡಾ। ಮಹಾಬಲೇಶ್ವರ ರಾವ್ ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುವ ಮಹಾಪ್ರಬಂಧವು ಡಿಸೆಂಬರ್ 2007ರಿಂದ ಜೂನ್ 2010ರ ಅವಧಿಯಲ್ಲಿ ನಾನು ನಡೆಸಿದ ಸಂಶೋಧನಾ ಕಾರ್ಯದ ಸ್ವತಂತ್ರ ಕೃತಿಯಾಗಿದ್ದು ಇದು ಈ ವಿಶ್ವ ವಿದ್ಯಾಲಯ ಅಥವಾ ಇನ್ಯಾವುದೇ ವಿಶ್ವವಿದ್ಯಾಲಯ ಅಥವಾ ಇಂತಹ ಇನ್ಯಾವುದೇ ಉನ್ನತ ಶಿಕ್ಷಣ ಸಂಸ್ಥೆಗಳಿಂದ ನೀಡಲ್ಪಡುವ ಯಾವುದೇ ಪದವಿ, ಡಿಪ್ಲೊಮಾ ಅಥವಾ ಫೆಲೋಶಿಪ್‌ಗೆ, ತತ್ಸಮಾನ ಉಪಾಧಿಗಳ ಪ್ರಾಪ್ತಿಗೆ ಆಧಾರವಾಗಿಲ್ಲ ಹಾಗೂ ಇದನ್ನು ಯಾವುದೇ ಆರ್ಥಿಕ ಲಾಭಕ್ಕಾಗಿ ಇಡಿಯಾಗಿ ಅಥವಾ ಬಿಡಿಯಾಗಿ ಬಳಸಿಕೊಂಡಿಲ್ಲ ಎಂದು ಈ ಮೂಲಕ ದೃಢಪಡಿಸುತ್ತೇನೆ.

ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ.
ಎಂ.ಜಿ.ಎಂ. ಕಾಲೇಜು,
ಉಡುಪಿ–576002

ದಿನಾಂಕ:15.04.2010

ಸಂಶೋಧನಾ ವಿದ್ಯಾರ್ಥಿ

## ಯೋಗ್ಯತಾ ಪತ್ರ

**ಕರ್ನಾಟಕದ ಶಿಕ್ಷಣ ಕ್ರಮದಲ್ಲಿ ಭಾಷೆ, ಮಹಿಳೆಯರ ಸ್ಥಾನಮಾನ ಹಾಗೂ ಕೋಮು ಸಾಮರಸ್ಯ** ಎಂಬ ಶೀರ್ಷಿಕೆಯಲ್ಲಿ ಬಿ. ಭಾಸ್ಕರ ರಾವ್ ಬರೆದು ಸಿದ್ಧಪಡಿಸಿರುವ ಮಹಾಪ್ರಬಂಧವು ಅವರು ಡಿಸೆಂಬರ್ 2007ರಿಂದ ಜೂನ್ 2010ರ ಅವಧಿಯಲ್ಲಿ ನನ್ನ ಮಾರ್ಗದರ್ಶನದಲ್ಲಿ ಕೈಗೊಂಡ ಸಂಶೋಧನಾ ಕಾರ್ಯದ ದಾಖಲೆಯಾಗಿದ್ದು ಇದನ್ನು ಈ ವಿಶ್ವವಿದ್ಯಾಲಯ ಅಥವಾ ಇನ್ಯಾವುದೇ ವಿಶ್ವವಿದ್ಯಾಲಯ ಅಥವಾ ಇಂತಹ ಇನ್ಯಾವುದೇ ಉನ್ನತ ಶಿಕ್ಷಣ ಸಂಸ್ಥೆಗಳಿಂದ ನೀಡಲ್ಪಡುವ ಯಾವುದೇ ಪದವಿ, ಡಿಪ್ಲೊಮಾ ಅಥವಾ ಫೆಲೋಶಿಪ್‌ಗಾಗಿ ಬಳಸಿಕೊಂಡಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ,
ಎಂ.ಜಿ.ಎಂ. ಕಾಲೇಜು,
ಉಡುಪಿ–576002

ದಿನಾಂಕ:15.04.2010

ಮಾರ್ಗದರ್ಶಕರು

Dr. MAHABALESHWARA RAO
PRINCIPAL
Dr. T.M.A. Pai College of Education
Kunjibettu, UDUPI - 576 102
UDUPI DISTRICT

## ಕೃತಜ್ಞತೆಗಳು

'ಕರ್ನಾಟಕದ ಶಿಕ್ಷಣ ಕ್ರಮದಲ್ಲಿ ಭಾಷೆ, ಮಹಿಳೆಯರ ಸ್ಥಾನಮಾನ ಹಾಗೂ ಕೋಮು ಸಾಮರಸ್ಯ: ಒಂದು ಅಧ್ಯಯನ' ಎನ್ನುವ ಶೀರ್ಷಿಕೆಯಲ್ಲಿ ಕನ್ನಡ ವಿಶ್ವವಿದ್ಯಾಲಯಕ್ಕೆ ಈ ಸಂಶೋಧನಾ ಮಹಾಪ್ರಬಂಧವನ್ನು ಸಾದರಪಡಿಸುತ್ತಿರುವ ಸಂದರ್ಭದಲ್ಲಿ ಮಹಾಪ್ರಬಂಧವನ್ನು ಪೂರ್ಣಗೊಳಿಸಲು ನೆರವಾದವರನ್ನು ಕೃತಜ್ಞತಾಪೂರ್ವಕವಾಗಿ ಮತ್ತು ವಿನಯಪೂರ್ವಕವಾಗಿ ನೆನಪಿಸಿಕೊಳ್ಳುತ್ತೇನೆ.

ಉಡುಪಿಯ ಡಾ। ಟಿ.ಎಂ.ಎ. ಪೈ ಶಿಕ್ಷಣ ಮಹಾವಿದ್ಯಾಲಯದ ಪ್ರಾಂಶುಪಾಲರೂ ಕರ್ನಾಟಕದ ಪ್ರಸಿದ್ಧ ಶಿಕ್ಷಣತಜ್ಞರೂ ಆಗಿರುವ ಡಾ। ಮಹಾಬಲೇಶ್ವರ ರಾವ್ ಇವರು ನನ್ನ ಮಾರ್ಗದರ್ಶಕರಾಗಿ ನನ್ನ ಸಂಶೋಧನಾ ಪ್ರಬಂಧ ಪೂರ್ಣಗೊಳ್ಳುವವರೆಗೂ ವಿವಿಧ ಹಂತಗಳಲ್ಲಿ ಮತ್ತು ವಿವಿಧ ನೆಲೆಗಳಲ್ಲಿ ನನಗೆ ಮಾರ್ಗದರ್ಶನ ನೀಡಿದ್ದಾರೆ. ಇವರಿಗೆ ನಾನು ತುಂಬ ಕೃತಜ್ಞನಾಗಿದ್ದೇನೆ.

- ಈ ಅಧ್ಯಯನ ನಡೆಸಲು ಅವಕಾಶ ಮಾಡಿಕೊಟ್ಟ ಕನ್ನಡ ವಿಶ್ವವಿದ್ಯಾಲಯಕ್ಕೆ
- ಉಡುಪಿಯ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರದ ಮೂಲಕ ನನ್ನ ಸಂಶೋಧನೆಗೆ ನೋಂದಾವಣೆ ಮಾಡಲು ಅವಕಾಶ ಮಾಡಿಕೊಟ್ಟ ಕೇಂದ್ರದ ನಿರ್ದೇಶಕರು ಹಾಗೂ 45 ವರ್ಷಗಳ ಹಿಂದೆ ಪ್ರೌಢಶಾಲಾ ಹಂತದಲ್ಲಿ ಉಡುಪಿಯ ಎಸ್.ಎಂ.ಎಸ್.ಪಿ. ಸಂಸ್ಕೃತ ಕಾಲೇಜು ಹೈಸ್ಕೂಲ್‌ನಲ್ಲಿ ಕೆಲಕಾಲ ನನಗೆ ವಿದ್ಯಾಗುರುಗಳಾಗಿದ್ದ ಶ್ರೀ ಎಚ್. ಕೃಷ್ಣ ಭಟ್ ಇವರಿಗೆ
- ಸಂಶೋಧನ ಕೇಂದ್ರದ ಕಚೇರಿ ಅಧಿಕಾರಿಗಳಿಗೆ ಮತ್ತು ಗ್ರಂಥಾಲಯದ ಅಧಿಕಾರಿಗಳಿಗೆ
- ಮಹಾಪ್ರಬಂಧದ ಬೆರಳಚ್ಚು ಮತ್ತು ಪುಟವಿನ್ಯಾಸದಲ್ಲಿ ಸಹಕರಿಸಿದ ಡಿಟಿಪಿ ತಜ್ಞ ಶ್ರೀ ಗಣೇಶ್ ಕುಮಾರ್ ಇವರಿಗೆ
- ಈ ಅಧ್ಯಯನದ ಅವಧಿಯಲ್ಲಿ ಹಲವು ರೀತಿಗಳಲ್ಲಿ ಸಹಕರಿಸಿದ ನನ್ನ ಪತ್ನಿ ಶಾಂತಾ ಎ., ಪುತ್ರರಾದ ಶರತ್ ಕುಮಾರ್ ಬಿ. ಮತ್ತು ಸನತ್ ಭಾಸ್ಕರ್ ಬಿ.

ಇವರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.

ಬಿ. ಭಾಸ್ಕರ ರಾವ್

# ಕರ್ನಾಟಕದ ಶಿಕ್ಷಣ ಕ್ರಮದಲ್ಲಿ ಭಾಷೆ, ಮಹಿಳೆಯರ ಸ್ಥಾನಮಾನ ಹಾಗೂ ಕೋಮು ಸಾಮರಸ್ಯ

– ಒಂದು ಅಧ್ಯಯನ

**ಪುಟ ಸಂಖ್ಯೆ**

**ವಿಷಯ ಸೂಚಿ**

# ಅಧ್ಯಾಯ ಒಂದು: ಪೀಠಿಕೆ

## ಪೀಠಿಕೆ

ಆಧುನಿಕ ಜಗತ್ತಿನ ಚಲನಶೀಲತೆ (dynamics) ಮತ್ತು ಸಂಕೀರ್ಣತೆಗಳು ಸಮಕಾಲೀನ ಸಮಾಜ, ಶಿಕ್ಷಣ, ರಾಜಕಾರಣ, ಧರ್ಮ ಮತ್ತು ಮಹಿಳೆಯರ ಸ್ಥಾನಮಾನದ ಮೇಲೆ ದೂರಗಾಮೀ ಪರಿಣಾಮಗಳನ್ನು ಬೀರುತ್ತ ಇಂದಿನ ಶೈಕ್ಷಣಿಕ ಹಾಗೂ ಸಾಮಾಜಿಕ ವ್ಯವಸ್ಥೆಯ ಬದಲಾವಣೆಯ ಮಾದರಿಯಲ್ಲಿ (paradigm shift) ಏನಾದರೂ ಬದಲಾವಣೆ, ಹೊಸತನ (novelty) ತರಬೇಕೆಂದು ಬಯಸುವ ಯಾರಿಗೇ ಆದರೂ ಒಂದು ಪಂಥಾಹ್ವಾನ ಒಡ್ಡುತ್ತವೆ. ಪ್ರಸ್ತುತ ಸಂಶೋಧನಾ ಅಧ್ಯಯನವು ಇಂತಹ ಒಂದು ಪಂಥಾಹ್ವಾನವನ್ನು ಸ್ವೀಕರಿಸಿ ಕರ್ನಾಟಕದ ಶಿಕ್ಷಣ ಕ್ರಮದಲ್ಲಿ ಭಾಷೆ/ಸಾಹಿತ್ಯ, ಸಮಾಜ ಶಾಸ್ತ್ರ ಮತ್ತು ಇತಿಹಾಸದ ಪಠ್ಯಪುಸ್ತಕಗಳಲ್ಲಿ, ಪ್ರಾಥಮಿಕ ಹಂತದಿಂದ ಪ್ಲಸ್ 2 (ಪದವಿ ಪೂರ್ವ) ಹಂತದವರೆಗಿನ ಪಠ್ಯಕ್ರಮದಲ್ಲಿ ಬಳಸಲಾಗಿರುವ ಭಾಷೆಗೂ, ಆ ಭಾಷೆಯ ಮೂಲಕ ಅಭಿವ್ಯಕ್ತಿಸಲಾಗಿರುವ ವಿಷಯ (content)ಕ್ಕೂ, ಸಮಾಜದಲ್ಲಿ ಮಹಿಳೆಯರಿಗಿರುವ ಸ್ಥಾನಮಾನಕ್ಕೂ, ಪಠ್ಯಗಳಲ್ಲಿ ಚಿತ್ರಿತವಾಗಿರುವ ಮಹಿಳೆಯ ಚಿತ್ರಕ್ಕೂ ಮತ್ತು ಸದ್ಯದ ಸಮಾಜದಲ್ಲಿ ಕಂಡುಬರುವ ಹಿಂಸೆಗೂ ಅಥವಾ ಕೋಮು ಹಿಂಸೆಗೂ ಏನಾದರೂ ಸಂಬಂಧವಿದೆಯೆ? ಎಂದು ಶೋಧಿಸುವ ಒಂದು ಪ್ರಯತ್ನವಾಗಿದೆ.

ಜಾಗತೀಕರಣದ ಕಬಂಧ ಬಾಹುಗಳು ವಿಶ್ವದೆಲ್ಲೆಡೆ ಪ್ರಾದೇಶಿಕ ಅನನ್ಯತೆ ಅಥವಾ ಅಸ್ಮಿತೆ (identity)ಯನ್ನು ಅಳಿಸಿಹಾಕಿಬಿಡಬಹುದೆಂಬ ಭಯ ಶಿಕ್ಷಣ-ಸಂಸ್ಕೃತಿಪ್ರಿಯರನ್ನು ಕಾಡುತ್ತಿದೆ. ಅಭಿವೃದ್ಧಿಯ ಹೆಸರಿನಲ್ಲಿ ಪಾಶ್ಚಾತ್ಯ ಜಗತ್ತಿನ ಕಳಪೆ ತಂತ್ರಜ್ಞಾನದ ಯಂತ್ರ ಸಾಮಗ್ರಿಗಳಿಗೆ ಭಾರತದಂತಹ ಅಭಿವೃದ್ಧಿಶೀಲ ದೇಶಗಳಲ್ಲಿ ಮಾರುಕಟ್ಟೆಯನ್ನು ನಿರ್ಮಿಸಿ ತಮಗೆ ಬೇಡವಾದ ತಂತ್ರಜ್ಞಾನವನ್ನು ಭಾರತಕ್ಕೆ ರವಾನಿಸಿ ಸಿಕ್ಕಷ್ಟು ಪುಡಿಕಾಸನ್ನು ಬಾಚಿಕೊಳ್ಳುವ ಆತುರದಲ್ಲಿರುವ ಬಹುರಾಷ್ಟ್ರೀಯ ಕಂಪೆನಿಗಳು ಬೃಹತ್ ಅಣೆಕಟ್ಟು (hydel), ಕಲ್ಲಿದ್ದಲು ಆಧಾರಿತ ಉಷ್ಣ ವಿದ್ಯುತ್ ಸ್ಥಾವರ ಇತ್ಯಾದಿ ಯೋಜನೆಗಳನ್ನು ಭಾರತದ ನೆಲದಲ್ಲಿ ಅನುಷ್ಠಾನಗೊಳಿಸುವ ತಮ್ಮ ಹುನ್ನಾರದಲ್ಲಿ ಯಶಸ್ವಿಯಾಗಿವೆ, ಇನ್ನೂ ಆಗುತ್ತಿವೆ. ಪರಿಣಾಮವಾಗಿ ಸಂಭವಿಸುತ್ತಿರುವ ನೂರಾರು ಹಳ್ಳಿಗಳ

ಮುಳುಗಡೆ, ಲಕ್ಷೋಪಲಕ್ಷ ಜನರ ಸ್ಥಳಾಂತರ, ಬಲಾತ್ಕಾರ ಪೂರ್ವಕವಾದ ವಲಸೆ, ಅಪಾರ ಪ್ರಮಾಣದ ಪರಿಸರ ನಾಶ ಒಂದೆಡೆಯಾದರೆ ಇನ್ನೊಂದೆಡೆ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಇತ್ಯಾದಿಗಳು ತರುವ ತುರ್ತು ಸಂಪತ್ತಿಗೆ ಮಾರುಹೋದ ಮಧ್ಯಮ ವರ್ಗದ ಆಸಕ್ತಿ ಬದಲಾವಣೆಯ ಪರಿಣಾಮವಾಗಿ ಲಿಬರಲ್ ಎಜುಕೇಶನ್‌ನ ಜೀವನಾಡಿಯಾಗಿದ್ದ ಮಾನವಿಕ ವಿಷಯಗಳು (humanities) ಹಾಗೂ ಶುದ್ಧ ವಿಜ್ಞಾನ (pure science)ದ ಅಧ್ಯಯನ ಅಳಿವಿನ ಅಂಚಿಗೆ ಬಂದು ನಿಂತಿದೆ. "ಬುದ್ಧಿವಂತ ವಿದ್ಯಾರ್ಥಿಗಳಿಗೆಲ್ಲ ಐ.ಟಿ., ಬಿ.ಟಿ., ದಡ್ಡ ವಿದ್ಯಾರ್ಥಿಗಳಿಗೆ ಭಾಷೆ/ಸಾಹಿತ್ಯ/ಮಾನವಿಕ ವಿಷಯಗಳು" ಎಂಬ ಅಘೋಷಿತ ಘೋಷಣೆ ಸಮಾಜದಲ್ಲಿ ಅನುರಣಿಸುತ್ತಿದೆ. ಇದರೊಂದಿಗೆ ಶಿಕ್ಷಣ ಮಾಧ್ಯಮದ ಪ್ರಶ್ನೆ ಇನ್ನೂ ಬಗೆಹರಿಯದ ಸಮಸ್ಯೆಯಾಗಿಯೇ ಉಳಿದಿದೆ. ಆಂಗ್ಲ ಮಾಧ್ಯಮ ಶಿಕ್ಷಣದಿಂದ ದೊರಕುವ ಆರ್ಥಿಕ, ಸಾಮಾಜಿಕ ಸವಲತ್ತುಗಳು, ನೌಕರಿಯ ಅವಕಾಶಗಳು ಕನ್ನಡ ಶಾಲೆಗಳ ಪಾಲಿಗೆ ಮಾರಕ ಹೊಡೆತವಾಗಿ ಪರಿಣಮಿಸಿ ಪ್ರಾದೇಶಿಕ ಭಾಷೆಗಳ, ಕನ್ನಡ ಶಾಲೆಗಳ 'ಗ್ರಾಮೀಣ ಭಾರತ' ಮತ್ತು ಆಂಗ್ಲ ಮಾಧ್ಯಮ ಶಾಲೆಗಳ 'ನಗರ ಭಾರತ'ದ ನಡುವಣ ಕಂದಕ ದಿನಗಳೆದಂತೆ ಇನ್ನಷ್ಟು ದೊಡ್ಡದಾಗುತ್ತಿದೆ. ಹಳ್ಳಿಗಳ, ಗ್ರಾಮೀಣ ಜನತೆಯ, ಬಡವರ, ದಲಿತರ ಬದುಕು ದಿನದಿಂದ ದಿನಕ್ಕೆ ಹೆಚ್ಚು ಹೆಚ್ಚು ದುಸ್ತರವಾಗುತ್ತ, ರೈತರ ಆತ್ಮಹತ್ಯೆಗಳು ಮಾಮೂಲಿ ಘಟನೆಗಳು ಎನ್ನಿಸುವ ಮಟ್ಟಕ್ಕೆ ಸಮಾಜ ಸ್ಪಂದನಶೂನ್ಯವಾಗುತ್ತಿದೆ.

ಈ ನಡುವೆ ಒಂದು ವರ್ಗದ, ಸಮುದಾಯದ, ಜಾತಿಯ ಅಥವಾ ಧರ್ಮದ ನಾಯಕನೆನ್ನಿಸಿಕೊಂಡವನ ಪ್ರತಿಮೆಗೆ ಯಾರೋ ಕಿಡಿಗೇಡಿಗಳು ಚಪ್ಪಲಿ ಹಾರ ಹಾಕಿದರು ಎನ್ನುವ ಕಾರಣಕ್ಕಾಗಿಯೋ ಅಥವಾ ಪೂಜಾಸ್ಥಳವೊಂದರ ಎದುರು ಯಾವುದೋ ಒಂದು ಪ್ರಾಣಿಯ ಕಾಲು/ತಲೆ ಎಸೆದರೆಂಬ ಕಾರಣಕ್ಕಾಗಿಯೋ ಹುಟ್ಟಿಕೊಳ್ಳುವ ಹಿಂಸೆ, ಪ್ರಾರ್ಥನಾ ಮಂದಿರಗಳ ಮೇಲೆ ನಡೆಯುವ ದಾಳಿ ವ್ಯಾಪಕವಾಗಿ ಹರಡಿ ಒಂದು ಸಮುದಾಯದ ಜನ ನಿತ್ಯ ಭಯದಲ್ಲಿ ಬದುಕುವಂತಾಗುತ್ತಿದೆ. ಕೆಲವೊಮ್ಮೆ ಪ್ರಾರ್ಥನಾ ಮಂದಿರಗಳ ಮೇಲೆ ನಡೆಯುವ ದಾಳಿಗಳು ಯಾವ ರೀತಿಯಲ್ಲಿ ಪುನರಾವರ್ತಿತವಾಗುತ್ತವೆಂದರೆ ನಮ್ಮ ರಾಜ್ಯದಲ್ಲಿ 2008ರಿಂದ ಪ್ರಾರ್ಥನಾ ಮಂದಿರಗಳ ಮೇಲೆ ನಡೆಯುತ್ತಿರುವ ದಾಳಿಗಳಿಗೆ ಸಂಬಂಧಿಸಿ ತಪ್ಪಿತಸ್ಥರ ವಿರುದ್ಧ ಯಾವ ಕ್ರಮ

ಕೈಗೊಳ್ಳಲಾಗಿದೆ ಎಂದು ಸಮಗ್ರ ವಿವರ ಕೋರಿ ರಾಜ್ಯ ಮಾನವ ಹಕ್ಕು ಆಯೋಗ ರಾಜ್ಯ ಸರಕಾರಕ್ಕೆ ನೋಟೀಸು ಜಾರಿಗೊಳಿಸಿದ ಘಟನೆ ಕೂಡ ಜರಗಿತು (ವರದಿ: ಉದಯವಾಣಿ 19.02.2010) ರಾಜ್ಯ ಮಾನವ ಹಕ್ಕು ಆಯೋಗದ ಅಧ್ಯಕ್ಷ ಡಾ। ಜಸ್ಟಿಸ್ ಎಸ್. ಆರ್. ನಾಯಕ್ ಅವರು 18.02.2010ರಂದು ದ.ಕನ್ನಡ ಜಿಲ್ಲಾಧಿಕಾರಿ ಕಚೇರಿಯಲ್ಲಿ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡುತ್ತಾ ತಿಳಿಸಿದ ವಿಷಯಗಳು ಮಹತ್ವಪೂರ್ಣ: ರಾಜ್ಯದಲ್ಲಿ ಅದರಲ್ಲೂ ಮುಖ್ಯವಾಗಿ ದಕ್ಷಿಣಕನ್ನಡ, ಉಡುಪಿ ಮತ್ತು ಉತ್ತರಕನ್ನಡ ಜಿಲ್ಲೆಗಳಲ್ಲಿ ಪ್ರಾರ್ಥನಾ ಮಂದಿರಗಳ ಮೇಲೆ ಪದೇ ಪದೇ ನಡೆದ ಆಕ್ರಮಣಗಳ ಕುರಿತು ರಾಜ್ಯ ಸರಕಾರ ಸಮರ್ಪಕವಾಗಿ ಕರ್ತವ್ಯ ನಿರ್ವಹಿಸಿಲ್ಲ.

2008ರಲ್ಲಿ ಒಂದೇ ದಿನ ರಾಜ್ಯದ ಸುಮಾರು 8 ಜಿಲ್ಲೆಗಳಲ್ಲಿ ಪ್ರಾರ್ಥನಾ ಮಂದಿರಗಳ ಮೇಲೆ ಆಕ್ರಮಣ ನಡೆಸಲಾಯಿತು. ಅನಂತರ ಕೂಡ ಈ ಘಟನೆ ಪುನರಾವರ್ತನೆಯಾಗುತ್ತಿದೆ. ಈ ರೀತಿ ವ್ಯವಸ್ಥಿತವಾಗಿ ದಾಳಿಗಳು ಸಂಭವಿಸುತ್ತಿವೆ. ಅಂದರೆ ಈ ಎಲ್ಲಾ ಘಟನೆಗಳ ಹಿಂದೆ ನಿರ್ದಿಷ್ಟ ಸಂಘಟನೆ ಕೆಲಸ ಮಾಡುತ್ತಿದೆ ಎಂದು ಅರ್ಥ. (ನಾಯಕ್ ಎಸ್.ಆರ್, ಮಾನವ ಹಕ್ಕು ಆಯೋಗದಿಂದ ನೋಟೀಸು, ಉದಯವಾಣಿ 19.02.2010). ಹೀಗಾದಾಗೆಲ್ಲ ಆತಂಕಿತರಾಗುವ ಸೆಕ್ಯೂಲರಿಸ್ಟರು, ಧರ್ಮನಿರಪೇಕ್ಷರು, ಬುದ್ಧಿಜೀವಿಗಳು ಅಸಹಾಯಕರಾಗುವ ಸ್ಥಿತಿ ನಿರ್ಮಾಣವಾಗುತ್ತಿದೆ. ಯಾವುದೇ ಹಿಂಸೆ ನಡೆದಾಗ ಅತ್ಯಂತ ಹೆಚ್ಚು ದೌರ್ಜನ್ಯಕ್ಕೊಳಗಾಗುವ ಮಹಿಳೆಯರು ಪುರುಷ ಪ್ರಧಾನ ಅಧಿಕಾರದ ಚೌಕಟ್ಟಿನಲ್ಲಿ ಮೂಕಪ್ರೇಕ್ಷಕರಾಗಬೇಕಾಗುತ್ತದೆ.

"ಗಂಡು ಕೂತು ಕೆಟ್ಟ. ಹೆಣ್ಣು ಹೊರಗೆ ಹೋಗಿ ಕೆಟ್ಟಳು", "ಹೆಣ್ಣಿಗೆ ಸ್ವಾತಂತ್ರ್ಯವಿಲ್ಲ", "ಹೆಣ್ಣು ಅಬಲೆ", "ಹೆಂಗಸರ ಮಾತನ್ನು ಯಾರು ಕೇಳ್ತಾರೆ?", "ಹೆಂಗಸಿಗೆ ಮೊಣಕಾಲಿನಷ್ಟೆ ಬುದ್ಧಿ" ಇತ್ಯಾದಿ ಮಾತುಗಳು ಹೆಣ್ಣಿನ ಬಗ್ಗೆ ಪುರುಷ ಪ್ರಧಾನ ಸಮಾಜದ ಧೋರಣೆಯನ್ನು ಸೂಚಿಸುತ್ತವೆ. ಹೆಣ್ಣಿಗೆ ಸಾಂಪ್ರದಾಯಿಕವಾದ ಸಮಾಜದಲ್ಲಿ ಸ್ಥಾನವಿರಲಿಲ್ಲ, ಹೆಣ್ಣು ಏನಿದ್ದರೂ ಕಸಮುಸುರೆ ತೊಳೆಯುವವಳು, ಮಕ್ಕಳ ಲಾಲನೆ ಪಾಲನೆ ಮಾಡುವವಳು, ಅವಳು ಉತ್ಪಾದನಾ ಪ್ರಕ್ರಿಯೆಯಲ್ಲಿ ತೊಡಗಿ ತನ್ನದಾದ ದೇಣಿಗೆ ನೀಡಿದರೂ ಆಕೆಯ ದುಡಿಮೆ, ಉತ್ಪಾದನೆ ಎಲ್ಲವೂ ಕ್ಷುಲ್ಲಕ ಎಂಬ ಭಾವನೆ ನಿನ್ನೆ ಮೊನ್ನೆ ತನಕ ಪ್ರಚಲಿತದಲ್ಲಿತ್ತು. ಇದರಿಂದಾಗಿ ನಮ್ಮ ಸಾಂಪ್ರದಾಯಿಕ

ಸಮಾಜಗಳಲ್ಲಿ ಹೆಣ್ಣು ಮಕ್ಕಳನ್ನು ಹೆರುವ ಹೊರುವ ಯಂತ್ರವಾದಳು. ಶೋಷಣೆಯನ್ನು ಮೂಕವಾಗಿ ಸಹಿಸುವ ಬೊಂಬೆಯಾದಳು (ಮಹಾಭಲೇಶ್ವರ ರಾವ್:2007).

ಆದರೆ ಆಧುನಿಕ ವಿದ್ಯಾಭ್ಯಾಸ ಹೆಣ್ಣಿನ ಘನತೆ, ಗೌರವವನ್ನು ಎತ್ತಿಹಿಡಿಯಿತು. ಪರಿಣಾಮವಾಗಿ ಇಂದು ಎಲ್ಲ ರಂಗಗಳಲ್ಲೂ ಮಹಿಳಾ ಸಬಲೀಕರಣದ ಪ್ರಯತ್ನಗಳು ನಡೆಯುತ್ತಿವೆ. ಮಾನವ ಸಂಪನ್ಮೂಲ ಅಭಿವೃದ್ಧಿಯಲ್ಲಿ ಮಹಿಳೆಯರಿಗೂ ಪ್ರಮುಖ ಸ್ಥಾನ ದೊರಕುತ್ತಿದೆ. ಮಹಿಳೆಯರನ್ನು ಬಲವಂತವಾಗಿಸುವ ಮಹಿಳಾ ಸಬಲೀಕರಣ, ಅಬಲೆಯರ ಸಬಲೀಕರಣ ಯೋಜನೆಗಳು ಅಲ್ಲಿ ಇಲ್ಲಿ ಕಾರ್ಯಗತಗೊಳ್ಳುತ್ತವೆಯಾದರೂ ಸಮಸ್ಯೆಯ ಮೂಲಕ್ಕೆ ಹೋಗಿ ಯಾಕೆ ಹೀಗೆಲ್ಲ ಆಗುತ್ತಿದೆ? ಎಂದು ಶೋಧಿಸುವ ಕೆಲಸ ಆಗುತ್ತಿಲ್ಲ. ಮೂಲತ: ನಾವು ಎಲ್ಲಿ ಎಡವಿದ್ದೇವೆ? ಮಹಿಳೆಯರ ಕುರಿತು ನಮ್ಮ ಸಮಾಜದ ಒಟ್ಟು ನಿಲುವಿಗೂ ನಮ್ಮ ಶಾಲೆ ಕಾಲೇಜುಗಳಲ್ಲಿ ಸಮೂಹ ಮಾಧ್ಯಮಗಳಲ್ಲಿ, ಸಿನಿಮಾ ಹಾಗೂ ಟಿ.ವಿ. ಧಾರಾವಾಹಿಗಳಲ್ಲಿ ಮಹಿಳೆ ಚಿತ್ರಿತವಾಗುತ್ತಿರುವ ರೀತಿಗೂ ಇರುವ ಸಂಬಂಧವನ್ನು ವಿಶ್ಲೇಷಿಸುವ ಗಂಭೀರ ಪ್ರಯತ್ನಗಳು ನಡೆಯುತ್ತಿಲ್ಲ.

ಇಂತಹ ಒಂದು ಪ್ರಯತ್ನವಾಗಿ ಲಭ್ಯ ಪರಿಕರಗಳ ಮಿತಿಯಲ್ಲಿ, 1980ರ ದಶಕದಲ್ಲಿ ಬಳಕೆಯಲ್ಲಿದ್ದ ಪಠ್ಯಪುಸ್ತಕಗಳ ಮತ್ತು 1986ರ ರಾಷ್ಟ್ರೀಯ ಶಿಕ್ಷಣ ನೀತಿಯನ್ವಯ ಬಳಕೆಗೆ ಬಂದ ಪಠ್ಯಪುಸ್ತಕಗಳ ತೌಲನಿಕ ಅಧ್ಯಯನವನ್ನು ಸೀಮಿತ ಉದಾಹರಣೆಗಳ ಮೂಲಕ ಕೈಗೊಳ್ಳಲಾಯಿತು.

## ಅಧ್ಯಯನದ ಹಿನ್ನೆಲೆ

ಓರ್ವ ಅಧ್ಯಾಪಕನಾಗಿ ಕಳೆದ ಮೂರೂವರೆ ದಶಕಗಳಿಂದ ಕರ್ನಾಟಕದ ಶಿಕ್ಷಣ ರಂಗವನ್ನು ಸೂಕ್ಷ್ಮವಾಗಿ ಗಮನಿಸುತ್ತ ಬಂದಿರುವ ಈ ಸಂಶೋಧಕ ಶಾಲಾ ಕಾಲೇಜುಗಳ ಪಠ್ಯಪುಸ್ತಕಗಳನ್ನು, ಬೋಧನಾ ಕ್ರಮವನ್ನು ಹಾಗೂ ಶಿಕ್ಷಕರ ಸಾಮಾಜಿಕ ಧಾರ್ಮಿಕ ನಿಲುವುಗಳನ್ನು, ಅವರು ರೂಢಿಸಿಕೊಂಡಿರುವ ಮನೋಧರ್ಮವನ್ನು ವಿಶ್ಲೇಷಣೆಗೊಳಪಡಿಸಿದಾಗ ಕೆಲವು ಕುತೂಹಲಕಾರಿಯಾದ ಅಂಶಗಳು ಕಂಡುಬಂದವು.

ಉದಾಹರಣೆಗೆ: ತರಗತಿಗಳಲ್ಲಿ ವಿಜ್ಞಾನ ಬೋಧಿಸುವ ಶಿಕ್ಷಕರು ಭೂಮಿಯ ಉಗಮ, ಜೀವಿಗಳ ವಿಕಾಸ, ಜೀವ-ಜಗತ್ತಿನ ಸಂಬಂಧಗಳನ್ನು ಹೇಳುವಾಗ ಡಾರ್ವಿನನ ವಿಕಾಸವಾದವನ್ನು ತರಗತಿಯೊಳಗೆ ಬೋಧಿಸುತ್ತಾರಾದರೂ ಅವರ ವೈಯಕ್ತಿಕ ಬದುಕಿನಲ್ಲಿ, ದೈನಂದಿನ ಆಗುಹೋಗುಗಳ ವಿಚಾರದಲ್ಲಿ ತೀರ ಅವೈಜ್ಞಾನಿಕವಾದ ನಿಲುವುಗಳಿಗೆ, ಮೂಢನಂಬಿಕೆಗಳಿಗೆ ಜೋತುಬಿದ್ದುಕೊಂಡಿರುತ್ತಾರೆ. ಮನೆಯಿಂದ ಹೊರಬರುವಾಗ ಬೆಕ್ಕು ಅಡ್ಡ ಬಂದರೆ 'ಅಪಶಕುನ'ವಾಯಿತೆಂದು ಪುನ: ಮನೆಯೊಳಗೆ ಹೋಗಿ ಮತ್ತೆ ಹೊರಬರುತ್ತಾರೆ. ಯಾವುದೇ ಕೆಲಸ ಮಾಡುವುದಿದ್ದರೂ ರಾಹುಕಾಲ, ಗುಳಿಕ ಕಾಲ, ಗಳಿಗೆ, ಪಂಚಾಂಗ ಇತ್ಯಾದಿಗಳನ್ನು ಲೆಕ್ಕ ಹಾಕದೆ ಕಾರ್ಯಾರಂಭ ಮಾಡಲಾರರೆನ್ನುವ ಮಟ್ಟಕ್ಕೆ ಅವೈಜ್ಞಾನಿಕವಾಗಿ ನಡೆದುಕೊಳ್ಳುತ್ತಾರೆ.

ಧಾರ್ಮಿಕ ಆಚರಣೆಗಳ ವಿಷಯಕ್ಕೆ ಬಂದಾಗಲಂತೂ ಇತರ ಧರ್ಮೀಯರ ಬಗ್ಗೆ ಅಸಹನೆ ತೋರುತ್ತಾರೆ. ಶಿಕ್ಷಕರು ಖಾಸಗಿಯಾಗಿ ಆಡುವ ಮಾತುಗಳನ್ನು ಕೇಳಿಸಿಕೊಂಡಾಗ ಅವರಲ್ಲಿ ಪರಧರ್ಮ ಸಹಿಷ್ಣುತೆ ನಾಪತ್ತೆಯಾಗಿದೆಯೋ ಏನೋ ಎನ್ನುವ ಅನುಮಾನ ಕಾಡತೊಡಗುತ್ತದೆ. ಕಳೆದ ಎರಡು ದಶಕಗಳಲ್ಲಿ ಶಿಕ್ಷಕರಲ್ಲಿ ಬಹಳಷ್ಟು ಮಂದಿ ಧಾರ್ಮಿಕ ದ್ವೇಷ ಹರಡುವ, ಒಂದು ನಿರ್ದಿಷ್ಟ ಧರ್ಮೀಯರ ಬಗ್ಗೆ ಪೂರ್ವಾಗ್ರಹ ಧೋರಣೆಗೆ ಬದ್ಧವಾಗಿರುವ ಬಲಪಂಥೀಯ ರಾಜಕೀಯ ಗುಂಪುಗಳೊಂದಿಗೆ ಗೌಪ್ಯವಾಗಿ ಸೇರಿಕೊಳ್ಳುವ, ಪರೋಕ್ಷವಾಗಿ ಆ ಗುಂಪುಗಳ ಅಥವಾ ರಾಜಕೀಯ ಪಕ್ಷದ ಸಿದ್ಧಾಂತಗಳನ್ನು ವಿದ್ಯಾರ್ಥಿಗಳ ಮನಸ್ಸಿನಲ್ಲಿ ತುಂಬುವ ಮಟ್ಟಕ್ಕೂ ತಲುಪಿದರು. ವಿಧಾನಪರಿಷತ್ತಿಗೆ ಶಿಕ್ಷಕ ಕ್ಷೇತ್ರದಿಂದ ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳಲ್ಲಿ

ಬಲಪಂಥೀಯ ಗುಂಪುಗಳಿಂದ, ಬಲಪಂಥೀಯ ರಾಜಕೀಯ ಪಕ್ಷದಿಂದ ಚುನಾವಣಾ ಕಣಕ್ಕಿಳಿಯುವ ಶಿಕ್ಷಕರ ಅಭ್ಯರ್ಥಿ ಚುನಾವಣೆಯಲ್ಲಿ ಗೆದ್ದು ಬರುವ ವಿದ್ಯಮಾನಗಳು ಶಿಕ್ಷಕ ಸಮುದಾಯದ ಬಲಪಂಥೀಕರಣವಲ್ಲದೆ ಇನ್ನೇನೂ ಅಲ್ಲವೆಂದು ಈ ಸಂಶೋಧಕನ ದೃಢವಾದ ನಿಲುವು. ಇಂತಹ ಬಲಪಂಥೀಕರಣಕ್ಕೂ ಕಳೆದ ಎರಡು ದಶಕಗಳಲ್ಲಿ ಕರ್ನಾಟಕವೂ ಸೇರಿದಂತೆ ದೇಶದಲ್ಲಿ ಉಲ್ಬಣಗೊಂಡ ಕೋಮುಹಿಂಸೆಗೂ ಸಂಬಂಧವಿರಬಹುದೆ? ಎಂಬ ಆತಂಕದ ಪ್ರಶ್ನೆ ಈ ಅಧ್ಯಯನಕ್ಕೆ ಪ್ರೇರಕವಾಗಿದೆ. ಜತೆಗೆ ಸಮಾಜದಲ್ಲಿ ಹೆಚ್ಚುತ್ತಿರುವ ಮಹಿಳಾ ದೌರ್ಜನ್ಯ ಪ್ರಕರಣಗಳು, ದಲಿತರ ಮೇಲೆ ನಡೆಯುವ ದಾಳಿಗಳು, ದಲಿತರ ಜೀವಂತ ದಹನ ಪ್ರಕರಣಗಳು ನಮ್ಮ ಶಾಲೆಗಳಲ್ಲಿ ನಾವು ಮಕ್ಕಳಿಗೆ ನೀಡುವ ಶಿಕ್ಷಣದ ಮೌಲ್ಯದ ಬಗ್ಗೆಯೇ ಅನುಮಾನ ಮೂಡುವಂತೆ ಮಾಡಿವೆ. ಶಾಲೆಗಳಲ್ಲಿ ಶಿಕ್ಷಕರು ಬೋಧಿಸುವ ಪ್ರೀತಿ, ಶಾಂತಿ, ಸಹನೆ, ಸಹಬಾಳ್ವೆ, ಪರಸ್ಪರ ಗೌರವದ ಕುರಿತಾದ ಮಾತುಗಳೆಲ್ಲ ನಿರುಪಯುಕ್ತವೇ? ಅಥವಾ ನಮ್ಮ ಪಠ್ಯಗಳಲ್ಲಿ ಇವೆಲ್ಲ ಇಲ್ಲವೆ? ಅಥವಾ ಇದ್ದರೂ ನಿರುಪಯುಕ್ತವೇ? ಇತ್ಯಾದಿ ಪ್ರಶ್ನೆಗಳು ಕಾಡತೊಡಗುತ್ತವೆ. ಇಂತಹ ಒಂದು ಸಾಮಾಜಿಕ ಶೈಕ್ಷಣಿಕ ಹಿನ್ನೆಲೆಯಲ್ಲಿ ಈ ಅಧ್ಯಯನವನ್ನು ಕೈಗೊಳ್ಳುವ ನಿರ್ಧಾರ ಮಾಡಲಾಯಿತು.

## ಸಮಕಾಲೀನ ಸಾಮಾಜಿಕ-ಶೈಕ್ಷಣಿಕ ಸ್ಥಿತಿ

ಮಾಹಿತಿ ತಂತ್ರಜ್ಞಾನ, ತಂತ್ರಾಂಶ (Software) ಹಾಗೂ ಯಂತ್ರಾಂಶ (Hardware)ಗಳೇ ಸಮಕಾಲೀನ ಶಿಕ್ಷಣ ಕ್ರಮದ ಪರಾಕಾಷ್ಠೆ; ಮಾಹಿತಿ ತಂತ್ರಜ್ಞಾನದಲ್ಲಿ ಪದವಿ ಗಳಿಸಿ ಯಾವುದಾದರೂ ಬಹುರಾಷ್ಟ್ರೀಯ ತಂತ್ರಾಂಶ ಕಂಪೆನಿಯಲ್ಲಿ ನೌಕರಿ ಗಿಟ್ಟಿಸಿಕೊಂಡು ವಿದೇಶಕ್ಕೆ (ವಿಶೇಷವಾಗಿ ಅಮೇರಿಕಕ್ಕೆ) ಹಾರುವುದು, ಮತ್ತೆ ಅಲ್ಲಿ ಖಾಯಂ ಆಗಿ ತಳವೂರುವುದೇ ಸಮಕಾಲೀನ ಶೈಕ್ಷಣಿಕ ಮೋಕ್ಷ ಎನ್ನುವ ಸ್ಥಿತಿ ನಿರ್ಮಾಣವಾಗಿದೆ. ಪರಿಣಾಮವಾಗಿ ಅತ್ಯಂತ ಬುದ್ಧಿವಂತರು, ಇಂಟೆಲಿಜೆಂಟ್ ಅನ್ನಿಸಿಕೊಂಡ ಮಕ್ಕಳು ಕೂಡ, ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ ವೈದ್ಯಕೀಯ ಸೀಟು ಸಿಗಬಲ್ಲಷ್ಟು 'ಪ್ರತಿಭಾವಂತ'ರು ಕೂಡ ವೈದ್ಯಕೀಯ ಕೋರ್ಸಿಗೂ ಸೇರದೆ, ಶುದ್ಧ ವಿಜ್ಞಾನ (ಭೌತಶಾಸ್ತ್ರ, ರಸಾಯನ ಶಾಸ್ತ್ರ, ಜೀವಶಾಸ್ತ್ರ)ಕ್ಕೂ ಸೇರದೆ ಇಂಜಿನಿಯರಿಂಗ್ ಕಾಲೇಜುಗಳಿಗೆ ಸೇರಿಕೊಳ್ಳುತ್ತಿದ್ದಾರೆ. ಇದು ಯಾವ ಮಟ್ಟಕ್ಕೆ ತಲುಪಿದೆ ಎಂದರೆ ರಾಷ್ಟ್ರೀಯ ಸಂಶೋಧನಾ ಪ್ರಾಧ್ಯಾಪಕ ಹಾಗೂ ಖ್ಯಾತ ವಿಜ್ಞಾನಿ ಸಿ.ಎನ್.ಆರ್. ರಾವ್‌ರವರು ಮಾಹಿತಿ ತಂತ್ರಜ್ಞಾನ ಭಾರತೀಯ ವಿಜ್ಞಾನವನ್ನು ನಾಶ ಮಾಡಿಬಿಟ್ಟಿದೆ, ದೇಶದಲ್ಲಿ ಈಗ ಆಂತರಿಕ ಪ್ರತಿಭಾ ಪಲಾಯನದ ಪ್ರವೃತ್ತಿ ಹೆಚ್ಚುತ್ತಿದೆ, ತೀವ್ರಗತಿಯಲ್ಲಿ ನಡೆಯುತ್ತಿರುವ ವಾಣಿಜ್ಯೀಕರಣ (Commercialisation), ಅಲ್ಲಿಯೂ ನಿರ್ದಿಷ್ಟವಾಗಿ ಮಾಹಿತಿ ತಂತ್ರಜ್ಞಾನ ಉದ್ಯಮ, ಈ ಅಧಃಪತನಕ್ಕೆ ಕಾರಣ ಎಂದರು (ಸಿ.ಎನ್.ಆರ್.ರಾವ್, ಐ.ಟಿ.ಹ್ಯಾಸ್ ಡಿಸ್ಟ್ರಾಯ್ಡ್ ಇಂಡಿಯನ್ ಸಾಯನ್ಸ್, ದಿ ಹಿಂದೂ, ಫೆಬ್ರವರಿ 15,2010). ಪರಿಸ್ಥಿತಿ ಹೀಗೆಯೇ ಮುಂದುವರಿದಲ್ಲಿ ನಮ್ಮ ಶಾಲೆಗಳಲ್ಲಿ ವಿಜ್ಞಾನ, ಗಣಿತ, ಜೀವಶಾಸ್ತ್ರ ಬೋಧಕರ ಕೊರತೆ ಭವಿಷ್ಯದಲ್ಲಿ ತೀವ್ರ ಸ್ವರೂಪ ಪಡೆಯದಿರದು (ಈಗಾಗಲೇ ಹಲವಾರು ಪ್ರೌಢಶಾಲೆಗಳಲ್ಲಿ ಆಂಗ್ಲ ಮತ್ತು ಕನ್ನಡ-ಎರಡೂ ಮಾಧ್ಯಮದ ಶಾಲೆಗಳಲ್ಲಿ ವಿಜ್ಞಾನ ಶಿಕ್ಷಕರ ಕೊರತೆ ಇದೆ. ಮಾಹಿತಿ ತಂತ್ರಜ್ಞಾನದ ಸಮಸ್ಯೆಯೆಂದರೆ ಮಾಹಿತಿ ತಂತ್ರಜ್ಞಾನದ ಇಂಜಿನಿಯರಿಂಗ್ ಪದವೀಧರನೊಬ್ಬ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ವಿಜ್ಞಾನದ ಪಾಠಗಳನ್ನು ಬೋಧಿಸುವುವಷ್ಟು ಕೂಡ ವಿಜ್ಞಾನ ಕಲಿತಿರುವುದಿಲ್ಲ).

ಮಾಹಿತಿ ತಂತ್ರಜ್ಞಾನ ತಮ್ಮನ್ನು ಬಡತನದ ನರಕದಿಂದ ಪಾರು ಮಾಡಿ ಸುಖಸಂಪತ್ತಿನ ಮೋಕ್ಷ ಕರುಣಿಸುತ್ತದೆಂದು ನಂಬುವ ಪೋಷಕರು ತಮ್ಮ ಮಕ್ಕಳು ಶಾಲೆಯಲ್ಲಿ, ಪದವಿ ಪೂರ್ವ ಕಾಲೇಜುಗಳಲ್ಲಿ ವಿಜ್ಞಾನ ಮತ್ತು ಗಣಿತ ವಿಷಯಗಳನ್ನಷ್ಟೆ ಕಲಿತರೆ ಸಾಕು; ಇತರ ಸಾಂಸ್ಕೃತಿಕ ವಿಷಯ (ಸಾಹಿತ್ಯ, ಕಾವ್ಯ, ಸಂಗೀತ, ಇತಿಹಾಸ) ಬೇಕಾಗಿಲ್ಲವೆಂಬ ತೀರ್ಮಾನಕ್ಕೆ ಬಂದಿರುತ್ತಾರೆ. ಹೀಗಿರುವಾಗ ಆ ಮಕ್ಕಳಲ್ಲಿ ಮಹಿಳೆಯರಿಗೆ ಗೌರವ ನೀಡಬೇಕು ಹಾಗೂ ಎಲ್ಲ ಧರ್ಮೀಯರನ್ನು ಸಮಾನವಾಗಿ ಕಾಣಬೇಕು ಎಂಬ ಮೌಲ್ಯಗಳನ್ನು ವ್ಯಕ್ತಿಗತಗೊಳಿಸುವ ಶಿಕ್ಷಕರ ಕೆಲಸ ಸುಲಭದ್ದಲ್ಲ. ಅವರ ಸುತ್ತ ಇರುವ ಧಾರ್ಮಿಕ ಆರ್ಥಿಕ ಪರಿಸರವನ್ನು ಮೀರಿ ಅವರಲ್ಲಿ ಮೌಲ್ಯ ಶಿಕ್ಷಣದ ಇತ್ಯಾತ್ಮಕ ಮೌಲ್ಯಗಳನ್ನು ಜಾಗೃತಗೊಳಿಸಬೇಕಾಗುತ್ತದೆ. ಪಠ್ಯಪುಸ್ತಕಗಳ ಮೂಲಕವೂ ಈ ಕೆಲಸ ಸಾಧ್ಯವಾದ್ದರಿಂದ ಪಠ್ಯ ಪುಸ್ತಕಗಳ ಕೆಲವು ಪಾಠಗಳನ್ನು ವಿಶ್ಲೇಷಿಸಿ, ಆ ಪಾಠಗಳ ಭಾಷೆ ಹಾಗೂ ಭಾಷಾ ಶೈಲಿಯನ್ನು ಮಕ್ಕಳ ಗಮನಕ್ಕೆ ತಂದು ಆ ಪಾಠಗಳ ಪಠ್ಯ (text) ವನ್ನು ಹೇಗೆ ಪುನರ್ ಲೇಖಿಸಬಹುದು? ಅಥವಾ ಪುನರ್‌ಲೇಖಿಸುವುದು ಸಾಧ್ಯವೆ? ಎಂದು ಪರಿಶೀಲಿಸುವ ಒಂದು ಪ್ರಯತ್ನವಾಗಿ ಈ ಅಧ್ಯಯನವನ್ನು ಕೈಗೊಳ್ಳಲಾಯಿತು.

ವಿದ್ಯುನ್ಮಾನ ಮಾಧ್ಯಮ, ಅಂತರ್ಜಾಲ, ಇ–ಮೈಲ್‌ಗಳ ಹೊಸ ಸಾಕ್ಷರತೆ (new literacy)ಯ, ಡಿಜಿಟಲ್ ಸಾಕ್ಷರತೆಯ ಯುಗ ಇದು. ಸಾವಿರಾರು ಪುಸ್ತಕಗಳ ಹಳೆಯ ಗ್ರಂಥಾಲಯವೊಂದನ್ನು ಕೇವಲ ಒಂದು ಪೆನ್‌ಡ್ರೈವ್‌ನಲ್ಲಿ ಉಳಿಸಿ ಇಡಬಹುದಾದ, ಸಾವಿರಾರು ಮಾಹಿತಿ ತುಣುಕುಗಳನ್ನು ಕ್ಷಣಾರ್ಧದಲ್ಲಿ ಅಂರ್ಜಾಲದ ಮೂಲಕ ಡೌನ್‌ಲೋಡ್ ಮಾಡಿ ಪೆನ್‌ಡ್ರೈವ್‌ನಲ್ಲಿ ಸೇವ್ ಮಾಡಿ ನಮ್ಮ ಅಂಗಿ ಕಿಸೆಯಲ್ಲಿ ಮನೆಗೊಯ್ಯಬಹುದಾದ ಕಾಲಘಟ್ಟದಲ್ಲಿ ನಮ್ಮ ಸಮಾಜ ಮತ್ತು ಶಿಕ್ಷಣ ವ್ಯವಸ್ಥೆ ಇದೆ.

ಬದಲಾಗುತ್ತಿರುವ ಪರಿಸರದಲ್ಲಿ ಹೊಸ ರೀತಿಯ ಬೋಧನೆ ಮತ್ತು ಕಲಿಕೆಗೆ ಹೊಸರೀತಿಯ ಸಾಧನಗಳು, ಸಲಕರಣೆಗಳು ಲಭ್ಯವಾಗುತ್ತಿವೆ. ಪಾರಂಪರಿಕವಾಗಿ ಶಿಕ್ಷಕರು ವಿಷಯ (Content)ಯದ ಮೇಲೆ ತಮ್ಮ ಗಮನವನ್ನು ಕೇಂದ್ರೀಕರಿಸುತ್ತ ಬಂದಿದ್ದಾರೆ. ಹಲವು ಶಿಕ್ಷಕರಂತೂ ಕಲಿಕಾ ಸಾಮಗ್ರಿಯನ್ನು ಗುರುತಿಸುವುದು ಮತ್ತು ಹೀಗೆ ಗುರುತಿಸಿದ, ಐಡೆಂಟಿಫೈ ಮಾಡಿದ

ಸಾಮಗ್ರಿಯನ್ನು ವಿತರಿಸುವುದೇ ಶಿಕ್ಷಕರಾಗಿ ತಾವು ನಿರ್ವಹಿಸಬೇಕಾದ ಪ್ರಮುಖ ಪಾತ್ರವೆಂದು ಪರಿಗಣಿಸುತ್ತಾರೆ. ಆದರೆ ಮಾಹಿತಿ ಶ್ರೀಮಂತ (information rich) ಕಲಿಕಾ ಪರಿಸರದಲ್ಲಿ ವಿಷಯ ಸೃಷ್ಟಿ (content creation)ಯ ಪಾರಂಪರಿಕ ಕೌಶಲ ನಿರುಪಯೋಗಿ (redundant) ಎಂದು ಈಗ ವಾದಿಸಲಾಗುತ್ತಿದೆ. ಹಾಗಾಗಿ ಸದ್ಯದ ಶಿಕ್ಷಕ "ರಂಗದ ಮೇಲೆ ಸಂತ" (sage on the stage) ನಾಗುವುದಕ್ಕಿಂತ "ಪಕ್ಕದಲ್ಲಿ ನಿಂತಿರುವ ಮಾರ್ಗದರ್ಶಿ" ("guide on the side") ಯಾಗಬೇಕೆಂದು ಹೇಳಲಾಗುತ್ತಿದೆ. ಅಂತರ್ಜಾಲದ ಮೂಲಕ ಒಂದು ಸಿದ್ಧ ಉತ್ಪನ್ನವಾಗಿ ಮಾಹಿತಿಯ ಲಭ್ಯತೆಯು ನೆರವಾಗುವಿಕೆ (facilitation)ಯನ್ನು ನಿರ್ದೇಶನ (direction)ಕ್ಕಿಂತ ಹೆಚ್ಚು ಮುಖ್ಯವಾಗಿಸುತ್ತದೆ. ಈಗ ನಮ್ಮ ಮುಂದಿರುವ ಬೋಧನಾ ಪ್ರಶ್ನೆ (pedagogic issue) ಮಾಹಿತಿ ತುಂಬ ಕಡಿಮೆ ಇದೆ ಎಂಬುದಲ್ಲ; ಬದಲಾಗಿ ಮಾಹಿತಿ ಅಗತ್ಯಕ್ಕಿಂತ ತುಂಬ ಹೆಚ್ಚು ಇದೆ ಎಂಬುದು. ಸಮಕಾಲೀನ ವಿದ್ಯಾರ್ಥಿಗೆ ಮಾಹಿತಿಯನ್ನು ಪೂರೈಸುವುದಕ್ಕಿಂತ ಹೆಚ್ಚಾಗಿ ಅವನ ಮುಂದೆ ಬಂದು ಬೀಳುವ ಮಾಹಿತಿಯ ರಾಶಿಯಿಂದ ತನಗೆ ಬೇಕಾದುದನ್ನು ಆಯ್ದು ಅದನ್ನು ಹೇಗೆ ಬಳಸಿಕೊಳ್ಳುವುದು ಎಂದು ಕಲಿಯುವುದೇ ಅವನ ಸಮಸ್ಯೆಯಾಗಿದೆ.

ಇದಕ್ಕಾಗಿ ವಿದ್ಯಾರ್ಥಿಗಳು 'ನವ ಸಾಕ್ಷರತೆ'ಗಳನ್ನು ತಮ್ಮದಾಗಿಸಿಕೊಳ್ಳಬೇಕಾಗುತ್ತದೆ. ಡಿಜಿಟಲ್ ಸಾಕ್ಷರತೆ, ಮಾಧ್ಯಮ (ಮೀಡಿಯಾ) ಸಾಕ್ಷರತೆ ಮತ್ತು ವಿಶೇಷವಾಗಿ ಮಾಹಿತಿ ಸಾಕ್ಷರತೆ. ಸದ್ಯದ ಶೈಕ್ಷಣಿಕ ವ್ಯವಸ್ಥೆ ಏಕ ಕಾಲದಲ್ಲಿ ನಡೆಯಬೇಕಾದ, ಘಟಿಸಬೇಕಾದ (synchronous) ವಿದ್ಯಮಾನಗಳ ಒಂದು ವ್ಯವಸ್ಥೆ: ತರಗತಿಗಳು, ಪರೀಕ್ಷೆಗಳು, ಮೌಲ್ಯಮಾಪನ-ಎಲ್ಲವೂ ಎಲ್ಲ ತರಗತಿಗಳಿಗೆ ತಂಡಗಳಿಗೆ ಏಕಕಾಲದಲ್ಲಿ ನಡೆಯಬೇಕು; ಸಮಯದ ಒಂದು ನಿರ್ದಿಷ್ಟ ಮಿತಿಯೊಳಗೆ ಘಟಿಸಬೇಕು. ಆದರೆ ಡಿಜಿಟಲ್ ಕಲಿಕಾ ಸಾಮಗ್ರಿ ಯಾವ ದಿನವಾದರೂ ಯಾವ ವೇಳೆಯಲ್ಲಿ ಬೇಕಾದರೂ ನಡೆಯಬಹುದಾದಂತಹ (asynchronous) ಕಲಿಕೆಗೆ ದೊರಕುವ ಸಾಮಗ್ರಿ. ವೆಬ್ ಪುಟಗಳನ್ನು ನಾವು ಎಷ್ಟು ಹೊತ್ತಿಗೆ ಬೇಕಾದರೂ ಪಡೆದುಕೊಳ್ಳಬಹುದು; ವಿದ್ಯಾರ್ಥಿಯೊಬ್ಬ ವೀಡಿಯೋಗಳನ್ನು ತನಗೆ ಬೇಕಾದ ಹೊತ್ತಿಗೆ ವೀಕ್ಷಿಸಬಹುದು; ತಾನು ಸಂಗ್ರಹಿಸಿಟ್ಟುಕೊಂಡ ಕಲಿಕಾ ಸಾಮಗ್ರಿಗಳನ್ನು ಬಸ್ಸಿನಲ್ಲಿ ಪ್ರಯಾಣಿಸುವಾಗ ತನ್ನ ಮೊಬೈಲ್‌ಗೆ

ಸಿಕ್ಕಿಸಿಕೊಂಡ ಧ್ವನಿವರ್ಧಕಗಳ ಮೂಲಕ ಇತರರ್ಯಾರಿಗೂ ತೊಂದರೆಯಾಗದಂತೆ ಬೇಕಾದಷ್ಟು ಸಲ ಆಲಿಸಬಹುದು. ಪರಿಣಾಮವಾಗಿ ವೇಳಾಪಟ್ಟಿಗನುಗುಣವಾಗಿ ನಡೆಯಬೇಕಾದ ಪಾಠಗಳ ಹಾಗೂ ಉಪನ್ಯಾಸಗಳ ಪರಿಣಾಮಕಾರಿತ್ವ (efficacy)ವೇ ಪ್ರಶ್ನಾರ್ಹವಾಗಿದೆ.

ಸರ್ವವ್ಯಾಪಿಯಾದ ಕಂಪ್ಯೂಟರ್ ಹೊಸ ಕಲಿಕೆಯ ಹಾಗೂ ಬೋಧನೆಯ ದೇಶ (space) ವನ್ನು ಸೃಷ್ಟಿಸುತ್ತಿದೆ. ಪರಿಣಾಮವಾಗಿ ಸ್ಥಳ (location) ಅಮುಖ್ಯವಾಗಿದೆ. ಯಾಕೆಂದರೆ, ಹಿಂದಿನಂತೆ, ವಿದ್ಯಾರ್ಥಿಗಳು ಮಾಹಿತಿ ಪಡೆಯಲು ನಿರ್ದಿಷ್ಟ ಸ್ಥಳಕ್ಕೇ (ಶಾಲೆಗೆ / ತರಗತಿಗೆ) ಹೋಗಬೇಕಾಗಿಲ್ಲ. ಅಂತರ್ಜಾಲ ಸಂಪರ್ಕವಿರುವ ಎಲ್ಲಿ ಬೇಕಾದರೂ ಮಾಹಿತಿ ಲಭ್ಯ ಆದ್ದರಿಂದ ಕಲಿಕಾ ಸ್ಥಳಗಳಷ್ಟೇ ಬದಲಾಗುತ್ತಿರುವುದಲ್ಲ; ಸ್ಥಳಗಳೇ (spaces) ಬದಲಾಗುತ್ತಿವೆ. ವರ್ಚುವಲ್ ಜಗತ್ತುಗಳು ಮಿಲಿಯಗಟ್ಟಲೆ ಅಂತರ್ಜಾಲ ಬಳಕೆದಾರರನ್ನು ಆಕರ್ಷಿಸುತ್ತಿವೆ; ಈ ಜಗತ್ತುಗಳು ಶ್ರೀಮಂತ ಕಲಿಕಾ ಪರಿಸರಗಳನ್ನು ಒದಗಿಸುತ್ತವೆ, ಬೋಧನಾ ಪಂಥಾಹ್ವಾನಗಳನ್ನು ಒಡ್ಡುತ್ತವೆ. ಜಾಲನಾಗರಿಕರ (netizens) ನಡುವೆ ಮಾಹಿತಿಯ ಕಡತಗಳ ವಿನಿಮಯ ಕೆಲವೇ ಕ್ಷಣಗಳ, ನಿಮಿಷಗಳ ವ್ಯವಹಾರವಾಗಿದೆ.

ಈ ಪರಿಸರಗಳ ಶೈಕ್ಷಣಿಕ ಅನ್ವಯಿಸುವಿಕೆ, ಅನುಷ್ಠಾನದ ಹಾದಿಗಳನ್ನು ಈಗ ಹುಡುಕಲಾಗುತ್ತಿದೆ. ಪಾತ್ರ ನಿರ್ವಹಣೆ (role playing), ಸಮಸ್ಯೆಯನ್ನು ಪರಿಹರಿಸುವುದು, ಭಾಷೆಯನ್ನು ಕಲಿಯುವುದು ಮತ್ತು ಕ್ರೀಡೆ–ಆಧಾರಿತ ಕಲಿಕೆ ಈ ಹಾದಿಗಳಲ್ಲಿ ಕೆಲವು. ಪಾರಂಪರಿಕ ಬೋಧನಾ ವಿಧಾನಗಳನ್ನು (pedagogies) ವರ್ಚುವಲ್ ಜಗತ್ತುಗಳಿಗೆ ರಫ್ತು ಮಾಡುವುದರಿಂದಷ್ಟೇ ಯಾವ ಪ್ರಯೋಜನವೂ ಆಗುವುದಿಲ್ಲ; ಅವುಗಳ ವಿಶಿಷ್ಟ ಗುಣಗಳನ್ನು (characteristics) ಬಳಸಿಕೊಳ್ಳಲು ಸಾಧ್ಯವಾಗುವುದಿಲ್ಲ. "ವಿದ್ಯಾರ್ಥಿಗಳನ್ನು ಮುಚ್ಚಿದ ಒಂದು ವರ್ಚುವಲ್ ಸ್ಥಳ (space)ದಲ್ಲಿ ಕುಳ್ಳಿರಿಸಿ ಸಿದ್ಧಗೊಳಿಸಲಾದ ಉಪನ್ಯಾಸವೊಂದನ್ನು ಅವರಿಗೆ ಕೇಳಿಸುವುದರಿಂದ ವರ್ಚುವಲ್ ಪರಿಸರದ ವ್ಯಾಪಕವಾದ 3ಡಿ ಕಾರ್ಯಕ್ಷಮತೆ (functionality)ಯನ್ನು ಸಾಕಷ್ಟು ಬಳಸಿಕೊಂಡಂತಾಗುವುದಿಲ್ಲ. ಕಾಲನಿರ್ವಹಣೆ (engagement) ಸಂಪರ್ಕ, ಸಹಯೋಗ, ಮಾಡೆಲಿಂಗ್, ದತ್ತಾಂಶ ದೃಶ್ಯೀಕರಣ (data

visualisation) ಮತ್ತು ತಯಾರಿ (simulation), ಧ್ವನಿ ಮತ್ತು ಸ್ಥಳೀಕ ಸಂಬಂಧಗಳು (spatial relationships) ಭಾಷಾ ತನ್ಮಯತೆ (language immersion) ಮತ್ತು ಭೌತಿಕ, ಭೌಗೋಲಿಕ ಹಾಗೂ ಐಹಿಕ (temporal) ಗಡಿಗಳನ್ನು ದಾಟುವ ಅವಕಾಶಗಳನ್ನು 3ಡಿ ಜಗತ್ತುಗಳು ಒದಗಿಸುತ್ತವೆ". (ಜಾರ್ಮನ್ : 2008).

ಇಂತಹ 'ಜಗತ್ತುಗಳ' ಜಗತ್ತಿನ ಒಂದು ಭಾಗವಾಗಿರುವ ನಮ್ಮ ಶೈಕ್ಷಣಿಕ ಪರಿಸರದಲ್ಲಿ ಪಠ್ಯಪುಸ್ತಕಗಳು ಹೇಗಿರಬೇಕು? ಅವು ಇರಬೇಕೆ? (ಯಾಕೆಂದರೆ ಜಗತ್ತು 'ಕಾಗದ ರಹಿತ' ಜಗತ್ತಿನೆಡೆಗೆ ಸಾಗುವ ಹಂತದಲ್ಲಿದೆ) ಅವುಗಳಲ್ಲಿ ನಮ್ಮ ಸಮಾಜದ ಕೋಮು ಸಾಮರಸ್ಯವನ್ನು ಕಾಪಾಡುವಂತಹ ಪಾಠಗಳನ್ನು ಹೇಗೆ ಅಳವಡಿಸಬಹುದು? ಈ ಪ್ರಶ್ನೆಗಳಿಗೆ ಉತ್ತರ ಹುಡುಕುವ ಪ್ರಯತ್ನವನ್ನು ಈ ಅಧ್ಯಯನದಲ್ಲಿ ಮಾಡಲಾಗಿದೆ.

## ಸೈದ್ಧಾಂತಿಕ ಚೌಕಟ್ಟು (Conceptual Framework)

ಈ ಸಂಶೋಧನಾ ಅಧ್ಯಯನವು ಒಂದು ನಿರ್ದಿಷ್ಟವಾದ ಸೈದ್ಧಾಂತಿಕ ಚೌಕಟ್ಟನ್ನು ಆಧರಿಸಿದೆ. ಅಧ್ಯಯನಕ್ಕೆ ಪ್ರಸ್ತುತವಾದ ಆ ಸೈದ್ಧಾಂತಿಕ ಚೌಕಟ್ಟು ಈ ಕೆಳಗಿನಂತಿದೆ.

ಶಿಕ್ಷಣವು ಮೂಲತ: ಒಂದು ನಿರ್ದಿಷ್ಟ ಸಮುದಾಯದಲ್ಲಿ ಆ ಸಮುದಾಯದ ಎಲ್ಲ ಸದಸ್ಯರ ನಡುವೆ ಪರಸ್ಪರ ತಿಳಿವಳಿಕೆ ಹಾಗೂ ಗೌರವದ ನೆಲೆಯಲ್ಲಿ, ಮಾನವೀಯ ಸಂಬಂಧಗಳನ್ನು ಏರ್ಪಡಿಸುವ ಅಥವಾ ಈ ಸಂಬಂಧಗಳು ಏರ್ಪಡಲು ನೆರವಾಗುವ ಒಂದು ಸಾರ್ವಜನಿಕ ವ್ಯವಸ್ಥೆ. ಶಿಕ್ಷಣ ಎಂಬುದು ಮನುಷ್ಯ ಮನುಷ್ಯರ ನಡುವೆ ಸಂಪರ್ಕ ಸಾಧಿಸುವ ಒಂದು ಕೊಂಡಿ; ಒಂದು ಸೇತುವೆ. ಅದು ಮನುಷ್ಯ – ಮನುಷ್ಯರನ್ನು ಬೇರ್ಪಡಿಸುವ, ಅವರ ನಡುವೆ ಅಂತರ ಉಂಟು ಮಾಡುವ ಒಂದು ಗೋಡೆಯಲ್ಲ. ಶಿಕ್ಷಣವು ಸಮಾಜದ ಎಲ್ಲ ನಾಗರಿಕರ ಎಲ್ಲ ರೀತಿಯ ಆಚರಣೆ, ನಡವಳಿಕೆ, ನಂಬಿಕೆ, ಆಹಾರ ಪದ್ಧತಿ, ಉಡುಗೆ ತೊಡುಗೆ ಕ್ರಮ, ಪೂಜಾ ವಿಧಾನವನ್ನು ಮೆಚ್ಚುವ, ಕನಿಷ್ಟ ಪಕ್ಷ ಸಹಿಸಿಕೊಳ್ಳುವ ಗುಣವನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವ ಒಂದು ಪ್ರಕ್ರಿಯೆ. ಅದು ಕೇವಲ ಮಾಹಿತಿ ಸಂಗ್ರಹದ, ಜ್ಞಾನಾರ್ಜನೆಯ ಕೌಶಲ್ಯ ಹೆಚ್ಚಿಸುವ ಪ್ರಕ್ರಿಯೆಯಲ್ಲ. ಅದು ಮನುಷ್ಯನನ್ನು ಉತ್ತಮ ಮನುಷ್ಯನನ್ನಾಗಿ ರೂಪಿಸುವ, ಕನಿಷ್ಟ ಪಕ್ಷ ರಕ್ಕಸನಾಗದಂತೆ ತಡೆಯಬೇಕಾದ ಒಂದು ಮಾನವೀಯ ಪ್ರಕ್ರಿಯೆ.

## ಅಧ್ಯಯನದ ಸಂದರ್ಭ

ಈ ಅಧ್ಯಯನದ ಸಂದರ್ಭ ಸದ್ಯ ಕರ್ನಾಟಕದಲ್ಲಿ ಕಂಡುಬರುತ್ತಿರುವ ಶೈಕ್ಷಣಿಕ-ಸಾಮಾಜಿಕ ಆರ್ಥಿಕ-ಧಾರ್ಮಿಕ ಸಂದರ್ಭ. ಚರ್ಚುಗಳ ಮೇಲೆ ದಾಳಿ, ಪೂಜಾಸ್ಥಳಗಳ ಮೇಲೆ ಆಕ್ರಮಣ, ಮೂರ್ತಿಯ ಅಪವಿತ್ರಗೊಳಿಸುವಿಕೆ, ದಲಿತರ ಮೇಲೆ ಹಲ್ಲೆ ಒಂದೆಡೆಯಾದರೆ ರಾಜಕೀಯ ಅಸ್ಥಿರತೆಯ ಭಯ, ಬೆಲೆ ಹೆಚ್ಚಳದಿಂದ ದೈನಂದಿನ ಬಳಕೆಯ ವಸ್ತುಗಳಿಗಾಗಿ ಪೇಚಾಡುವ ಜನಸಾಮಾನ್ಯರು ಇನ್ನೊಂದೆಡೆ. ಇವೆರಡರ ಜತೆಯಲ್ಲಿ ಕಂಡುಬರುತ್ತಿರುವ ನಾನಾ ಸಂಘಟನೆಗಳ ನಾನಾ ಸೇನೆಗಳ ಸದಸ್ಯರ ಅಟ್ಟಹಾಸ. ಬಲಪಂಥೀಯ ಶಕ್ತಿಗಳು ವಿವಿಧ ಸೇನೆಗಳ, ಮಂಡಲಿಗಳ ಹೆಸರು ಧರಿಸಿ ನಡೆಸುವ ದಾಂಧಲೆಗಳು. ವಿಶೇಷ ಆರ್ಥಿಕ ವಲಯದ ಹೆಸರಿನಲ್ಲಿ ಸರಕಾರ ಸಾವಿರಾರು ಎಕರೆ ಭೂಮಿ ವಶಪಡಿಸಿಕೊಂಡ ಪರಿಣಾಮವಾಗಿ ಸಂತ್ರಸ್ಥರಾಗುವ ಜನರ ದಯನೀಯ ಸ್ಥಿತಿ. ಇವೆಲ್ಲದರ ಪರಿಣಾಮವಾಗಿ ಕಾಣಿಸಿಕೊಳ್ಳುವ ಸಾಮಾಜಿಕ ವೈಷಮ್ಯ, ಧಾರ್ಮಿಕ ಅತಿಭಾವುಕತನ, ರಾಜಕೀಯ ಆವೇಶ. ಇಂತಹ ಒಂದು ಸಂಕೀರ್ಣ ಸಂದರ್ಭದಲ್ಲಿ ಈ ಸಂಶೋಧನಾ ಅಧ್ಯಯನವನ್ನು ಕೈಗೊಳ್ಳಲಾಯಿತು.

## ಅಧ್ಯಯನದ ಅವಶ್ಯಕತೆ

ಶಿಕ್ಷಣಕ್ಕೆ ಸಂಬಂಧಿಸಿದಂತೆ ನಡೆಯುವ ಹೆಚ್ಚಿನ ಸಂಶೋಧನೆಗಳು ಬೋಧನಾ ಸಾಮಗ್ರಿಗಳ ತಯಾರಿ, ಬೋಧನಾ ವಿಧಾನ, ಪರೀಕ್ಷಾ ಸುಧಾರಣೆ, ಮೌಲ್ಯಮಾಪನ ಇತ್ಯಾದಿಗಳ ಸುತ್ತ ನಡೆಯುತ್ತಿರುತ್ತವೆ ಅಥವಾ ಶಾಲೆಗಳಲ್ಲಿ ವಿದ್ಯಾರ್ಥಿಗಳ ಹಾಜರಾತಿ, ಹಾಜರಾತಿಯ ಕೊರತೆಗೆ ಕಾರಣಗಳು, ಈ ಕೊರತೆಯನ್ನು ತುಂಬಲು ತೆಗೆದುಕೊಳ್ಳಬೇಕಾದ ಕ್ರಮ(steps)ಗಳು, ವಿದ್ಯಾರ್ಥಿಗಳ ಹಿನ್ನೆಲೆ, ಅವರ ಆರ್ಥಿಕ – ಸಾಮಾಜಿಕ ಸ್ಥಿತಿಯ ಸಮೀಕ್ಷೆ ಇತ್ಯಾದಿ ವಿಷಯಗಳ ಬಗ್ಗೆ ಸಂಶೋಧನೆ ನಡೆಸಲಾಗುತ್ತದೆ. ಆದರೆ ತಯಾರಿಸಿ ತರಗತಿಗಳಿಗೆ ಕೊಂಡೊಯ್ಯಲಾಗುವ ಸಾಮಗ್ರಿಗಳ (ಈ ಅಧ್ಯಯನಕ್ಕೆ ಸಂಬಂಧಿಸಿ ಹೇಳುವುದಾದರೆ ಭಾಷೆ, ಸಾಹಿತ್ಯ/ಸಾಹಿತ್ಯೇತರ, ಇತಿಹಾಸ ಪಠ್ಯಪುಸ್ತಕಗಳ) ಮೌಲ್ಯಮಾಪನ ಮಾಡುವಂತಹ ಪ್ರಯತ್ನಗಳು ಅಪರೂಪ. ವಿಶೇಷವಾಗಿ ನಮ್ಮ ಭಾಷೆ, ಸಾಹಿತ್ಯ ಮತ್ತು ಇತಿಹಾಸದ ಪಠ್ಯಗಳ ಕೆಲವು ಸಾಲುಗಳ ಸೂಚ್ಯಾರ್ಥ, ಇಂಗಿತಗಳು (implications), ಅವುಗಳ ಆಳದಲ್ಲಿ (deep structure) ಅವು ಸ್ಫುರಿಸಬಹುದಾದ ಅರ್ಥಗಳು ಸಂಶೋಧನಾ ಅಧ್ಯಯನದ ಹೊರಗೆಯೇ ಉಳಿದುಬಿಡುತ್ತವೆ. ಈ ನಿಟ್ಟಿನಲ್ಲಿ ಪ್ರಸ್ತುತ ಅಧ್ಯಯನವು ಕರ್ನಾಟಕದ ಶಿಕ್ಷಣ ರಂಗಕ್ಕೆ ಒಂದು ಮಹತ್ವಪೂರ್ಣ ಕೊಡುಗೆಯಾಗಬಹುದು ಎಂಬ ಆಶಯ ಈ ಸಂಶೋಧಕನದ್ದು.

ಸಾಂಪ್ರದಾಯಿಕ ಶಿಕ್ಷಣದ ಒಟ್ಟು ಆಶಯ, ಅವಶ್ಯಕತೆ, ಒಲವುಗಳೇ ಜಾಗತೀಕರಣ ಮತ್ತು ಕಂಪ್ಯೂಟರೀಕರಣದಿಂದಾಗಿ ಆಮೂಲಾಗ್ರವಾಗಿ, ಆಘಾತಕಾರಿಯಾಗಿ ಬದಲಾಗಿಬಿಡಬಹುದಾದ ಸನ್ನಿವೇಶದಲ್ಲಿ ನಾವಿದ್ದೇವೆ. ತರಗತಿಗಳಲ್ಲಿ ಶಿಕ್ಷಕರು ನಡೆಸುವ ಬೋಧನೆ, ಆತ್ಮನಿವೇದನೆ, ವಿದ್ಯಾರ್ಥಿಗಳೊಂದಿಗೆ ಜಂಟಿಯಾಗಿ ನಡೆಸುವ ಚಿಂತನೆಗೆ ಬದಲಾಗಿ ವರ್ಚುವಲ್ ತರಗತಿಗಳು, ಆನ್‌ಲೈನ್ ಕಲಿಕೆ, ಆನ್‌ಲೈನ್ (online) ಬೋಧನೆ, ಆನ್‌ಲೈನ್ ಮೌಲ್ಯಮಾಪನ ಮತ್ತು ಅಂತಿಮವಾಗಿ (ಈಗ ಬೆಂಗಳೂರು ವಿಶ್ವವಿದ್ಯಾಲಯ ಅನುಷ್ಠಾನಗೊಳಿಸಲು ಹೊರಟಿರುವ ಹಾಗೆ), ಆನ್‌ಲೈನ್ ಪದವಿ ಪ್ರಮಾಣ ಪತ್ರಗಳ ನೀಡಿಕೆಯ ಯುಗ ನಮ್ಮ ಮೇಲೆ ಎರಗಿ ಬರುತ್ತಿರುವಾಗಲೂ ಗ್ರಾಮೀಣ ಭಾರತದ ಸಾವಿರಾರು ಶಾಲೆಗಳಲ್ಲಿ ಸಾಂಪ್ರದಾಯಿಕ 'ಚಾಕ್ ಆ್ಯಂಡ್ ಟಾಕ್'

(ಸೀಮೆ ಸುಣ್ಣ ಮತ್ತು ಮಾತು) ಪದ್ಧತಿ ಮುಂದುವರೆಯುವುದು ಖಂಡಿತ. ಅಂತಹ ಶಾಲೆಗಳಲ್ಲಿ ಇನ್ನು ಮುಂದೆಯೂ ಬಳಸಲಾಗುವ ಕಾಗದದ ಬೋಧನಾ ಸಾಮಗ್ರಿಗಳ (ಪಠ್ಯಪುಸ್ತಕಗಳ) ಭಾಷೆ, ಶೈಲಿ ಹಾಗೂ ವಿಷಯದ ವಿಶ್ಲೇಷಣೆ ನಡೆಸಿ, ಪಠ್ಯಗಳಲ್ಲಿರುವ ಮಹಿಳೆಯ ಚಿತ್ರಣವನ್ನು ಗುರುತಿಸಿ, ಬಳಿಕ ಮಹಿಳೆಯರು ಕೋಮುಗಲಭೆ ತಡೆದು ಹೇಗೆ ಕೋಮು ಸಾಮರಸ್ಯ ಕಾಪಾಡಲು ನೆರವಾಗಬಹುದೆಂದು ಶೋಧಿಸುವ ಈ ಸಂಶೋಧನಾತ್ಮಕ ಅಧ್ಯಯನ ಅವಶ್ಯಕವೆಂದು ತಿಳಿಯಲಾಗಿದೆ.

**ಅಧ್ಯಯನದ ಉದ್ದೇಶ**

ಕರ್ನಾಟಕದ ಶಿಕ್ಷಣ ವ್ಯವಸ್ಥೆಯ ಬಗ್ಗೆ ಅಂದರೆ ಶಿಕ್ಷಕರ ನೇಮಕಾತಿ, ಮಕ್ಕಳ ಹಾಜರಾತಿ, ಒಟ್ಟು ಮಕ್ಕಳ ಸಂಖ್ಯೆ, ಏಕೋಪಾಧ್ಯಾಯ ಅಥವಾ ದ್ವಿಉಪಾಧ್ಯಾಯ ಶಾಲೆಗಳ ಒಟ್ಟು ಸಂಖ್ಯೆ, ಶಿಕ್ಷಕರ ವೇತನ ಬಟವಾಡೆಗೆ ವ್ಯಯವಾಗುವ ಒಟ್ಟು ಮೊತ್ತ ಇತ್ಯಾದಿ ವಿಷಯಗಳ ಬಗ್ಗೆ ಅಂಕಿ ಸಂಖ್ಯೆಗಳನ್ನು ಸಂಗ್ರಹಿಸಿ 'ಇನ್ನು ಇಷ್ಟು ಬೇಕು; ಇಷ್ಟು ಆಗಬೇಕು' ಎನ್ನುವ ಉದ್ದೇಶ ಈ ಅಧ್ಯಯನದ್ದಲ್ಲ. ಈಗಾಗಲೇ ಯಥಾಶಕ್ತಿ ವ್ಯಯಿಸಿ ಹೊಂದಲಾಗಿರುವ ಶಿಕ್ಷಣದ ಮೂಲ ಚೌಕಟ್ಟಿನ (infrastructure) ಮಿತಿಯಲ್ಲಿ ಲಭ್ಯ ಶೈಕ್ಷಣಿಕ ಸವಲತ್ತುಗಳ ಗರಿಷ್ಠ ಬಳಕೆಯ ವ್ಯಾಪ್ತಿಯಲ್ಲಿ ಕೆಲವು ವಿಷಯಗಳ 1980–2010ರವರೆಗಿನ ಪಠ್ಯಪುಸ್ತಕಗಳ ಕೆಲವು ಪಾಠಗಳನ್ನು ಅಥವಾ ಪಾಠಭಾಗಗಳನ್ನು ಸೀಮಿತ ಉದಾಹರಣೆಗಳೊಂದಿಗೆ ಕೂಲಂಕಷವಾಗಿ ವಿಶ್ಲೇಷಿಸಿ ಅವುಗಳು ಸ್ಫುರಿಸುವ ಸುಪ್ತ–ಪಠ್ಯ(sub-texts)ಗಳನ್ನು ಹುಡುಕಿ ತೆಗೆದು ಅವು ವಿದ್ಯಾರ್ಥಿಗಳಿಗೆ ಯಾವ ಸಂದೇಶಗಳನ್ನು ರವಾನಿಸುತ್ತವೆ, ಆ ಸಂದೇಶಗಳು ಭವಿಷ್ಯದಲ್ಲಿ ವಿದ್ಯಾರ್ಥಿಗಳು ಯಾವ ರೀತಿಯ ಮೌಲ್ಯಗಳನ್ನು ಅಳವಡಿಸಿಕೊಳ್ಳಲು ಕಾರಣವಾಗುತ್ತವೆ ಎಂದು ಕಂಡುಹಿಡಿಯಲು ಪ್ರಯತ್ನಿಸುವುದು ಈ ಅಧ್ಯಯನದ ಉದ್ದೇಶ. ಮತ್ತು ಪಠ್ಯಪುಸ್ತಕಗಳನ್ನು ವಿಶ್ಲೇಷಿಸುವಾಗ ಪಠ್ಯಗಳ ಮೇಲ್ಮೈ ಸಂರಚನೆ (ಸರ್ಫೇಸ್ ಸ್ಟ್ರಕ್ಚರ್) ಮತ್ತು ಆಳ ಸಂರಚನೆ (ಡೀಪ್ ಸ್ಟ್ರಕ್ಚರ್)ಯ ತೌಲನಿಕ ವಿಶ್ಲೇಷಣೆಯ ಉದ್ದೇಶದಿಂದಲೇ ಈ ಅಧ್ಯಯನವನ್ನು ಮಾಡಲಾಗಿದೆ.

**ಸಮಸ್ಯೆಯ ಹೇಳಿಕೆ (Statement of the Problem)**

ಈ ಸಂಶೋಧನಾ ಅಧ್ಯಯನವು ಸದ್ಯದ ಶಿಕ್ಷಣ ವ್ಯವಸ್ಥೆಗೂ ಸಮಾಜದಲ್ಲಿ ಪ್ರಚಲಿತವಿರುವ ಕೆಲವು ಸಮೀಕರಣಗಳಿಗೂ ಸಾಮಾನ್ಯೀಕರಣಗಳಿಗೂ ಇರುವ ಅಥವಾ ಇರಬಹುದಾದ ಕೊಂಡಿ(links)ಗಳನ್ನು ಹುಡುಕುವ ಪ್ರಯತ್ನ ನಡೆಸುತ್ತದೆ. ಉದಾಹರಣೆಗೆ ಇಂದು ಭಯೋತ್ಪಾದನೆಯನ್ನು ಒಂದು ನಿರ್ದಿಷ್ಟ ಧರ್ಮದೊಂದಿಗೆ, ಭಯೋತ್ಪಾದಕರನ್ನು ಒಂದು ಧಾರ್ಮಿಕ ಸಮುದಾಯದ ಸದಸ್ಯರೊಂದಿಗೆ ಸಮೀಕರಿಸಲಾಗುತ್ತಿದೆ. 'ಬಾಂಬ್ ಸ್ಫೋಟ' ಎಂಬ ಸುದ್ದಿ ಕಿವಿಯ ಮೇಲೆ ಬೀಳುತ್ತಲೇ, "ಓಹೋ, ಹಾಗಾದರೆ 'ಅವರೇ' ಇರಬೇಕು" ಎಂಬ ಸಾಮಾನ್ಯೀಕರಣದ ಉದ್ಗಾರ ಹೊರಡುತ್ತದೆ. ಒಂದು ಅಲ್ಪಸಂಖ್ಯಾಕ ಸಮುದಾಯದ ಸದಸ್ಯರ ಬಗ್ಗೆ ಇಂತಹ ಸಮೀಕರಣ ಹಾಗೂ ಸಾಮಾನ್ಯೀಕರಣಗಳಿಗೆ ನಾವು ನಮ್ಮ ಪಠ್ಯ ಪುಸ್ತಕಗಳಲ್ಲಿ ಬೋಧಿಸುವ ಇತಿಹಾಸದ ಪಾಠಗಳು ಕಾರಣವಿರಬಹುದು, ಇಲ್ಲದೆ ಇರಬಹುದು. ಅದೇನಿದ್ದರೂ ಈ ಸಮೀಕರಣ ಹಾಗೂ ಸಾಮಾನ್ಯೀಕರಣಗಳ ಕಾರಣಗಳನ್ನು ಗುರುತಿಸದೆ ಇರುವುದು ನಮ್ಮ ಶಿಕ್ಷಣ ವ್ಯವಸ್ಥೆಯ ಸೋಲುಗಳಲ್ಲಿ ಒಂದು. ಈ ಕಾರಣಗಳನ್ನು ಯಾಕೆ ಗುರುತಿಸಲು ಸಾಧ್ಯವಾಗಲಿಲ್ಲ ಎಂದು ಪತ್ತೆ ಮಾಡಬೇಕಾಗಿದೆ. ಅಲ್ಲದೆ ನಮ್ಮ ಶಾಲೆಗಳಲ್ಲಿ 1980–2010ರ ಅವಧಿಯಲ್ಲಿ ಬಳಕೆಯಲ್ಲಿದ್ದ ಮತ್ತು ಈಗ ಬಳಕೆಯಲ್ಲಿರುವ ಕೆಲವು ಪಠ್ಯಪುಸ್ತಕಗಳ ಕೆಲವು ಪ್ರಾತಿನಿಧಿಕ ಪಾಠಗಳನ್ನು ವಿವರವಾದ ವಿಶ್ಲೇಷಣೆಗೆ ಇದುವರೆಗೆ ಒಳಪಡಿಸಲಾಗಿಲ್ಲ. ಪರಿಣಾಮವಾಗಿ ಪಠ್ಯಗಳಲ್ಲಿರುವ ಇತಿಹಾಸ ಪಾಠಗಳಿಗೂ ಮಕ್ಕಳ ಮನಸ್ಸಿನಲ್ಲಿ ಬಲಪಂಥೀಯ ವಿಚಾರಗಳನ್ನು ತುಂಬುವುದಕ್ಕೂ, ಅಥವಾ ಒಂದು ನಿರ್ದಿಷ್ಟ ಸಮುದಾಯದ ಸದಸ್ಯರ ಬಗ್ಗೆ ದ್ವೇಷಭಾವ ತುಂಬುವುದಕ್ಕೂ ಇರಬಹುದಾದ ನೇರ ಸಂಬಂಧದ ಅಧ್ಯಯನ ನಡೆದಿಲ್ಲ. ಇದು ನಮ್ಮ ಶಿಕ್ಷಣ ವ್ಯವಸ್ಥೆಯನ್ನು ಕಾಡುತ್ತಿರುವ ಒಂದು ಸಮಸ್ಯೆ ಎಂದರೂ ತಪ್ಪಾಗಲಾರದು. ಈ ಸಮಸ್ಯೆಯನ್ನು ಬಗೆಹರಿಸುವ ಒಂದು ಪ್ರಯತ್ನವಾಗಿ ಸದ್ಯದ ಅಧ್ಯಯನ ಇದೆ.

**ಸಂಶೋಧನಾ ಪ್ರಶ್ನೆಗಳು**

ಕರ್ನಾಟಕದ ಪಠ್ಯಕ್ರಮದಲ್ಲಿ ಭಾಷೆ, ಮಹಿಳೆಯರ ಸ್ಥಾನಮಾನ ಹಾಗೂ ಕೋಮು ಸಾಮರಸ್ಯ – ಈ ಮೂರರ ನಡುವೆ ಇರಬಹುದಾದ ಸಂಬಂಧಗಳ ಅಧ್ಯಯನ ನಡೆಸುವ ಈ ಸಂಶೋಧನೆಯು ಈ ಕೆಳಗಿನ ಸಂಶೋಧನಾ ಪ್ರಶ್ನೆಗಳನ್ನು ಎತ್ತುತ್ತದೆ.

1. ಒಂದು ಪಠ್ಯಕ್ರಮದಲ್ಲಿ ಬಳಸಲಾಗುವ ಪಠ್ಯಪುಸ್ತಕಗಳಲ್ಲಿ ಕೆಲವು ವಿಷಯಗಳ ಮಂಡನೆಯಲ್ಲಿ ಬಳಸಲಾಗುವ ಭಾಷೆ ಅಥವಾ ಭಾಷಾ ಶೈಲಿಗೂ ಆ ಪಠ್ಯಕ್ರಮವನ್ನು ರೂಪಿಸಿದ ಸಮಾಜದ ಮಹಿಳೆಯರ ಸ್ಥಾನಮಾನಕ್ಕೂ ಸಂಬಂಧವಿದೆಯೇ?

2. ಭಾಷೆಯ ಮೂಲಕ ಒಂದು ವಿಷಯವು ಅಭಿವ್ಯಕ್ತವಾಗುವಾಗ ಮೇಲ್ಮೈ ಸಂರಚನೆ (surface structure)ಗಿಂತ ಆಳದ ಸಂರಚನೆ (deep structure) ಯಾಕೆ ಮತ್ತು ಹೇಗೆ ಮುಖ್ಯವಾಗುತ್ತದೆ?

3. ಇತಿಹಾಸದ ಪಠ್ಯಗಳಲ್ಲಿ ನೀಡಲಾಗಿರುವ ಮುಸ್ಲಿಂ ದೊರೆಗಳ ಚಿತ್ರಣಕ್ಕೂ ಈಗ ಸಮಾಜದಲ್ಲಿ ಕಂಡುಬರುತ್ತಿರುವ ಕೋಮುದ್ವೇಷ, ಕೋಮು ಹಿಂಸೆಗೂ ನೇರ ಸಂಬಂಧವಿರಬಹುದೇ?

4. ಕೋಮು ಸಾಮರಸ್ಯವನ್ನು ಕಾಪಾಡುವ ದೃಷ್ಟಿಯಿಂದ ಇಸ್ಲಾಮ್‌ಗೆ ಸಂಬಂಧಿಸಿ ನಮ್ಮ ಇತಿಹಾಸ ಪಠ್ಯಗಳನ್ನು ಪುನರ್‌ಲೇಖಿಸಬಹುದೆ? ಮತ್ತು ಪುನರ್‌ಲೇಖಿಸಬೇಕೆ? ಪುನರ್‌ಲೇಖಿಸುವುದು ಸಾಧುವೆ?

5. 'ರಾಜಕೀಯ ಸರಿತನ' (Political Corectness)ದ ಪರಿಕಲ್ಪನೆಯನ್ನು ಮಹಿಳೆಯರು, ದಲಿತರು ಮತ್ತು ಅಲ್ಪಸಂಖ್ಯಾಕ ಸಮುದಾಯದವರಿಗೆ ಸಂಬಂಧಿಸಿದಂತೆ ನಮ್ಮ ಪಠ್ಯಗಳಲ್ಲಿ ಹೇಗೆ ಅಳವಡಿಸಿಕೊಳ್ಳಬಹುದು?

6. ಸಮಾಜದಲ್ಲಿ ಕೋಮು ಸಾಮರಸ್ಯ ಕಾಪಾಡುವ ದೃಷ್ಟಿಯಿಂದ ಗಾಂಧೀಜಿಯವರ ವಿಚಾರಗಳನ್ನು ಆಧರಿಸಿ ಶಾಂತಿ ಶಿಕ್ಷಣದ ಒಂದು ಕೋರ್ಸನ್ನು ತಯಾರಿಸಲು ಸಾಧ್ಯವಾಗಬಹುದೆ? ಆಗಬಹುದಾದಲ್ಲಿ ಆ ಕೋರ್ಸ್‌ನ ಒಂದು ಮಾದರಿ ಪಠ್ಯ ಹೇಗಿರಬೇಕು?

## ಅಧ್ಯಯನಕ್ಕೊಳಪಡಬೇಕಾದ ನಿರ್ದಿಷ್ಟ ಸಮಸ್ಯೆಗಳು

ಸಾಹಿತ್ಯ/ಸಮಾಜದ ವಿದ್ಯಾರ್ಥಿಯಾಗಿ, ಓರ್ವ ಅಧ್ಯಾಪಕನಾಗಿ ನಮ್ಮ ಪರ್‍ಯಕ್ರಮವನ್ನು ಗಮನಿಸಿದಾಗ ಮಹಿಳೆಯರ ಸ್ಥಾನಮಾನ ಮತ್ತು ಕೋಮುಸಾಮರಸ್ಯದ ಹಿನ್ನೆಲೆಯಲ್ಲಿ ಕೆಲವು ನಿರ್ದಿಷ್ಟ ಸಮಸ್ಯೆಗಳು ಎದ್ದು ಕಾಣುತ್ತವೆ. ಪ್ರಸ್ತುತ ಅಧ್ಯಯನಕ್ಕೊಳಪಡಬೇಕಾದ ಕೆಲವು ನಿರ್ದಿಷ್ಟ ಸಮಸ್ಯಗಳು ಹೀಗಿವೆ.

ಇತ್ತೀಚಿನ ದಿನಗಳಲ್ಲಿ ದೇಶಾದ್ಯಂತ, ಕರ್ನಾಟಕದಲ್ಲಿಯೂ ಕೂಡ, ದೇಶದ ಧಾರ್ಮಿಕ ಬಹುಸಂಖ್ಯಾತರಲ್ಲಿ ಪ್ರತೀಕಾರ ಮನೋಭಾವದ ಛಾಯೆ ಇರುವ ಒಂದು ರೀತಿಯ ಧಾರ್ಮಿಕ ಪುನರುಜ್ಜೀನವ ಕಂಡು ಬರುತ್ತಿದೆ. ಧಾರ್ಮಿಕ ಬಹುಸಂಖ್ಯಾತರ ವಿವಿಧ ಜಾತಿಗೆ ಸೇರಿದ ವಿವಿಧ ಗುಂಪುಗಳು ಧಾರ್ಮಿಕ ಸಮಾವೇಶ, ವಿವಿಧ ಪಂಗಡಗಳ ಮಠಾಧಿಪತಿಗಳ ಉಪಸ್ಥಿತಿ ಇರುವ ವಿವಿಧ ಸಮ್ಮೇಳ ಹಾಗೂ ಧಾರ್ಮಿಕ ಸಮಾರಂಭಗಳನ್ನು ನಡೆಸುತ್ತಿವೆ. ಕರಾವಳಿ ಕರ್ನಾಟಕದಲ್ಲಂತೂ ಪ್ರತಿದಿನ ಒಂದಲ್ಲ ಒಂದು ರೀತಿಯ ನೇಮೋತ್ಸವ, ದೈವದೇವರುಗಳ ಮೂರ್ತಿಗಳ ಪ್ರತಿಷ್ಠಾಪನೆ ಮಹೋತ್ಸವ, ದೇವ, ದೈವಸ್ಥಾನಗಳ ಜೀರ್ಣೋದ್ಧಾರ, ಸಾರ್ವಜನಿಕ ಭಜನಾ ಮಂಗಲೋತ್ಸವ, ಸಾರ್ವಜನಿಕ ಸತ್ಯನಾರಾಯಣ ಪೂಜೆಗಳು ನಡೆಯುತ್ತಿರುತ್ತವೆ. ದಿನಪತ್ರಿಕೆಗಳ ಸ್ಥಳೀಯ ಸಂಪದಗಳಲ್ಲಿ ಇಂತಹ ಸುದ್ದಿಗಳ ಜಾಹೀರಾತುಗಳು, ಅರ್ಧಪುಟದ, ಇಡೀ ಪುಟದ ಮಾರುಕಟ್ಟೆ ಸೂತ್ರದ ಜಾಹೀರಾತುಗಳು ರಾರಾಜಿಸುತ್ತಿರುತ್ತವೆ. 'ಭಜನಾ ಮಂದಿರ ಪುನಃ ಪ್ರತಿಷ್ಠೆ ಸಮಾರೋಪ', 'ಪ್ರತಿಷ್ಠಾ ಮಹೋತ್ಸವ ಮತ್ತು ಬ್ರಹ್ಮಕಲಶಾಭಿಷೇಕ', ಧಾರ್ಮಿಕ ಸಭಾ ಕಾರ್‍ಯಕ್ರಮ, ಪ್ರವಚನ ಮಂಗಲೋತ್ಸವ, ಸಹಸ್ರ ಚಂಡಿಕಾ ಯಾಗ, ಇತ್ಯಾದಿ ಶೀರ್ಷಿಕೆಗಳಡಿಯಲ್ಲಿ ಜಾಹೀರಾತುಗಳು ಪ್ರಕಟವಾಗುತ್ತವೆ.

ಇದನ್ನೆಲ್ಲ ನೋಡುವಾಗ ಜನರು ತುಂಬ ನೀತಿವಂತರಾಗಿದ್ದಾರೆ, ದೈವದೇವರುಗಳಲ್ಲಿ ಅಪಾರ ನಂಬಿಕೆ ಇರುವ ಸಜ್ಜನರಾಗಿದ್ದಾರೆ, ಪರಧರ್ಮ ಸಹಿಷ್ಣುಗಳಾಗಿದ್ದಾರೆ ಎಂಬ ಭಾವನೆ ಮೂಡುತ್ತದೆ. ಆದರೆ ಅದೇ ವೇಳೆ ಅಲ್ಪ ಸಂಖ್ಯಾತ ಸಮುದಾಯಗಳ ಪೂಜಾಸ್ಥಳಗಳ ಮೇಲೆ ದಾಳಿ ನಡೆಸಿದ ಪ್ರಕರಣಗಳು ಪತ್ರಿಕೆಗಳಲ್ಲಿ ವರದಿಯಾಗುತ್ತಿರುತ್ತವೆ. ಯಾಕಾಗಿ ಈ ವಿರೋಧಾಭಾಸ? ವೈದೃಶ್ಯ? ಇದರ ಹಿಂದೆ ಏನು ಕಾರಣಗಳಿರಬಹುದು?

ಸಾಹಿತ್ಯ ಹಾಗೂ ಸಾಹಿತ್ಯೇತರ ಪಠ್ಯಗಳಲ್ಲಿ ಹೆಣ್ಣನ್ನು ಯಾವ ರೀತಿ ಚಿತ್ರಿಸಲಾಗಿದೆ? ಮತ್ತು ಚಿತ್ರಿಸಲಾಗುತ್ತಿದೆ? ಆಕೆಯನ್ನು ಇನ್ನೂ ಕೂಡ ಊಳಿಗಮಾನ್ಯ ಹಾಗೂ ಸಾಂಪ್ರದಾಯಿಕ ಎರಕದಲ್ಲಿ ಕಡೆದ ಮೂರ್ತಿಯನ್ನಾಗಿಯೇ ಚಿತ್ರೀಕರಿಸಲಾಗುತ್ತಿದೆಯೇ? ಅಥವಾ ಆಕೆಯ ಚಿತ್ರೀಕರಣದಲ್ಲಿ ಏನಾದರೂ ವ್ಯತ್ಯಾಸ ಕಾಣಿಸುತ್ತದೆಯೇ?

ಪಠ್ಯಭಾಗಗಳ ಮೇಲ್ಮೈ ಸಂರಚನೆಯನ್ನು ಆಳ ಸಂರಚನೆಯನ್ನಾಗಿ ಪರಿವರ್ತಿಸಿದಾಗ ಯಾವ ರೀತಿಯ ಬದಲಾವಣೆ, ಸಂದೇಶ ವ್ಯತ್ಯಯ (message difference) ಕಾಣಿಸುತ್ತದೆ? ಸುಪ್ತ ಪಠ್ಯದ ಮಾದರಿಯನ್ನು ಹೇಗೆ ರಚಿಸಬಹುದು?

ಪಠ್ಯಪುಸ್ತಕಗಳ ತಯಾರಿಯಲ್ಲಿ ರಾಜಕೀಯ ಸರಿತನದ ಪರಿಕಲ್ಪನೆಯನ್ನು ಅಳವಡಿಸುವುದು ಹೇಗೆ? ಈ ಪರಿಕಲ್ಪನೆಯ ಅವಶ್ಯಕತೆ ಕರ್ನಾಟಕದ ಶೈಕ್ಷಣಿಕ ಸಂದರ್ಭದಲ್ಲಿ ಎಷ್ಟರ ಮಟ್ಟಿಗೆ ಇದೆ?

ಪಠ್ಯಪುಸ್ತಕಗಳಲ್ಲಿರಬಹುದಾದ ಭಾವನಾತ್ಮಕವಾಗಿ ಸೂಕ್ಷ್ಮವಾದ ಭಾಗಗಳನ್ನು ಪುನರ್‌ಲೇಖಿಸುವುದು ಹೇಗೆ?

ಕೋಮುಸಾಮರಸ್ಯಕ್ಕೆ ಪಠ್ಯಪುಸ್ತಕಗಳು ಹೇಗೆ ತಮ್ಮ ಕೊಡುಗೆ ನೀಡಬಹುದು? ಹಲವು ಸಂದರ್ಭಗಳಲ್ಲಿ ಕೋಮುಹಿಂಸೆಗೆ, ಕೋಮುಗಲಭೆ ಹರಡುವಿಕೆಗೆ ಕಾರಣವಾಗುವ ವದಂತಿ ಹರಡುವಿಕೆಯನ್ನು ತಡೆಯುವ ಮಹತ್ವವನ್ನು ಪಠ್ಯಪುಸ್ತಕಗಳಲ್ಲಿ ಒಂದು ಪಾಠವಾಗಿ ಸೇರ್ಪಡೆಗೊಳಿಸುವುದು ಹೇಗೆ?

ಕೋಮುಸಾಮರಸ್ಯ ಕಾಪಾಡುವುದರಲ್ಲಿ ಮಹಿಳೆಯರು ಪಾತ್ರವಹಿಸುವಂತೆ ಅವರನ್ನು ಪ್ರೇರೇಪಿಸುವ ವಿಧಾನಗಳು ಯಾವುವು?

ಶಿಕ್ಷಣದಲ್ಲಿ ಮಾನವೀಯ ಮೌಲ್ಯಗಳನ್ನು ಅಳವಡಿಸುವ ಮೂಲಕ ಕೋಮುಸಾಮರಸ್ಯವನ್ನು ಕಾಪಾಡುವ ಮಾರ್ಗಗಳು ಯಾವುವು?

## ಅಧ್ಯಯನದ ಗುರಿಗಳು (Objectives)

ಕರ್ನಾಟಕ ರಾಜ್ಯದ ಪಠ್ಯಕ್ರಮದಲ್ಲಿ ಭಾಷೆ, ಸಾಹಿತ್ಯ, ಮಹಿಳೆಯರ ಸ್ಥಾನಮಾನ ಮತ್ತು ಕೋಮುರಸ್ಯದ ನಡುವಣ ಕೊಂಡಿಗಳನ್ನು ಹುಡುಕುವ ಉದ್ದೇಶವಿರುವ ಈ ಅಧ್ಯಯನದ ಗುರಿಗಳು ಈ ಕೆಳಗಿನಂತಿವೆ:

1. ಕರ್ನಾಟಕದ ಪಠ್ಯಕ್ರಮದಲ್ಲಿ ಪ್ರಾಥಮಿಕದಿಂದ ಪ್ಲಸ್ 2 ಹಂತದವರೆಗೆ ಬಳಕೆಯಲ್ಲಿರುವ ಭಾಷೆ/ಸಾಹಿತ್ಯ, ಸಮಾಜ ವಿಜ್ಞಾನ ಮತ್ತು ಇತಿಹಾಸದ ಪಠ್ಯಪುಸ್ತಕಗಳನ್ನು ಸ್ಥೂಲ ವಿಮರ್ಶೆಗೊಳಪಡಿಸುವುದು.
2. ಈ ಪಠ್ಯಪುಸ್ತಕಗಳಲ್ಲಿ ಹೆಣ್ಣು ಚಿತ್ರಿತವಾಗಿರುವ ಪರಿಯನ್ನು ಗುರುತಿಸುವುದು.
3. ಪಠ್ಯಗಳಲ್ಲಿ ಚಿತ್ರಿತವಾಗಿರುವ ಹೆಣ್ಣಿಗೂ ಆಕೆಯ ಸ್ಥಾನಮಾನಕ್ಕೂ ಕೋಮು ಹಿಂಸೆ, ಗಲಭೆ, ಸಾಮರಸ್ಯಕ್ಕೂ ಇರುವ ಸಂಬಂಧವನ್ನು ದಾಖಲಿಸುವುದು.
4. ನಮ್ಮ ಇತಿಹಾಸ ಪಠ್ಯಗಳಲ್ಲಿ ನಿರೂಪಿಸಲ್ಪಟ್ಟಿರುವ ಮುಸ್ಲಿಂ ದೊರೆಗಳ ವಿವರಗಳಿಗೂ ನಮ್ಮ ಇಂದಿನ ಕೋಮುದ್ವೇಷ ಗಲಭೆಗೂ ಸಂಬಂಧವಿದೆಯೇ ಎಂದು ಶೋಧಿಸುವುದು.
5. ಕೋಮುಸಾಮರಸ್ಯದಲ್ಲಿ ಮಹಿಳೆಯರು ನಿರ್ವಹಿಸಬಹುದಾದ ಪಾತ್ರವನ್ನು ಗುರುತಿಸಿ ವಿಶ್ಲೇಷಿಸುವುದು.
6. ಶಿಕ್ಷಕರು ಕೋಮುವಾದಿಗಳಾಗದಂತೆ ತಡೆಯುವ ಕ್ರಮಗಳನ್ನು ಸೂಚಿಸಿ ಚರ್ಚಿಸುವುದು.

**ಊಹೆಗಳು (Hypotheses)**

ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿ ಈ ಕೆಳಗಿನ ಊಹೆಗಳನ್ನು ಇಟ್ಟುಕೊಳ್ಳಲಾಗಿದೆ.

- ಶಿಕ್ಷಕರು ಕೋಮುವಾದಿ ಚಿಂತನೆಯನ್ನು ಅಂತರ್ಗತ ಮಾಡಿಕೊಂಡಿರುವುದರಿಂದ ಅವರು ವಿದ್ಯಾರ್ಥಿಗಳ ತಲೆಯಲ್ಲಿ ಕೋಮುವಾದಿ ಭಾವನೆಗಳನ್ನು ತುಂಬುತ್ತಾರೆ.
- ಪಠ್ಯಗಳಲ್ಲಿ ಚಿತ್ರಿತವಾಗುವ ಮಹಿಳೆಯ ಚಿತ್ರಣಕ್ಕೂ ಸಮಾಜದಲ್ಲಿ ಆಕೆಯ ಸ್ಥಾನಮಾನಕ್ಕೂ ನೇರ ಸಂಬಂಧ ಇದೆ.
- ಶಿಕ್ಷಕರನ್ನು ಸೆಕ್ಯೂಲರ್‌ವಾದಿಗಳಾಗಿಸಿದರೆ ವಿದ್ಯಾರ್ಥಿಗಳೂ ಸೆಕ್ಯುಲರ್ ಮನೋಧರ್ಮ ಬೆಳೆಸಿಕೊಳ್ಳುತ್ತಾರೆ.
- ಕೋಮು ಗಲಭೆಯ ವೇಳೆ ಗಾಳಿಮಾತು ಹರಡದಂತೆ ತಡೆಯುವಲ್ಲಿ ಮಹಿಳೆಯರು ಮುಖ್ಯ ಪಾತ್ರ ವಹಿಸಬಲ್ಲರು.
- ನಾವು ಬಳಸುವ ಇತಿಹಾಸ ಪಠ್ಯಗಳಲ್ಲಿ ಮುಸ್ಲಿಂ ದೊರೆಗಳು ಚಿತ್ರಿತವಾಗಿರುವ ರೀತಿಯು ವಿದ್ಯಾರ್ಥಿಗಳಲ್ಲಿ ಕೋಮುಭಾವನೆ ಉಂಟಾಗಲು ಕಾರಣವಾಗುತ್ತದೆ.
- ಪಠ್ಯಗಳನ್ನು ಪುನರ್‌ಲೇಖಿಸುವುದರಿಂದ ಸಮಾಜದಲ್ಲಿ ಒಂದು ನಿರ್ದಿಷ್ಟ ಸಮುದಾಯದ ಸದಸ್ಯರ ಬಗ್ಗೆ ಇರುವ ದ್ವೇಷದ ಭಾವನೆಯನ್ನು ಹೋಗಲಾಡಿಸಬಹುದು.

**ಅಧ್ಯಯನದ ಮಹತ್ವ:**

ಶಿಕ್ಷಣ ರಂಗದ ಕುರಿತಾಗಿ ನಡೆಸಲಾಗುವ ಅಧ್ಯಯನಗಳು ಸಾಮಾನ್ಯವಾಗಿ ಸಾಮಗ್ರಿ-ವಿಧಾನ-ಪರೀಕ್ಷೆ-ಮೌಲ್ಯಮಾಪನದ ಸುತ್ತ ಗಿರಕಿ ಹೊಡೆಯುತ್ತಿರುತ್ತವೆ. ಅಂದರೆ ಬೋಧನಾ ಸಾಮಗ್ರಿಗಳ ತಯಾರಿ, ತಯಾರಿಸಲಾದ ಬೋಧನಾ ಸಾಮಗ್ರಿಗಳನ್ನು ವಿದ್ಯಾರ್ಥಿಗಳಿಗೆ ಬಟವಾಡೆ (delivery) ಮಾಡುವ ಅಂದರೆ ನಾಲ್ಕು ಗೋಡೆಗಳ ಮಧ್ಯೆ ಬೋಧಿಸುವ ವಿಧಾನ, ಬೋಧಿಸಿದ ಸಾಮಗ್ರಿ ಎಷ್ಟರ ಮಟ್ಟಿಗೆ ವಿದ್ಯಾರ್ಥಿಗಳನ್ನು ತಲುಪಿದೆ ಎಂದು ತಿಳಿಯುವುದಕ್ಕಾಗಿ ನಡೆಸುವ ಪರೀಕ್ಷೆಗಳು ಮತ್ತು ಪರೀಕ್ಷೆಗಳಲ್ಲಿ ಬಿಳಿಹಾಳೆಗಳ ಮೇಲೆ ವಿದ್ಯಾರ್ಥಿಗಳು ತಮ್ಮ ಸ್ಮರಣಾಶಕ್ತಿಯ ಆಧಾರದಲ್ಲಿ ಲೇಖಿಸಿದ ಉತ್ತರಗಳ ಮೌಲ್ಯಮಾಪನಗಳೇ ಶಿಕ್ಷಣದ ನಾಲ್ಕು ಆಧಾರಸ್ತಂಭಗಳೆಂದುಕೊಂಡು ಈ ನಾಲ್ಕರ ಸುಧಾರಣೆಯ ಕುರಿತೇ ಹೆಚ್ಚಿನ ಅಧ್ಯಯನಗಳು ನಡೆಯುತ್ತವೆ. ಆದರೆ ಪ್ರಸ್ತುತ ಕೈಗೆತ್ತಿಕೊಂಡ ಅಧ್ಯಯನವು ಕರ್ನಾಟಕ ರಾಜ್ಯದ ಶಾಲೆಗಳಲ್ಲಿ ಭಾಷೆ/ಸಾಹಿತ್ಯ, ಸಮಾಜ ಶಾಸ್ತ್ರ, ಇತಿಹಾಸ ಪಾಠಗಳ ತಳಪದರಗಳನ್ನು ಶೋಧಿಸಿ, ಆ ಪಠ್ಯಗಳಲ್ಲಿರುವುದಕ್ಕೂ ಮಹಿಳೆಯರ ಸಾಮಾಜಿಕ ಸ್ಥಾನಮಾನಕ್ಕೂ, ಸಮಾಜದ ಕೋಮುಸಾಮರಸ್ಯಕ್ಕೂ ಇರುವ ಸಂಬಂಧವನ್ನು ಗುರುತಿಸುವ ಉದ್ದೇಶ ಹೊಂದಿದ್ದು ಸಮಕಾಲೀನ ಸಾಮಾಜಿಕ ಶೈಕ್ಷಣಿಕ ಪರಿಸರದಲ್ಲಿ ಮಹತ್ವಪೂರ್ಣವಾಗಿದೆ ಎಂದು ಭಾವಿಸಲಾಗಿದೆ.

**ಅಧ್ಯಾಯಗಳ ವಿಂಗಡಣೆ:**

ಈ ಮಹಾಪ್ರಬಂಧದ ಅಧ್ಯಾಯಗಳನ್ನು ಈ ಕೆಳಗಿನಂತೆ ವಿಂಗಡಿಸಲಾಗಿದೆ.

**ಅಧ್ಯಾಯ ಒಂದು:** ಪೀಠಿಕೆ (Introduction)

ಪೀಠಿಕೆ, ಅಧ್ಯಯನದ ಹಿನ್ನೆಲೆ, ಸಮಕಾಲೀನ ಸಾಮಾಜಿಕ-ಶೈಕ್ಷಣಿಕ ಸ್ಥಿತಿ, ಸೈದ್ಧಾಂತಿಕ ಚೌಕಟ್ಟು (Conceptual Framework), ಅಧ್ಯಯನದ ಸಂದರ್ಭ, ಅಧ್ಯಯನದ ಅವಶ್ಯಕತೆ, ಅಧ್ಯಯನದ ಉದ್ದೇಶ, ಸಮಸ್ಯೆಯ ಹೇಳಿಕೆ (Statement of the Problem) ಮತ್ತು ಸಂಶೋಧನಾ ಪ್ರಶ್ನೆಗಳು, ಅಧ್ಯಯನಕ್ಕೊಳಪಡಬೇಕಾದ ನಿರ್ದಿಷ್ಟ ಸಮಸ್ಯೆಗಳು, ಅಧ್ಯಯನದ ಗುರಿಗಳು (Objectives of the Study), ಊಹೆಗಳು (Hypothesis), ಅಧ್ಯಯನದ ಮಹತ್ವ, ಅಧ್ಯಯನದ ಮಿತಿಗಳು ಮತ್ತು ಅಧ್ಯಾಯಗಳ ವಿಂಗಡಣೆ.

**ಅಧ್ಯಾಯ ಎರಡು:** ಸಂಶೋಧನಾ ಸಾಹಿತ್ಯದ ಅವಲೋಕನ (Review of Literature)

ಪೀಠಿಕೆ, ಪಠ್ಯಕ್ರಮದ ವ್ಯಾಖ್ಯಾನ ಹಾಗೂ ಪಠ್ಯರಚನಾ ಪ್ರಕ್ರಿಯೆ, ಪಠ್ಯಪುಸ್ತಕಗಳ ಸಿಂಹಾವಲೋಕನ; ಕರ್ನಾಟಕದ ಪಠ್ಯಕ್ರಮದಲ್ಲಿರುವ ಭಾಷೆ, ಇತಿಹಾಸ ಮತ್ತು ಸಮಾಜ ವಿಜ್ಞಾನ ಪಠ್ಯಪುಸ್ತಕಗಳು, ಪಠ್ಯಪುಸ್ತಕಗಳ ಸಂಕ್ಷಿಪ್ತ ವಿಮರ್ಶೆ (review) ಪಠ್ಯಪುಸ್ತಕಗಳ ಹಿಂದಿರುವ ಗ್ರಹಿಕೆಗಳು (Assumptions), ಪಠ್ಯಪುಸ್ತಕ ರಚನೆಕಾರರ ಮನೋಧರ್ಮಗಳು (Attitudes); ವಾಚ್ಯ (Explicit) ಮತ್ತು ಸೂಚ್ಯ (Implicit), ಲಭ್ಯ ಅಧ್ಯಯನಗಳ ಪರಾಮರ್ಶೆ ಮತ್ತು ಸಂಶೋಧನಾ ಅಂತರ (Research Gap).

**ಅಧ್ಯಾಯ ಮೂರು:** ಸಂಶೋಧನಾ ವಿಧಾನ (Methodology)

ಪೀಠಿಕೆ, ಸಂಶೋಧನಾ ವಿಧಾನ, ಪಠ್ಯಪುಸ್ತಕಗಳ ಹಾಗೂ ವಾರ್ತಾ ಪತ್ರಿಕೆಗಳಲ್ಲಿ ಪ್ರಕಟವಾದ ಅಧ್ಯಯನ ಸಂಬಂಧೀ ಲೇಖನಗಳ ಸಂಗ್ರಹ, ದತ್ತಾಂಶಗಳ ಸಂಗ್ರಹ, ಪಠ್ಯಪುಸ್ತಕಗಳ ವಿಶ್ಲೇಷಣೆ ಮತ್ತು ದತ್ತಾಂಶಗಳ ವಿಶ್ಲೇಷಣೆ.

**ಅಧ್ಯಾಯ ನಾಲ್ಕು:** ಮಹಿಳೆಯರ ಸ್ಥಾನಮಾನ ಹಾಗೂ ಲಿಂಗನ್ಯಾಯ

ಪೀಠಿಕೆ, ಮಹಿಳಾ ವಿಮೋಚನೆ, ಸ್ತ್ರೀವಾದ ಹಾಗೂ ಮಹಿಳಾ ಸಬಲೀಕರಣದ ಪರಿಕಲ್ಪನೆಗಳು, ಸಾಹಿತ್ಯ ಹಾಗೂ ಸಾಹಿತ್ಯೇತರ ಪಠ್ಯಗಳಲ್ಲಿ ಮಹಿಳೆಯರ ಚಿತ್ರಣ, ಊಳಿಗಮಾನ್ಯ (feudal) ಹಾಗೂ ಸಾಂಪ್ರದಾಯಿಕ ಎರಕದಲ್ಲಿ ಮಹಿಳೆಯರ ಪಡಿಯಚ್ಚೀಕರಣಕ್ಕೆ (stereotyping) ನೆರವಾಗುವ ಸಾಮಾಜಿಕ ಹಾಗೂ ಕೌಟುಂಬಿಕ ಶ್ರೇಣೀಕರಣ, ಕೆಲವು ಪಠ್ಯಗಳ ವಿಶ್ಲೇಷಣೆ, ಮೇಲ್ಮೈ ಸಂರಚನೆ (Surface structure), ಆಳ ಸಂರಚನೆ (Deep structure), ಪಠ್ಯಗಳು ಹಾಗೂ ಸುಪ್ತ ಪಠ್ಯ (Sub-texts)ಗಳು, ಗ್ರಹಿಕೆಯ ರೀತಿ ಮತ್ತು ಮನೋಧರ್ಮದಲ್ಲಿ ಬದಲಾವಣೆ, ಮಹಿಳೆಯರಿಗೆ ನೀಡಲಾದ ಹಾಗೂ ಮಹಿಳೆಯರು ನಿರ್ವಹಿಸುವ ಪಾತ್ರಗಳಲ್ಲಿ ಮಾದರಿ ಬದಲಾವಣೆ (Paradigm Shift), ನೀರಜಾ ಬಾನೊಟ್, ಕಲ್ಪನಾ ಚಾವ್ಲಾ, ಕಿರಣ್ ಬೇಡಿ, ಸಾವಿಯಬ್ಬೆ, ಗಂಗೂಬಾಯಿ ಹಾನಗಲ್ಲ, ಭಾಂವ್ರಿ ದೇವಿ, ಕರ್ನಾಟಕದಲ್ಲಿ ಸ್ತ್ರೀಶಕ್ತಿ ಚಳವಳಿ, ರಾಜಕೀಯ ಸರಿತನ (Political Correctness) ಮತ್ತು ಪಠ್ಯಗಳ ತಯಾರಿ.

**ಅಧ್ಯಾಯ ಐದು:** ಪಠ್ಯಪುಸ್ತಕಗಳು ಮತ್ತು ಕೋಮುಸಾಮರಸ್ಯ

ಪೀಠಿಕೆ, ಶಿಕ್ಷಣದಲ್ಲಿ ಕೋಮುವಾದ ಮತ್ತು ಶಿಕ್ಷಣದ ಬಗ್ಗೆ ಕೋಮುವಾದಿ ಮನೋಧರ್ಮ, ಪಠ್ಯಪುಸ್ತಕಗಳ ಮೂಲಕ ಯೋಚನಾ ಪ್ರಕ್ರಿಯೆಯ ಭಾವನಾತ್ಮೀಕರಣ (Emotionalisation), ಹೊಸ ಪಠ್ಯಗಳಲ್ಲಿರಬಹುದಾದ, ಭಾವನಾತ್ಮಕವಾಗಿ ಸೂಕ್ಷ್ಮವಾದ ಭಾಗಗಳ ತಿದ್ದುವಿಕೆ/ ಪುನರ್‌ಲೇಖನ, ಕೋಮು ಸಾಮರಸ್ಯಕ್ಕೆ ಪಠ್ಯಪುಸ್ತಕಗಳ ಕೊಡುಗೆ, ವದಂತಿ ಹರಡುವಿಕೆಯನ್ನು ತಡೆಯುವ ಕ್ರಮಗಳು, ಕೋಮುಗಲಭೆಗಳ ತಡೆಯುವಿಕೆ ಹಾಗೂ ಕೋಮು ಸಾಮರಸ್ಯದಲ್ಲಿ ಮಹಿಳೆಯರ ಪಾತ್ರ.

**ಅಧ್ಯಾಯ ಆರು:** ಕೋಮು ಸಾಮರಸ್ಯದಲ್ಲಿ ಮಾನವೀಯ ಮೌಲ್ಯಗಳು

ಪೀಠಿಕೆ, ಶಿಕ್ಷಣದ ಗುರಿಗಳು/ಸೆಕ್ಯುಲರಿಸಂನ ವ್ಯಾಖ್ಯಾನ, ಮೌಲ್ಯಗಳ ವ್ಯಾಖ್ಯಾನ, ಮಾನವೀಯ ಮೌಲ್ಯಗಳು, ನೈತಿಕತೆ, ನೈತಿಕ ಶಿಕ್ಷಣದ ನೆಪದಲ್ಲಿ ಬಹುಮುಖೀ ಸಂಸ್ಕೃತಿಯಲ್ಲಿ ಧಾರ್ಮಿಕ ಶಿಕ್ಷಣದ ಅಪಾಯ, ತಳಮಟ್ಟದಲ್ಲಿ ಶಿಕ್ಷಕರ ಕೋಮುವಾದಿ ಮನೋಧರ್ಮ, ಮಾನವೀಯ ಮೌಲ್ಯಗಳ ಆಕೃತೀಕರಣ(moulding)ದಲ್ಲಿ ಪಠ್ಯಪುಸ್ತಕಗಳ ಬಳಕೆ, ಭಿನ್ನಮತ, ಸಂವಾದ, ಸಹಬಾಳ್ವೆ, ಧಾರ್ಮಿಕ ಸಹನೆ, ಪಳೆಯುಳಿಕೀಕೃತ (fossilised), ಸಮೂಹ ನಿಯಂತ್ರಿತ (mass-stereotyped) ಯೋಚನಾ ವಿಧಾನದ ಅ–ಸಾಂಸ್ಥೀಕರಣ (Deschooling), ಅ–ಸಾಂಸ್ಥೀಕರಣದಲ್ಲಿ ಮಹಿಳೆಯರ ಪಾತ್ರ, ಶಿಕ್ಷಕರ ಸೂಕ್ಷ್ಮಗ್ರಾಹೀಕರಣ (sensitization)ದ ಅವಶ್ಯಕತೆ, ಗಾಂಧೀ ಮೌಲ್ಯಗಳನ್ನಾಧರಿಸಿದ ಶಾಂತಿ ಶಿಕ್ಷಣದ ಒಂದು ಕೋರ್ಸ್‌ನ ಸಾಧ್ಯತೆ.

**ಅಧ್ಯಾಯ ಏಳು:** ಅಧ್ಯಯನದ ಫಲಶ್ರುತಿ ಮತ್ತು ಸಮಾರೋಪ

ಪೀಠಿಕೆ, ಫಲಶ್ರುತಿ, ಚರ್ಚೆ, ಇಂಗಿತಗಳು (implications), ಸಲಹೆಗಳು, ಭಾವೀ ಸಂಶೋಧನೆಗೆ ಶಿಫಾರಸುಗಳು, ಸಾರಾಂಶ ಮತ್ತು ಸಮಾರೋಪ.

# ಅಧ್ಯಾಯ ಎರಡು

# ಸಂಶೋಧನಾ ಸಾಹಿತ್ಯದ ಅವಲೋಕನ

## ಪೀಠಿಕೆ

ಈ ಅಧ್ಯಯನಕ್ಕೆ ಸಂಬಂಧಿಸಿದ ಸಂಶೋಧನಾ ಸಾಹಿತ್ಯದ ಅವಲೋಕನವು ಅಧ್ಯಯನಕ್ಕೆ ಪೂರಕವಾದ ಮತ್ತು ಈ ಮೊದಲು ನಡೆಸಲಾದ ಸಂಶೋಧನಾ ಅಧ್ಯಯನದ ಪರಿಶೀಲನೆ ಮತ್ತು ಅವಲೋಕನವಾಗಿದೆ. ಈ ಅಧ್ಯಯನಕ್ಕೆ ಪೂರಕವಾದ ಈ ಕೆಳಗಿನ ಸಂಶೋಧನಾ ಅಧ್ಯಯನಗಳನ್ನು ಅವಲೋಕಿಸಲಾಯಿತು.

ರ್‍ಯಾನ್ (2003)ರವರ ಒಂದು ಲಿಂಗ–ಸ್ವ (ಎ ಜಂಡರ್ಡ್ ಸೆಲ್ಫ್) ಅಥವಾ ಒಂದು ಲಿಂಗೀಕೃತ (gendered) ಸಂದರ್ಭ ಅಧ್ಯಯನವು ಲೈಂಗಿಕ ವ್ಯತ್ಯಾಸಗಳನ್ನು ಒಂದು ಸಾಮಾಜಿಕ ಅಸ್ಮಿತೆ (ಐಡೆಂಟಿಟಿ)ಯ ದೃಷ್ಟಿಕೋನದಿಂದ ಪರಿಶೀಲಿಸುತ್ತದೆ. ಲೈಂಗಿಕ ವ್ಯತ್ಯಾಸದ ಪಾರಂಪರಿಕ ವಿವರಣೆಗಳು ದೇಹಕೇಂದ್ರದೂರವಾದ (distal) ವಿವರಣಾತ್ಮಕ ಅಂಶಗಳನ್ನು ಅವಲಂಬಿಸಿ ನೀಡಲಾದ ವಿವರಣೆಗಳು. ಇದು ಒಂದು ದೃಢ (Stable) ಲಿಂಗ–ಸ್ವದ ಪರಿಕಲ್ಪನೆ (Self-concept)ಯ ಸೈದ್ಧಾಂತೀಕರಣ (conceptualisation)ಕ್ಕೆ ಸಾಮಾಜಿಕ ಅಸ್ಮಿತೆ ಸಿದ್ಧಾಂತ ಮತ್ತು ಸ್ವ–ವರ್ಗೀಕರಣ (Self Categorisation) ಸಿದ್ಧಾಂತವನ್ನು ಆಧರಿಸುತ್ತದೆ. ಸಾಮಾಜಿಕ ಅಸ್ಮಿತೆ ಪರಿಕಲ್ಪನೆಯು ಲಿಂಗ–ಸಂಬಂಧಿ ವರ್ತನೆಗಳ, ಮನೋಧರ್ಮಗಳ ಮತ್ತು ನಂಬಿಕೆಗಳ ಅಭಿವ್ಯಕ್ತಿಯ ಮೇಲೆ ಹೇಗೆ ಸಾಮಾಜಿಕ ಸಂದರ್ಭಗಳು ಪ್ರಭಾವ ಬೀರುತ್ತವೆ ಎಂಬುದನ್ನು ಹೇಳುತ್ತದೆ.

ಸ್ವಲ್ಪ ಅಸ್ಪಷ್ಟ ಅಥವಾ ಅಮೂರ್ತ ಅನ್ನಿಸಿದರೂ ಈ ಸಾಮಾಜಿಕ ಅಸ್ಮಿತೆ ಸಿದ್ಧಾಂತ ಭಾರತೀಯ ಸಂದರ್ಭದಲ್ಲಿ ಕೂಡ ಹೆಣ್ಣಿನ ಸ್ಥಿತಿ ಹೇಗೆ ಸಮಕಾಲೀನ ಸಾಮಾಜಿಕ ಶಕ್ತಿಗಳ ಹಾಗೂ ಪ್ರಭಾವಗಳಿಂದ ನಿರ್ಧರಿತವಾಗುತ್ತದೆಂಬ ದೃಷ್ಟಿಯಿಂದ ಅಧ್ಯಯನ ಯೋಗ್ಯವಾಗಿದೆ.

ವ್ಹೇಲನ್ (2000)ರವರ ನ್ಯೂಸೌತ್‌ವೇಲ್ಸ್‌ನ ಕ್ಯಾಥೋಲಿಕ್ ಶಾಲೆಗಳ ಸಮಾಲೋಚಕರ ಅಧ್ಯಯನವು ಅವರ ನಾಯಕತ್ವ ಮತ್ತು ಪ್ರಾಂಶುಪಾಲರುಗಳೊಂದಿಗೆ ಅವರ ಸಂಬಂಧದ ವಿಶ್ಲೇಷಣೆಯ ಜತೆಗೆ ಅವರು ಹೇಗೆ ಶಾಲೆಗಳ ಮೇಲೆ ಪ್ರಭಾವ ಬೀರುತ್ತಾರೆಂಬುದನ್ನು

ಗುರುತಿಸುತ್ತದೆ. ಕರ್ನಾಟಕದ ಸಂದರ್ಭದಲ್ಲಿ ಜಿಲ್ಲಾ ಶಿಕ್ಷಣ ಅಧಿಕಾರಿಗಳು, ಸಾರ್ವಜನಿಕ ಶಿಕ್ಷಣದ ಗುಣಮಟ್ಟದ ಮೇಲೆ ಇಂತಹ ಪ್ರಭಾವ ಬೀರಬಲ್ಲರು. ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಎಲ್ಲ ನಾಯಕತ್ವವೂ ಸರಕಾರೀ ಇಲಾಖೆಗಳಿಗೇ ಸೀಮಿತವಾಗಿರುತ್ತ, ಶಿಕ್ಷಕರಿಗೆ ಪಠ್ಯಕ್ರಮ ನಿರ್ಧಾರದಲ್ಲಿ ಹೆಚ್ಚಿನ ಸ್ವಾತಂತ್ರ್ಯವಾಗಲಿ, ಸ್ವಾಯತ್ತೆಯಾಗಲಿ ಇರುವುದಿಲ್ಲ.

ಒಬ್ರಿಯಾನ್ (2005)ರವರ ಅಧ್ಯಯನವು ಕೂಡ ಶಿಕ್ಷಣದಲ್ಲಿ ನಾಯಕತ್ವದ ಪರಿಕಲ್ಪನೆಯ ಅಧ್ಯಯನವಾಗಿದೆಯಾದರೂ, ಅದು ನಾಯಕತ್ವ ಎಂಬುದು ಹುದ್ದೆ–ಆಧಾರಿತ (position-based)ವಾಗಿರಬೇಕಾಗಿಲ್ಲ ಮತ್ತು ಅದು ಯಾವುದೇ ಒಬ್ಬ ವ್ಯಕ್ತಿಗೆ ಸೇರಿದ್ದಲ್ಲ ಎಂಬ ನೆಲೆಗಟ್ಟಿನ ಮೇಲೆ ನಿಂತಿದೆ. ಹಾಗಾಗಿ ನಾಯಕತ್ವವು ಹಂಚಿಕೊಳ್ಳಲ್ಪಡಬಹುದಾದ್ದು (shared), ವಿತರಣಾತ್ಮಕ (distributive) ಹಾಗೂ ಬಹು ಆಯಾಮಗಳುಳ್ಳದ್ದು (multidimensional) ಮತ್ತು ಒಂದು ಸಂಸ್ಥೆಯ ಎಲ್ಲ ಸದಸ್ಯರಿಗೆ ಮುಕ್ತ (open)ವಾದದ್ದು ಎಂದು ಬ್ರಿಯಾನ್ ವಾದಿಸುತ್ತಾರೆ. ಹಾಗಾಗಿ ಶಿಕ್ಷಕರ (ಮುಖ್ಯೋಪಾಧ್ಯಾಯರು ಅಥವಾ ಪ್ರಾಂಶುಪಾಲರಷ್ಟೇ ಅಲ್ಲ) ನಾಯಕತ್ವದ ಕುರಿತಾದ ಗ್ರಹಿಕೆ (perceptions)ಗಳನ್ನು ಹಾಗೂ ನಾಯಕತ್ವದ ಅನುಭವಗಳನ್ನು ಶೋಧಿಸುವ ಒಂದು ಅಧ್ಯಯನ ಒ'ಬ್ರಿಯಾನ್‌ರವರದು.

ಜೋನ್ಸ್ (2005)ರ ಅಧ್ಯಯನವು ಲಂಬಮೂಲವಾಗಿ (vertically) ಸಂರಚಿತ ಪಠ್ಯಕ್ರಮದ ಒಂದು ಕೇಸ್‌ಸ್ಟಡಿ ಮಾಧ್ಯಮಿಕ ಶಾಲಾ ಸುಧಾರಣೆಯ ಮೂಲಕ ವಿದ್ಯಾರ್ಥಿಗಳನ್ನು ಅವರ ಕಲಿಕೆಯಲ್ಲಿ ಹೇಗೆ ಮರು–ತೊಡಗಿಸು (reengaging)ವುದು ಎಂಬುದನ್ನು ಜೋನ್ಸ್ ಶೋಧಿಸಿದ್ದಾರೆ. 'ಮಾಧ್ಯಮಿಕ ಶಿಕ್ಷಣ' (middle schooling) ಎಂಬ ಪದಪುಂಜವು ಸಾಮಾನ್ಯವಾಗಿ 11ರಿಂದ 15ರ ವಯೋಮಾನದ ಹದಿಹರೆಯದ ವಿದ್ಯಾರ್ಥಿಗಳಿಗೆ ಸಂಬಂಧಿಸಿದ ಶಾಲಾ ಚೌಕಟ್ಟು (setting) ಆಗಿದ್ದು, ಈ ವಯೋಮಾನದ ಅವಧಿಯನ್ನು ಶಿಕ್ಷಣದಲ್ಲಿ ವಿಶೇಷ ಮಹತ್ವವಿರುವ ಅವಧಿ ಎಂದು ಪರಿಗಣಿಸಲಾಗಿದೆ. ಪಠ್ಯಕ್ರಮದಲ್ಲಿ ಸಮಾಜ, ಕುಟುಂಬ, ಮಹಿಳೆ ಮತ್ತು ಧರ್ಮ–ದೇವರ ಬಗ್ಗೆ ಮಕ್ಕಳ ಮನೋಧರ್ಮ ಹಾಗೂ ಮೌಲ್ಯಗಳು ರೂಪಿತವಾಗುವ ಅವಧಿ ಇದು ಆಗಿರುವುದರಿಂದ ಕರ್ನಾಟಕದ ಪಠ್ಯಕ್ರಮದಲ್ಲಿ ಬಳಕೆಯಲ್ಲಿರುವ ಪಠ್ಯಪುಸ್ತಕಗಳ

ವಿಶ್ಲೇಷಣೆ ನಡೆಸುವಾಗ ಈ ವಯೋಮಾನದ ಮಕ್ಕಳು ಓದುವ ಪಠ್ಯಗಳಿಗೆ ವಿಶೇಷ ಮಹತ್ವ ನೀಡಲಾಗಿದೆ. ಇಂತಹ ಮಕ್ಕಳ ಮನಸ್ಸನ್ನು, ಅವರ ಮನಸ್ಸು ಯೋಚಿಸುವ ತರ್ಕಿಸುವ ನಿರ್ಧಾರಕ್ಕೆ ಬರುವ ರೀತಿಯನ್ನು ಅರ್ಥಮಾಡಿಕೊಳ್ಳುವುದು ಬಹಳ ಮುಖ್ಯವೆಂಬ ನೆಲೆಯಲ್ಲಿ ಜೋನ್ಸ್‌ರವರ ಅಧ್ಯಯನವು ಒಂದು ಪಠ್ಯಕ್ರಮದ ಅನುಷ್ಠಾನದ ಮೂಲಕ ಒಂದು ಮಾಧ್ಯಮಿಕ ಶಾಲೆಯ ಚೌಕಟ್ಟಿನ ಪುನರ್‌ವಿನ್ಯಾಸ (redesign)ದ ಮೌಲ್ಯಮಾಪನ ಮಾಡುತ್ತದೆ.

ರೆನೀ (2003)ಯವರ 'ಸ್ಕೂಲ್ ರೆಫ್ಯುಸಲ್: ಎಕೇಸ್ ಸ್ಟಡಿ'ಯನ್ನು ಪ್ರಸ್ತುತ ಸಂಶೋಧನಾ ಅಧ್ಯಯನದಲ್ಲಿ ಭವಿಷ್ಯದ ಸಂಶೋಧನೆಗೆ ಶಿಫಾರಸುಗಳ ದೃಷ್ಟಿಯಿಂದ ಅವಲೋಕಿಸಲಾಯಿತು. ರೆನೀಯವರ ಅಧ್ಯಯನದ ವಿಶೇಷವೆಂದರೆ ಮಕ್ಕಳು ಶಾಲೆಗೆ ಬರಲು ಯಾಕೆ ನಿರಾಕರಿಸುತ್ತಾರೆ? ಎಂಬ ಪ್ರಶ್ನೆಗೆ ಉತ್ತರ ಹುಡುಕಲು ಅವರು ಅಧ್ಯಯನ ನಡೆಸುವುದು ಹೀಗೆ ಶಾಲೆಗೆ ಬರಲು ನಿರಾಕರಿಸಿದ ಕೇವಲ ಒಬ್ಬ ವಿದ್ಯಾರ್ಥಿಯನ್ನು ಸಂಶೋಧನಾ ಆಕರವಾಗಿಟ್ಟುಕೊಂಡು ಶಿಕ್ಷಣದಲ್ಲಿ ಸ್ನಾತಕೋತ್ತರ ಪದವಿಗಾಗಿ ನಡೆಸಿದ ಈ ಅಧ್ಯಯನವು ಒಬ್ಬ ನಿರ್ದಿಷ್ಟ ವಿದ್ಯಾರ್ಥಿ ಯಾಕೆ ಶಾಲೆಗೆ ಬರಲು ನಿರಾಕರಿಸಿದ, ಅದಕ್ಕೆ ಕಾರಣಗಳೇನು, ಆತನ ಕೌಟುಂಬಿಕ ಸಾಮಾಜಿಕ ಹಿನ್ನೆಲೆಗಳೇನು, ಅವನ ಭಾವನಾತ್ಮಕ, ಬೌದ್ಧಿಕ ಆರೋಗ್ಯ ಹೇಗಿದೆ? ಎಂದು ಶೋಧಿಸುತ್ತ ಹೇಗೆ ಶಾಲಾ ನಿರಾಕರಣ (school refusal)ವನ್ನು ಕನಿಷ್ಠಗೊಳಿಸ(minimise)ಬಹುದು ಎಂದು ಪರಿಶೀಲಿಸುತ್ತದೆ.

ಕರ್ನಾಟಕದ ಸಂದರ್ಭದಲ್ಲಿ ಕೋಮುವಾದ ಹಾಗೂ ಕೋಮುಹಿಂಸೆಗೆ ಕಾರಣಗಳನ್ನು ಹುಡುಕುವ ಸಂಶೋಧಕರು ಓರ್ವ ಉಗ್ರ ಕೋಮುವಾದಿಯನ್ನು ಕೇಂದ್ರ (focus)ವಾಗಿಟ್ಟುಕೊಂಡು ಅಧ್ಯಯನ ನಡೆಸುವ ಸಾಧ್ಯತೆ ಇದೆ ಎಂಬುದನ್ನು ಸೂಚಿಸುವುದಕ್ಕಾಗಿ ರೆನೀಯವರ ಅಧ್ಯಯನವನ್ನು ಸಂಶೋಧನಾ ಸಾಹಿತ್ಯದ ಅವಲೋಕನದ ವ್ಯಾಪ್ತಿಯೊಳಗೆ ತರಲಾಯಿತು.

ಹ್ಯಾಮಿಲ್ಟನ್ (2005) ತನ್ನ 'ವಿ ಗ್ರೋ ಇನ್ ದ ಶೇಡ್ ಆಫ್ ಈಚ್ ಅದರ್ : ಎ ಸ್ಟಡಿ ಆಫ್ ಕನೆಕ್ಟೆಡ್‌ನೆಸ್, ಎಂಪವರ್‌ಮೆಂಟ್ ಲ್ಯಾಂಡ್ ಲರ್ನಿಂಗ್ ಇನ್ ದ ಮಿಡ್ಲ್ ಇಯರ್ಸ್ ಆಫ್ ಸ್ಕೂಲಿಂಗ್' ಎಂಬ ಡಾಕ್ಟರ್ ಆಫ್ ಎಜುಕೇಶನ್ ಪದವಿಗಾಗಿ ಸಿದ್ಧಪಡಿಸಿದ ಮಹಾಪ್ರಬಂಧವು ನಮ್ಮ ಶಾಲಾ ಪಠ್ಯಕ್ರಮದಲ್ಲಿ ಕೋಮುಸಾಮರಸ್ಯಕ್ಕೆ ಸಂಬಂಧಿಸಿ ವ್ಯಕ್ತಿ–ವ್ಯಕ್ತಿಗಳ ನಡುವೆ ಭಾವನೆಗಳ

ಕೊಂಡಿಗಳನ್ನು, ಅವರನ್ನು ಪರಸ್ಪರ 'ಕನೆಕ್ಟ್' ಮಾಡುವುದನ್ನು ಮತ್ತು ಮಹಿಳೆಯರ ಸಬಲೀಕರಣವನ್ನು ಹೇಗೆ ಮಾಡಬಹುದೆಂಬುದನ್ನು ವಿಶ್ಲೇಷಿಸುವ ದೃಷ್ಟಿಯಿಂದ ಉಪಯೋಗವಾಗಬಹುದು. 'ಕನೆಕ್ಟೆಡ್‌ನೆಸ್'ಗೆ ಪೂರಕವಾದ ವಾತಾವರಣದಲ್ಲಿ ಮಾತ್ರ ಕಲಿಕೆ ಸಾಧ್ಯ. ಕೆಲವರಿಗೆ 'ಕನೆಕ್ಟೆಡ್‌ನೆಸ್' ಎಂದರೆ ಪಠ್ಯಕ್ರಮದ ಪ್ರದೇಶ (curriculum areas)ದೊಳಗಡೆಯಷ್ಟೆ ಕನೆಕ್ಶನ್‌ಗಳನ್ನು ಮಾಡುವುದು, ಕಲಿಯುವವರ ಸಮುದಾಯದೊಳಗೆ ನಡೆವ ಬೋಧನೆ ಮತ್ತು ಕಲಿಕೆ. ಇನ್ನೊಂದು ಅರ್ಥದಲ್ಲಿ 'ಕನೆಕ್ಟೆಡ್‌ನೆಸ್' ಎಂದರೆ ಕುಟುಂಬ, ಶಾಲೆ ಮತ್ತು ವಿಶಾಲವಾದ ಸಮುದಾಯಕ್ಕೆ ತಾನು ಸೇರಿದವ (sense of belonging) ಎಂಬ ಭಾವನೆ. ಈ ಅರ್ಥ ಸಾಮಾಜಿಕ ಸಾಮರಸ್ಯಕ್ಕೆ ಮುಖ್ಯ. ಆದ್ದರಿಂದ ನಮ್ಮ ಪಠ್ಯಗಳಲ್ಲಿ 'ಕನೆಕ್ಟೆಡ್‌ನೆಸ್'ನ ಪರಿಕಲ್ಪನೆಯನ್ನು ಹೇಗೆ ಅಳವಡಿಸಬಹುದು? ಎಂಬ ಚಿಂತನೆಗೆ ಹ್ಯಾಮಿಲ್ಟನ್‌ರ ಅಧ್ಯಯನ ಪ್ರಸ್ತುತವಾಗುತ್ತದೆ.

ಲಿಂಗನ್ಯಾಯದ ಪರಿಕಲ್ಪನೆಯನ್ನು ಶಾಲಾ ದಿನಗಳಲ್ಲೆ ಮಕ್ಕಳಿಗೆ ಪರಿಚಯಿಸುವುದು ಸೂಕ್ತ. ಈ ನಿಟ್ಟಿನಲ್ಲಿ ಶಾಲಾ ಮುಖ್ಯಸ್ಥರು ಲಿಂಗ ಸಮಾನತೆಯ ಓರ್ವ ನಾಯಕ/ನಾಯಕಿಯಾಗಿ ಹೇಗೆ ಕಾರ್ಯನಿರ್ವಹಿಸುವುದೆಂಬುದನ್ನು ಶೋಧಿಸುವ ವೆನ್‌ಹ್ಯಾಮ್ (2002) ಲಿಂಗ ಮತ್ತು ಶಾಲೆಗೆ ಸಂಬಂಧಿಸಿದ ಯೋಜನಾ ನಿರ್ದೇಶಗಳು, ಆಚರಣೆ ಮತ್ತು ನಾಯಕತ್ವದ ಅಧ್ಯಯನ ನಡೆಸಿದ್ದಾರೆ. ಆಸ್ಟ್ರೇಲಿಯಾದ ಶಾಲೆಗಳಿಗಾಗಿ 1975 ಮತ್ತು 1997ರ ನಡುವೆ ಪ್ರಕಟವಾದ ಲಿಂಗ ನೀತಿ (policy) ದಾಖಲೆಗಳಲ್ಲಿರುವ ಲಿಂಗ ನೀತಿ ನಿರ್ದೇಶಗಳಿಗೆ 35 ಶಾಲೆಗಳು ಹೇಗೆ ಪ್ರತಿಕ್ರಯಿಸಿದವು? ಮತ್ತು ಅವುಗಳ ಪ್ರತಿಕ್ರಿಯೆಗಳು ಲಿಂಗನ್ಯಾಯಕ್ಕೆ ಸಂಬಂಧಿಸಿ ಶಾಲಾ ನಾಯಕತ್ವದ ಮೇಲೆ ಏನು ಪರಿಣಾಮಗಳನ್ನು ಬೀರುತ್ತವೆ ಎಂಬುದರ ಸುತ್ತ ನಡೆಸಲಾಗಿರುವ ಅಧ್ಯಯನ ಇದು. ಲಿಂಗನ್ಯಾಯ ನೀಡಿಕೆಗೆ ತಾತ್ವಿಕ ನೆಲೆಗಟ್ಟು ಒದಗಿಸಬಹುದಾದ ಅಧ್ಯಯನ ಇದು.

## ಲಭ್ಯ ಅಧ್ಯಯನಗಳ ಪರಾಮರ್ಶೆ

ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಥಮಿಕ ಮತ್ತು ಪ್ರೌಢಶಾಲಾ ಕನ್ನಡ ಪಠ್ಯಪುಸ್ತಕಗಳ ರಾಚನಿಕ, ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಸ್ವರೂಪಗಳ ಅಧ್ಯಯನ ನಡೆಸಿರುವ ಬಿ. ಪ್ರಕಾಶ (2009) ಅವರು ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಿಸಿದಂತೆ ಪಠ್ಯಪುಸ್ತಕಗಳ; ಮುಖ್ಯವಾಗಿ ಕನ್ನಡ ಪಠ್ಯಪುಸ್ತಕಗಳ, ರಚನೆಯಲ್ಲಿ ನಡೆದ ಅಧ್ಯಯನಗಳ ವಿವರ ನೀಡಿದ್ದಾರೆ. ನಂಜುಂಡ ಸ್ವಾಮಿಯವರ ಪಠ್ಯ ವಿಕಾಸ ಕ್ರಮ, ಕೆ.ಎಸ್. ಸದಾಶಿವಯ್ಯ – ಇವರ ಪಠ್ಯರಚನಾ ವಿನ್ಯಾಸ, ಮಹಾಬಲೇಶ್ವರ ರಾವ್ – ಇವರ ಪ್ರೌಢಶಾಲೆಗಳಲ್ಲಿ ಕನ್ನಡ ಬೋಧನೆ, ಶ್ರೀನಿವಾಸ ಹಾವನೂರ ಇವರ ರೆವರೆಂಡ್ ಡಾಕ್ಟರ್ ಫರ್ಡಿನಾಂಡ್ ಕಿಟೆಲ್, ಹೊಸಗನ್ನಡದ ಅರುಣೋದಯ (ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ – 1974), ಮಹಾಬಲೇಶ್ವರ ರಾವ್‌ರವರ ಪ್ರೌಢಶಾಲಾ ರೇಡಿಯೋ ಕನ್ನಡ ಪಾಠಗಳು (ಪಿ.ಎಚ್.ಡಿ. ಮಹಾಪ್ರಬಂಧ), ಗೀತಾ ಎಸ್. ನಂದಿಹಾಳರವರ 'ಕನ್ನಡಕ್ಕೆ ಬಾಸೆಲ್ ಮಿಶನರಿಗಳ ಕೊಡುಗೆ, ಶಿವರಾಮ ಕಾರಂತರ ಲೇಖನಗಳು – ಸಂಪುಟ 2 – ಭಾಷೆ, ಶಿಕ್ಷಣ, ಸಂಸ್ಕೃತಿ, ಸಂಶೋಧನೆ (ಸಂ.–ಮಾಲಿನಿ ಮಲ್ಯ, ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾಲಯ, ಮಂಗಳ ಗಂಗೋತ್ರಿ), ಕಾರಂತರ 'ಸ್ಮೃತಿಪಟಲದಿಂದ–ಸಂಪುಟ 1, ಮಹಾಬಲೇಶ್ವರ ರಾವ್ ಅವರ 'ಹಾಯಬೇಡಿ, ಒದೆಯಬೇಡಿ (1999) – ಇವುಗಳನ್ನು ಉಲ್ಲೇಖಿಸಬಹುದು. ಪ್ರಕಾಶ್ ಬಿ. ಯವರ 'ದಕ್ಷಿಣ ಕನ್ನಡದ ಪ್ರಾಥಮಿಕ ಮತ್ತು ಪ್ರೌಢಶಾಲಾ ಕನ್ನಡ ಪಠ್ಯಪುಸ್ತಕಗಳ ರಾಚನಿಕ, ಸಾಹಿತ್ಯದ ಮತ್ತು ಸಾಂಸ್ಕೃತಿಕ ಸ್ವರೂಪಗಳ ಅಧ್ಯಯನ'ವು ಕರ್ನಾಟಕದ ಪಠ್ಯಕ್ರಮದ ಅಧ್ಯಯನ ನಡೆಸುವವರು ಗಮನಿಸಬೇಕಾದ ಒಂದು ಅಧ್ಯಯನ.

**ಪಠ್ಯಕ್ರಮದ ಪರಿಕಲ್ಪನೆ**

ಪಠ್ಯಕ್ರಮದ ಪರಿಕಲ್ಪನೆ ತುಂಬ ಪ್ರಾಚೀನವಾದುದು. 'ಪಠ್ಯಕ್ರಮ' 'curriculum' ಎಂಬ ಪದ ಲ್ಯಾಟಿನ್ ಪದ 'currerc' ನಿಂದ ಬಂದಿದೆ. 'currerc' ಅಂದರೆ "ಓಡು" ಎಂದು ಅರ್ಥ. ಓಡು, run 'ಒಂದು ರನ್-ವೇ' ಅಥವಾ "ಒಂದು ಗುರಿಯನ್ನು ತಲುಪುವುದಕ್ಕಾಗಿ ವ್ಯಕ್ತಿಯೊಬ್ಬ ಓಡುವ ಒಂದು ಕೋರ್ಸ್" ಎಂಬ ಅರ್ಥ ನೀಡುತ್ತದೆ. ಶಿಕ್ಷಣದಲ್ಲಿ 'ಕರಿಕ್ಯುಲಮ್' ಎಂಬ ಪದವನ್ನು ಸಾಮಾನ್ಯವಾಗಿ ಅಧ್ಯಯನದ ಒಂದು ಕೋರ್ಸ್ ಅಥವಾ ಒಂದು ಕೋರ್ಸ್‌ಗೆ ನಿಗದಿಪಡಿಸಲಾದ ವಿಷಯಗಳ ಒಂದು ಪಟ್ಟಿ ಎಂಬ ಅರ್ಥದೊಂದಿಗೆ ಸಮೀಕರಿಸಲಾಗುತ್ತಿದೆ. ಆದರೆ ವಿಷಯಗಳ ಒಂದು ಯಾದಿ ಪಠ್ಯಕ್ರಮದ ಒಂದು ಭಾಗ ಮಾತ್ರ. ಅದು ಇಡೀ ಪಠ್ಯಕ್ರಮವಲ್ಲ. ಪಠ್ಯಕ್ರಮವೆಂದರೆ ಒಂದು ಸಂಸ್ಥೆಯು ಆಯ್ಕೆ ಮಾಡಿದ ಮತ್ತು ಸಂಘಟಿಸಿದ (organised) ಹಾಗೂ ಶಿಕ್ಷಕರಿಗೆ ಕೊಡಮಾಡಿದ ಎಲ್ಲ ಸನ್ನಿವೇಶಗಳ ಒಟ್ಟು ಮೊತ್ತ (ಮಲ್ಹೋತ್ರ:1984).

**ಪಠ್ಯಕ್ರಮದ ವ್ಯಾಖ್ಯಾನ**

ಪಠ್ಯಕ್ರಮವನ್ನು ಶಿಕ್ಷಣ ತಜ್ಞರು ಮತ್ತು ಶಿಕ್ಷಕರು ವಿಭಿನ್ನ ರೀತಿಯಲ್ಲಿ ವ್ಯಾಖ್ಯಾನಿಸಿದ್ದಾರೆ. ಅರವಿಂದ ಚಂದ್ರರವರ ಪ್ರಕಾರ (ಚಂದ್ರ:1977) 'ಪಠ್ಯಕ್ರಮವೆಂದರೆ ಶೈಕ್ಷಣಿಕ ಸಂಸ್ಥೆಯೊಂದು ವಿದ್ಯಾರ್ಥಿಗಳಲ್ಲಿ ಅಥವಾ ಕಲಿಯುವವರಲ್ಲಿ (learners) ತರಬೇಕಾದ ಬದಲಾವಣೆಗಳನ್ನು ಉಂಟುಮಾಡುವುದಕ್ಕಾಗಿ ವಿದ್ಯಾರ್ಥಿಗಳಿಗೆ ಸಂಸ್ಥೆಯು ಒದಗಿಸುವ ಅನುಭವಗಳ ಒಟ್ಟು ಸಂಘಟಿತ ಮೊತ್ತ".

ಹಲವು ಶಾಲೆಗಳು ಹಾಗೂ ಕಾಲೇಜುಗಳು ಪಠ್ಯಕ್ರಮ ಮತ್ತು ಪಠ್ಯಪ್ರಣಾಳಿಕೆ (syllabus) ಸಮಾನಾರ್ಥದ ಪದಗಳೆಂದು ತಿಳಿಯುತ್ತವೆ. ಆದರೆ ಪಠ್ಯಕ್ರಮವೆಂಬುದು, ನಿಜವಾಗಿ, ಕೋರ್ಸ್‌ನ ರೂಪರೇಷೆ (outline)ಗಳ ಒಂದು ಸಂಘಟಿತ ಯೋಜನೆ ಮತ್ತು ನಿಗದಿಪಡಿಸಲಾದ ಗುರಿಗಳನ್ನು ತಲುಪಲು ಅಗತ್ಯವಾದ ಹಾಗೂ ಕಲಿಕಾ ಅನುಭವಗಳನ್ನು ಒಳಗೊಂಡ ಯೋಜನೆ ಅದು. ಒಂದು ವಿಶಾಲವಾದ ಅರ್ಥದಲ್ಲಿ ಪಠ್ಯಕ್ರಮವೆಂಬುದು ವ್ಯಕ್ತಿಗಳು ಯಾವ ಸಮಾಜಕ್ಕೆ ಸೇರಿರುತ್ತಾರೋ ಅವರನ್ನು ಆ ಸಮಾಜದ ಉತ್ಪಾದಕ ನಾಗರಿಕರು ಹಾಗೂ ಉಪಯೋಗಕಾರಿ ಸದಸ್ಯರಾಗುವಂತೆ ಸಿದ್ಧಪಡಿಸುವ, ತಯಾರಿಸುವ ಒಂದು ರೀತಿ. ಕಲಿಕೆ ಹೇಗೆ ನಡೆಯುತ್ತದೆ ಅಥವಾ ಸಂಭವಿಸುತ್ತದೆ ಮತ್ತು ಯಾವ ಅಂಶಗಳು ಕಲಿಕೆಗೆ ನೆವಾಗುತ್ತವೆ ಎಂಬುದರ ಜ್ಞಾನವು ಒಂದು ಪಠ್ಯಕ್ರಮದ ಯೋಜನೆ (planning)ಯಲ್ಲಿ ಬಹಳ ಮುಖ್ಯ. ಪಠ್ಯಕ್ರಮವೆಂಬುದು ಕಲಿಕೆಗೆ ಒಂದು ಯೋಜನೆಯಾಗಿರುವುದರಿಂದ ಕಲಿಕೆಯ ಸಾಮಾಜಿಕ-ಮನೋವೈಜ್ಞಾನಿಕ ಮುಖಗಳ (aspects) ಜ್ಞಾನವು ಯಾವುದೇ ಪಠ್ಯಕ್ರಮ ಸಿದ್ಧಪಡಿಸುವಿಕೆಯ ಮೂಲ ತಳಹದಿ ಎನ್ನುತ್ತಾರೆ, ಚಂದ್ರ (1977).

**ಪಠ್ಯರಚನಾ ಪ್ರಕ್ರಿಯೆ:**

ಪಠ್ಯಕ್ರಮ ಯೋಜನೆ/ರಚನೆಯಲ್ಲಿ ಸಾಕಷ್ಟು ಗೊಂದಲವಿರುತ್ತದೆ. ಪಠ್ಯಕ್ರಮ ರಚನಾ ವಿಭಾಗದ ಬಗ್ಗೆ ಸಾಕಷ್ಟು ಚರ್ಚೆ ನಡೆಯುವುದಿಲ್ಲ. ಒಂದು ಪಠ್ಯ ವಿನ್ಯಾಸವನ್ನು ಒಳಗೊಳ್ಳುವ ಅಂಶಗಳ ಬಗ್ಗೆ ಸ್ಪಷ್ಟತೆ ಇರುವುದಿಲ್ಲ.

ಶಿಶು–ಕೇಂದ್ರಿತ (child-centred), ಸಮಾಜ ಕೇಂದ್ರಿತ (society centred) ಹಾಗೂ ವಿಷಯ–ಕೇಂದ್ರಿತ (subject centred) ಪಠ್ಯಕ್ರಮ ರಚನೆಗಳ ನಡುವೆ ಪ್ರತಿಯೊಂದೂ ತಾನೇ ಪಠ್ಯಕ್ರಮ ರಚನೆಗೆ ಸರಿಯಾದ ವಿಧಾನವೆಂದು ಸ್ಪರ್ಧೆ ನಡೆಯುತ್ತಿದೆ (ತಬ:1962). ಈ ಮೂರು 'ಕೇಂದ್ರಿತ–ಕ್ರಮಗಳ'ಗಳ ವಿವಾದ ಇನ್ನೂ ಕೊನೆಗೊಂಡಿಲ್ಲ. ರಾಜಕಾರಣ, ರಾಜಕಾರಣಿಗಳು ಪಠ್ಯಪುಸ್ತಕಗಳ ವಿಷಯದಲ್ಲಿ (ಮುಖ್ಯವಾಗಿ ಇತಿಹಾಸ ಪಠ್ಯಗಳಲ್ಲಿ) ತಮ್ಮ ತಮ್ಮ ರಾಜಕೀಯ ಸಿದ್ಧಾಂತಕ್ಕೆ, ಮತ ರಾಜಕಾರಣಕ್ಕೆ ನೆರವಾಗುವ ದೃಷ್ಟಿಯಿಂದ ಮೂಗು ತೂರಿಸಲಾರಂಭಿಸಿದ ಮೇಲಂತೂ ಈಗ ಪಠ್ಯಗಳ ಕೇಂದ್ರ (curriculum nucleus) ಯಾವುದಿರಬೇಕು, ಪಠ್ಯಪುಸ್ತಕಗಳು ಯಾವುದಕ್ಕೆ ಕೇಂದ್ರಿತವಾಗಿರಬೇಕು? ಎಂಬ ಪ್ರಶ್ನೆಗೆ ಉತ್ತರ ಸಿಗುವುದೇ ಕಷ್ಟವಾಗಿದೆ. ಸತ್ಯ–ಕೇಂದ್ರಿತ (truth centred)ವಾಗಿರಬೇಕಾದ ಪಠ್ಯಗಳು ಬಲಪಂಥೀಯ ರಾಜಕೀಯ ಸಿದ್ಧಾಂತ ಕೇಂದ್ರಿತ (idealogy centred)ವಾಗುತ್ತಿವೆ. ಇದು ಕೋಮುವಾದದ ಬೆಳವಣಿಗೆಗೆ ಸಹಕಾರಿಯಾಗುತ್ತಿದೆ. ಇದಕ್ಕೆ ಈ ದೇಶದಲ್ಲಿ ನಡೆದ ಪಠ್ಯಪುಸ್ತಕಗಳ ಕೋಮುವಾದೀಕರಣದ ಪ್ರಯತ್ನಗಳೇ ಸಾಕ್ಷಿ.

ಪಠ್ಯ ಪುಸ್ತಕವೆಂದರೇನು? ಅದು ಹೇಗಿರಬೇಕು? ಅದನ್ನು ಯಾರು ಬರೆಯುತ್ತಾರೆ ಅಥವಾ ಸಿದ್ಧಪಡಿಸುತ್ತಾರೆ? ಕರ್ನಾಟಕದ ಒಟ್ಟು ಪಠ್ಯಕ್ರಮದ ಸ್ಥಿತಿ ಹೇಗಿದೆ? ಎಂದು ಪರಿಶೀಲಿಸೋಣ.

ಪಠ್ಯಪುಸ್ತಕವೆಂಬುದು ಕಲಿಕೆಯ ಒಂದು ಸಲಕರಣೆ. ಮಕ್ಕಳು ಕಲಿಯಬೇಕಾದ ವಿಚಾರಗಳನ್ನೂ ಪರಿಕಲ್ಪನೆಗಳನ್ನೂ ಅದು ಒಳಗೊಂಡಿರುತ್ತದೆ. ಬೋಧನೆ–ಕಲಿಕೆಯ ಗುರಿಗಳು, ಕಲಿಸುವ ವಿಧಾನ, ಸಾಧಿಸಬೇಕಾದ ಪರಿಣತಿ ಹಾಗೂ ಕಲಿಕೆಯ ಚಟುವಟಿಕೆ ಇತ್ಯಾದಿಗಳ ಸ್ಪಷ್ಟ ಚಿತ್ರಣ ನೀಡುತ್ತದೆ. ಪಠ್ಯಪುಸ್ತಕವು ವಿದ್ಯಾರ್ಥಿಗಳಿಗೆ ಲೋಕಜ್ಞಾನವನ್ನೂ, ಪ್ರಯೋಜನಕರ

ಮಾಹಿತಿಯನ್ನೂ, ಜ್ಞಾನಾನುಭವಗಳನ್ನೂ ನೀಡುವ ಒಂದು ಅಧಿಕೃತ ಸಲಕರಣೆ. ಬಿಡುವಿನ ವೇಳೆಯಲ್ಲಿ ಸ್ವಾಧ್ಯಾಯ ನಡೆಸುವುದಕ್ಕೂ ಇದು ಸಹಕಾರಿ. ಪಠ್ಯಪುಸ್ತಕವು ಒಂದು ಮುಖ್ಯ ಬೋಧನ ಸಲಕರಣೆಯೂ ಹೌದು. ವಸ್ತು ಪ್ರತಿಪಾದನೆಯ ಕ್ರಮ, ಬೋಧನೆಯ ಉದ್ದೇಶ, ಬೋಧಿಸಬೇಕಾದ ರೀತಿ, ಪರೀಕ್ಷಿಸಬೇಕಾದ ರೀತಿ, ಬೋಧನೆಯಲ್ಲಿ ಒತ್ತು ನೀಡಬೇಕಾದ ಅಂಶಗಳು ಇವೇ ಮುಂತಾದ ಮಾರ್ಗಸೂಚಿಗಳನ್ನು ಅದು ಒಳಗೊಂಡಿರುತ್ತದೆ. ಹೀಗೆ ಪಠ್ಯಪುಸ್ತಕವೆಂಬುದು ಬೋಧನೆ ಹಾಗೂ ಕಲಿಕೆಯ ಹಂದರವನ್ನು ಸೂಚಿಸುವ, ಶಿಕ್ಷಕರು ಹಾಗೂ ವಿದ್ಯಾರ್ಥಿಗಳಿಗೆ ಅತ್ಯಾವಶ್ಯಕವಾದ ಒಂದು ಪ್ರಮುಖ ಸಲಕರಣೆ (ರಾವ್:1999).

ಪಠ್ಯಪುಸ್ತಕದ ಈ ವ್ಯಾಖ್ಯಾನ ಪಠ್ಯಕ್ರಮ (syllabus)ಕ್ಕೂ ಅನ್ವಯಿಸುತ್ತದೆ. ಪಠ್ಯಕ್ರಮ, ಒಂದು ರಾಜ್ಯ ಅಥವಾ ಪ್ರದೇಶದಲ್ಲಿ ಬಳಕೆಯಲ್ಲಿರುವ ಪಠ್ಯವಿಷಯಗಳ ಸೂಚಿ ಕೂಡ ಮೂಲತ: ಒಂದು ಸಲಕರಣೆ. ಮೇಲಿನ ವ್ಯಾಖ್ಯಾನದಲ್ಲಿ 'ಸಲಕರಣೆ' ಎಂಬ ಪದ ನಾಲ್ಕು ಬಾರಿ ಪುನರಾವರ್ತನೆಗೊಂಡಿರುವುದನ್ನು ಗಮನಿಸಬೇಕು. ಇದು ಪಠ್ಯಕ್ರಮ ಹಾಗೂ ಪಠ್ಯಪುಸ್ತಕಗಳು ಯಾವುದೋ ಒಂದು ಘನವಾದ ಉದ್ದೇಶದ ಈಡೇರಿಕೆಗೆ ಒಂದು ಸಾಧನ (means), ಒಂದು ಸಲಕರಣೆ (tool)ಯಷ್ಟೇ ಹೊರತು ಅದು ಒಂದು ಸಾಧಿತ ಗುರಿ (end)ಯಲ್ಲವೆಂಬುದನ್ನು ಸ್ಪಷ್ಟಪಡಿಸುತ್ತದೆ.

ಆ ಗುರಿ ಅಂತಿಮವಾಗಿ ವಿದ್ಯಾರ್ಥಿಗಳನ್ನು ಉತ್ತಮ ನಾಗರಿಕರನ್ನಾಗಿಯೂ, ಉತ್ತಮ ಮನುಷ್ಯರನ್ನಾಗಿಯೂ ರೂಪಿಸುವುದೇ ಆಗಿರುತ್ತದೆ. ಇದು ಸಾಧ್ಯವಾಗಬೇಕಾದರೆ ಒಂದು ಪಠ್ಯಪುಸ್ತಕ ಕೂಡ ಉತ್ತಮವಾಗಿರಬೇಕಾಗುತ್ತದೆ. ಆಗ ಸಹಜವಾಗಿಯೆ ಒಂದು ಉತ್ತಮ ಪಠ್ಯಪುಸ್ತಕ ಹೇಗಿರಬೇಕು? ಎಂಬ ಪ್ರಶ್ನೆ ಮೂಡುತ್ತದೆ. ಈ ಪ್ರಶ್ನೆಗೆ ಶಿಕ್ಷಣ ತಜ್ಞರು ಕೊಡುವ ಒಂದು ಉತ್ತರ ಹೀಗಿದೆ.

ವಿದ್ಯಾರ್ಥಿಗಳ ವಯಸ್ಸು, ಬುದ್ಧಿ, ಆಸಕ್ತಿ ಹಾಗೂ ಮನೋಭಾವಕ್ಕೆ ಅನುಗುಣವಾಗಿ ಆಕರ್ಷಕವಾಗಿದ್ದು ಕಲಿಕೆಗೆ ಪ್ರೇರಣೆ ನೀಡುವಂತಿರಬೇಕು. ಬೋಧನೆಗೆ ಸಹಕಾರಿಯಾಗಿರಬೇಕು. ಜ್ಞಾನಾನುಭವಗಳನ್ನು ಒದಗಿಸಬೇಕು. ಮೂಲಭೂತ ಕೌಶಲಗಳನ್ನು ಬೆಳೆಸುವ ಹಾಗಿರಬೇಕು.

ಬದುಕಿಗೆ ಬೇಕಾದ ಮೌಲ್ಯಗಳ ಪ್ರಜ್ಞೆಯನ್ನು ರೂಪಿಸಬೇಕು. ಕೊಟ್ಟಿರುವ ಮಾಹಿತಿ ದೋಷರಹಿತವಾಗಿರಬೇಕು. ವಿಷಯ ವಿವರಣೆಯು ಆಧುನಾತನದಿಂದ ಕೂಡಿರಬೇಕು. ನಿರೂಪಣೆಯಲ್ಲಿ ಸ್ಪಷ್ಟತೆ, ನಿಖರತೆ, ಸರಳತೆ ಇರಬೇಕು. ಭಾಷಾಶೈಲಿ ಹೃದ್ಯವಾಗಿರಬೇಕು. ವಾಕ್ಯಗಳು ವ್ಯಾಕರಣಬದ್ಧವಾಗಿರಬೇಕು. ನಿರೂಪಣೆಯಲ್ಲಿ ಏಕಸೂತ್ರತೆ, ಕ್ರಮಾನುಗತಿ ಇರಬೇಕು. ಕಲಿಕೆಯನ್ನು ಸ್ಥಿರೀಕರಿಸುವ ಅಧ್ಯಯನವನ್ನು ವಿಸ್ತರಿಸುವ ಅಭ್ಯಾಸಗಳು, ಟಿಪ್ಪಣಿಗಳು ಹಾಗೂ ಸೂಚಿತ ಚಟುವಟಿಕೆಗಳನ್ನು ಒಳಗೊಂಡಿರಬೇಕು. ಪಠ್ಯಪುಸ್ತಕವು ಉತ್ತಮ ವಿನ್ಯಾಸದಿಂದ ಕೂಡಿದ್ದು ಅಚ್ಚುಕಟ್ಟಾಗಿ ಅಚ್ಚಾಗಿರಬೇಕು. ಚಿತ್ರಗಳು ಉಚಿತವಾಗಿರಬೇಕು.

ರಾಷ್ಟ್ರೀಯ ಗುರಿಗಳಿಗೆ ಹೊಂದುವಂತೆ ಪಠ್ಯ ವಸ್ತುವನ್ನು ರಚಿಸಿರಬೇಕು. ಜಾತಿ, ಮತ, ಭಾಷೆ, ಪ್ರದೇಶ, ಲಿಂಗ, ಧರ್ಮ ಮುಂತಾದ ಸೂಕ್ಷ್ಮ ವಿಷಯಗಳಿಗೆ ಸಂಬಂಧಿಸಿದಂತೆ ಗಾಂಭೀರ್ಯದಿಂದ ಕೂಡಿದ ಸಂಯಮಭರಿತವಾದ ವಿವರಣೆಯಿರಬೇಕು. ಸುಲಭದಿಂದ ಕ್ಲಿಷ್ಟತೆಯ ಕಡೆಗೆ, ಸರಳತೆಯಿಂದ ಸಂಕೀರ್ಣತೆಯ ಕಡೆಗೆ, ಮೂರ್ತದಿಂದ ಅಮೂರ್ತದೆಡೆಗೆ ಎಂಬ ತತ್ತ್ವಗಳಿಗೆ ಅನುಗುಣವಾಗಿ ಪಠ್ಯವಸ್ತು ರಚಿತವಾಗಿರಬೇಕು. ವಿವಿಧ ತೆರನಾದ ವಿದ್ಯಾರ್ಥಿಗಳು ಹಾಗೂ ಅವರ ಕೌಟುಂಬಿಕ, ಸಾಂಸ್ಕೃತಿಕ ಹಾಗೂ ಸಾಮಾಜಿಕ ಹಿನ್ನೆಲೆಯನ್ನು ಲಕ್ಷ್ಯದಲ್ಲಿರಿಸಿಕೊಂಡು, ವಿಷಯ ಬೋಧನೆಯ ಉದ್ದೇಶಗಳಿಗೆ ಪೂರಕವಾಗುವಂಥ ಪಾಠಗಳನ್ನು ರಚಿಸಬೇಕು ಇಲ್ಲವೆ ಆಯ್ದುಕೊಂಡಿರಬೇಕು. ನಿರ್ದಿಷ್ಟ ತರಗತಿಯ ಪಠ್ಯಕ್ರಮ ಹಾಗೂ ನಿಗದಿತ ಬೋಧನಾವಧಿಗೆ ಹೊಂದಿಕೆಯಾಗುವ ಹಾಗೆ ಪಠ್ಯಪುಸ್ತಕದ ರಚನೆ ಆಗಿರಬೇಕು. ಪಠ್ಯಪುಸ್ತಕವನ್ನು ಅತ್ಯಂತ ದಕ್ಷತೆಯಿಂದ ಬಳಸಿಕೊಳ್ಳಲು ನೆರವಾಗುವ ಮಾಹಿತಿ ಹಾಗೂ ಸಲಹೆ ಸೂಚನೆಗಳನ್ನು ಕೊಟ್ಟಿರಬೇಕು (ಮಹಾಬಲೇಶ್ವರ ರಾವ್ : 1999).

ಆದರೆ ಕರ್ನಾಟಕದಲ್ಲಿನ ಪರಿಸ್ಥಿತಿ ಹೇಗಿದೆ? 1986ರಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯು ಕರ್ನಾಟಕದಲ್ಲಿ ಜಾರಿಗೆ ಬಂದ ಬಳಿಕ ರಾಜ್ಯ ಪಠ್ಯಪುಸ್ತಕ ಇಲಾಖೆ ನೇಮಿಸಿದ ಮೂರು ಪಠ್ಯಪುಸ್ತಕ ರಚನಾ ಸಮಿತಿಗಳಲ್ಲಿ ಸದಸ್ಯರಾಗಿ ಕಾರ್ಯನಿರ್ವಹಿಸಿದ ಶಿಕ್ಷಣ ತಜ್ಞ ಮಹಾಬಲೇಶ್ವರ ರಾವ್ ನೀಡುವ ಕರ್ನಾಟಕದ ಪಠ್ಯಪುಸ್ತಕಗಳ ಸ್ಥಿತಿಯನ್ನು ಹೀಗೆ ಸಂಗ್ರಹಿಸಬಹುದು.

ಒಂದನೆಯ ತರಗತಿಯಿಂದ ಹತ್ತನೆಯ ತರಗತಿಯವರೆಗಿನ ಎಲ್ಲಾ ವಿಷಯಗಳ ಸಿದ್ಧಪಡಿಸುವಿಕೆ, ಪ್ರಕಾಶನ ಹಾಗೂ ವಿತರಣೆಯ ಏಕಸ್ವಾಮ್ಯ ಸರಕಾರದ ಪಠ್ಯಪುಸ್ತಕ ಇಲಾಖೆಗೆ ಸೇರಿದೆ. ಪಠ್ಯಪುಸ್ತಕ ಇಲಾಖೆಯು ಪಠ್ಯಕ್ರಮ ರಚನೆಯಾದ ಬಳಿಕ ಒಂದೊಂದು ಪಠ್ಯ ವಿಷಯ ಹಾಗೂ ಒಂದೊಂದು ತರಗತಿಗೆ ಸಂಬಂಧಿಸಿದಂತೆ ಪಠ್ಯಪುಸ್ತಕ ರಚನಾ ಸಮಿತಿಯನ್ನು ರಚಿಸುತ್ತದೆ. ಈ ಸಮಿತಿಗೆ ಓರ್ವ ಅಧ್ಯಕ್ಷರು ಹಾಗೂ ರಾಜ್ಯದ ವಿವಿಧ ಭಾಗಗಳಿಂದ ಆಯ್ದ ಐದಾರು ಮಂದಿ ಸದಸ್ಯರು. ಹೀಗೆ ನಿಯುಕ್ತವಾದ ಸಮಿತಿಯ ಪೂರ್ವಭಾವಿ ಸಿದ್ಧತಾ ಸಭೆ ಒಂದೆರಡು ದಿನ ಬೆಂಗಳೂರಿನಲ್ಲಿ ನಡೆದು ಈಗಾಗಲೆ ಸಿದ್ಧಗೊಂಡಿರುವ ಪಠ್ಯಕ್ರಮ ಹಾಗೂ ಅದು ನೀಡುವ ಮಾರ್ಗಸೂಚಿಗಳನ್ನು ಒಪ್ಪಿಕೊಂಡು ಸಮಿತಿ ತನ್ನ ಕೆಲಸ ಆರಂಭಿಸುತ್ತದೆ. ಒಂದು ತಿಂಗಳ ಕಾಲಾವಕಾಶದಲ್ಲಿ ಸದಸ್ಯರು ತಮಗೆ ಒಪ್ಪಿಸಿದ ಕೆಲಸವನ್ನು ಮುಗಿಸಿ ಪುನ: ಬೆಂಗಳೂರಿಗೆ ಧಾವಿಸಿ, 8–10 ದಿನಗಳ ಕಾಲ ನಡೆಯುವ ಅತ್ಯಂತ ಮಹತ್ವದ ಸಭೆಯಲ್ಲಿ ತಾವು ಬರೆದು ತಂದಿರುವ ಅಥವಾ ಆಯ್ಕೆ ಮಾಡಿರುವ ಪಾಠಗಳನ್ನು ಮತ್ತು ಅವುಗಳಿಗೆ ಸಂಬಂಧಿಸಿದ ಟಿಪ್ಪಣಿ, ಪ್ರಶ್ನೆಗಳನ್ನು ಓದಿ ಹೇಳುತ್ತಾರೆ. ಕೆಲವೊಮ್ಮೆ ಅಲ್ಲಲ್ಲೇ ಅಂದಂದೇ ಬರೆಯಲಾಗುತ್ತದೆ. ಒಂದಷ್ಟು ಚರ್ಚೆ, ಗದ್ದಲ, ಅನ್ಯ ಮಾತುಕತೆಗಳ ನಡುವೆ ಪಾಠಗಳು ಅನುಮೋದಿಸಲ್ಪಡುತ್ತವೆ. ಕೊನೆಯ ಎರಡು ಮೂರು ದಿನಗಳಲ್ಲಿ ಪರಿಶೀಲನಾ ಸಮಿತಿಯ ತಜ್ಞರು ಬಂದು ಸಿದ್ಧಗೊಳ್ಳುತ್ತಿರುವ ಪಠ್ಯಸಾಹಿತ್ಯವನ್ನು ಯಥಾಶಕ್ತಿ ಯಥಾಮತಿ ಪರಿಶೀಲಿಸಿ ಹಸಿರು ನಿಶಾನೆ ತೋರಿಸುತ್ತಾರೆ. ಒಟ್ಟಿನಲ್ಲಿ ತಿಂಗಳೊಪ್ಪತ್ತಿನಲ್ಲಿ ಒಂದು ಪಠ್ಯಪುಸ್ತಕ ಸಿದ್ಧವಾಗುತ್ತದೆ! ವರ್ಷವಿಡೀ ಕುಳಿತು ವ್ಯವಧಾನದಿಂದ ಮಾಡಬೇಕಾದ ಕೆಲಸವೊಂದು ಹೀಗೆ ಅವಸರ ಅವಸರವಾಗಿ ಮುಗಿದು ಹೋಗುವುದು ನಮ್ಮಲ್ಲಿ ಕೆಟ್ಟ ಪಠ್ಯಪುಸ್ತಕಗಳು ಹುಟ್ಟಿಕೊಳ್ಳಲು ಪ್ರಬಲ ಕಾರಣವೆಂದು ಮಹಾಬಲೇಶ್ವರ ರಾವ್ ವಾದಿಸುತ್ತಾರೆ.

**ಪಠ್ಯಪುಸ್ತಕಗಳ ಸಿಂಹಾವಲೋಕನ:**

ಕರ್ನಾಟಕದ ಪಠ್ಯಕ್ರಮದಲ್ಲಿ ಭಾಷೆ, ಇತಿಹಾಸ ಮತ್ತು ಸಮಾಜ ವಿಜ್ಞಾನ ಪಠ್ಯ ಪುಸ್ತಕಗಳಲ್ಲಿ ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿ, ಅಧ್ಯಯನಕ್ಕೆ ಪೂರಕವಾಗಬಲ್ಲ ಪಠ್ಯಪುಸ್ತಕಗಳಲ್ಲಿ ಕೆಲವನ್ನು ಆಯ್ದುಕೊಳ್ಳಲಾಯಿತು. ಕರ್ನಾಟಕದ ಶಾಲೆಗಳಲ್ಲಿ ಒಂದರಿಂದ ಹತ್ತನೆಯ ತರಗತಿಯವರೆಗಿನ ಪಠ್ಯಪುಸ್ತಕಗಳಲ್ಲಿ ಕನ್ನಡ, ಭಾಷೆ, ಮಹಿಳೆಯರ ಸ್ಥಾನಮಾನ ಮತ್ತು ಕೋಮು ಸಾಮರಸ್ಯಕ್ಕೆ ಸಂಬಂಧಿಸಿದಂತೆ ವಿಶ್ಲೇಷಣೆಗೆ ಒಳಪಡಿಸಲು ಸಾಧ್ಯವಾಗಬಹುದಾದಂತಹ ಭಾಷೆ, ಇತಿಹಾಸ ಮತ್ತು ಸಮಾಜ ವಿಜ್ಞಾನ ಪಠ್ಯ (text)ಗಳನ್ನು ಆಯ್ದುಕೊಳ್ಳುವುದಕ್ಕಾಗಿ ಪಠ್ಯಪುಸ್ತಕಗಳ ಸಿಂಹಾವಲೋಕನ ನಡೆಸಲಾಯಿತು. ಈ ಕಾರ್ಯದ ನಿಮಿತ್ತವಾಗಿ ಪರಿಶೀಲಿಸಲಾದ ಪಠ್ಯಪುಸ್ತಕಗಳಿವು:

1. ಹಿಂದೂ ದೇಶದ ಚರಿತ್ರೆ–ಲೋವರ್ ಸೆಕೆಂಡರಿ ತರಗತಿಗಳಿಗೆ – ಮ್ಯಾಕ್‌ಮಿಲನ್ ಮತ್ತು ಕಂಪೆನಿ ಲಿಮಿಟೆಡ್ – 1927
2. ಸಮಾಜ ಪಾಠಗಳು–ಹತ್ತನೆಯ ತರಗತಿ, ಕರ್ನಾಟಕ ಸರಕಾರದ ಶಿಕ್ಷಣ ಇಲಾಖೆ – 1981
3. ಕನ್ನಡ ಭಾರತಿ–7: (ಏಳನೆಯ ತರಗತಿಯ ಕನ್ನಡ ಪಠ್ಯಪುಸ್ತಕ), ಕರ್ನಾಟಕ ಸರಕಾರದ ಶಿಕ್ಷಣ ಇಲಾಖೆ–1981
4. ಕನ್ನಡ ಭಾರತಿ–1, (ಒಂದನೆಯ ತರಗತಿಯ ಕನ್ನಡ ಪಠ್ಯಪುಸ್ತಕ), ಕರ್ನಾಟಕ ಸರಕಾರದ ಶಿಕ್ಷಣ ಇಲಾಖೆ, 1980
5. ಕನ್ನಡ ಭಾರತಿ–2, (ಎರಡನೆಯ ತರಗತಿಯ ಕನ್ನಡ ಪಠ್ಯಪುಸ್ತಕ), ಶಿಕ್ಷಣ ಇಲಾಖೆ, ಕರ್ನಾಟಕ ಸರಕಾರ, 1980
6. ಕನ್ನಡ ಭಾರತಿ–4 (ನಾಲ್ಕನೆಯ ತರಗತಿಯ ಕನ್ನಡ ಪಠ್ಯಪುಸ್ತಕ), ಶಿಕ್ಷಣ ಇಲಾಖೆ, ಕರ್ನಾಟಕ ಸರಕಾರ, 1980
7. ಕನ್ನಡ ಭಾರತಿ–5, (ಐದನೆಯ ತರಗತಿ), ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ನಿರ್ದೇಶನಾಲಯ (ಪಠ್ಯಪುಸ್ತಕಗಳು), 1980

8. ಕನ್ನಡ ಭಾರತಿ–6 (ಆರನೆಯ ತರಗತಿಯ ಕನ್ನಡ ಪಠ್ಯಪುಸ್ತಕ), ಶಿಕ್ಷಣ ಇಲಾಖೆ, ಕರ್ನಾಟಕ ಸರಕಾರ, 1980

9. ಸಮಾಜ ಪಾಠಗಳು–9 (ಒಂಬತ್ತನೆಯ ತರಗತಿಯ ಕನ್ನಡ ಪಠ್ಯಪುಸ್ತಕ), ಶಿಕ್ಷಣ ಇಲಾಖೆ, ಕರ್ನಾಟಕ ಸರಕಾರ, 1980

10. ಕನ್ನಡ ಪಠ್ಯಪುಸ್ತಕ, ಪ್ರಥಮ ವರ್ಷ ಪಿ.ಯು.ಸಿ., 1980

11. ಕಾವ್ಯ ಸಂಪದ, ಕನ್ನಡ ಪಠ್ಯ, ದ್ವಿತೀಯ ಪಿ.ಯು.ಸಿ., ಡಾ। ಎಂ.ಎಸ್. ಸುಂಕಾಪುರ (ಸಂ.)

12. ಕನ್ನಡ ಪಠ್ಯ – 8ನೆಯ ತರಗತಿಗಾಗಿ, ಕರ್ನಾಟಕ ಸರಕಾರದ ಮುದ್ರಣ ಇಲಾಖೆ, 1980

13. ಕನ್ನಡ ಭಾರತಿ–3 (ಮೂರನೆಯ ತರಗತಿಯ ಕನ್ನಡ ಪಠ್ಯಪುಸ್ತಕ), ಶಿಕ್ಷಣ ಇಲಾಖೆ, ಕರ್ನಾಟಕ ಸರಕಾರ, 1980

14. ಸಮಾಜ ಪರಿಚಯ; (ಒಂದನೆಯ ತರಗತಿಯ ಕನ್ನಡ ಪಠ್ಯಪುಸ್ತಕ), ಶಿಕ್ಷಣ ಇಲಾಖೆ, ಕರ್ನಾಟಕ ಸರಕಾರ, 1980

15. ಸಮಾಜ ಪರಿಚಯ ಪಾಠಗಳು– ಆರನೆಯ ತರಗತಿ, ಕನ್ನಡ ಪಠ್ಯಪುಸ್ತಕ, ಶಿಕ್ಷಣ ಇಲಾಖೆ, ಕರ್ನಾಟಕ ಸರಕಾರ, 1980

16. ಸಮಾಜ ದರ್ಶನ, ಇತಿಹಾಸ ಪೌರನೀತಿ, 9ನೆಯ ತರಗತಿ, ಶಿಕ್ಷಣ ಇಲಾಖೆ, ಕರ್ನಾಟಕ ಸರಕಾರ, 1980

17. ಸಮಾಜ ದರ್ಶನ, ಇತಿಹಾಸ– ಹತ್ತನೇ ತರಗತಿ, 1980–81ನೇ ಶೈಕ್ಷಣಿಕ ವರ್ಷದಲ್ಲಿ ಬಳಕೆಯಲ್ಲಿದ್ದ ಪಠ್ಯ

18. ಇತಿಹಾಸ ಭಾಗ–1, ಐದನೆಯ ತರಗತಿ, ಶಿಕ್ಷಣ ಇಲಾಖೆ, ಕರ್ನಾಟಕ ಸರಕಾರ, 1980

19. ಕನ್ನಡ ಉಪಪಠ್ಯ – 8ನೆಯ ತರಗತಿ, ಶಿಕ್ಷಣ ಇಲಾಖೆ, ಕರ್ನಾಟಕ ಸರಕಾರ, 1980

20. Moral Science Series-Better Living-Part I

21. ಕನ್ನಡ ಕಸ್ತೂರಿ–ಪ್ರಥಮ ಭಾಷೆ– English Second Language- 2007, ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.), ಬೆಂಗಳೂರು

22. ಕನ್ನಡ ಭಾರತಿ–5, ಐದನೆಯ ತರಗತಿ, 1992 ನಿರ್ದೇಶಕರು, ಪಠ್ಯಪುಸ್ತಕ ಇಲಾಖೆ, ಪಠ್ಯಪುಸ್ತಕ ನಿರ್ದೇಶನಾಲಯ, ಬೆಂಗಳೂರು–4.

23. ಸಾಹಿತ್ಯ ಮಂಜರಿ–1, ಎಂಟನೆಯ ತರಗತಿ, 1992 ನಿರ್ದೇಶಕರು, ಪಠ್ಯಪುಸ್ತಕ ನಿರ್ದೇಶನಾಲಯ, ಬೆಂಗಳೂರು–4.

24. ಕನ್ನಡ ಭಾರತಿ–6, ಆರನೆಯ ತರಗತಿ, 1993, ಶ್ರೀ ಸುಬ್ರಮಣ್ಯೇಶ್ವರ ಬುಕ್ ಡಿಪೋ, ಬೆಂಗಳೂರು–560 002

25. ಕನ್ನಡ ಗಂಗೋತ್ರಿ–1 (ಪ್ರಥಮ ಭಾಷೆ–ಪಠ್ಯಪುಸ್ತಕ) ಎಂಟನೆಯ ತರಗತಿ – (8), ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ನಿರ್ದೇಶನಾಲಯ (ಪಠ್ಯಪುಸ್ತಕಗಳು), ಸರ್ಕಾರಿ ಪಠ್ಯಪುಸ್ತಕ ಮುದ್ರಣಾಲಯ, ಮೈಸೂರು

26. ಕನ್ನಡ ಭಾರತಿ–9, ಪ್ರಥಮ ಭಾಷೆಯ ಪಠ್ಯಪುಸ್ತಕ, ಒಂಬತ್ತನೆಯ ತರಗತಿ, 2002, ದಿಗಂತ ಮುದ್ರಣ ನಿ., ಮಂಗಳೂರು–8

27. ಸಮಾಜ ವಿಜ್ಞಾನ, ಇತಿಹಾಸ ಮತ್ತು ಪೌರನೀತಿ, ಭಾಗ–1, 1998, ಐ.ಬಿ.ಎಚ್. ಪ್ರಕಾಶನ, ಗಾಂಧಿನಗರ, ಬೆಂಗಳೂರು–560 009

28. ವಿಜ್ಞಾನ–ಆರನೆಯ ತರಗತಿ, ಎಸ್.ಮಂಚಯ್ಯ, ಪಠ್ಯಪುಸ್ತಕ ನಿರ್ದೇಶಕರು, ಸರ್ಕಾರ, ಪಠ್ಯಪುಸ್ತಕಗಳ ಇಲಾಖೆ,

29. ಸಮಾಜ ವಿಜ್ಞಾನ, ಇತಿಹಾಸ ಮತ್ತು ಪೌರನೀತಿ, ಭಾಗ–1, ತರಗತಿ 9, 1999, ಬೆಂಗಳೂರು ಬುಕ್ ಸೆಂಟರ್, ಬೆಂಗಳೂರು – 53

30. ಸಮಾಜ ವಿಜ್ಞಾನ–ಭಾಗ 1, 10ನೆಯ ತರಗತಿ, 2002, ಕರ್ನಾಟಕ ಸರ್ಕಾರ, ಪಠ್ಯಪುಸ್ತಕ ನಿರ್ದೇಶನಾಲಯ, ಓಮೇಗಾ ಆಫ್‌ಸೆಟ್, ಬೆಳಗಾಂವ.

## ಪಠ್ಯಪುಸ್ತಕ ರಚನೆಕಾರರ ಮನೋಧರ್ಮಗಳು (Attitudes)

ಪಠ್ಯಪುಸ್ತಕ ಲೇಖಕರ ಮನೋಧರ್ಮ ಸಾಮಾನ್ಯವಾಗಿ ಹೇಗಿರುತ್ತದೆ? ಅವರು ಸಮಾಜದ ಕೆಳಸ್ತರಗಳ ಜನಸಮುದಾಯಗಳ ಬಗ್ಗೆ ಯಾವ ರೀತಿಯ ನಿಲುವು ಹೊಂದಿರುತ್ತಾರೆ?

'ಬಹುರೂಪಿಗಳು' (ಕನ್ನಡ ಭಾರತಿ–5, 1980) ಪಾಠವನ್ನು ಸ್ವಲ್ಪ ಸೂಕ್ಷ್ಮವಾಗಿ ಪರಿಶೀಲಿಸಿದರೆ ಇಂತಹ ಪಠ್ಯಗಳ ಲೇಖಕರ ಮನೋಧರ್ಮ, ಧೋರಣೆ ಸ್ಪಷ್ಟವಾಗಬಹುದು. ಆ ಪಾಠ ಹೀಗಿದೆ.

ಬಹುರೂಪಿಗಳು

ತಮ್ಮ ಕಲೆ–ಕುಶಲತೆಯನ್ನು ಪ್ರದರ್ಶಿಸಿ, ಮನರಂಜನೆ ಒದಗಿಸಿ ಹೊಟ್ಟೆ ಹೊರಕೊಳ್ಳುವ 'ಕರಡಿಯಾಟ', 'ಮಂಗನಾಟ', 'ದೊಂಬರಾಟ'ದಂಥ ಕೆಲವು ಕುಲಕಸುಬು ಇಂದು ಕಣ್ಮರೆಯಾಗುತ್ತಿವೆ. ಇಂಥವುಗಳಲ್ಲಿ ಒಂದಾದರೂ, ಇವುಗಳಿಂದ ವಿಭಿನ್ನವೂ ವಿಶಿಷ್ಟವೂ ಆದ ಕಸಬು ಬಹುರೂಪಿಗಳದ್ದು.

'ಬಹುರೂಪಿ'ಗಳು ಹೆಸರಿಗೆ ತಕ್ಕ ಹಾಗೆ ಬಹುರೂಪ ಅಂದರೆ ಬಗೆ–ಬಗೆಯ ಸೋಗು ಹಾಕುವವರು. ಇವರನ್ನು ವೇಷಗಾರರೆಂದೂ, ಜಾತಿಗಾರರೆಂದೂ ಕರೆಯುವುದುಂಟು. ಇವರು ತಲೆತಲಾಂತರದಿಂದ ಈ ಕಲೆಗೆ ತಮ್ಮ ಬದುಕನ್ನು ಸಮರ್ಪಿಸುತ್ತ ಬಂದಿರುವರು. ನೀರಿನಲ್ಲಿ ಹುಟ್ಟಿದ ಮೀನು ಸಹಜವಾಗಿಯೆ ಈಜು ಕಲಿಯುವಂತೆ ಈ ಸಮಾಜದ, ಮನೆತನದ ಪ್ರತಿಯೊಬ್ಬನೂ ಸೋಗು ಹಾಕುವ ಕಲೆಯನ್ನು ಕ್ರಮೇಣ ಕರತಲಾಮಲಕ ಮಾಡಿಕೊಳ್ಳುವನು. ಇದರಿಂದಾಗಿ ಈ ಮನೆತನದ ಹೆಣ್ಣು–ಗಂಡು, ಹಿರಿ–ಕಿರಿಯರು ಎಲ್ಲರೂ ಸೇರಿಯೇ ಒಂದು 'ಕಲಾಮೇಳ'ವಾಗಿ ಪರಿಣಮಿಸುವರು. ಇಂದಿನ 'ನಾಟಕಕಂಪನಿ' ಅಥವಾ 'ಸಾಂಸ್ಕೃತಿಕ ಶಿಷ್ಟಮಂಡಲ'ದಂತೆ ಇವರು ಊರಿಂದೂರಿಗೆ ಸುತ್ತುತ್ತ ಹೋಗುವರು. ಆದರೆ ಇವರಿಗೆ ಅಂಥ ಯಾವ ಸಾಮಾನು–ಸರಂಜಾಮು ಬೇಕಿಲ್ಲ. ಸಿದ್ಧ ರಂಗಭೂಮಿಯ ಅವಶ್ಯಕತೆಯೂ ಇವರಿಗಿಲ್ಲ. ಯಾವುದೊಂದು ಮನೆಯೆದುರಿನ ಅಂಗಳ ಇಲ್ಲವೆ ಬೀದಿಯೊಳಗಿನ ಸ್ಥಳ ಇವರಿಗೆ ಬಯಲು ರಂಗಭೂಮಿಯಾಗಿ ಬಿಡುವುದು.

ಬಹುರೂಪಿಗಳ ಕುಟುಂಬ ಒಂದು ಊರಿಗೆ ಬಂದರೆ ಮುಗಿಯಿತು: ಅಲ್ಲಿಯ ಜನರ ರಸಿಕತೆ. ಆಶ್ರಯದಾತರಾಗುವ ಹೃದಯವಂತಿಕೆ ಮೊದಲಾದುವನ್ನು ನೋಡಿಕೊಂಡು ಸುಮಾರು ಒಂದು ತಿಂಗಳವರೆಗೆ ಇವರು ಅಲ್ಲಿ ನೆಲೆನಿಲ್ಲುವರು.

ಇವರು ಸಾಮಾನ್ಯವಾಗಿ ಸುಗ್ಗಿ ಮುಗಿದ ಮೇಲೆಯೇ ತಮ್ಮ ಸಂಚಾರ ಪ್ರಾರಂಭಿಸುವರು. ಊರ ಹೊರಗಿನ ಒಂದು ಮರದ ಕೆಳಗೆ ಹೊಡೆದ ಡೇರೆಯಲ್ಲಿಯೋ, ಧರ್ಮಶಾಲೆಯಲ್ಲಿಯೋ ಬೀಡುಬಿಡುವರು. ಬೆಳಗಿನ ಊಟ–ಉಪಹಾರ ಮುಗಿಸಿಕೊಂಡು ತಾವು ಹಾಕಬಯಸುವ ವಿಶಿಷ್ಟ 'ವೇಷ'ದ ಬಣ್ಣಗಾರಿಕೆ ಹಾಗೂ ಉಡುಗೆ–ತೊಡುಗೆಗಳಲ್ಲಿ ಕೆಲಹೊತ್ತು ಕಳೆಯುವರು. ತಮ್ಮಲ್ಲಿರುವ ಸಾಮಾನ್ಯ ವರ್ಣ–ವೇಷಭೂಷಣಗಳ ನೆರವಿನಿಂದ ಬೇಕಾದ ಪ್ರಸಂಗ, ಪಾತ್ರ, ಕಥೆ–ಸನ್ನಿವೇಶಗಳಿಗೆ ತಕ್ಕಂಥ ಪ್ರದರ್ಶನದ ಸಿದ್ಧತೆ ಮಾಡಿಕೊಳ್ಳುವರು. ತ್ವರಿತವಾಗಿ ರೂಪ ಹಾಗೂ ವೇಷ ಬದಲಿಸುವುದರಲ್ಲಿ ಇವರದು ಎತ್ತಿದ ಕೈ. ಗುರುತಾಗದಂಥ ಸೋಗು ಹಾಕಿ, ಜನರನ್ನು ನಿಜವೆಂದೇ ನಂಬುವಂತೆ ಮಾಡಿ, ನಂತರ ತಮ್ಮ ನಿಜಸ್ವರೂಪ ಪ್ರಕಟಪಡಿಸಿ, ಜನರನ್ನು ಬೆರಗುಗೊಳಿಸಿ ಇನಾಮು ಕೇಳುವುದು ಇವರ ಒಂದು ವಿಶೇಷ.

ಇಳಿಹೊತ್ತಿನ ಸಮಯದಲ್ಲಿ ಬಿಡಾರದಿಂದ ಹೊರಟು ಇವರು ಮನೆಯಿಂದ ಮನೆಗೆ ಸುತ್ತತೊಡಗುವರು. ಆಯಾ ಊರಿನ ಯಾವ ಮನೆಯವರು ಎಷ್ಟು ಉದಾರರು, ರಸಿಕರು ಎನ್ನುವುದು ಇವರಿಗೆ ಚೆನ್ನಾಗಿ ಗೊತ್ತು. ಆದ್ದರಿಂದ ಅದಕ್ಕೆ ತಕ್ಕಂತೆ ಇವರು ಅಲ್ಲಲ್ಲಿ ತಮ್ಮ ಪ್ರದರ್ಶನವನ್ನು ಸಂಗ್ರಹವಾಗಿಯೋ, ಸಮಗ್ರವಾಗಿಯೋ ನಡೆಯಿಸುವರು. ಊರ ಗೌಡ 'ಶಾನುಭೋಗ' ಪಂಚ ಪ್ರಮುಖರ ಮನೆಗಳೆದುರು ವಿಶೇಷ ಮುತುವರ್ಜಿಯಿಂದ ಪ್ರದರ್ಶನ ನೀಡುವರು.

ಇವರು ಒಂದೊಂದು ದಿನ ಒಂದೊಂದು ವೇಷಕಟ್ಟುವರು. ಒಮ್ಮೆ ಬಸುರಿ ಹೆಂಗಸು; ಇನ್ನೊಮ್ಮೆ ಬಾಣಂತಿ ಹಾಗೂ ಆಕೆಯ ಅಳುಬುರುಕ ಕೂಸು–ಇಂಥ 'ಸೋಗು' ಹಾಕಿ ಹಾಸ್ಯದ ಲಹರಿಯನ್ನೆ ಊರಲ್ಲೆಲ್ಲ ಹರಿಸುವರು. ಆಗಾಗ ಪಶು–ಪಕ್ಷಿಗಳ 'ಕೂಗು'ಗಳನ್ನು ಅನುಕರಿಸಿ ತೋರಿಸುವರು.

ಒಂದು ದಿನ ಸಿಂಧೂರ ಲಕ್ಷ್ಮಣನಂಥ ಕಡುಗಲಿಯ ಸಾಹಸಪ್ರಸಂಗಗಳನ್ನು ಅಭಿನಯಿಸುವರು. ಇನ್ನೊಂದು ದಿನ ಶಿವಭಕ್ತ ಬೇಡರ ಕಣ್ಣಪ್ಪನ ವೇಷ ಹಾಕಿ ಸುತ್ತುವರು. ಭಕ್ತಿಪರೀಕ್ಷೆಯ ಗಳಿಗೆಯಲ್ಲಿ ಆತ ತನ್ನ ಕಣ್ಣು ಕಿತ್ತು ದೇವರಿಗೆ ಅರ್ಪಿಸುವ ಪ್ರಸಂಗದ ಇವರ ಅಭಿನಯವಂತೂ ಮೈ ಮುಳ್ಳು ತರುವಂಥದು. ಅಂಥ ಜೀವಂತಿಕೆಯನ್ನು ಸಾಕ್ಷಾತ್ಕರಿಸಿ ತೋರಿಸುವರು. ಮತ್ತೊಂದು ದಿನ ಶ್ರೀರಾಮಚಂದ್ರನ ವನವಾಸಗಮನದ ಚಿತ್ರವನ್ನು ಕಣ್ಣಿಗೆ ಕಟ್ಟುವಂತೆ ಮಾಡುವರು. ಇವರ ಹನುಮಂತನ ಲಂಕಾದಹನದ ಪ್ರದರ್ಶನವಂತೂ ಅದ್ಭುತ ರಮ್ಯ. ಪುಟ್ಟ ಬಾಲಕನೊಬ್ಬ ಕಪಿಚೇಷ್ಟೆಯ ನಟನೆಯ ಭರದಲ್ಲಿ ಬೀದಿಯಲ್ಲಯ ಬಂಡಿಯಿಂದ ಬಂಡಿಗೆ ಹಾರುವ, ಮನೆಯೊಂದರ ಕಟ್ಟೆಯಿಂದ ಮತ್ತೊಂದು ಕಟ್ಟೆಗೆ ಜಿಗಿಯುವ ದೃಶ್ಯವಂತೂ ಆಶ್ಚರ್ಯಕರ. ಹೀಗೆ ಇವರು ಯಾವ ಸೋಗು ಹಾಕಿದರೂ ಅದಕ್ಕೆ ತಕ್ಕಂತಹ ವೇಷ. ಧ್ವನಿಯಲ್ಲಿಯ ಏರಿಳಿತ ಹಾಗೂ ಹಾವಭಾವದೊಡನೆ ಆ 'ಸೋಗು' ಯಥಾರ್ಥವೆನಿಸುವಂತೆ, ನಾಲ್ಕು ಜನ ಮೆಚ್ಚಿ 'ಹೌದ್ದೌದು' ಎನ್ನುವಂತೆ ಅಭಿನಯಿಸುವರು.

ಕೊನೆಯ ದಿನವಾದರೊ ತಮ್ಮ ಕೌಶಲಕ್ಕೆ ಕಳಸವಿಡುವಂತ ಪ್ರದರ್ಶನ ನೀಡುತ್ತ ಇವರು ಪ್ರತಿಯೊಂದು ಮನೆಯ ಬಾಗಿಲಿಗೂ ಹೋಗುವರು. ಆಗ ಊರ ಬಡವಬಲ್ಲಿದರೆಲ್ಲರೂ ತಮ್ಮ ಶಕ್ತ್ಯನುಸಾರ ತಮ್ಮ ಕಾಣಿಕೆ ನೀಡುವರು. ಕೆಲವರು ದವಸ, ಧಾನ್ಯಗಳನ್ನಿತ್ತರೆ, ಇನ್ನು ಕೆಲವರು ವಸ್ತ್ರಾಭರಣಗಳನ್ನು ಕೊಡುವರು. ಇವರು ಮಾತ್ರ ಜನರು ಕೈಯೆತ್ತಿ ಕೊಟ್ಟ ಮೆಚ್ಚುಗೆಗಳನ್ನು ಸಂತೋಷದಿಂದ ಸ್ವೀಕರಿಸುವರು. ಧನ್ಯವಾದವನ್ನರ್ಪಿಸಿ, ಮುಂದಿನ ಊರಿಗೆ ಪ್ರಯಾಣ ಬೆಳೆಸುವರು.

ಇಂಥ ಕಲಾಪ್ರದರ್ಶಕ, ಸಂಸ್ಕೃತಿಪ್ರಸಾರಕ 'ಬಹುರೂಪಿ' ಸಮಾಜ ಕರ್ನಾಟಕದಂತೆ ಮಹಾರಾಷ್ಟ್ರ, ಗುಜರಾಥ, ಪಂಜಾಬ ಮುಂತಾದ ಇತರ ಪ್ರದೇಶಗಳಲ್ಲಿಯೂ ಇದೆ. ಈ ಸಮಾಜದ ಕೆಲವರು ಇತ್ತೀಚೆಗೆ ತಮ್ಮ ಪರಂಪರಾಗತವಾದ ಈ ವೃತ್ತಿಯನ್ನು ಬಿಡುತ್ತಿದ್ದಾರೆ. ಒಕ್ಕಲುತನ, ಬೆತ್ತದ ಕೆಲಸಗಳಂಥ ಇತರ ಉದ್ಯೋಗಗಳಿಗೆ ಅಂಟಿಕೊಳ್ಳತೊಡಗಿದ್ದಾರೆ. ಇದರಿಂದಾಗಿ ಮನೋರಂಜನೆಯೊಡನೆ ಮನೋವಿಕಾಸಕ್ಕೂ ಎಡೆಗೊಡುವ ಈ ಅಪರೂಪದ ಪ್ರತಿಭೆ ಅಳಿಸಿ ಹೋಗುವಂಥ ಪರಿಸ್ಥಿತಿ ಉಂಟಾಗಿದೆ.

## ವಾಚ್ಯ (Explicit) ಮನೋಧರ್ಮ

ಈ ಇಡೀ ಪಠ್ಯದ ಹಿಂದಿರುವ ಮನೋಧರ್ಮವನ್ನು ಯಥಾಸ್ಥಿತಿವಾದಿ (status quoist) ಎಂದು ಕರೆಯಬಹುದು. ಬಹುರೂಪಿಗಳು ಎಂಬ 'ಸೋಗು' ಹಾಕುವವರ ಜೀವನ ಕ್ರಮವನ್ನು ವಿವರಿಸುವ, ಅವರ ಕಲೆಯನ್ನು ಮೆಚ್ಚುವ ಇಡೀ ಕಥಾನಕದಲ್ಲಿ ಅಂತಿಮವಾಗಿ ಹೊರಹೊಮ್ಮುವ ಧ್ವನಿ: ಅವರು ಹಾಗಿದ್ದಾರೆ. ಹಾಗೆಯೇ ಇರಲಿ. ಅವರು ಊರ ಗೌಡ, 'ಶಾನುಭೋಗ', ಪಂಚ ಪ್ರಮುಖರ ಮನೆಗಳೆದುರು ವಿಶೇಷ ಮುತುವರ್ಜಿಯಿಂದ ಪ್ರದರ್ಶನ ನೀಡುತ್ತಿರಲಿ. ಅವರ, ಅವರ ಮಕ್ಕಳ ಸಾಮಾಜಿಕ, ಆರ್ಥಿಕ ಸ್ಥಾನಮಾನವನ್ನು ಸುಧಾರಿಸುವ ಉಸಾಬರಿ ನಮಗೆ ಬೇಡ ಎನ್ನುವ ಮನೋಧರ್ಮ ವಾಚ್ಯವಾಗಿ ಕಾಣಿಸುತ್ತದೆ.

## ಸೂಚ್ಯ (Implicit)

ಪಠ್ಯ ಆಳಕ್ಕೆ, ಇನ್ನೂ ಆಳಕ್ಕೆ, ಇಳಿದರೆ ಪಠ್ಯ ರಚನಕಾರರ ಮನೋಧರ್ಮವನ್ನು ಹೀಗೆ ದಾಖಲಿಸಬಹುದು:

ಬಹುರೂಪಿಗಳು ಹಾಗೆ ಇದ್ದಾರೆ. ಅವರು ಹಾಗೆಯೇ ಇರಲಿ. ಹಾಗೆಯೇ ಇರಬೇಕು. ಅವರು ಆರ್ಥಿಕವಾಗಿ, ಸಾಮಾಜಿಕವಾಗಿ ಬದಲಾಗಬಾರದು. ಬದಲಾದಲ್ಲಿ ಅವರು ಕೂಡ ನಮಗೆ ಈಗ ಇರುವ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಸವಲತ್ತುಗಳನ್ನು ಕೇಳಬಹುದು. ಈ ಸವಲತ್ತುಗಳಿಗಾಗಿ ಹಕ್ಕೊತ್ತಾಯ ಸಲ್ಲಿಸಬಹುದು. ಇದು ಮುಂದಕ್ಕೆ ಧರಣಿ ಸತ್ಯಾಗ್ರಹ, ಉಪವಾಸ ಸತ್ಯಾಗ್ರಹ, ಮತ ಪ್ರದರ್ಶನ, ರ್‍ಯಾಲಿ, ಚಳವಳಿಯ ರೂಪ ಪಡೆಯಬಹುದು. ಕಾನೂನು, ಸುವ್ಯವಸ್ಥೆಯ ಸಮಸ್ಯೆ ಉಂಟಾಗಬಹುದು. ಬಹುರೂಪಿಗಳು ಸಂಘಟಿತರಾಗಿ, ಅವರಲ್ಲೊಬ್ಬ ಆ ಸಂಘಟನೆಯ ನಾಯಕನಾಗಿ ನಮ್ಮ ಪ್ರಭುತ್ವಕ್ಕೆ ಸವಾಲೊಡ್ಡಬಹುದು. ವಿಶೇಷ ಸವಲತ್ತು, ಮೀಸಲಾತಿಗಾಗಿ ಹೋರಾಟ ನಡೆಸಲೂಬಹುದು. ಆದ್ದರಿಂದ ಇದ್ಯಾವುದಕ್ಕೂ ಆಸ್ಪದವಾಗದ ಹಾಗೆ 'ನಾವು' 'ಅವರ' ಕಲಾಪ್ರತಿಭೆಯನ್ನು ಮೆಚ್ಚುತ್ತ, ಹಾಡಿ ಹೊಗಳುತ್ತ, ಅವರಿಗೆ 'ಶಕ್ತ್ಯನುಸಾರ' ಕಾಣಿಕೆ ನೀಡುತ್ತ, ದವಸ, ಧಾನ್ಯಗಳನ್ನು ಕೊಡುತ್ತ, ಬೇಕಾದರೆ ವಸ್ತ್ರಾಭರಣಗಳನ್ನೂ ಕೊಡುತ್ತ, ನಮ್ಮ ಹಿತಾಸಕ್ತಿಗಳಿಗೆ ತೊಂದರೆಯಾಗದಂತೆ ನೋಡಿಕೊಳ್ಳೋಣ. ಅವರಿಗೆ, ಎಲ್ಲ ಬಹುರೂಪಿಗಳಿಗೆ ಶುಭವಾಗಲಿ, ಸನ್ಮಂಗಳವಾಗಲಿ ಎಂದು ಆ ಭಗವಂತನಲ್ಲಿ ಬೇಡಿಕೊಳ್ಳೋಣ.

**ಪಠ್ಯಪುಸ್ತಕಗಳ ವಿಮರ್ಶೆ (Review)**

1986ರ ರಾಷ್ಟ್ರೀಯ ಶಿಕ್ಷಣ ನೀತಿ ಈ ದೇಶದ ಶಿಕ್ಷಣಕ್ರಮದ ಸುಧಾರಣೆಯಲ್ಲಿ ಒಂದು ಮೈಲಿಗಲ್ಲು. 1980ರ ದಶಕದ ಬಳಿಕ ದೇಶದಾದ್ಯಂತ ತೀವ್ರಗೊಂಡ ವಿವಿಧ ರೀತಿಯ ಪ್ರಾದೇಶಿಕ ಪಕ್ಷ ಹಾಗೂ ಗುಂಪುಗಳು ಶಿಕ್ಷಣ ರಂಗದ ಮೇಲೂ ಪ್ರಭಾವ ಬೀರತೊಡಗಿದವು. ಆಗ ಜಾರಿಗೆ ಬಂದ ರಾಷ್ಟ್ರೀಯ ಶಿಕ್ಷಣ ನೀತಿ ಸಮಗ್ರ ದೇಶದ ಪಠ್ಯವಸ್ತುವಿನ ರಚನೆಗೆ ಮಾರ್ಗದರ್ಶಿ ಸೂತ್ರಗಳನ್ನು ರೂಪಿಸಿತು.

1990ರ ದಶಕದಲ್ಲಿ ತಯಾರಾದ ಕರ್ನಾಟಕದ ಶಾಲಾ ಪಠ್ಯಪುಸ್ತಕಗಳಲ್ಲಿ ಕೆಲವು, ಮುನ್ನುಡಿಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿವೆ. ಉದಾಹರಣೆಗೆ, 1993ರಲ್ಲಿ ಪ್ರಕಟವಾದ ಸಮಾಜ ವಿಜ್ಞಾನ ಭಾಗ 1 – (10) ಹತ್ತನೆಯ ತರಗತಿ ಪಠ್ಯಪುಸ್ತಕದಲ್ಲಿ "1986ರ ರಾಷ್ಟ್ರೀಯ ಶಿಕ್ಷಣ ನೀತಿಯ ಹಿನ್ನೆಲೆಯಲ್ಲಿ ತಯಾರಿಸಲಾದ ಪಠ್ಯವಸ್ತುವಿನ ಆಧಾರದ ಮೇಲೆ ಈ ಪಠ್ಯಪುಸ್ತಕವನ್ನು ರಚಿಸಲಾಗಿದೆ. ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಒತ್ತುಕೊಟ್ಟಿರುವ ಮುಖ್ಯ ವಿಷಯಗಳು (ಕೋರ್ ಎಲಿಮೆಂಟ್ಸ್) ಮತ್ತು ಮಾನವೀಯ ಮೌಲ್ಯಗಳನ್ನು ಗಮನದಲ್ಲಿಟ್ಟುಕೊಂಡು ಎಲ್ಲಾ ಪಾಠಗಳನ್ನು ಆಯ್ಕೆ ಮಾಡಲಾಗಿದೆ." ಎಂದು ಹೇಳಲಾಗಿದೆ. ಆದರೆ ಭಾರತಕ್ಕೆ ಯುರೋಪಿಯನ್ನರ ಆಗಮನದಿಂದ ಆರಂಭವಾಗಿ ಆಫ್ರಿಕಾ ಮತ್ತು ಏಷ್ಯಾಗಳಲ್ಲಿ ಕಂಡುಬಂದ ಪ್ರಮುಖ ಬೆಳವಣಿಗೆಗಳೊಂದಿಗೆ ಮುಕ್ತಾಯವಾಗುವ ಇತಿಹಾಸದ ಹನ್ನೆರಡು ಅಧ್ಯಾಯಗಳಲ್ಲಿ ಎಲ್ಲಿ ಈ ಕೋರ್ ಇಲಿಮೆಂಟ್ಸ್ ಮತ್ತು ಮಾನವೀಯ ಮೌಲ್ಯಗಳನ್ನು ಗಮನದಲ್ಲಿಟ್ಟುಕೊಳ್ಳಲಾಗಿದೆ ಎಂಬ ಅಂಶ ಸ್ಪಷ್ಟವಾಗುವುದಿಲ್ಲ.

'ಪೌರನೀತಿ'ಯಲ್ಲಿ ಅಧ್ಯಾಯ 1ರಲ್ಲಿ ಭಾರತ ದೇಶ ಎದುರಿಸುತ್ತಿರುವ ಸವಾಲು ಮತ್ತು ಸಮಸ್ಯೆಗಳನ್ನು ವಿದ್ಯಾರ್ಥಿಗಳಿಗೆ ಪರಿಚಯಿಸುವ ಪ್ರಯತ್ನ ನಡೆಯುತ್ತದೆ. ಅನಕ್ಷರತೆ, ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ, ರಾಷ್ಟ್ರೀಯ ವಯಸ್ಕರ ಶಿಕ್ಷಣ ಕಾರ್ಯಕ್ರಮ, ಕೋಮುವಾದ, ಅಲ್ಪ ಸಂಖ್ಯಾತರು ಮತ್ತು ಅಲ್ಪ ಸಂಖ್ಯಾತರ ರಕ್ಷಣೆ, ಪ್ರಾದೇಶಿಕತೆ ಮತ್ತು ಪ್ರಾದೇಶಿಕ ಆಶೋತ್ತರಗಳು, ಜಾತಿವಾದ, ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಪಂಗಡ, ಮಹಿಳೆಯರ ಸ್ಥಾನಮಾನಗಳು, ಹೆಣ್ಣು–

ಗಂಡುಗಳು ಸಮಾನವೆಂಬ ಭಾವನೆಯ ಬೆಳವಣಿಗೆ, ಸಮಾಜ ಮತ್ತು ಮಗುವಿನ ಹಕ್ಕುಗಳು, ಸಮಾಜ ವಿರೋಧಿ ಚಟುವಟಿಕೆಗಳು, ಕಳ್ಳ ಸಾಗಣೆ, ಲಾಭಕೋರತನ, ಭ್ರಷ್ಟಾಚಾರ, ವರದಕ್ಷಿಣೆ, ಆರ್ಥಿಕ ಅಸಮಾನತೆ ಮತ್ತು ಬಡತನ ಮತ್ತು ಬಡತನದ ಸಮಸ್ಯೆಗಳನ್ನು 1ನೆಯ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಈ ಎಲ್ಲ ಪರಿಕಲ್ಪನೆಗಳನ್ನು ವಿದ್ಯಾರ್ಥಿಗಳಿಗೆ ಪರಿಚಯಿಸುವ ಪ್ರಯತ್ನ ಶ್ಲಾಘನೀಯವೇ ಆದರೂ ಒಟ್ಟು ಪಠ್ಯದ ಧ್ವನಿಯಲ್ಲಿ ತೀವ್ರವಾದ ಕಾಳಜಿ ವ್ಯಕ್ತವಾಗುವುದಿಲ್ಲ. ಇಂಗ್ಲೀಷಿನ ಪ್ಯಾಸಿವ್ ವ್ಯಾಸ್‌ನ ರಚನೆಯಲ್ಲಿರುವ ವಾಕ್ಯಗಳು ಒಟ್ಟು ಪ್ರಶ್ನೆ (issue)ಗಳ ಬಗ್ಗೆ ಬದ್ಧತೆ ಇಲ್ಲದ, ದೂರದಲ್ಲಿ ನಿಂತು ಯಾರಿಗೋ ಹೇಳಿದಂತೆ, ಪುಕ್ಕಟೆ ಸಲಹೆ ನೀಡುವ ಅಥವಾ ಯಾವ ಯಾವ ರಂಗದಲ್ಲಿ ಯಾರು ಯಾವ ಕ್ರಮ ತೆಗೆದುಕೊಂಡಿದ್ದಾರೆ ಎಂಬುದಕ್ಕೆ ಬದಲಾಗಿ 'ಏನೋ ಕ್ರಮ ತೆಗೆದುಕೊಳ್ಳಲಾಗಿದೆ. ಇಷ್ಟು ಸಾಕು ನಿಮಗೆ' ಎಂಬ ನಿಲುವು ಕಾಣಿಸುತ್ತದೆ. (ಇಂಗ್ಲೀಷ್‌ನಲ್ಲಿ ಬರೆದ ಪಠ್ಯಪುಸ್ತಕವನ್ನು ಕನ್ನಡಕ್ಕೆ ಅನುವಾದಿಸಿರುವುದರಿಂದ ಹೀಗಾಗಿರಬಹುದು ಅನ್ನಿಸುತ್ತದೆ.) ಉದಾಹರಣೆಗೆ ಈ ಕೆಳಗಿನ ಕೆಲವು ವಾಕ್ಯಗಳನ್ನು ಗಮನಿಸಿ:

**ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಪಂಗಡ**

. . . ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಪಂಗಡಗಳ ಹಿತಾಸಕ್ತಿ ಮತ್ತು ಹಕ್ಕುಗಳನ್ನು ರಕ್ಷಿಸಲು ಸಾಕಷ್ಟು ಅವಕಾಶಗಳನ್ನು ಒದಗಿಸಲಾಗಿದೆ. ಅವರ ಶೈಕ್ಷಣಿಕ ಮತ್ತು ಆರ್ಥಿಕ ಆಸಕ್ತಿಗಳನ್ನು ರಕ್ಷಿಸಲಾಗುತ್ತಿದೆ, ಪೋಷಿಸಲಾಗುತ್ತಿದೆ. ರಾಜ್ಯ ಮತ್ತು ಕೇಂದ್ರ ಸರ್ಕಾರದ ಹುದ್ದೆಗಳಲ್ಲಿ ಈ ಜನಗಳಿಗೆ ನಿರ್ದಿಷ್ಟ ಪ್ರಮಾಣದ ಶೇಕಡಾ ಪಾಲನ್ನು ಮೀಸಲಿಡಲಾಗಿದೆ. ರಾಜ್ಯ ಶಾಸನ ಸಭೆ ಮತ್ತು ಲೋಕಸಭೆಯಲ್ಲಿ ನಿರ್ದಿಷ್ಟ ಪ್ರಮಾಣದ ಸ್ಥಾನಗಳನ್ನು ಮೀಸಲಿಡಲಾಗಿದೆ. ನಾಗರಿಕ ಹಕ್ಕುಗಳ ರಕ್ಷಣೆಗೆ ಉಚಿತವಾದ ಕಾನೂನು ನೆರವನ್ನು ಕೊಡಲಾಗಿದೆ. ಈ ಜನರ ಹಕ್ಕುಗಳ ರಕ್ಷಣೆಗಾಗಿ ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸಲಾಗಿದೆ. ಈ ಗುಂಪಿನ ಮತ್ತು ಪಂಗಡದ ಜನರು ಹೆಚ್ಚು ಹೆಚ್ಚಾಗಿ ಎಲ್ಲ ಆಡಳಿತಾತ್ಮಕ ಹುದ್ದೆಗಳಲ್ಲಿ ಪ್ರಾತಿನಿಧ್ಯ ಪಡೆಯಲು ಕೇಂದ್ರ ಸರ್ಕಾರದ ವ್ಯಾಪ್ತಿಯ ಯೋಜನೆಗಳಲ್ಲಿ ಪರೀಕ್ಷಾಪೂರ್ವ ತರಬೇತಿಯನ್ನು ಕೊಡಲಾಗುತ್ತಿದೆ. ಉಚಿತವಾದ ಹಾಸ್ಟೆಲ್ ಸೌಲಭ್ಯಗಳನ್ನು ಮತ್ತು ಬುಕ್ ಬ್ಯಾಂಕ್ ನೆರವನ್ನು ಭಾರಿ ಪ್ರಮಾಣದಲ್ಲಿ ಕೊಡಲಾಗುತ್ತಿದೆ. ಪರಿಶಿಷ್ಟ ಪಂಗಡಗಳು ದೇಶದ ದೊಡ್ಡ ಆಸ್ತಿ. "ಈ ಜನರ ವಿಶಿಷ್ಟ ಲಕ್ಷಣಗಳನ್ನು ರಕ್ಷಿಸಲು ಎಲ್ಲ

ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಈ ಜನರ ಉತ್ಪಾದನಾ ಮಟ್ಟವನ್ನು ಹೆಚ್ಚಿಸುವ ಕಾರ್ಯಕ್ರಮಗಳನ್ನು ಯೋಜಿಸಲಾಗಿದೆ...."

'ಈ ಜನಗಳಿಗೆ' ಎಂಬ ಪದಪುಂಜದಲ್ಲಿ, 'ಈ ಜನಗಳು' ಎನ್ನುವಾಗ ಸೂಚಿತವಾಗುವ ಒಂದು ರೀತಿಯ ತಾತ್ಸಾರದ, ತಿರಸ್ಕಾರದ ಧ್ವನಿ ಕೂಡ ಗಮನಾರ್ಹ. ಮುಂದಕ್ಕೆ, 'ಈ ಜನಗಳು' ಬದಲಾಗಿ ಗೌರವ ಸೂಚಕ 'ಈ ಜನರ' ಎಂಬಲ್ಲಿ ಕಾಣಿಸುವ ತೋರಿಕೆಗೆ ನಪುಂಸಕ ಲಿಂಗ ಬಹುವಚನದಿಂದ ('ಈ ದನಗಳು' ಎಂಬ ಧಾಟಿಯಲ್ಲಿ) ಪುಲ್ಲಿಂಗ ಬಹುವಚನಕ್ಕೆ ಆಗುವ ಬದಲಾವಣೆಯೂ ಗಮನಾರ್ಹ. ಯಾಕೆಂದರೆ

'ಈ ಜನಗಳಿಗೆ ನಿರ್ದಿಷ್ಟ ಪ್ರಮಾಣದ ಶೇಕಡಾ ಪಾಲನ್ನು ಮೀಸಲಿಡಲಾಗಿದೆ' ಎಂಬ ವಾಕ್ಯದ ಮೇಲ್ಮೈ ರಚನೆಯು ತಳಮೈ ರಚನೆಯಲ್ಲಿ 'ಈ ಜನಗಳಿಗೆ' ನಿರ್ದಿಷ್ಟ ಪ್ರಮಾಣದ ಹಸಿರು ಹುಲ್ಲನ್ನು ಹಾಕಲಾಗಿದೆ' ಎಂಬ ವಾಕ್ಯವನ್ನು ಹೋಲುತ್ತದೆ. ಒಂದು ಪಠ್ಯದಲ್ಲಿ ಶಬ್ದಗಳ ಅರ್ಥಪೂರ್ಣ ಜೋಡಣೆ ಎಷ್ಟು ಮುಖ್ಯವೋ ಆ ಜೋಡಣೆಯಿಂದ ಹೊರಹೊಮ್ಮುವ ಧ್ವನಿ (tone) ಕೂಡ ಅಷ್ಟೇ ಮುಖ್ಯ. ಆದ್ದರಿಂದ ಭಾಷಾ/ಸಾಹಿತ್ಯ ಪಠ್ಯದಲ್ಲಷ್ಟೆ ಅಲ್ಲ; ಸಮಾಜ, ಇತಿಹಾಸ, ಪೌರನೀತಿಯಂತಹ ಮೌಲ್ಯ ನಿರ್ಮಾಣ ಸಹಕಾರಿ ಪಠ್ಯಗಳಲ್ಲಿ ಕೂಡ ಪ್ರತಿ ಮೇಲ್ಮೈ ರಚನೆಯ ವಾಕ್ಯ / ವೃಂದವು ತಳಮೈ ರಚನೆಯಲ್ಲಿ ಯಾವ ಅರ್ಥ ಹೊಳೆಯಿಸಬಹುದು? ಎಂಬುದನ್ನು ಪರಾಮರ್ಶಿಸಿಯೆ ಅಂತಿಮ ಪಠ್ಯವನ್ನು ಸಿದ್ಧಗೊಳಿಸಬೇಕಾಗುತ್ತದೆ.

## ಸಂಶೋಧನಾ ಅಂತರ (Research Gap)

ಪಠ್ಯಪುಸ್ತಕಗಳ ಕುರಿತು ನಡೆಯುವ ಅಧ್ಯಯನಗಳಲ್ಲಿ ಬಹುಪಾಲು ಅಧ್ಯಯನಗಳು ವಿವರಣಾತ್ಮಕವಾಗಿರುತ್ತವೆ. ಪಠ್ಯ ವಿಕಾಸ, ಪಠ್ಯ ರಚನಾ ವಿನ್ಯಾಸ, ಪಠ್ಯ ಆಯ್ಕೆಗೆ ಮಾನದಂಡಗಳು, ಇತ್ಯಾದಿಯ ವಿವರ ನೀಡುತ್ತವೆ. ಆದರೆ ಈ ಸಂಶೋಧಕನ ಅರಿವಿಗೆ ಬಂದಂತೆ, ಪಠ್ಯ ಪುಸ್ತಕಗಳ, ಮುಖ್ಯವಾಗಿ ಭಾಷಾ/ಸಾಹಿತ್ಯ, ಇತಿಹಾಸ, ಸಮಾಜ ಶಾಸ್ತ್ರ, ಪೌರನೀತಿ ಪಠ್ಯಪುಸ್ತಕಗಳ – ಕೆಲವು ಪಾಠಗಳನ್ನು ಆಯ್ದು ಮೇಲ್ಮೈ ರಚನೆ ಹಾಗೂ ತಳಮೈ ರಚನೆ ಪರಿಕಲ್ಪನೆಯ ದೃಷ್ಟಿಯಿಂದ ವಿಶ್ಲೇಷಣೆಗೆ ಒಳಪಡಿಸಿದ ಅಧ್ಯಯನಗಳು ಕಂಡುಬರುವುದಿಲ್ಲ. ಈ ಸಂಶೋಧನಾ ಅಂತರವನ್ನು ತುಂಬುವ ಪ್ರಯತ್ನ ಇದಾಗಿದೆ.

ಪಠ್ಯ ಯಾವುದೇ ಇರಲಿ, ಅದರ ರಚನಕಾರರು ರಚನಾ ವೇಳೆಯಲ್ಲೆ ತಾವು ಸಿದ್ಧಪಡಿಸುವ ಪಠ್ಯದ ತಳಮೈ ರಚನೆಯ ಕುರಿತು ಕೂಡ ಚಿಂತನೆ ನಡೆಸಲು ಪ್ರೋತ್ಸಾಹಿಸುವುದು ಮತ್ತು ಆ ಮೂಲಕ ಅವರನ್ನು ಹೆಚ್ಚು ಸಮರ್ಥ ಪಠ್ಯ ರಚನಕಾರರನ್ನಾಗಿಸುವುದು ಈ ಅಧ್ಯಯನದ ಉದ್ದೇಶಗಳಲ್ಲೊಂದು.

## ಅಧ್ಯಾಯ ಮೂರು

## ಸಂಶೋಧನಾ ವಿಧಾನ (Methodology)

**ಪೀಠಿಕೆ**

ಕರ್ನಾಟಕದ ಪಠ್ಯಕ್ರಮದಲ್ಲಿ ಭಾಷೆ, ಮಹಿಳೆಯರ ಸ್ಥಾನಮಾನ ಹಾಗೂ ಕೋಮುಸಾಮರಸ್ಯದ ನಡುವೆ ಇರಬಹುದಾದ ಸಂಬಂಧಗಳ ಅಧ್ಯಯನ ನಡೆಸುವ ಈ ಸಂಶೋಧನೆಯು ತಾನು ಎತ್ತಿಕೊಂಡಿರುವ ಪ್ರಶ್ನೆಗಳಿಗೆ ಪ್ರಸ್ತುತ (relevant) ಹಾಗೂ ಪೂರಕವಾದ ಸಂಶೋಧನಾ ವಿಧಾನವನ್ನು ಬಳಸಿಕೊಂಡಿದೆ.

**ಸಂಶೋಧನಾ ವಿಧಾನ**

ಒಂದು ಪಠ್ಯಕ್ರಮದಲ್ಲಿ ಬಳಸಲಾಗುವ ಪಠ್ಯಪುಸ್ತಕಗಳಲ್ಲಿ ಕೆಲವು ನಿರ್ದಿಷ್ಟ ವಿಷಯಗಳ ಮಂಡನೆಯಲ್ಲಿ ಬಳಸಲಾಗುವ ಭಾಷೆ ಅಥವಾ ಭಾಷಾ ಶೈಲಿಗೂ ಪಠ್ಯಕ್ರಮವನ್ನು ರೂಪಿಸಿದ ಸಮಾಜದ ಮಹಿಳೆಯರ ಸ್ಥಾನಮಾನಕ್ಕೂ ಸಂಬಂಧವಿದೆಯೆ? ಎಂಬ ಪ್ರಶ್ನೆಗೆ ಉತ್ತರ ಹುಡುಕುವ ಒಂದು ಸಂಶೋಧನಾ ವಿಧಾನವಾಗಿ ಕೆಲವು ಪಠ್ಯಪುಸ್ತಕಗಳ ಆಯ್ದ ಭಾಗಗಳನ್ನು ವಿಶ್ಲೇಷಣೆಗೊಳಪಡಿಸಲಾಯಿತು. ಉದಾಹರಣೆಗೆ, 'ಸಮಾಜ ಪರಿಚಯ–ಒಂದನೆಯ ತರಗತಿಗೆ–ಪಾಠ1. "ನನ್ನ ಮನೆ ಮತ್ತು ಕುಟುಂಬ", ಪಾಠ 2, "ಕುಟುಂಬದಲ್ಲಿ ಯಾರು ಏನು ಮಾಡುತ್ತಾರೆ?"

ಭಾಷೆಯ ಮೂಲಕ ಒಂದು ವಿಷಯವು ಅಭಿವ್ಯಕ್ತವಾಗುವಾಗ ಒಮ್ಮೊಮ್ಮೆ ಮೇಲ್ಮೈ ಸಂರಚನೆಗಿಂತ ಆಳದ ಸಂರಚನೆ ಯಾಕೆ ಮತ್ತು ಹೇಗೆ ಮುಖ್ಯವಾಗುತ್ತದೆ? ಎನ್ನುವ ಸಂಶೋಧನಾ ಪ್ರಶ್ನೆಗೆ ಉತ್ತರ ಹುಡುಕುವುದಕ್ಕಾಗಿ ಖ್ಯಾತ ಭಾಷಾ ವಿಜ್ಞಾನಿ ನೋಮ್ ಚೋಮ್‌ಸ್ಕಿಯ 'ಸರ್ಫೇಸ್ ಸ್ಟ್ರಕ್ಚರ್' ಮತ್ತು 'ಡೀಪ್ ಸ್ಟ್ರಕ್ಚರ್' ಪರಿಕಲ್ಪನೆಗಳನ್ನು ಬಳಸಿಕೊಳ್ಳಲಾಯಿತು. (ಬುಲಕ್ ಅಲನ್:1988) ಚೋಮ್‌ಸ್ಕಿಯ 'ಜನರೇಟಿವ್ ಗ್ರಾಮರ್'ನಲ್ಲಿ 'ಡೀಪ್ ಸ್ಟ್ರಕ್ಚರ್' ಮತ್ತು 'ಸರ್ಫೇಸ್ ಸ್ಟ್ರಕ್ಚರ್' ಎಂಬುದು ಒಂದು ಪ್ರಮುಖವಾದ ಸೈದ್ಧಾಂತಿಕ (theoretical) ವಿಂಗಡಣೆಯಾಗಿದೆ. ಒಂದು ವಾಕ್ಯದಲ್ಲಿ ನಾವು ಹೇಳುವ ಮತ್ತು ಕೇಳುವ

ಧ್ವನಿಗಳ/ಶಬ್ದಗಳ ಒಂದು ಸರಮಾಲೆ (string)ಯೇ ಆ ವಾಕ್ಯದ ಮೇಲ್‌ಮೈ ಸಂರಚನೆ ಅಥವಾ ಸರ್ಫೇಸ್ ಸ್ಟ್ರಕ್ಚರ್. 'ಘಟಕ ವಿಶ್ಲೇಷಣೆ' (CONSTITUENT ANALYSIS)ಯ ಮೂಲಕ ಒಂದು ವಾಕ್ಯದ ಮೇಲ್‌ಮೈ ಸಂರಚನೆಯನ್ನು ವಿಶ್ಲೇಷಿಸುವುದು ಭಾಷಾ ವಿಜ್ಞಾನದಲ್ಲಿ ಬಳಸಲ್ಪಡುವ ಒಂದು ಸಾರ್ವಕಾಲಿಕ (universal) ವಿಧಾನ (procedure). ಈ ಘಟಕ ವಿಶ್ಲೇಷಣೆಯು ಭಾಷಾ ಶಾಸ್ತ್ರೀಯ ಸಂರಚನೆಯ ಕುರಿತು ಅನೇಕ ಪ್ರಮುಖ ಸಂಗತಿಗಳನ್ನು ಹೇಳುತ್ತದೆ, ಆದರೆ ಅದು ಎಲ್ಲವನ್ನೂ ಹೇಳುವುದಿಲ್ಲ ಅಥವಾ ಎಲ್ಲವನ್ನೂ ಸೂಚಿಸುವುದಿಲ್ಲ.

ಉದಾಹರಣೆಗೆ, ವಿಭಿನ್ನವಾದ ಮೇಲ್‌ಮೈ ರೂಪಗಳಿರುವ ಆದರೆ ಅರ್ಥಮಾತ್ರ ಒಂದೇ ಇರುವ ಅಥವಾ ಸಮಾನ ಅರ್ಥ ಇರುವ, ದ್ವಂದ್ವಾರ್ಥ (ambiguous) ವಾಕ್ಯಗಳನ್ನು ನಾವು ಹೇಗೆ ಗುರುತಿಸುತ್ತೇವೆ ಎಂಬುದನ್ನು ಘಟಕ ವಿಶ್ಲೇಷಣೆ ಹೇಳುವುದಿಲ್ಲ. ಉದಾಹರಣೆಗೆ, 'ಬೆಕ್ಕುಗಳು ಇಲಿಗಳನ್ನು ಅಟ್ಟಿಸಿಕೊಂಡು ಹೋಗುತ್ತವೆ' – 'ಇಲಿಗಳು ಬೆಕ್ಕುಗಳಿಂದ ಅಟ್ಟಿಸಿಕೊಂಡು ಹೋಗಲ್ಪಡುತ್ತವೆ' (Cats chase mice. ಮತ್ತು Mice are chased by cats.) – ಈ ಎರಡೂ ವಾಕ್ಯಗಳು ಸಮಾನ ಅರ್ಥವುಳ್ಳವುಗಳೆಂದು ನಾವು ಹೇಗೆ ಗುರುತಿಸುತ್ತೇವೆ? ಎಂಬುದನ್ನು ಘಟಕ ವಿಶ್ಲೇಷಣೆ ಹೇಳುವುದಿಲ್ಲ. ಇಂತಹ ಕಾರಣಗಳಿಂದಾಗಿ 1950ರ ದಶಕದ ಕೊನೆಯ ಭಾಗದಲ್ಲಿ ಭಾಷಾ ವಿಜ್ಞಾನಿಗಳು ವಾಕ್ಯಗಳಿಗೆ ಆಳವಾದ ಅಥವಾ 'ಗುಪ್ತವಾಗಿ ಇರುವ' (underlying) ಒಂದು ಸಂರಚನೆ ಇದೆ ಎಂಬ ವಾದವನ್ನು ಮಂಡಿಸಿದರು. ರಾಚನಿಕವಾದ (structural) ಒಂದು ವ್ಯವಸ್ಥೆ (organisation) ಯಲ್ಲಿ ರಾಚನಿಕ ಅರ್ಥವಿವರಣೆಯನ್ನು ನಿರ್ಧರಿಸುವ ಎಲ್ಲ ಅಂಶಗಳನ್ನು ವ್ಯಾಖ್ಯಾನಿಸಲಾಗುತ್ತದೆ ಮತ್ತು ಅವುಗಳು ಅಂತರ್ ಸಂಬಂಧ ಹೊಂದಿದವುಗಳಾಗಿರುತ್ತವೆ. ಒಂದು ವಾಕ್ಯದ ವ್ಯಾಕರಣವು ತನ್ನ 'ಫ್ರೇಸ್ ಸ್ಟ್ರಕ್ಚರ್' ನಿಯಮಗಳಲ್ಲಿ ಅಮೂರ್ತ ಆಳ ಸಂರಚನೆಗಳನ್ನು ಉತ್ಪಾದಿಸುವ/ಸೃಷ್ಟಿಸುವ ಮೂಲಕ ಕೆಲಸ ಮಾಡುತ್ತದೆ ಎಂಬ ವಾದ ಈ ಪರಿಕಲ್ಪನೆಯ ಹಿಂದೆ ಇದೆ.

ಇತಿಹಾಸ ಪಠ್ಯಗಳಲ್ಲಿ ನೀಡಲಾಗಿರುವ ಮುಸ್ಲಿಂ ದೊರೆಗಳ ಚಿತ್ರಣಕ್ಕೂ ಈಗ ಸಮಾಜದಲ್ಲಿ ಕಂಡುಬರುತ್ತಿರುವ ಕೋಮು ದ್ವೇಷಕ್ಕೂ, ಕೋಮು ಹಿಂಸೆಗೂ ನೇರ ಸಂಬಂಧವಿರಬಹುದೆ?

ಎಂಬ ಸಂಶೋಧನಾ ಪ್ರಶ್ನೆಗೆ ಉತ್ತರ ಶೋಧಿಸುವ ಪ್ರಯತ್ನದ ಅಂಗವಾಗಿ ಹೋಲಿಕಾ ವಿಧಾನ (Comparative Method)ವನ್ನು ಈ ಅಧ್ಯಯನದಲ್ಲಿ ಬಳಸಿಕೊಳ್ಳಲಾಗಿದೆ. ಕರ್ನಾಟಕದ ಶಾಲೆಗಳಲ್ಲಿ ಬಳಕೆಯಲ್ಲಿರುವ ಇತಿಹಾಸ ಪಠ್ಯಗಳಲ್ಲಿ ಮಹಮದ್ ಘಸ್ನಿ ಮತ್ತು ಘೋರಿಯ ದಂಡಯಾತ್ರೆಗಳ ವಿವರಗಳನ್ನು ಭಾರತಕ್ಕೆ ಬಂದು ಇಲ್ಲಿ ಸಾಮ್ರಾಜ್ಯ ಸ್ಥಾಪಿಸಿದ ಬ್ರಿಟಿಷರ ಕುರಿತಾಗಿ ನೀಡಲಾಗಿರುವ ವಿವರಗಳೊಂದಿಗೆ ಹೋಲಿಕೆ ಮಾಡಿ ಎರಡರ ನಡುವಣ ವ್ಯತ್ಯಾಸವನ್ನು ಗುರುತಿಸಲಾಗಿದೆ. ಕೋಮು ಹಿಂಸೆಯ ದೃಷ್ಟಿಯಿಂದ, ತುಂಬ ಸೂಕ್ಷ್ಮವಾದ ವಿವರಣೆಯ ವ್ಯತ್ಯಾಸಗಳನ್ನು ಎರಡು ಕಥಾನಕಗಳ ಹೋಲಿಕೆ ಮತ್ತು ವಿಶ್ಲೇಷಣೆಯ ಮೂಲಕ ಗುರುತಿಸುವ ಪ್ರಯತ್ನ ಮಾಡಲಾಗಿದೆ.

## ಪಠ್ಯಪುಸ್ತಕಗಳ ಸಂಗ್ರಹ

ಈ ಅಧ್ಯಯನಕ್ಕೆ ಬೇಕಾಗುವ ಆಕರ ಗ್ರಂಥಗಳನ್ನು, ಪಠ್ಯಪುಸ್ತಕಗಳನ್ನು ಹಾಗೂ ವಾರ್ತಾ ಪತ್ರಿಕೆಗಳ ಲೇಖನ ಹಾಗೂ ವರದಿಗಳನ್ನು ಮೊದಲು ಸಂಗ್ರಹಿಸಿ, ಬಳಿಕ ಅವುಗಳನ್ನು ಪಟ್ಟಿ ಮಾಡಿಕೊಳ್ಳಲಾಯಿತು.

ಈ ಅಧ್ಯಯನವು ಸಮಕಾಲೀನ ಸಮಾಜದಲ್ಲಿ ಮಹಿಳೆಯರ ಸ್ಥಾನಮಾನ ಹಾಗೂ ಕೋಮು ಸಾಮರಸ್ಯಕ್ಕೆ ಸಂಬಂಧಿಸಿದ ಅಧ್ಯಯನವಾಗಿರುವುದರಿಂದ ಸಮಕಾಲೀನ ಸಮಾಜದ ಘಟನೆಗಳ ದಾಖಲೆಗಳಾಗಿರುವ ವರ್ತಮಾನ ಪತ್ರಿಕೆ ಹಾಗೂ ಮ್ಯಾಗಜಿನ್‌ಗಳಿಂದ ಅಧ್ಯಯನ ಸಂಬಂಧಿ ಲೇಖನಗಳನ್ನು ಆಯ್ದು ಪಟ್ಟಿ ಮಾಡಿಕೊಳ್ಳಲಾಯಿತು.

## ದತ್ತಾಂಶಗಳ ಸಂಗ್ರಹ

ಅಧ್ಯಯನಕ್ಕೆ ಪೂರಕವಾದ ಕೆಲವು ದತ್ತಾಂಶಗಳನ್ನು ಸಂಗ್ರಹಿಸಲಾಯಿತು. 1947ರಿಂದ 1998ರವರೆಗಿನ ಕೋಮುಗಲಭೆ ಮತ್ತು ಕೋಮು ಹಿಂಸೆಗೆ ಸಂಬಂಧಿಸಿದ ಅಂಕಿ ಸಂಖ್ಯೆಗಳನ್ನು ಕಲೆ ಹಾಕಿ ಅವುಗಳ ತುಲನಾತ್ಮಕ ಅಧ್ಯಯನ ನಡೆಸಲಾಯಿತು ಮತ್ತು ಅವುಗಳನ್ನಾಧರಿಸಿ ಕೆಲವು ತೀರ್ಮಾನ (Inference)ಗಳಿಗೆ ಬರಲಾಯಿತು.

ಭಾರತದಲ್ಲಿ ಸಂಭವಿಸಿದ ಕೆಲವು ಪ್ರಮುಖ ಕೋಮುದೊಂಬಿಗಳಿಗೆ ಸಂಬಂಧಿಸಿದ ಕೆಲವು ಅಂಕಿ ಅಂಶಗಳು ಹೀಗಿವೆ.

| ವರ್ಷ | ನಗರ/ ರಾಜ್ಯ | ಮಡಿದವರು | ಗಾಯ ಗೊಂಡವರು | ಮುಖ್ಯಮಂತ್ರಿ | ಸರಕಾರದಲ್ಲಿ ಅಧಿಕಾರದಲ್ಲಿದ್ದ ಪಕ್ಷ |
|---|---|---|---|---|---|
| 1947 | ಕಲ್ಕತ್ತ/ ಪ.ಬಂಗಾಲ | 5000 | 25000 | ಪ್ರಘುಲ್ ಘೋಷ್ | ಕಾಂಗ್ರೆಸ್ |
| 1967 | ರಾಂಚಿ | 183 | | ಮಹಾಮಾಯ ಪ್ರಸಾದ್ | ಕಾಂಗ್ರೆಸ್ |
| 1969 | ಗುಜರಾತ್ | 512 | | ಹೆಚ್.ಕೆ.ದೇಸಾಯಿ | ಕಾಂಗ್ರೆಸ್ |
| 1970 | ಮಹಾರಾಷ್ಟ್ರ | 120 | | ವಿ.ಪಿ. ನಾಯ್ಕ್ | ಕಾಂಗ್ರೆಸ್ |
| 1980 | ಮೊರದಾಬಾದ್/ಉ.ಪ್ರ | 2000 | | ವಿ.ಪಿ. ಸಿಂಗ್ | ಕಾಂಗ್ರೆಸ್ ಐ |
| 1984 | ಮಹಾರಾಷ್ಟ್ರ | 146 | 611 | ವಸಂತ್ ರಾವ್ ಪಾಟೀಲ್ | ಕಾಂಗ್ರೆಸ್ ಐ |
| 1984 | ದೆಹಲಿ | 2733 | | ಸೆಂಟ್ರಲ್ ಗವರ್ನ್‌ಮೆಂಟ್ | ಕಾಂಗ್ರೆಸ್ ಐ |

| | | | | | |
|---|---|---|---|---|---|
| 1985 | ಅಹಮದಾಬಾದ್ | 300 | | ಎಂ.ಎಸ್.ಸೋಲಂಕಿ | ಕಾಂಗ್ರೆಸ್ ಐ |
| 1987 | ಮೀರತ್/ಉ.ಪ್ರ | 3000 | | ಬೀರ್ ಬಹಾದ್ದುರ್ ಸಿಂಗ್ | ಕಾಂಗ್ರೆಸ್ |
| 1990 | ಗುಜರಾತ್ | 265 | 775 | ಚಿಮನ್‌ಬ್ಯಾ ಪಟೇಲ್ | ಜೆ.ಪಿ. |
| 1990 | ಜೈಪುರ್/ರಾಜಸ್ಥಾನ್ | 72 | 644 | ಬಿ.ಎಸ್.ಶೇಖಾವತ್ | ಜೆ.ಪಿ. |
| 1990 | ಉತ್ತರ ಪ್ರದೇಶ್ | 94 | 69 | ಮುಲಾಯಂ ಸಿಂಗ್ | ಎಸ್.ಜೆ.ಪಿ. |
| 1990 | ದೆಹಲಿ | 100 | | ಸೆಂಟ್ರಲ್ ಗವರ್ನ್‌ಮೆಂಟ್ | |
| 1990 | ಬಿಹಾರ್ | 996 | | ಜಗನ್ನಾಥ್ ಮಿಶ್ರಾ | ಕಾಂಗ್ರೆಸ್ |
| 1990 | ಕರ್ನಾಟಕ | 60 | | ಎಸ್. ಬಂಗಾರಪ್ಪ | ಕಾಂಗ್ರೆಸ್ |
| 1990 | ಹೈದರಾಬಾದ್/ಎ.ಪಿ. | 299 | 350 | ಎಂ.ಸಿ.ರೆಡ್ಡಿ | ಕಾಂಗ್ರೆಸ್ |
| 1991 | ಬರೋಡಾ/ಗುಜರಾತ್ | 66 | 170 | ಚಿಮ್ಮನ್‌ಬ್ಯಾ ಪಟೇಲ್ | ಜೆ.ಪಿ. |
| 1992 | ಸೂರತ್/ಗುಜರಾತ್ | 200 | | ಚಿಮ್ಮನ್‌ಬ್ಯಾ ಪಟೇಲ್ | ಜೆ.ಪಿ. |
| 1992 | ಮುಂಬೈ | 1000 | | ಸುಧಾಕರ್ ರಾವ್ ನಾಯ್ಕ್ | ಎನ್.ಸಿ.ಪಿ. |
| 1992 | ಭೋಪಾಲ್/ಮ.ಪ್ರ. | 143 | | ಸುಂದರ್‌ಲಾಲ್ ಪಟ್ವಾ | ಬಿ.ಜೆ.ಪಿ. |
| 1998 | ಅಜ್ಮೀರ್/ರಾಜಸ್ಥಾನ್ | 25 | | ಬಿ.ಎಸ್.ಶೇಖಾವತ್ | ಜೆ.ಪಿ. |

ಮುಂಬಯಿ ಕೋಮುಗಲಭೆಗಳು/ಡಿಸೆಂಬರ್ 1991 ಮತ್ತು ಜನವರಿ 1993.

ಗಲಭೆಯಲ್ಲಿ ಮಡಿದವರ ಸಂಖ್ಯೆ ಸುಮಾರು 900

ಮುಂಬೈ ಬಾಂಬ್ ಸ್ಫೋಟಗಳು/12 ಮಾರ್ಚ್ 1993/ಗಲಭೆಯಲ್ಲಿ ಮಡಿದವರ ಸಂಖ್ಯೆ: 250

ಮಡಿದ ಮುಸ್ಲಿಮರ ಸಂಖ್ಯೆ : 650

ಮಡಿದ ಹಿಂದುಗಳ ಸಂಖ್ಯೆ : 200

ಗಲಭೆಗಳಿಂದ ಆದ ಅಂದಾಜು ನಷ್ಟ : ರೂ.9,000 ಕೋಟಿ ರೂಪಾಯಿಗಳು

[http://en.wikipedia.org/wiki/Bombay-riots /23/3/2010]

ಕೋಮುಗಲಭೆಗಳು ಸಂಭವಿಸಿದಾಗ ಗಲಭೆಗಳನ್ನು ನಿಯಂತ್ರಿಸಬೇಕಾದ ಪೊಲೀಸರ ತಾಟಸ್ಥ್ಯ (neutrality)ದ ಅಧ್ಯಯನ ನಡೆಸಲು ಹೈದರಾಬಾದಿನ ದಿ ನ್ಯಾಶನಲ್ ಪೊಲೀಸ್ ಅಕಾಡೆಮಿಯ ಫೆಲೋಶಿಪ್ ಪಡೆದು ಆ ಅಧ್ಯಯನ ನಡೆಸಿದ ವಿಭೂತಿ ನಾರಾಯಣ್ ರೈಯವರು, ಕೋಮುಗಲಭೆಗಳು ಸಂಭವಿಸಿದಾಗ ಪೊಲೀಸರು ಮುಸ್ಲಿಮರನ್ನು ತಮ್ಮ ಶತ್ರುಗಳಂತೆಯೂ,

ಹಿಂದುಗಳನ್ನು ತಮ್ಮ ಮಿತ್ರರಂತೆಯೂ ಪರಿಗಣಿಸುವುದರ ಪರಿಣಾಮವಾಗಿ ಹೇಗೆ ಅತಿ ಹೆಚ್ಚು ಮುಸ್ಲಿಮರೇ ಪೊಲೀಸ್ ಕಾರ್ಯಾಚರಣೆಯಲ್ಲಿ ಸಾವು ನೋವಿಗೊಳಗಾಗುತ್ತಾರೆ, ಆಸ್ತಿಪಾಸ್ತಿ ನಾಶಕ್ಕೊಳಗಾಗುತ್ತಾರೆ ಎಂದು ಅಂಕಿಸಂಖ್ಯೆಗಳ ಸಹಿತ ದಾಖಲಿಸುತ್ತಾರೆ (http://www.india-seminar.com/1999/483/483% 20Drai.htm/23/3/2010).

ಅವರ ಪ್ರಕಾರ ದೇಶದಲ್ಲಿ ನಡೆದ ಬಹುಪಾಲು ಪ್ರಮುಖ ಕೋಮುಗಲಭೆಗಳಲ್ಲಿ ಸಾವುನೋವು ಆಸ್ತಿಪಾಸ್ತಿ ನಾಶಕ್ಕೊಳಗಾಗುವ ಒಟ್ಟು ಮಂದಿಯಲ್ಲಿ 60%ಕ್ಕಿಂತಲೂ ಹೆಚ್ಚು ಮಂದಿ ಮುಸ್ಲಿಮರು. ಅಹ್ಮದಾಬಾದ್ (1969), ಭಿವಂಡಿ (1970) ಮತ್ತು ಭಾಗಲ್ಪುರ (1989) ಕೋಮುಗಲಭೆಗಳಲ್ಲಿ ಸತ್ತವರೆಲ್ಲ (almost all killed) ಮುಸ್ಲಿಮರು.

ರೈಯವರು ಪೊಲೀಸ್ ಗೋಲಿಬಾರಿನಲ್ಲಿ ಸತ್ತವರ ಬಗ್ಗೆ ಈ ಅಂಕಿಸಂಖ್ಯೆಗಳನ್ನು ಕೊಡುತ್ತಾರೆ.

| **ಸ್ಥಳ** | **ಮಡಿದ ಹಿಂದುಗಳ ಸಂಖ್ಯೆ** | **ಮಡಿದ ಮುಸ್ಲಿಮರ ಸಂಖ್ಯೆ** |
|---|---|---|
| ಭಿವಂಡಿ (1970) | ನಿಲ್ | 9 |
| ಫಿರೋಜಾಬಾದ್ (1972) | ನಿಲ್ | 6 |
| ಆಲೀಗಢ (1979) | ನಿಲ್ | 7 |
| ಮೀರತ್ (1982) | ನಿಲ್ | 6 |

2002ರಲ್ಲಿ ಸಂಭವಿಸಿದ ಗೋಧ್ರಾ ಹತ್ಯಾಕಾಂಡ ಹಾಗೂ ಬಳಿಕ ಸಂಭವಿಸಿದ ಗುಜರಾತ್ ಕೋಮುಗಲಭೆಗಳಲ್ಲಿ, ಅನುಕ್ರಮವಾಗಿ 59 ಮಂದಿ ಹಿಂದೂ ಪ್ರಯಾಣಿಕರು, 794 ಮುಸ್ಲಿಮರು, 254 ಹಿಂದುಗಳು ಮಡಿದರು. 223 ಮಂದಿ ನಾಪತ್ತೆಯಾಗಿದ್ದಾರೆಂದು ಹೇಳಲಾಯಿತು. ಗಾಯಗೊಂಡವರು 2548 ಮಂದಿ.

ಒಟ್ಟು 523 ಪೂಜಾಸ್ಥಳಗಳ ಮೇಲೆ ದಾಳಿ ನಡೆಯಿತು: 298 ದರ್ಗಾಗಳು, 205 ಮಸೀದಿಗಳು, 17 ದೇವಾಲಯಗಳು ಮತ್ತು 3 ಚರ್ಚ್‌ಗಳು. 61,000 ಮಂದಿ ಮುಸ್ಲಿಮರು ಮತ್ತು 10,000 ಮಂದಿ ಹಿಂದುಗಳು ತಮ್ಮ ಮನೆಮಾರು ತೊರೆದು ಪಲಾಯನಗೈದರು. 17,947

ಹಿಂದುಗಳನ್ನು ಮತ್ತು 3,616 ಮುಸ್ಲಿಮರನ್ನು ಸಂಭಾವ್ಯ ಗಲಭೆಕೋರರೆಂದು ಬಂಧಿಸಲಾಯಿತು (preventive arrests).

ಒಟ್ಟು 27,901 ಮಂದಿ ಹಿಂದುಗಳನ್ನು ಹಾಗೂ 7,651 ಮಂದಿ ಮುಸ್ಲಿಮರನ್ನು ಬಂಧಿಸಲಾಯಿತು. ಪೊಲೀಸರು ಸುಮಾರು 10,000 ರೌಂಡ್ ಗುಂಡುಗಳನ್ನು ಹಾರಿಸಿದಾಗ 93 ಮಂದಿ ಮುಸ್ಲಿಮರು ಮತ್ತು 77 ಮಂದಿ ಹಿಂದುಗಳು ಪೊಲೀಸ್ ಗುಂಡಿಗೆ ಬಲಿಯಾದರು. 919 ಮಂದಿ ಮಹಿಳೆಯರು ವಿಧವೆಯಾದರು. 616 ಮಕ್ಕಳು ಅನಾಥರಾದರು.

(ಮೂಲ: http://en.wikipedia.org/wiki/2002_Gujarat riots)

**ದತ್ತಾಂಶಗಳ ವಿಶ್ಲೇಷಣೆ**

ಮೇಲಿನ ಅಂಕಿಸಂಖ್ಯೆಗಳನ್ನು ವಿಶ್ಲೇಷಿಸಿದಾಗ ಕೆಲವು ಅಂಶಗಳು ಎದ್ದು ಕಾಣುತ್ತವೆ.

- ಯಾವುದೇ ಕೋಮುಗಲಭೆಯಲ್ಲಿ ಎಲ್ಲ ರೀತಿಯಲ್ಲೂ ಸಂತ್ರಸ್ತರಾಗುವವರಲ್ಲಿ ಬಹುಪಾಲು ಮುಸ್ಲಿಮರು.
- ಕೋಮುಗಲಭೆಗಳಲ್ಲಿ ಮಡಿದ ಗಂಡಸರು ಹಿಂದುಗಳಿರಲಿ ಅಥವಾ ಮುಸ್ಲಿಮರಿರಲಿ, ಗಲಭೆಯ ಬಳಿಕದ ಸಾಂಸಾರಿಕ ಗೋಳನ್ನು ಹೊರಬೇಕಾದವರು ಮಹಿಳೆಯರು.
- ಕೋಮುಗಲಭೆಗಳಲ್ಲಿ ಮನೆಗೆ ಕೊಳ್ಳಿ ಇಟ್ಟು ಇಡೀ ಕುಟುಂಬವೇ (ಗಂಡ ಮತ್ತು ಹೆಂಡತಿ) ಮಡಿದಾಗ ಬದುಕಿ ಉಳಿಯುವ ಮಕ್ಕಳು ಅನಾಥವಾಗಿ ಸಮಾಜದಲ್ಲಿ ಚಿಂತಾಜನಕವಾದ ಬದುಕು ಅವರದಾಗುತ್ತದೆ.
- ಪೊಲೀಸರು ಕೋಮುಗಲಭೆ ವೇಳೆ ಮುಸ್ಲಿಮರ ಬಗ್ಗೆ ತಾಳುವ ತಾಟಸ್ಥ್ಯ ಧೋರಣೆ, ಅವರನ್ನು ಶತ್ರುಗಳಂತೆ ಕಾಣುವ ಮನೋಭಾವವು ಅವರು ಕೂಡ ಹಿಂದೂ–ಮುಸ್ಲಿಂ ಮಾನಸಿಕ ವಿಭಜನೆಯಲ್ಲಿ ಜನಸಾಮಾನ್ಯರಿಗಿಂತ ಭಿನ್ನವಾದ ಮನೋಧರ್ಮ ಹೊಂದಿರುವುದಿಲ್ಲ ಎಂಬುದನ್ನು ಸೂಚಿಸುತ್ತದೆ.

- ದೇಶದಲ್ಲಿ ನಡೆದ ಕೋಮುಗಲಭೆಗಳ ಒಟ್ಟು ಸಂಖ್ಯೆ ಮತ್ತು ಪರಿಣಾಮಗಳನ್ನು ಗಮನಿಸುವಾಗ ಈ ದೇಶದ ಶಿಕ್ಷಣ ವ್ಯವಸ್ಥೆಯಲ್ಲಿ ಪಠ್ಯಕ್ರಮಗಳನ್ನು ಕೋಮುಗಲಭೆ ತಡೆಯುವಂತೆ ಹೇಗೆ ಬಳಸಿಕೊಳ್ಳಬಹುದು ಎಂಬುದು ದೇಶದ ಎಲ್ಲ ರಾಜ್ಯಗಳ ಎಲ್ಲ ಸರಕಾರಗಳೂ ತುರ್ತಾಗಿ ಗಮನಹರಿಸಬೇಕಾದ ಅಂಶ ಎನ್ನಬೇಕಾಗುತ್ತದೆ.

**ಪಠ್ಯಪುಸ್ತಕಗಳ ವಿಶ್ಲೇಷಣೆ (Analysis)**

ಅಧ್ಯಯನದ ಒಂದು ಮುಖ್ಯ ವಿಧಾನವಾಗಿ ಪಠ್ಯಪುಸ್ತಕಗಳ ಕೆಲವು ಪಠ್ಯಗಳನ್ನು ವಿಶ್ಲೇಷಣೆಗೊಳಪಡಿಸಲಾಯಿತು. ವಿಶ್ಲೇಷಣೆ ನಡೆಸುವಾಗ ಪಠ್ಯದಲ್ಲಿ ಬಳಸಲಾದ ಭಾಷೆಯನ್ನು ವಿಶೇಷವಾಗಿ ಗಮನದಲ್ಲಿರಿಸಿಕೊಳ್ಳಲಾಯಿತು. ಪಠ್ಯರಚನೆಕಾರರು/ಲೇಖಕರು ಹೇಳಿರುವುದನ್ನು ಹಾಗೂ ಹೇಳದೇ ಇರುವುದನ್ನು ಪಠ್ಯ ತಾನಾಗಿಯೇ ಹೇಳುವುದನ್ನು ಗುರುತಿಸುವುದಕ್ಕಾಗಿ ಮೇಲ್ಮೈ ಸಂರಚನೆ ಹಾಗೂ ಆಳ ಸಂರಚನೆಯ ಪರಿಕಲ್ಪನೆಯನ್ನು ಬಳಸಿಕೊಳ್ಳಲಾಯಿತು.

# ಅಧ್ಯಾಯ ನಾಲ್ಕು

# ಮಹಿಳೆಯರ ಸ್ಥಾನಮಾನ ಹಾಗೂ ಲಿಂಗ ನ್ಯಾಯ

**ಪೀಠಿಕೆ**

ಫ್ರೆಂಚ್ ತತ್ವಜ್ಞಾನಿ ಡೆಕಾರ್ಟ್ಸ್ "ನಾನು ಯೋಚಿಸುತ್ತೇನೆ, ಆದ್ದರಿಂದ ನಾನು ಇದ್ದೇನೆ." (I think, therefore I am) ಎನ್ನುತ್ತಾನೆ. ಆದರೆ ಈ 'ನಾನು' ಗಂಡೋ ಹೆಣ್ಣೋ ಎಂಬುದನ್ನವಲಂಬಿಸಿ ಯಾರು ಹೇಗೆ ಯೋಚಿಸುತ್ತಾರೆ ಮತ್ತು ಹೇಗೆ ಇರುತ್ತಾರೆ? ಅಥವಾ ಇರುವುದಿಲ್ಲ ಎನ್ನುವುದು ನಿರ್ಧಾರವಾಗುತ್ತದೆ. ಯೋಚಿಸುವ ಪ್ರಾಣಿ ಮನುಷ್ಯನೇ ಆದರೂ ಅದು ಗಂಡು ಪ್ರಾಣಿಯೋ ಹೆಣ್ಣು ಪ್ರಾಣಿಯೋ ಎನ್ನುವುದು ಮುಖ್ಯವಾಗುತ್ತದೆ. ಗಂಡು ಯೋಚಿಸುವ/ಯೋಜಿಸುವ ರೀತಿ ಮತ್ತು ಹೆಣ್ಣು ಯೋಚಿಸುವ/ಯೋಜಿಸುವ ರೀತಿ, ಗಂಡು-ಹೆಣ್ಣು ಭಾವಿಸುವ ರೀತಿ, ಗಂಡು-ಹೆಣ್ಣು ಬೇರೆ ಬೇರೆಯಾಗಿದ್ದಾಗ ಮತ್ತು ಜತೆಯಾಗಿದ್ದಾಗ ಪರಿಭಾವಿಸುವ ರೀತಿ – ಎಲ್ಲ ಭಿನ್ನ ಭಿನ್ನವಾಗಿರುತ್ತದೆ. ಆದ್ದರಿಂದ ಸಮಾಜ ಹಾಗೂ ಆರ್ಥಿಕ ಸಾಮಾಜಿಕ ಮೌಲ್ಯಗಳ ಬಗ್ಗೆ ಹೆಣ್ಣಿನ ದೃಷ್ಟಿಕೋನ ಗಂಡಿನ ದೃಷ್ಟಿಕೋನಕ್ಕಿಂತ ಭಿನ್ನವಾಗಿರುವುದು ಅನಿವಾರ್ಯ ಮತ್ತು ಅಗತ್ಯ ಕೂಡ.

ಈ ಯೋಚಿಸುವ, ಯೋಜಿಸುವ, ಪರಿಭಾವಿಸುವ ರೀತಿಯಲ್ಲಿ ಕಂಡುಬರುವ ಭಿನ್ನತೆ ಒಂದು ಸಿದ್ಧಾಂತದ ರೂಪ ಪಡೆದಿದ್ದು ಸ್ತ್ರೀವಾದಿ ಚಳವಳಿಯಲ್ಲಿ.

## ಮಹಿಳಾ ವಿಮೋಚನೆ, ಸ್ತ್ರೀವಾದ ಹಾಗೂ ಮಹಿಳಾ ಸಬಲೀಕರಣದ ಪರಿಕಲ್ಪನೆಗಳು

ಸ್ತ್ರೀವಾದವನ್ನು ಅತ್ಯಂತ ಸರಳವಾಗಿ ವಿವರಿಸುವುದಾದರೆ ಸ್ತ್ರೀವಾದ ಮಹಿಳೆಯರ ಹಕ್ಕುಗಳ ಪ್ರತಿಪಾದನೆ ಎನ್ನಬಹುದು. ಸ್ತ್ರೀವಾದಕ್ಕೆ ಯಾವುದೇ ಒಂದು ಅಂಗೀಕೃತವಾದ ವ್ಯಾಖ್ಯಾನವಿಲ್ಲ. ರಾಜಕೀಯ ಹಾಗೂ ಕಾನೂನಿನ ಹಕ್ಕುಗಳಿಗಾಗಿ ಚಳವಳಿ, ಸಮಾನ ಅವಕಾಶಗಳು, ಲೈಂಗಿಕ ಸ್ವಾಯತ್ತೆ ಮತ್ತು ಸ್ವ-ನಿರ್ಧಾರದ ಹಕ್ಕು (ಗರ್ಭಪಾತ, ಗರ್ಭನಿರೋಧಕ)ಗಳಿಗಾಗಿ ನಡೆದ ಚಳವಳಿಗಳೆಲ್ಲವೂ ಸ್ತ್ರೀವಾದದ ತೆಕ್ಕೆಯೊಳಗೆ ಬರುತ್ತವೆ. ಮಹಿಳೆಯರು ಪುರುಷರಿಗೆ ಅಧೀನರಾಗಿದ್ದರಿಂದ ಹಾಗೂ ಲಿಂಗಾಧಾರಿತ ತಾರತಮ್ಯ ಮತ್ತು

ಅಸಮಾನತೆಯಿಂದಾಗಿ ಸ್ತ್ರೀವಾದ ಹುಟ್ಟಿಕೊಂಡಿತು. ಬದಲಾವಣೆಗಾಗಿ ನಡೆಯುವ ಒಂದು ಸಾಮಾಜಿಕ ಚಳವಳಿಗೆ ಸಂಬಂಧಿಸಿದ ವಿಚಾರ (ideas)ಗಳ ಒಂದು ಗೊಂಚಲು ಸ್ತ್ರೀವಾದ ಎನ್ನಬಹುದು. ಆದರೆ ವಿಚಾರಗಳ ಮತ್ತು ಚಳವಳಿಯ ಸಂಬಂಧ ನಿಧಾನವಾಗಿ ಬದಲಾಗುತ್ತ ಬಂದಿದೆ. ಸ್ತ್ರೀವಾದವು ಎಂದೂ ಒಂದು ಸಂಘಟಿತ, ಕೇಂದ್ರಿತ (unified) ಚಳವಳಿಯಾಗಿರಲಿಲ್ಲ. ಆದರೆ ಅದು ಒಂದು ಉದ್ದೇಶಕ್ಕಾಗಿ (ಉದಾ: ಮಹಿಳೆಯರಿಗೆ ಮತದಾನದ ಹಕ್ಕು) ಒಂದಾಗುವ ವಿಭಿನ್ನ ಶಕ್ತಿಗಳಿಂದ ರೂಪುಗೊಂಡಿದೆ.

ಸ್ತ್ರೀವಾದಿ ಚಳವಳಿಯ ವಿಭಿನ್ನ ಹಂತಗಳಲ್ಲಿ ಅದು ಬೇರೆ ಬೇರೆ ಹಣೆಪಟ್ಟಿ ಅಂಟಿಸಿಕೊಂಡಿದೆ: ಮಹಿಳಾ ಮತದಾನ ಚಳವಳಿ, ಮಹಿಳಾ ವಿಮೋಚನೆ (emancipation), ಮಹಿಳಾ ಚಳವಳಿ, ಸ್ತ್ರೀವಾದ, ಸಾಮಾಜಿಕ ಸ್ತ್ರೀವಾದ, ಉಗ್ರಗಾಮಿ (radical) ಸ್ತ್ರೀವಾದ ಇತ್ಯಾದಿ.

ಏಕರೂಪತೆಯ (similarity) ನೆಲೆಯಲ್ಲಿ (ಮಹಿಳೆಯರು ಗಂಡಸರ ಹಾಗೆ ಮನುಷ್ಯರು, ಆದ್ದರಿಂದ ಅವರಿಗೂ ಗಂಡಸರಿಗೆ ಸಮಾನವಾದ ಹಕ್ಕುಗಳನ್ನು ನೀಡಲೇಬೇಕು), ಅಥವಾ ವ್ಯತ್ಯಾಸದ (difference) ನೆಲೆಯಲ್ಲಿ (ಮಹಿಳೆಯರು ಪುರುಷರಿಗಿಂತ ಭಿನ್ನ, ಆದ್ದರಿಂದ ಅವರಿಗೆ ತಮ್ಮನ್ನು ತಾವೇ ಪ್ರತಿನಿಧಿಸುವ ಹಕ್ಕನ್ನು ಕೊಡಲೇಬೇಕು) ಸ್ತ್ರೀವಾದದ ಪ್ರತಿಪಾದನೆ ನಡೆಯುತ್ತ ಬಂದಿದೆ.

1790–1860ರ ಅವಧಿಯಲ್ಲಿ ಸ್ತ್ರೀವಾದಿ ಚಳವಳಿ ಆರಂಭಗೊಂಡಿತು. ಅದು ಜ್ಞಾನೋದಯ (enlightment) ವಿಚಾರಗಳ ಪ್ರಾಬಲ್ಯವಿದ್ದ ಕಾಲ : ಮನುಷ್ಯನ ಹಕ್ಕುಗಳು, ವಿಚಾರ (reason), ನೈಸರ್ಗಿಕ ಕಾನೂನು ಮತ್ತು ಸಮಾನ ಹಕ್ಕುಗಳ ಕಾಲ ಅದು. ಫ್ರೆಂಚ್ ಮತ್ತು ಅಮೆರಿಕನ್ ಕ್ರಾಂತಿಗಳು – ಎರಡೂ ಕೂಡ ಮಹಿಳೆಯರ ಹಕ್ಕುಗಳಿಗೆ ಪ್ರಸ್ತುತವಾದ ವಿಷಯಗಳನ್ನೆತ್ತಿದವು. ಆ ವಾತಾವರಣದಲ್ಲಿ ಮೇರಿ ವೊಲ್‌ಸ್ಟೋನ್‌ಕ್ರಾಫ್ಟ್ ಎಂಬಾಕೆ 'ಎ ವಿಂಡಿಕೇಶನ್ ಆಫ್ ದಿ ರೈಟ್ಸ್ ಆಫ್ ವಿಮೆನ್' (1792) ಎಂಬ ಒಂದು ಬಹಳ ಮುಖ್ಯವಾದ ಸ್ತ್ರೀವಾದಿ ದಾಖಲೆಯನ್ನು ಬರೆದಳು. ಅಮೆರಿಕ ಮತ್ತು ಬ್ರಿಟನ್ – ಎರಡೂ ದೇಶಗಳಲ್ಲಿ

ಮೊದಮೊದಲು ಬಂದ ಮಹಿಳಾ ಕಾರ್ಯಕರ್ತರು ಮಹಿಳೆಯರಿಗೆ ವಿವಾಹ, ಶಿಕ್ಷಣ ಮತ್ತು ನೌಕರಿಯಲ್ಲಿ ಕಾನೂನುರೀತ್ಯಾ ಹಕ್ಕುಗಳನ್ನು ದೊರಕಿಸಲು ಶ್ರಮಿಸಿದರು.

19ನೆಯ ಶತಮಾನದಲ್ಲಿ ಗುಲಾಮ ಪದ್ಧತಿ ವಿರೋಧಿ ಚಳವಳಿಗಳ ಜತೆ ಸ್ತ್ರೀವಾದ ಸಂಬಂಧ ಹೊಂದಿತ್ತು. 1860–1930ರ ನಡುವೆ ಮಹಿಳಾ ಮತದಾನ ಹಕ್ಕಿಗಾಗಿ ನಡೆದ ಚಳವಳಿಯು ಬಹಳ ಭಿನ್ನ ಹಿನ್ನೆಲೆಯ ಮಹಿಳೆಯರನ್ನು ಒಂದಾಗುವಂತೆ ಮಾಡಿತು. ಮತದಾನದ ಹಕ್ಕಿಗಾಗಿ ಚಳವಳಿ ನಡೆದ ಬಳಿಕ ಸ್ತ್ರೀವಾದ ದಾಪುಗಾಲಿಟ್ಟಿತು.

1960ರ ದಶಕದಲ್ಲಿ ನಡೆದ ಮಹಿಳಾ ವಿಮೋಚನಾ ಚಳವಳಿ ವಿದ್ಯಾರ್ಥಿಗಳ ನೌಕರರ, ಕರಿಯರ ಮತ್ತು ಮಹಿಳೆಯರ ವ್ಯಾಪಕವಾದ ತೀವ್ರಗಾಮಿ ಪ್ರತಿಭಟನೆಯಿಂದಾಗಿ ಮೂಡಿಬಂತು. ಸಹೋದರತ್ವ ತತ್ವದ ನೆಲೆಯಲ್ಲಿ ಮಹಿಳೆಯರು ಒಗ್ಗಟ್ಟಾದಾಗ ಜನಾಂಗ ಅಥವಾ ವರ್ಗದ ಪರಿಕಲ್ಪನೆಗಳು ಅಮುಖ್ಯವಾದವು. ಮಧ್ಯಮ ವರ್ಗದ ಮಹಿಳೆಯರ ಕೃತಿಗಳಿಂದ ಕೂಡ ಸ್ತ್ರೀವಾದಿ ಚಟುವಟಿಕೆಗೆ ಪ್ರೇರಣೆ ದೊರಕಿತು. 1949ರಲ್ಲಿ ಫ್ರೆಂಚ್ ಭಾಷೆಯಲ್ಲಿ ಪ್ರಕಟವಾಗಿ 1953ರಲ್ಲಿ ಇಂಗ್ಲಿಷ್‌ಗೆ ಅನುವಾದಗೊಂಡ ಸೈಮನ್ ದ ಬೋವ್‌ಳ 'ದಿ ಸೆಕೆಂಡ್ ಸೆಕ್ಸ್', 1963ರಲ್ಲಿ ಪ್ರಕಟವಾದ ಬೆಟಿ ಫ್ರೀಡ್‌ಮನ್‌ಳ 'ದಿ ಫೆಮಿನಿನ್ ಮಿಸ್ಟಿಕ್', 1969ರಲ್ಲಿ ಪ್ರಕಟವಾದ ಕೇಟ್ ಮಿಲೆಟ್‌ಳ 'ಸೆಕ್ಷುವಲ್ ಪಾಲಿಟಿಕ್ಸ್' ಮತ್ತು 1970ರಲ್ಲಿ ಪ್ರಕಟವಾದ ಜರ್ಮನ್ ಗ್ರಿಯರ್‌ಳ 'ದಿ ಫಿಮೇಲ್ ಯೂನಕ್' ಇಲ್ಲಿ ಉಲ್ಲೇಖಾರ್ಹ. ಆದರೆ 1980ರ ದಶಕದಲ್ಲಿ, 'ಸ್ತ್ರೀವಾದಿ – ಉತ್ತರ ಯುಗ' ಆರಂಭಗೊಂಡಿತೆನ್ನಬಹುದು. ಫ್ರೀಡನ್ 1981ರಲ್ಲಿ 'ದಿ ಸೆಕೆಂಡ್ ಸ್ಟೇಜಸ್' ಮತ್ತು ಗ್ರಿಯರ್ 1984ರಲ್ಲಿ 'ಸೆಕ್ಸ್ ಆ್ಯಂಡ್ ಡೆಸ್ಟಿನಿ' ಎಂಬ ಕೃತಿಗಳನ್ನು ಪ್ರಕಟಿಸಿ ತಮ್ಮ ಮೊದಲ ಉಗ್ರ ನಿಲುವಿನಿಂದ ಹಿಂದೆ ಸರಿದದ್ದನ್ನು 'ಸ್ತ್ರೀವಾದಿ–ಉತ್ತರ ಯುಗ'ದ (post-feminist era) ಪ್ರಾತಿನಿಧಿಕ ಬೆಳವಣಿಗೆ ಎನ್ನಲಾಗಿದೆ (ಬುಲಕ್:1988)

ಮಹಿಳಾ ವಿಮೋಚನೆ, ಸ್ತ್ರೀವಾದ, ಮಹಿಳಾ ಸಬಲೀಕರಣ ಮತ್ತು ಈಗಿನ ರೂಪದಲ್ಲಿ ನಾವು ಕಾಣುವ ಭಾರತೀಯ ಸ್ತ್ರೀವಾದ ಪಾಶ್ಚಾತ್ಯ ಮಹಿಳೆಯರ ಪುರುಷ ವಿರೋಧಿ ಉಗ್ರ ಸ್ವರೂಪದ ಸಿದ್ಧಾಂತಗಳಿಂದ ಪ್ರಭಾವಿತವಾಗಿದೆ. ಸ್ತ್ರೀವಾದದಲ್ಲಿ ಪ್ರಮುಖವಾಗಿ ಕೇಳಿಬರುತ್ತಿರುವ ದನಿಗಳು ಕೂಡ ಇಂಗ್ಲಿಷ್ ಕಲಿತ ನಗರ ಪ್ರದೇಶದ ಮಹಿಳೆಯರ ದನಿಗಳು. ಇಲ್ಲಿ ಇಂಗ್ಲಿಷ್ ಭಾಷೆ

ಅಧಿಕಾರ ಗಳಿಕೆಯ, ಸ್ತ್ರೀ ಸಬಲೀಕರಣದ ಒಂದು ಸಾಧನವಾಗಿರುವುದು ಇದಕ್ಕೆ ಕಾರಣವಾಗಿರಬಹುದು.

1970ರ ದಶಕದಲ್ಲಿ ಅಮೆರಿಕಾ, ಇಂಗ್ಲಂಡಿನಲ್ಲಿ ತನ್ನ ಇರವನ್ನು ರುಜುವಾತುಪಡಿಸಿದ ಪಾಶ್ಚಾತ್ಯ ಸ್ತ್ರೀವಾದ ಆರಂಭದ ಹಂತದಲ್ಲಿ ಹೆಣ್ಣು, ಪುರುಷರಿಗೆ ಆಕರ್ಷಣೆಯ, ರಂಜನೆ/ಭೋಗಗಳ ವಸ್ತುವಾಗಬಾರದೆಂಬ ನೆಲೆಯಲ್ಲಿ ಉಗ್ರರೂಪ ಪಡೆಯಿತು. ಒಳ ಉಡುಪುಗಳನ್ನು ಹಾಗೂ ಎದೆಕಟ್ಟುಗಳನ್ನು ಸಾರ್ವಜನಿಕವಾಗಿ ಸುಡುವ ಕ್ರಿಯೆಯಲ್ಲಿ ಇದು ವ್ಯಕ್ತವಾಗುತ್ತಿತ್ತು. 1995ರಲ್ಲಿ ಅಮೆರಿಕಾದ ಮರುಲಾಂಡಾ ಎಂಬಾಕೆ ಪ್ರಯಾಣಿಕರಿಂದ ಕಿಕ್ಕಿರಿದ ಟ್ರೈನ್‌ನಲ್ಲಿ ಗಂಡಸರಂತೆ, ತನ್ನ ಎದೆ ತೆರೆದು ನಿಂತು 'ಸ್ತನ ವಿಮೋಚನಾ ಚಳವಳಿ' ನಡೆಸುವ ಹಂತಕ್ಕೂ ಹೋದಳು. 'ಸೆಕ್ಸುವಲ್ ಪಾಲಿಟಿಕ್ಸ್' ಕೃತಿ ಖ್ಯಾತಿಯ ಕೇಟ್ ಮಿಲೆಟ್ ಮತ್ತು 'ದಿ ಫಿಮೇಲ್ ಯೂನಕ್' ಖ್ಯಾತಿಯ ಜರ್ಮೇನ್ ಗ್ರಿಯರ್ ಮತ್ತು 'ಅಂತಾರಾಷ್ಟ್ರೀಯ ಮಹಿಳಾ ಚಳವಳಿಯ ಅತ್ಯಂತ ಥಳಕು ಬಳುಕಿನ ಹಾಗೂ ವಿಶ್ವವ್ಯಾಪಿ ಮನ್ನಣೆಯ ಮುಖ' (ಅಮ್ಮು ಜೋಸೆಫ್:2007) ಎಂದು ಪರಿಗಣಿಸಲ್ಪಟ್ಟಿರುವ ಗ್ಲೋರಿಯಾ ಸ್ಟೀನಮ್ ಸ್ತ್ರೀವಾದಿಗಳ ಆರಾಧ್ಯಮೂರ್ತಿಗಳಾದರು.

ಆದರೆ ಕ್ರಮೇಣ ಈ ಉಗ್ರತೆ ತುಸು ಕಡಿಮೆಯಾಯಿತು. ಪಾಶ್ಚಾತ್ಯ ಸ್ತ್ರೀವಾದಿ ಚಳವಳಿಯ ಬೈಬಲ್ ಎನ್ನಬಹುದಾದ 'ದಿ ಫಿಮೇಲ್ ಯೂನಕ್'ನ ಲೇಖಕಿ ಜರ್ಮೇನ್ ಗ್ರಿಯರ್‌ಗಳಂತಹ ಸ್ತ್ರೀವಾದಿಗಳು ಹೆಣ್ಣು ತಾಯಿಯಾಗುವುದು ಬಹಳ ಮುಖ್ಯ, ಗಂಡು ಮತ್ತು ಹೆಣ್ಣು ಕೂಡಿ ನಡೆಸುವ ಕುಟುಂಬ ಅಗತ್ಯ ಎನ್ನುವಷ್ಟರ ಮಟ್ಟಿಗೆ ಮೃದುವಾದರು. ಸ್ತ್ರೀವಾದಿಗಳ ಬಗ್ಗೆ ಇರುವ ಜನಪ್ರಿಯ ಪಡಿಯಚ್ಚು ಅಭಿಪ್ರಾಯ (stereotypes)ಗಳನ್ನು (ಉದಾಹರಣೆಗೆ, ಸ್ತ್ರೀವಾದಿಯು ಪುರುಷದ್ವೇಷಿ) ಸತತವಾಗಿ ತಿರಸ್ಕರಿಸುತ್ತ ಬಂದ ಗ್ಲೋರಿಯಾ ಸ್ಟೀನಮ್ ತನ್ನ 66ರ ಹರೆಯದಲ್ಲಿ, 2000ನೇ ಇಸವಿಯಲ್ಲಿ, ವಿವಾಹವಾಗುವ ನಿರ್ಧಾರ ಕೈಗೊಂಡಳು. ಈಕೆ ತನ್ನ ಯೌವ್ವನದ ದಿನಗಳಲ್ಲಿ ವಿವಾಹ ವ್ಯವಸ್ಥೆ (institution)ಯನ್ನು ವಿರೋಧಿಸಿ ಆಡಿದ್ದ ಮಾತುಗಳನ್ನು ಆಕೆಗೆ ಜ್ಞಾಪಿಸಿದ ಮಾಧ್ಯಮಗಳು ತಮ್ಮ ಕ್ರೋಧ ವ್ಯಕ್ತಪಡಿಸಿದವು. ತನ್ನ 72ರ ಹರೆಯದಲ್ಲಿ, ಭಾರತಕ್ಕೆ ಬಂದಿದ್ದ ಈಕೆಯ ನಿಲುವಿನಲ್ಲಿ ಆದ ಬದಲಾವಣೆಗೆ ಈಕೆಯ ಈ ಕೆಳಗಿನ ಮಾತುಗಳು ಸಾಕ್ಷಿಯಾಗಬಲ್ಲವು:

"ಶಸ್ತ್ರಾಸ್ತ್ರ ನಿಯಂತ್ರಣಕ್ಕಿರುವ ಏಕೈಕ ಮಾರ್ಗವೆಂದರೆ ನಾವು ನಮ್ಮ ಮಕ್ಕಳನ್ನು ಹೇಗೆ ಬೆಳೆಸುತ್ತೇವೆ ಎಂಬುದು. ನಮ್ಮ ಮನೆಗಳು ಹಿಂಸೆಯನ್ನು ಸಹಜಸ್ಥಿತಿಗೆ ತಂದರೆ (normalise) ಬೀದಿಗಳಲ್ಲಿ ಮತ್ತು ವಿದೇಶ ನೀತಿಯಲ್ಲಿ ಅದು (ಹಿಂಸೆ) ನಾರ್ಮಲ್ ಆಗಿರುತ್ತದೆ. ರಾಜ್ಯ ಶಾಸ್ತ್ರದ ಪ್ರತಿಯೊಂದು ಕೋರ್ಸ್ ಕೂಡ ಯಾಕೆ ಕುಟುಂಬ ಮತ್ತು ಮಕ್ಕಳನ್ನು ಸಾಕಿ ಬೆಳೆಸುವ ವಿಷಯದಿಂದ ಆರಂಭವಾಗುವುದಿಲ್ಲವೆಂದು ನನಗೆ ಯಾವತ್ತೂ ಅರ್ಥವಾಗಿಲ್ಲ. ಪ್ರಜಾಸತ್ತಾತ್ಮಕವಾದ ಕುಟುಂಬಗಳಿಲ್ಲದೇ ಹೋದಲ್ಲಿ ನಾವು ಎಂದಿಗೂ ಪ್ರಜಾಸತ್ತಾತ್ಮಕ ಸಮಾಜಗಳನ್ನು ಪಡೆಯಲಾರೆವು. ಸಹೋದರಿಯೊಬ್ಬಳು ಒಬ್ಬ ಸಹೋದರನಿಗಿಂತ ಕೀಳು ಎಂದು ನಂಬುವ ಹಾಗೆ ಒಂದು ಮಗುವನ್ನು ಬೆಳೆಸಿದರೆ, ತಮ್ಮ 'ಪುರುಷತ್ವ'ವನ್ನು/ಗಂಡಸುತನವನ್ನು ಸಾಬೀತು ಪಡಿಸಲಿಕ್ಕಾಗಿ ತಾವು ತಮ್ಮ ಹೆಂಡಂದಿರನ್ನು ನಿಯಂತ್ರಣದಲ್ಲಿಟ್ಟುಕೊಳ್ಳಬೇಕು ಮತ್ತು ಅವರನ್ನು ಹಿಂಸಾತ್ಮಕವಾಗಿ ನಡೆಸಿಕೊಳ್ಳಬೇಕು ಎಂದು ನಂಬುವ ಹಾಗೆ ಗಂಡಸರನ್ನು ನಾವು ಬೆಳೆಸಿದರೆ, ಆಗ ನಾವು ಜನಾಂಗಗಳ, ವರ್ಗಗಳ ಮತ್ತು ಜಾತಿಗಳ ಪ್ರಾಬಲ್ಯದ ಒಂದು ಮಾದರಿ (model)ಯನ್ನು ಸೃಷ್ಟಿಸಿದ ಹಾಗಾಗುತ್ತದೆ: ಯಾವ ಪುರುಷತ್ವವನ್ನು ಆಧರಿಸಿ ಮಿಲಿಟರಿವಾದ (militarism) ಮತ್ತು ಭಯೋತ್ಪಾದನೆ ನಿಂತಿದೆಯೋ ಆ ಪುರುಷತ್ವದ ಪಂಥವನ್ನು (cult of masculinity) ನಾವು ಸೃಷ್ಟಿಸಿದ ಹಾಗಾಗುತ್ತದೆ".

ಭಾರತದಲ್ಲಿ ಸ್ತ್ರೀವಾದ ಪಾಶ್ಚಾತ್ಯ ಸಮೂಹ ಮಾಧ್ಯಮ ಮತ್ತು ಸಂಸ್ಕೃತಿಯಿಂದ ಪ್ರಭಾವಿತವಾಗಿ ಈ ನೆಲಕ್ಕೆ ಹೊಂದಿಕೊಳ್ಳದ ರೀತಿಯಲ್ಲಿ ಬೆಳೆಯುತ್ತಿದೆಯೇ? ಬೆಳೆದಿದೆಯೇ? ಎಂಬ ಆತಂಕ ಕೆಲವರನ್ನು ಕಾಡಿದೆ. ಉದಾಹರಣೆಗೆ, 1995ರಲ್ಲಿ ಉಡುಪಿಯಲ್ಲಿ ನಡೆದ ದಕ್ಷಿಣ ಕನ್ನಡ ಜಿಲ್ಲಾ ಎಂಟನೆಯ ಸಾಹಿತ್ಯ ಸಮ್ಮೇಳನದ ಅಧ್ಯಕ್ಷೆ, ಲೇಖಕಿ ಶ್ರೀಮತಿ ಪ್ರೇಮಾ ಭಟ್ ತಮ್ಮ ಅಧ್ಯಕ್ಷ ಭಾಷಣದಲ್ಲಿ ಈ ಆತಂಕವನ್ನು ವ್ಯಕ್ತಪಡಿಸಿ ಸ್ತ್ರೀವಾದಿಗಳಿಗೆ ಅಪ್ರಿಯವಾಗಬಹುದಾದ ಕೆಲವು ಪ್ರಶ್ನೆಗಳನ್ನೆತ್ತಿದ್ದರು. "ಸಮಾನತೆಯ ಪ್ರಶ್ನೆ ಇವತ್ತು ವಿಶ್ವದಾದ್ಯಂತ ಮುಂಚೂಣಿಯಲ್ಲಿರುವುದನ್ನು ಕಾಣುತ್ತೇವೆ. ಪಾಶ್ಚಾತ್ಯ ಸಂಸ್ಕೃತಿಯಿಂದ ಎರವಲಾಗಿ ಬಂದ ಈ ಚಳವಳಿಯನ್ನು ಸ್ವೀಕರಿಸುವಲ್ಲಿ ನಾವು ಹಿಂದೆಬಿದ್ದಿಲ್ಲ. ಪತಿ ಪತ್ನಿಯರನ್ನು ಸ್ವತಂತ್ರ ವ್ಯಕ್ತಿಗಳನ್ನಾಗಿ ರೂಪಿಸಿ, ಪ್ರತ್ಯೇಕ ಘಟಕಗಳನ್ನಾಗಿ ವಿಭಜಿಸಿದ್ದು ಪಾಶ್ಚಾತ್ಯ ಸಂಸ್ಕೃತಿ. ಇವತ್ತು ಇದು ನಗರವಾಸಿಗಳಾದ ಸುಶಿಕ್ಷಿತ

ಮತ್ತು ವಿದ್ಯಾವಂತ ಮಹಿಳೆಯರನ್ನು ಕಾಡಿದ ಹಾಗೆ, ಗ್ರಾಮೀಣ ಜನರನ್ನು ಕಾಡಿದ ಹಾಗೆ ಕಾಣುವುದಿಲ್ಲ" (ಪ್ರೇಮಾ ಭಟ್ 1995).

ಪಾಶ್ಚಾತ್ಯ ಸಂಸ್ಕೃತಿ ಪತಿ ಪತ್ನಿಯರನ್ನು ಸ್ವತಂತ್ರ ವ್ಯಕ್ತಿಗಳನ್ನಾಗಿ ರೂಪಿಸಿ, ಪ್ರತ್ಯೇಕ ಘಟಕಗಳನ್ನಾಗಿ ವಿಭಜಿಸಿದ್ದರ ಹಿಂದೆ ಐತಿಹಾಸಿಕ ಹಾಗೂ ಸಾಮಾಜಿಕ ಕಾರಣಗಳಿದ್ದವು. ಔದ್ಯೋಗಿಕ ಕ್ರಾಂತಿಯ ಕಹಳೆಯೂದಿದ ಬ್ರಿಟನ್‌ನಲ್ಲಿ ಕೂಡ ಮಹಿಳೆಯರು ಮತದಾನದ ಹಕ್ಕಿಗಾಗಿ ಎಷ್ಟೊಂದು ದೀರ್ಘವಾದ ಹೋರಾಡ ನಡೆಸಬೇಕಾಯಿತೆನ್ನುವುದನ್ನು ಮರೆಯಲಾಗದು. ಮಹಿಳೆಯರಿಗೆ ಮತದಾನದ ಹಕ್ಕು ನೀಡುವುದಕ್ಕೆಯೇ ತನ್ನನ್ನು ಲಿಬರಲ್ ಎಂದು ಕರೆದುಕೊಳ್ಳುವ ಬ್ರಿಟನ್ ಶತಮಾನಗಳ ಕಾಲ ಹಿಂದು ಮುಂದು ನೋಡಿತೆಂದ ಮೇಲೆ ಸಮಾನ ನೌಕರಿಗೆ ಸಮಾನ ವೇತನ, ಸಮಾನ ಭತ್ಯೆ ಇತ್ಯಾದಿ ಸವಲತ್ತುಗಳಿಗಾಗಿ ಮಹಿಳೆಯರು, ಪತ್ನಿಯರು ದೀರ್ಘಕಾಲ ಪ್ರತ್ಯೇಕ ಘಟಕಗಳಾಗಿ ಹೋರಾಡಬೇಕಾಗಿ ಬಂದದ್ದರಲ್ಲಿ ಆಶ್ಚರ್ಯವಿಲ್ಲ. ಆದರೆ ಎಲ್ಲ ಕ್ರಾಂತಿ/ಚಳವಳಿಗಳಲ್ಲಿ ಅಂತರ್ಗತವಾಗಿರುವ ವಿರೋಧಾಭಾಸವೋ ಏನೋ, ಒಮ್ಮೆ ಅವುಗಳು ಯಶಸ್ವಿಯಾದ ಬಳಿಕ ಚಳವಳಿ ನಿರೀಕ್ಷಿಸದಿದ್ದ ಬೆಳವಣಿಗೆಗಳು ಕಾಣಿಸಿಕೊಳ್ಳುತ್ತವೆ. ಸಮಾನತೆಗಾಗಿ ಮಹಿಳೆಯರು ನಡೆಸಿದ ಚಳವಳಿಗಳು ಕೂಡ ಒಂದು ಮಟ್ಟದಲ್ಲಿ ಯಶಸ್ವಿಯಾದ ಬಳಿಕ ಅನಿರೀಕ್ಷಿತ ಹಾಗೂ ಆಘಾತಕಾರಿ ಬೆಳವಣಿಗೆಯೊಂದು ಕಾಣಿಸಿಕೊಂಡಿತು: ಕುಟುಂಬ ಜೀವನದ ಪತನ, ಕುಟುಂಬ ಜೀವನದ ನಾಶ (disintegration of the family).

ಕುಟುಂಬದ ನಾಶ ಸಮಾಜದಲ್ಲಿ ಎಂತಹ ಗಂಭೀರ ಪರಿಣಾಮಗಳಿಗೆ ಕಾರಣವಾಗುತ್ತದೆಂದು ತಿಳಿಯಬೇಕಾದರೆ ಪಾಶ್ಚಾತ್ಯ ಜಗತ್ತಿನ ಕಳೆದ ಕೆಲವು ದಶಕಗಳ ಇತಿಹಾಸದತ್ತ ಕಣ್ಣು ಹಾಯಿಸಬೇಕು. ರಶ್ಯ, ರುಮೇನಿಯಾ, ಚೆಚನ್ಯಾ – ದೇಶ ಯಾವುದೇ ಇರಲಿ, ಒಂದು ರಾಜಕೀಯ ಉತ್ಪಾತ ಸಂಭವಿಸಿದಾಗ ಸಾವಿರಾರು ಮಕ್ಕಳು ಬೀದಿಪಾಲಾಗುತ್ತವೆ. ಆ ಮಕ್ಕಳು ತಮ್ಮ ತಾಯಿಯಿಂದ ಅಥವಾ ತಂದೆಯಿಂದ ಪರಿತ್ಯಕ್ತರಾದವರು. ಕುಟುಂಬದ ನಾಶವನ್ನು ತಡೆಯದೆ ಇದ್ದಲ್ಲಿ ಆಧುನಿಕ ಜಗತ್ತಿನ ಹಲವಾರು ಅನಿಷ್ಟಗಳನ್ನು ದೂರಮಾಡುವುದು ಅಸಾಧ್ಯವಾಗಬಹುದು.

ಈ ಹಿನ್ನೆಲೆಯಲ್ಲಿ ಲೇಖಕಿ ಪ್ರೇಮಾ ಭಟ್‌ರವರ ಮಾತು ಕರ್ನಾಟಕದಲ್ಲಿ ಸ್ತ್ರೀವಾದದ ನೆಲೆ ಮತ್ತು ಶಿಕ್ಷಣದಲ್ಲಿ ಬಳಕೆಯಾಗುವ ಪಠ್ಯಪುಸ್ತಕಗಳಲ್ಲಿ ಚಿತ್ರಿತವಾಗುವ ಹೆಣ್ಣಿನ ಪಡಿಯಚ್ಚನ್ನು ಅರ್ಥೈಸಲು ಸಹಾಯವಾದೀತು: "ಪರಸ್ಪರ ಚರ್ಚೆಯ ಮೂಲಕ ವ್ಯಕ್ತಿಗತ ನೆಲೆಯಲ್ಲಿ ಪ್ರಾರಂಭವಾದ ಮಹಿಳಾ ಪ್ರತಿಭಟನೆಗಳು, ಸಮೂಹ ಮಾಧ್ಯಮಗಳ ಮೂಲಕ ಸಂಘಟನೆಗೊಂಡು ಇವತ್ತು ತೀವ್ರರೂಪತಾಳುತ್ತಲಿವೆ. ಸಮಾನತಾವಾದದ ನೆಲೆಯಲ್ಲಿ ಸ್ತ್ರೀವಾದಿ ನಿಲುವು ಇಂದು ವ್ಯಾಪಕವಾಗಿ ಚರ್ಚೆಗೆ ಒಳಗಾಗಿರುವ ವಿಷಯ. ಒಳ್ಳೆಯ ಗೃಹಿಣಿಯರನ್ನು ರೂಪಿಸಬೇಕಾದ ಶಿಕ್ಷಣ ಇವತ್ತು ಗೃಹಿಣಿತ್ವವನ್ನೇ ವಿರೋಧಿಸುವ ಹಂತಕ್ಕೆ ಬಂದು ತಲುಪುತ್ತಿದೆ. ಈ ನಿಲುವು ಸುಶಿಕ್ಷಿತರಾದ ನಗರವಾಸಿ ಮಹಿಳೆಯರಲ್ಲಿ ಪ್ರಬಲವಾಗಿದ್ದು, ಅವರಿಗೆ ಅಧಿಕಾರದಲ್ಲಿ ಪ್ರತಿಷ್ಠೆ, ಪ್ರಚಾರ ಗಿಟ್ಟಿಸಿಕೊಳ್ಳುವುದೇ ಮುಖ್ಯ ಉದ್ದೇಶವಾಗಿರುವಂತೆ ಕಾಣುತ್ತದೆ. ಮಹಿಳೆ ತನ್ನ ಉನ್ನತಿಯನ್ನು ತಾನೇ ಶ್ರಮಪಟ್ಟು ಸಂಪಾದಿಸಿಕೊಳ್ಳಬೇಕೇ ಹೊರತು, ತನ್ನ ಅಧಃಪತನಕ್ಕೆ ತಾನೇ ಹೊಣೆಯಾಗಬಾರದು. ದ್ವಿತೀಯ ಸ್ಥಾನಕ್ಕೆ ಮಹಿಳೆ ತಳ್ಳಲ್ಪಟ್ಟಿದ್ದರೆ, ಅದು ತಾನಾಗಿ ತಂದುಕೊಂಡ ಸ್ಥಿತಿ. ತನ್ನ ಬದುಕಿನ ನಿರ್ಣಯ ಮಾಡುವ ಸ್ಥಿತಿಯನ್ನು ಪುರುಷನಿಂದ ಅವಳು ಎರವಲು ಪಡೆಯಬೇಕಾಗಿಲ್ಲ. ಬೇಡಿ ಮತ್ತು ತಸ್ಲಿಮಾಳಂತಹ ಶಕ್ತಿ ಪ್ರತಿಯೊಬ್ಬ ಮಹಿಳೆಯರಲ್ಲಿಯೂ ಇದೆ."

ಹಲವು ಧಾರಾವಾಹಿ ಕಾದಂಬರಿಗಳ ಮೂಲಕ ಕನ್ನಡ ನಾಡಿನ ಸಾವಿರಾರು ಮಹಿಳೆಯರನ್ನು ತಲಪಿರುವ ಕನ್ನಡ ಲೇಖಕಿಯೊಬ್ಬರ ಈ ಮಾತುಗಳನ್ನು ಕರ್ನಾಟಕದ ಸಾಹಿತ್ಯ ಹಾಗೂ ಸಾಹಿತ್ಯೇತರ ಪಠ್ಯಗಳಲ್ಲಿ ಕಂಡು ಬರುವ ಮಹಿಳೆಯ ಚಿತ್ರಣದ ವಿಶ್ಲೇಷಣೆಗೆ ಪೀಠಿಕೆಯಾಗಿ ಚರ್ಚಿಸಲಾಗಿದೆ. ಈ ಲೇಖಕಿಯ ಪ್ರಕಾರ ಮಹಿಳೆಯರು ತಾವಾಗಿಯೇ ದ್ವಿತೀಯ ಸ್ಥಾನಕ್ಕೆ ತಮ್ಮನ್ನು ತಂದುಕೊಂಡಿದ್ದಾರೆ. ಆದರೆ ಇದು ಒಪ್ಪತಕ್ಕವಾದವೇ? ಪುರುಷ ಪ್ರಧಾನ ಸಮಾಜ ಹಾಗೂ ಗಂಡು ನಿಯಮಗಳು, ಮತ್ತು ಮಹಿಳೆಯನ್ನು ನಾನಾ ವಿಧದ ಶಾಸ್ತ್ರವಿಧಿ, ಆಚರಣೆ ಎಂಬ ಸಂಕೋಲೆಗಳಿಂದ ಬಿಗಿದ ಸಮಾಜ ಅವಳನ್ನು ಅಧಃಪತನಕ್ಕೆ ತಳ್ಳಲಿಲ್ಲವೆ? ಈಗಲೂ ತಳ್ಳುತ್ತಿಲ್ಲವೆ? ಮಹಿಳೆ ಶಕ್ತಳು, ಸಬಲಳು ಎಂಬ ವಾದ ಕೇಳಿ ಬರುತ್ತಿರುವಾಗಲೇ ಭಾರತವೂ ಸೇರಿದಂತೆ ವಿಶ್ವದ ಬಹುಪಾಲು ದೇಶಗಳಲ್ಲಿ ವೇಶ್ಯಾವೃತ್ತಿಯನ್ನು ಉಚ್ಚಾಟಿಸುವುದು ಇನ್ನೂ ಸಾಧ್ಯವಾಗಿಲ್ಲ. ಹೊಟ್ಟೆಪಾಡಿಗಾಗಿ ಹೆಣ್ಣು ತನ್ನ ದೇಹ ಮಾರುವುದಕ್ಕಿಂತ ಹೆಚ್ಚು ಆತ್ಮ ಗೌರವ ನಾಶಕವಾದದ್ದು

ಇನ್ನೊಂದು ಇರಲಾರದು. ತಮ್ಮ ಬದುಕಿನ ನಿರ್ಣಯ ಮಾಡುವ ಸ್ವಾತಂತ್ರ್ಯ ಇವತ್ತು ಬಹಳ ಮಂದಿ ಮಹಿಳೆಯರಿಗೆ ಇಲ್ಲ. ಕೆಲವು ಶಿಕ್ಷಿತ ಹಾಗೂ ನಗರವಾಸಿ ಮಹಿಳೆಯರನ್ನು ಹೊರತುಪಡಿಸಿದರೆ ಬೆರಳೆಣಿಕೆಯಷ್ಟು ಮಂದಿ ಮಹಿಳೆಯರು ಮಾತ್ರ ತಮ್ಮ ಬದುಕಿನ ನಿರ್ಣಯ ಮಾಡಬಲ್ಲರು. ಅವರಿಗಾಗಿ ಅವರ ಕುಟುಂಬ, ಸಮಾಜದ ಕಟ್ಟುಪಾಡುಗಳೇ ನಿರ್ಣಯ ಮಾಡುತ್ತವೆ. ಆದರೂ ಮಹಿಳೆಯರನ್ನು ಕಾಡುವ ಸಮಸ್ಯೆಗಳಿಗೆ ಪ್ರೇಮಾ ಭಟ್ ನೀಡುವ ವಿಶ್ಲೇಷಣೆಯಲ್ಲಿ ಸತ್ಯಾಂಶವಿದೆ:

ಆತ್ಮಶಕ್ತಿ ವ್ಯಯವಾದಾಗ ದುಷ್ಟಶಕ್ತಿಗಳು ಪ್ರಹಾರ ಮಾಡುವುದುಂಟು. ಆದರೆ ಅದು ಪುರುಷರಿಂದಲೇ ಆಗಬೇಕೆಂದಿಲ್ಲ. ಸ್ವಭಾವದಲ್ಲಿ ಪ್ರಬಲವಾದ ಮಹಿಳೆಯರಿಂದ ದುರ್ಬಲ ಮನಸ್ಸಿನ ಮಹಿಳೆಯರ ಮೇಲೆ ಆಗುತ್ತಿರುವ ಶೋಷಣೆಯ ವಿರುದ್ಧ ಮಹಿಳೆಯರು ದನಿ ಎತ್ತಬಾರದೇಕೆ? ಇವತ್ತು ವರದಕ್ಷಿಣೆಯ ಕುರಿತು ಆಗುತ್ತಿರುವಂತೆ ನಾವು ಪುರುಷರಿಂದಲ್ಲ, ಮಹಿಳೆಯರಿಂದಲೇ ಎಂದು ಬೇರೆ ಹೇಳಬೇಕಿಲ್ಲ. ಒಬ್ಬ ಮಹಿಳೆ ಮತ್ತೊಬ್ಬ ಮಹಿಳೆಯನ್ನು ಗೌರವಿಸದ ಹೊರತು ಮಹಿಳಾಭಿವೃದ್ಧಿ ಕನಸಿನ ಗಂಟೇ ಸರಿ..... ಸ್ತ್ರೀವಾದಿ ನಿಲುವನ್ನು ಪ್ರಗತಿಪರ ಧೋರಣೆ ಎಂದು ಭಾವಿಸಿದ ಕೆಲ ಮಹಿಳೆಯರು ಸಚ್ಚಾರಿತ್ರ್ಯಕ್ಕೆ, ಶೀಲಕ್ಕೆ ಮಹತ್ವ ಕೊಡುತ್ತಿಲ್ಲ. ಪುರುಷನ ನೈತಿಕ ಮಟ್ಟ ಪ್ರಶ್ನಿಸುವ ಮಹಿಳೆಯರು ಇಂದು ಅವನ ಹೆಜ್ಜೆಗೆ ಸರಿ ಹೆಜ್ಜೆ ಹಾಕುತ್ತಿಲ್ಲವೆ? ಕುಟುಂಬದ ಸಂರಕ್ಷಣೆ ಮಾಡಬೇಕಾದವಳು ಸ್ತ್ರೀ ...... ಪ್ರಚಾರ ಮಾಧ್ಯಮಗಳು ಇವತ್ತು ನಮ್ಮ ಮಕ್ಕಳನ್ನು ಪೀಡಿಸುತ್ತಿವೆ. ರೂಪದರ್ಶಿಯಾಗುವುದರಿಂದ ತಮ್ಮ ಹೆಗ್ಗಳಿಕೆ ಹೆಚ್ಚುತ್ತದೆಂದು ಅನೇಕ ಹುಡುಗಿಯರು ಭಾವಿಸಿರುವಂತಿದೆ. ಸೌಂದರ್ಯ ಸ್ಪರ್ಧೆಗಳು ಮಹಿಳೆಯರನ್ನು ಖಂಡಿತಕ್ಕೂ ಉತ್ತುಂಗಕ್ಕೆ ಏರಿಸುವುದಿಲ್ಲ. ಸೌಂದರ್ಯ ಸ್ಪರ್ಧೆಗಳಿಂದ ರೂಪದರ್ಶಿಯರ ಅಂಗಾಂಗ ಪ್ರದರ್ಶನವಾಗುತ್ತದೆ. ಇಂಥ ಮೌಲ್ಯಗಳಲ್ಲೇ ಹೆಣ್ಣಿನ ಶೋಷಣೆ ಅಡಗಿದೆ ಎನ್ನುವುದನ್ನು ಮರೆಯಬಾರದು. ಪುರುಷನೊಂದಿಗೆ ಸಮಾನತೆ ಬಯಸುವ ನಾವಿಂದು ಉದ್ಯೋಗದಲ್ಲಿ ಮೀಸಲಾತಿ ದೊರಕಿದಾಗ ಮಾತನಾಡದೆ ಸುಮ್ಮನಿದ್ದೇವೆ. ಈ ಮೀಸಲಾತಿಯಿಂದ ಮುಂದೆ ನಮ್ಮ ಗಂಡುಮಕ್ಕಳಿಗೆ ಉದ್ಯೋಗಾವಕಾಶಗಳು ಸಿಗದೆ ಹೋಗಬಹುದು. ಆಗ ಸಮಸ್ಯೆಯ ಮತ್ತೊಂದು ಮುಖವನ್ನು ಎದುರಿಸಬೇಕಾದವರು ನಾವೇ ಹೊರತು ಪುರುಷರಲ್ಲ. ಬಸ್ಸಿನಲ್ಲಿ ಓಡಾಡುವಾಗ

ನಮಗೆ ಕೂಡಲು ಪ್ರತ್ಯೇಕ ಆಸನ ಬೇಕು. ಆಗ ಸಮಾನತೆಯ ಬಗ್ಗೆ ನಾವು ಯೋಚಿಸುವುದಿಲ್ಲ.... ಒಂದು ಮನೆಗೆ ಒಬ್ಬರು ಯಜಮಾನರಾಗಬೇಕೇ ಹೊರತು ಇಬ್ಬರು ಆಗಲು ಸಾಧ್ಯವಿಲ್ಲ. ಪರಸ್ಪರ ಹೊಂದಾಣಿಕೆಯೇ ಬದುಕು....

ಈ ವಾದದಲ್ಲಿ ಕಾಣಿಸುವ ಸಂಪ್ರದಾಯ ಶರಣತೆಯ ಜತೆ ರಾಜಿ (compromise) ಮತ್ತು ಯಥಾಸ್ಥಿತಿಯನ್ನು ಸಮರ್ಥಿಸುವ ಜಾಣತನದ ಬಗ್ಗೆ ಕಟ್ಟಾ ಸ್ತ್ರೀವಾದಿಗಳು ಆಕ್ಷೇಪ ಎತ್ತಬಹುದಾದರೂ, ಅತ್ಯಂತ ತೀವ್ರವಾದ ಆಧುನಿಕತೆ ಮತ್ತು ಸ್ವಚ್ಛಂಧತೆಯ ಎಲ್ಲ ಸಾಧ್ಯತೆಗಳನ್ನು, (ಲೆಸ್ಬಿಯನ್ ವಿವಾಹ, ಸಮಾನ ಲಿಂಗ ವಿವಾಹವೂ ಸೇರಿ) ಎಲ್ಲ ಲೈಂಗಿಕ ಸ್ವಾತಂತ್ರ್ಯಗಳನ್ನು ಅನುಭವಿಸಿ ಮುಗಿಸಿರುವ ಪಾಶ್ಚಾತ್ಯ ಸಮಾಜದಲ್ಲಿ ಕೂಡ ಈಗ ಕುಟುಂಬದ ವಿಘಟನೆಯನ್ನು ತಡೆಯುವುದು ಹೇಗೆ? ಎನ್ನುವುದೇ ಮುಖ್ಯ ಪ್ರಶ್ನೆಯಾಗಿರುವಾಗ ನಮ್ಮ ಪಠ್ಯಪುಸ್ತಕಗಳಲ್ಲಿ ಮಹಿಳೆಯನ್ನು ಯಾವ ರೀತಿ ಚಿತ್ರಿಸಬೇಕು? ಎಂಬುದು ಪಠ್ಯರಚನಕಾರರಿಗೆ ಬಹಳ ದೊಡ್ಡ ಒಂದು ಸವಾಲು. ಆದರೆ ನಮ್ಮ ಪಠ್ಯಗಳಲ್ಲಿ ಮಹಿಳೆಯನ್ನು ಯಾವ ರೀತಿ ಚಿತ್ರಿಸಬೇಕು? ಎಂಬ ಪ್ರಶ್ನೆಯನ್ನು ಕೈಗೆತ್ತಿಕೊಳ್ಳುವ ಮೊದಲು ಈಗಾಗಲೇ ನಮ್ಮ ಪಠ್ಯಗಳಲ್ಲಿ ಮಹಿಳೆ ಹೇಗೆ ಚಿತ್ರಿಸಲ್ಪಟ್ಟಿದ್ದಾಳೆ? ಎಂಬುದನ್ನು ಗಮನಿಸಬೇಕಾಗುತ್ತದೆ.

## ಸಾಹಿತ್ಯ ಹಾಗೂ ಸಾಹಿತ್ಯೇತರ ಪಠ್ಯಗಳಲ್ಲಿ ಮಹಿಳೆಯರ ಚಿತ್ರಣ

ನಮ್ಮ ಪಠ್ಯಪುಸ್ತಕಗಳಲ್ಲಿ ಚಿತ್ರಿತವಾಗುವ ಕುಟುಂಬದ ಚಿತ್ರವನ್ನು ಪರಿಶೀಲಿಸಿದರೆ ನಮ್ಮ ಪುಸ್ತಕಗಳು ಮಹಿಳೆಯನ್ನು ಯಾವ ರೀತಿಯಾಗಿ ಚಿತ್ರಿಸುತ್ತವೆ, ಯಾವ ರೀತಿಯಾಗಿ ಮಕ್ಕಳಿಗೆ ಪರಿಚಯಿಸುತ್ತವೆ ಎನ್ನುವುದು ಸ್ಪಷ್ಟವಾಗುತ್ತದೆ. ಈ ಭಾಗದಲ್ಲಿ ವಿಶ್ಲೇಷಣೆಗೆ ಆಯ್ದುಕೊಂಡಿರುವ ಪಠ್ಯಗಳು ಪ್ರಾತಿನಿಧಿಕ ಮತ್ತು ತೌಲನಿಕ ಅಧ್ಯಯನಕ್ಕೆ ಉಪಯುಕ್ತ ಎಂಬ ನೆಲೆಯಲ್ಲಿ ಅವುಗಳನ್ನು ಆಯ್ದುಕೊಳ್ಳಲಾಗಿದೆ. ಹಾಗಾಗಿ ಇವುಗಳು ಈಗ ಶಾಲೆಗಳಲ್ಲಿ ಬಳಕೆಯಿಲ್ಲದಿರಬಹುದು. ಆದರೆ 1986ರಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೆ ಬರುವ ಮೊದಲು ಬಳಕೆಯಲ್ಲಿದ್ದ ಈ ಪಠ್ಯಗಳನ್ನು ಓದಿ ಸಮಾಜ, ಕುಟುಂಬ ಮತ್ತು ಹೆಣ್ಣಿನ ಬಗ್ಗೆ ತಮ್ಮದೇ ಆದ ಅಭಿಪ್ರಾಯಗಳನ್ನು, ಮೌಲ್ಯಗಳನ್ನು ರೂಪಿಸಿಕೊಂಡ ತಲೆಮಾರು ಈಗ ತನ್ನ 25–35ರ ವಯೋಮಾನದಲ್ಲಿದೆ. ಇಂದು ಸಮಾಜದಲ್ಲಿ ನಡೆಯುತ್ತಿರುವ ಹಲವು ರೀತಿಯ ಕೋಮು ಹಿಂಸೆಗಳಲ್ಲಿ, ಕೋಮು ಗಲಭೆಗಳಲ್ಲಿ ಸಕ್ರಿಯವಾಗಿರುವ ತಲೆಮಾರು ಇದು. ಮತ್ತು, ಎಲ್ಲ ಸಾಧ್ಯತೆಗಳಲ್ಲಿ, ಹೆಣ್ಣಿನ ಬಗ್ಗೆ ತಾವು ರೂಢಿಸಿಕೊಂಡಿರುವ ಪೂರ್ವಾಗ್ರಹಪೀಡಿತ ನಿಲುವುಗಳನ್ನು, ಮೌಲ್ಯಗಳನ್ನು ತಮ್ಮ ಮಕ್ಕಳಿಗೆ ಮುಂದಿನ ತಲೆಮಾರಿಗೆ ರವಾನಿಸುವ ತಲೆಮಾರು ಇದು. ಈ ಕಾರಣಗಳಿಗಾಗಿ ಪಠ್ಯಗಳನ್ನು ಮಹಿಳೆಯ ಚಿತ್ರಣವನ್ನು ರೂಪಿಸುವ ಕಚ್ಚಾ ಸಾಮಗ್ರಿಗಳು ಎಂಬ ನೆಲೆಯಲ್ಲಿಯೂ ಪರಿಗಣಿಸಬಹುದು.

ಸಮಾಜ ಪರಿಚಯ – ಒಂದನೆಯ ತರಗತಿಗೆ

ಪಾಠ 1 ನನ್ನ ಮನೆ ಮತ್ತು ಕುಟುಂಬ

ಈ ಪಠ್ಯಪುಸ್ತಕದ ಮೊದಲ ಪಾಠವನ್ನೋದಿದರೆ ಮತ್ತು ಆ ಪಾಠದಲ್ಲಿ ಕೊಟ್ಟಿರುವ ಚಿತ್ರವನ್ನು ನೋಡಿದರೆ ನಮ್ಮ ಶಿಕ್ಷಣ ಪದ್ಧತಿಯಲ್ಲಿ ರಚಿತವಾಗುವ ಪಠ್ಯಪುಸ್ತಕಗಳು ನಗರ ಜೀವನ ನಡೆಸುವ ಮಧ್ಯಮ ವರ್ಗದವರಿಂದ ಮಧ್ಯಮ ವರ್ಗದ ಮಕ್ಕಳಿಗಾಗಿಯೇ ಬರೆದ ಪುಸ್ತಕಗಳು ಅನ್ನಿಸುತ್ತದೆ. ಈ ಪುಸ್ತಕಗಳ ಹಲವಾರು ಪಾಠಗಳು ಗ್ರಾಮೀಣ ಪ್ರದೇಶದ ಸಮಾಜದ ಕೆಳವರ್ಗದಿಂದ ಬರುವ ಶಾಲಾ ಮಕ್ಕಳಿಗೆ ಅಸಂಗತ ಪಾಠಗಳೇ. ಉದಾಹರಣೆಗೆ 'ನನ್ನ ಮನೆ

ಮತ್ತು ಕುಟುಂಬ' ಪಾಠದಲ್ಲಿ ಕೊಟ್ಟಿರುವ ಮನೆಯ ಚಿತ್ರ ಆಧುನಿಕ ಸೌಕರ್ಯಗಳಿಂದ (ಗ್ಲಾಸ್ ಸ್ಟವ್, ಪ್ರಶರ್ ಕುಕರ್ ಇತ್ಯಾದಿ) ಸುಸಜ್ಜಿತವಾದ ಮನೆ. (ಸರಕಾರ ಬಡವರಿಗಾಗಿ ಕಟ್ಟಿಸಿಕೊಡುವ 'ಆಶ್ರಯ' ಮನೆಯಂತಹ ಮನೆಯಲ್ಲ). ಈ ಚಿತ್ರ ನೋಡಿದರೆ ಕಿತ್ತು ತಿನ್ನುವ ಬಡತನದಿಂದ ಬೇಯುವ ನಮ್ಮ ಹಳ್ಳಿಯ ಮಕ್ಕಳಿಗೆ ಇದೇ ಒಂದು ವಸ್ತು ಸಂಗ್ರಹಾಲಯವಾಗಬಹುದು. ಯಾಕೆಂದರೆ ಹಳ್ಳಿ ಶಾಲೆಗಳಿಗೆ ಬರುವ ಎಷ್ಟು ಮಕ್ಕಳಿಗೆ ಪ್ರೆಶರ್ ಕುಕರ್ ಮನೆಯ ಅವಿಭಾಜ್ಯ ಅಂಗ? ಎಂದು ಕೇಳಿದರೆ ಸಮರ್ಪಕ ಉತ್ತರ ಸಿಗಲಾರದು. "ನಮ್ಮ ತಂದೆ ಸರಕಾರಿ ಕಚೇರಿಯಲ್ಲಿ ಕೆಲಸ ಮಾಡುತ್ತಾರೆ. ಅವರಿಗೆ ಪ್ರತಿ ತಿಂಗಳೂ ಸಂಬಳ ದೊರೆಯುತ್ತದೆ. ಅದರಿಂದ ಅವರು ನಮಗೆಲ್ಲಾ ಬೇಕಾದ ಆಹಾರ ಪದಾರ್ಥಗಳು, ಬಟ್ಟೆ ಮತ್ತು ಇತರ ಪದಾರ್ಥಗಳನ್ನು ತರುತ್ತಾರೆ". ಈ ದೇಶದ ಬಡಶಾಲೆಗಳ ಎಷ್ಟು ಬಡಮಕ್ಕಳಿಗೆ ಇಂತಹ ಪಾಠಗಳುಳ್ಳ ಪಠ್ಯಪುಸ್ತಕ ಪ್ರಾತಿನಿಧಿಕವಾಗುವುದು ಸಾಧ್ಯ?

## ಕೆಲವು ಪಠ್ಯಗಳ ವಿಶ್ಲೇಷಣೆ

ಇಂತಹ ಕುಟುಂಬದ ಒಂದು ಮುಖ್ಯ ಘಟಕವಾದ ಹೆಣ್ಣನ್ನು 1980ರ ದಶಕದಲ್ಲಿ ಬಳಕೆಯಲ್ಲಿದ್ದ ಒಂದು ಪಾಠದಲ್ಲಿ ಹೀಗೆ ಚಿತ್ರಿಸಲಾಗಿದೆ. 1986ರ ರಾಷ್ಟ್ರೀಯ ಶಿಕ್ಷಣ ನೀತಿಯನ್ವಯ ಜಾರಿಗೆ ಬಂದ ಪಠ್ಯಪುಸ್ತಕದೊಂದಿಗೆ ತೌಲನಿಕ ಅಧ್ಯಯನ ನಡೆಸುವುದಕ್ಕಾಗಿ ಈ ಪಾಠವನ್ನು ಆಯ್ದುಕೊಳ್ಳಲಾಗಿದೆ:

## ಮೇಲ್‌ಮೈ ಸಂರಚನೆ ಮತ್ತು ಆಳ ಸಂರಚನೆ

"ನಮ್ಮ ತಾಯಿ ನಮಗೆಲ್ಲಾ ಅಡಿಗೆ ಮಾಡುತ್ತಾರೆ. ಬಡಿಸುತ್ತಾರೆ. ನಮ್ಮ ಬಟ್ಟೆಗಳನ್ನು ಒಗೆಯುತ್ತಾರೆ". (ಪಾಠ 3: 'ಕುಟುಂಬದಲ್ಲಿ ಯಾರು ಏನು ಮಾಡುತ್ತಾರೆ?')

ಈ ಮೂರು ವಾಕ್ಯಗಳು ಮನೆಯ ವಾಸ್ತವಿಕೆಯನ್ನು ಹೇಳುತ್ತವೆ. ಮೂರು ವಾಕ್ಯಗಳಲ್ಲಿ ಮೂರು ಕ್ರಿಯೆಗಳನ್ನು ಹೇಳಲಾಗಿದೆ: ಅಡಿಗೆ ಮಾಡು, ಬಡಿಸು, ಬಟ್ಟೆಗಳನ್ನು ಒಗೆ. ಇವು ನಿರಪಾಯಕಾರಿಯಾದ, ತಲತಲಾಂತರದಿಂದ ಒಬ್ಬ ವೇತನ ರಹಿತ (unpaid) ನೌಕರಳಾಗಿ ನಾಲ್ಕು ಗೋಡೆಗಳೊಳಗೆ ದುಡಿಯುತ್ತ ಬಂದ ಮತ್ತು ಆ ಮೂಲಕ ಕುಟುಂಬವನ್ನು ಒಂದು ವ್ಯವಸ್ಥೆ (institution) ಆಗಿ ರಕ್ಷಿಸಿಕೊಂಡು ಬಂದ ಕ್ರಿಯೆಯನ್ನು ಮತ್ತು ಪ್ರಕ್ರಿಯೆ (process of preservation)ಯನ್ನು ಹೇಳುವ ಕ್ರಿಯಾಪದಗಳು. ಉತ್ಪಾದನೆ (production) ಅಂದರೆ ಅಡುಗೆ ಮಾಡುವುದು, ಮತ್ತು ವಿತರಣೆ (distribution) ಅಂದರೆ ಮಾಡಿದ ಅಡುಗೆಯನ್ನು ಬಡಿಸುವುದು – ಎರಡೂ ಕೂಡ ಇಲ್ಲಿ ಒಬ್ಬರೇ (ತಾಯಿ) ನಿರ್ವಹಿಸುತ್ತಾರೆ. ತೋರಿಕೆಗೆ ಈ ಮೂರೂ ವಾಕ್ಯಗಳು ಸಾಮಾಜಿಕವಾಗಿ ಅಂಗೀಕೃತವಾದ ಹೆಣ್ಣಿನ ಪಾತ್ರವನ್ನು ವಿಷದೀಕರಿಸುತ್ತವೆ, ಮತ್ತು ಆಕೆ ಈ ಪಾತ್ರ ನಿರ್ವಹಿಸುವುದು ಸಹಜ, ಪ್ರಕೃತಿ ಸಹಜ, ಊರಿನಲ್ಲಿ ಮಳೆಬೆಳೆ ಆಗುವಷ್ಟೇ ಸಾಮಾನ್ಯ ಎಂದೂ ಹೇಳುತ್ತವೆ. ಮತ್ತು ಈ ಪಾತ್ರಕ್ಕೆ ಮನ್ನಣೆಯ ಮುದ್ರೆಯನ್ನೂ ಒತ್ತುತ್ತವೆ.

ಆಕೆ ಮಾಡುವುದು ಸರಿಯಾದ ಕೆಲಸ, ಅದರಲ್ಲಿ ತಪ್ಪೇನಿಲ್ಲ ಎಂದೂ ಹೇಳುತ್ತವೆ. ಇನ್ನೂ ಮುಂದುವರಿದರೆ ಆಕೆ ಅಡುಗೆ ಮಾಡದೆ, ಬಡಿಸದೆ, ಬಟ್ಟೆ ಒಗೆಯದೆ ಇನ್ನೇನು ಮಾಡಬೇಕು? ಇನ್ಯಾರು ಮಾಡಬೇಕು? ಎಂದೂ ಕೇಳುತ್ತವೆ, ಅಥವಾ ಕೇಳಬಹುದು. ಈ

ಮೂರು ವಾಕ್ಯಗಳು ಮೇಲ್ಮೈ ಸಂರಚನೆಯಲ್ಲಿ ಒಂದರ ಮೇಲೊಂದರಂತೆ, ಹೆಣ್ಣಿಗೆ, ಪವಿತ್ರ ಸ್ಥಾನ ನೀಡಲಾಗಿರುವ ತಾಯಿಗೆ ನೀಡುವ assign ಮಾಡುವ ಮೂರು ಪಾತ್ರಗಳು ಇವು.

### ಪಠ್ಯ ಮತ್ತು ಸುಪ್ತ ಪಠ್ಯ

ಈಗ ಈ ಪಠ್ಯದ ಆಳ ಸಂರಚನೆಯನ್ನು ಗಮನಿಸುವ: ಅದು ಸುಮಾರಿಗೆ ಹೀಗಿದೆ:

ನಮ್ಮ ತಾಯಿ ನಮ್ಮ ಮನೆಯಲ್ಲಿ ಬಹಳ ಮುಖ್ಯ. ಆಕೆ ನಮಗೆಲ್ಲಾ ಅಡಿಗೆ ಮಾಡುತ್ತಾಳೆ. ಅಡಿಗೆ ಮಾಡಿದ ಬಳಿಕ ಆಕೆ ತನ್ನ ಪಾಡಿಗೆ ತಾನು ಆರಾಮ ಮಾಡಿ, ವಿಶ್ರಮಿಸಿ ಕುಳಿತುಕೊಳ್ಳುವುದಿಲ್ಲ. ಅಡಿಗೆ ಮಾಡಿದ ಬಳಿಕ 'ಅಡಿಗೆ ಮಾಡಿ ಇಟ್ಟಿದ್ದೇನೆ. ನೀವೆಲ್ಲ ನಿಮ್ಮ ಪಾಡಿಗೆ ಬಡಿಸಿಕೊಳ್ಳಿ, ಬಡಿಸಿಕೊಂಡು ತಿನ್ನಿ, ಸ್ವ-ಸಹಾಯ (self-help) ಮಾಡಿಕೊಳ್ಳಿ ಎನ್ನುವುದಿಲ್ಲ. ನಾವು, 'ಅಮ್ಮ, ಊಟ' ಎಂದಾಗ ಅವಳೇ ಅಡಿಗೆ ಮನೆಗೆ ಹೋಗಿ ತಾನು ಅಡಿಗೆ ಮಾಡಿದ್ದನ್ನು ತಂದು ನಮಗೆ ಬಡಿಸುತ್ತಾಳೆ. ನಾವು ಆರಾಮವಾಗಿ ಕೂತು (ನೆಲದ ಮೇಲೋ, ಮೇಜಿನ ಮುಂದೆ ಊಟದ ಕುರ್ಚಿಯಲ್ಲೋ ಕೂತು) ಆಕೆ ಬಡಿಸಿದ್ದನ್ನು ತಿಂದು ಸುಖಿಸುತ್ತೇವೆ, ಖುಶಿಪಡುತ್ತೇವೆ. ಆಕೆ ಅಡಿಗೆ ಮಾಡಿದ್ದು ಚೆನ್ನಾಗಿದ್ದರೆ ಅದನ್ನು ಮೆಚ್ಚುತ್ತೇವೆ, ಹೊಗಳುತ್ತೇವೆ. ಅಥವಾ ಮೆಚ್ಚದೆ, ಏನೂ ಹೇಳದೆ ಊಟ ಮಾಡಿ ಮೇಲಕ್ಕೇಳುತ್ತೇವೆ. ನಮ್ಮೆಲ್ಲರ ಊಟವಾದ ಮೇಲೆ ಆಕೆ ತನ್ನ ಪಾಡಿಗೆ ತಾನು ಬಡಿಸಿಕೊಂಡು ತಿನ್ನುತ್ತಾಳೆ. ನಾವು ಊಟಮಾಡಿದ ಬಳಿಕ ಹೊರಗೆ, ಶಾಲೆಗೋ, ಆಟದ ಮೈದಾನಕ್ಕೊ, ಕಚೇರಿಗೋ ಹೋಗುತ್ತೇವೆ. ಹೀಗೆ ಹೋಗುವ ಮೊದಲು ಆಕೆ ಒಗೆದು ಒಣಗಿಸಿ ಮಡಚಿ ಇಟ್ಟ ಅಥವಾ ಇಸ್ತ್ರಿ ಮಾಡಿ ಇಟ್ಟ ಗರಿಗರಿಯಾದ ಬಟ್ಟೆಗಳನ್ನು ಹಾಕಿಕೊಳ್ಳುತ್ತೇವೆ / ಧರಿಸುತ್ತೇವೆ. ನಮ್ಮ ಅವ್ವ ತುಂಬ ಒಳ್ಳೆಯವಳು.

ಈ ಪಠ್ಯದಿಂದ ಹೊಮ್ಮುವ ಪಾತ್ರಗಳ ವರ್ಗೀಕರಣದ ಪ್ರಕಾರ ಹೆಣ್ಣು ಎಂದರೆ ಅಡುಗೆ ಕೆಲಸದವಳು, ಬಡಿಸುವವಳು ಹಾಗೂ ಧೋಬಿ. ಅವಳು ಮನೆಯೊಳಗಡೆಯೇ ಇರಬೇಕಾದವಳು. ಅಡುಗೆ ಮನೆ, ಬಚ್ಚಲಮನೆ ಅಥವಾ ಬಾವಿಕಟ್ಟೆಯೇ ಅವಳಿಗೆ ಸರಿಯಾದ ಸ್ಥಾನ. ಅವಳು ಸ್ಥಾನ ಬದಲಿಸಿದರೆ (ಮನೆಯಿಂದ ಹೊರಗೆ ಹೋದರೆ) ನಮಗೆ ತೊಂದರೆಯಾಗುತ್ತದೆ. ಆಗ ನಾವೇ ಅಡಿಗೆ ಮಾಡಬೇಕಾದೀತು, ಮಾಡಿದ ಅಡಿಗೆಯನ್ನು ನಾವೇ ಬಡಿಸಿಕೊಳ್ಳಬೇಕಾದೀತು. ಆದ್ದರಿಂದ

ಅವಳು ಅಡುಗೆ ಕೆಲಸದವಳು, ಬಡಿಸುವವಳು ಹಾಗೂ ಧೋಬಿಯಾಗಿಯೇ ಮನೆಯ ಒಳಗೆ ಇರಲಿ. ನಾವು ಮನೆಯ ಹೊರಗೆ ಸ್ವತಂತ್ರವಾಗಿ ಅಡ್ಡಾಡುತ್ತಾ ಓಡಾಡುತ್ತಾ ಹಾಯಾಗಿ ಇರೋಣ.

ಇವು ಪಠ್ಯದ ಸುಪ್ತ-ಪಠ್ಯ (sub-text) ಹೇಳಲು ಸಾಧ್ಯವಿರುವ, ಹೇಳುವ, ಮತ್ತು ಪಠ್ಯಲೇಖಕರಿಗೆ ತಿಳಿಯದೆ (unaware) ಅವರು ಹೇಳಿರುವ ಮಾತುಗಳು. ಹಾಗಾದರೆ ಇದೇ ಪಠ್ಯ ಹೆಣ್ಣಿಗೆ ಅಡುಗೆಯವಳು, ಬಡಿಸುವವಳು ಹಾಗೂ ಧೋಬಿ ಎಂಬ ಪಾತ್ರಗಳನ್ನು ನೀಡದೆ, ಮತ್ತು ಅದೇ ವೇಳೆ ಕುಟುಂಬ ಜೀವನದಲ್ಲಿ ಕುಟುಂಬದ ಸದಸ್ಯರ ನಡುವೆ ಮೇಲುಕೀಳು ಭಾವನೆ, ತಪ್ಪು ತಿಳಿವಳಿಕೆ, ತಪ್ಪು ತಿಳುವಳಿಕೆಯಿಂದಾಗಿ ಆಗುವ ಕೌಟುಂಬಿಕ ಘರ್ಷಣೆಯಾಗದಂತೆ ಹೇಗೆ ಇರಬೇಕಾಗುತ್ತದೆ? ಇದನ್ನು ಹೇಗೆ ಪುನರ್‌ಲೇಖಿಸಬಹುದು?

ಸುಪ್ತ ಪಠ್ಯವನ್ನು ಗಮನದಲ್ಲಿಟ್ಟುಕೊಂಡು ಇದನ್ನು ಭಿನ್ನವಾಗಿ ಬರೆಯುವ, ಪುನರ್‌ಲೇಖಿಸುವ ಸಾಧ್ಯತೆಯನ್ನು ಈಗ ಪರಿಶೀಲಿಸೋಣ.

ನಮ್ಮ ತಾಯಿ ನಮಗೆಲ್ಲಾ ಅಡಿಗೆ ಮಾಡುತ್ತಾರೆ. ಆದರೆ ಅಡಿಗೆ ಮಾಡುವುದು ಮಾತ್ರ ಅವರ ಕೆಲಸವಲ್ಲ, ಅದು ಅವರೊಬ್ಬರೇ ಮಾಡಬೇಕಾದ ಕೆಲಸವೂ ಅಲ್ಲ. ಅವರು ಅಡುಗೆ ಮಾಡುವಾಗ ನಾವು ಅವರಿಗೆ ಸಹಕರಿಸಬೇಕು. ನಾವು ಕೂಡ ಅಡಿಗೆ ಮಾಡಲು ಕಲಿಯಬೇಕು. ನಾವು ಅವರಿಗೆ ತರಕಾರಿ ಕೊಯ್ದು ತೊಳೆದು ಕೊಡಬೇಕು. ಮಸಾಲೆ ಪದಾರ್ಥಗಳನ್ನು ಮಿಕ್ಸಿಗೆ ಹಾಕಿ ರುಬ್ಬಿ ಕೊಡಬೇಕು. ಅವರು ಮತ್ತು ನಾವು ಕೂಡಿಕೊಂಡು ಅಡುಗೆ ಮಾಡಿದ ನಂತರ ಊಟದ ವೇಳೆ ನಾವೆಲ್ಲರೂ ಜತೆಯಾಗಿ ಕುಳಿತು ಸ್ವ-ಸಹಾಯ (self-service) ಮಾಡಿ ನಮನಮಗೆ ಬೇಕಾದುದನ್ನು ಎಲ್ಲರಿಗೂ ದೊರಕುವ ಹಾಗೆ ಹಿತಮಿತವಾಗಿ ಬಡಿಸಿಕೊಳ್ಳಬೇಕು. ಅಥವಾ ನಮ್ಮ ತಾಯಿಗೆ ಬಡಿಸಲು ನೆರವಾಗಬೇಕು. ನಮ್ಮ ಉಟವಾದ ಮೇಲೆ ಅವರು ಊಟಮಾಡುವುದಾದಲ್ಲಿ ನಮ್ಮಲ್ಲೆ ಒಬ್ಬರು ಅಥವಾ ಇಬ್ಬರು ಅವರಿಗೆ ಬಡಿಸಬೇಕು. ನಮ್ಮ ತಾಯಿ ನಮ್ಮ ಬಟ್ಟೆಗಳನ್ನು ಒಗೆಯುವಾಗ ನಾವೂ ಅವರ ಜೊತೆ ಕೂಡಿಕೊಂಡು ಅವರಿಗೆ ನೆರವಾಗಬೇಕು. ಅವರು ಬಟ್ಟೆಗಳಿಗೆ ಸಾಬೂನು ಹಾಕಿದರೆ ನಾವು ಅವುಗಳನ್ನು ಒಗೆದು ಬಕೆಟುಗಳಲ್ಲಿ ಮುಳುಗಿಸಿ ತೊಳೆದು ಹಿಂಡಿ ತೆಗೆಯಬೇಕು. ಬಳಿಕ ಅವುಗಳನ್ನು ಬಿಸಿಲಿನಲ್ಲಿ ಒಣಗಹಾಕಬೇಕು. ನಮ್ಮ

ತಾಯಿ ಕೆಲವು ಬಟ್ಟೆಗಳನ್ನು ಒಣಗ ಹಾಕಿದರೆ ಕೆಲವನ್ನು ನಾವೂ ಒಣಗಹಾಕಬೇಕು. ಹೀಗೆ ಎಲ್ಲರೂ ಕೂಡಿಕೊಂಡು ಪರಸ್ಪರ ಸಹಕರಿಸಿ ಕೆಲಸ ಮಾಡಿದರೆ ನಮ್ಮ ತಾಯಿಗೆ ಮನೆಕೆಲಸ ಒಂದು ಹೊರೆಯಾಗುವುದಿಲ್ಲ.

ಈ ಪಠ್ಯವು ಕುಟುಂಬದಲ್ಲಿ ಕುಟುಂಬದ ಎಲ್ಲ ಸದಸ್ಯರೂ ಮನೆಕೆಲಸದಲ್ಲಿ ಭಾಗಿಯಾಗಬೇಕು, ಸದಸ್ಯರು ಗಂಡು-ಹೆಣ್ಣೆಂಬ ಭೇದವಿಲ್ಲದೆ ಒಬ್ಬರಿಗೊಬ್ಬರು ನೆರವಾಗಬೇಕು, ಸಹಕರಿಸಬೇಕು, ಹೆಣ್ಣು ಎಂದರೆ ಅಡುಗೆ ಮಾಡುವ ಬಡಿಸುವ ಬಟ್ಟೆ ಒಗೆಯುವ, ಚಾಕರಿ ಮಾಡುವ ವೇತನವಿಲ್ಲದೆ ದುಡಿಯುವ ಕೆಲಸದಾಕೆಯಲ್ಲ, ಮನೆಗೆಲಸ ಮಾಡುವುದು ಗಂಡಸರ ಗೌರವಕ್ಕೆ ಕುಂದು ತರುವಂತಹ ಕೆಲಸವೂ ಅಲ್ಲ, ಕುಟುಂಬದ ಎಲ್ಲ ಸದಸ್ಯರೂ ಮನೆಕೆಲಸದಲ್ಲಿ ಭಾಗಿಗಳಾದಾಗ ಕುಟುಂಬ ಜೀವನ ಎಲ್ಲರಿಗೂ ಸಂತಸ ತರುವ ಜೀವನವಾಗುತ್ತದೆ, ಮನೆಯು ಶಾಂತಿ ಸೌಹಾರ್ದದ ತಾಣವಾಗುತ್ತದೆ ಎಂಬ ಸಂದೇಶಗಳನ್ನು ಮಕ್ಕಳಿಗೆ/ವಿದ್ಯಾರ್ಥಿಗಳಿಗೆ ರವಾನಿಸುತ್ತದೆ. ತರಗತಿಯಲ್ಲಿ ಪಾಠ ಮಾಡುವ ಜೀವ ಒಬ್ಬಳು ಹೆಣ್ಣಾಗಿದ್ದರೆ, ಆ ಶಿಕ್ಷಕಿಗೆ ಇಂತಹ ಪಾಠ ಮಾಡುವುದು ತನ್ನ ಆತ್ಮಗೌರವಕ್ಕೆ ಕುಂದು ಎಂದು ಅನ್ನಿಸದಂತೆ ಆಕೆ ಪಾಠ ಮಾಡುವುದು ಸಾಧ್ಯವಾಗುತ್ತದೆ. ಲಿಂಗನ್ಯಾಯದ ಪರಿಕಲ್ಪನೆಯನ್ನು, ಸಮಾನತೆಯ ತತ್ವವನ್ನು ಪರೋಕ್ಷವಾಗಿ ತರಗತಿಗೆ ಪರಿಚಯಿಸಿದ ತೃಪ್ತಿಯೂ ಆಕೆಗೆ ಸಿಗುತ್ತದೆ.

'ಕುಟುಂಬದಲ್ಲಿ ಯಾರು ಯಾರು ಏನು ಏನು ಮಾಡುತ್ತಾರೆ'? ಎಂಬ ಪಾಠದಂತಹ ಒಂದು ಪಾಠವನ್ನು ಬರೆಯುವಾಗ ಪಾಠದ ಲೇಖಕರು ಎಳೆಯ ಮಕ್ಕಳಲ್ಲಿ ಮೌಲ್ಯ ನಿರ್ಮಾಣದ ದೃಷ್ಟಿಯಿಂದ ಎಷ್ಟೊಂದು ಎಚ್ಚರದಿಂದ ಬರೆಯಬೇಕಾಗುತ್ತದೆ ಎನ್ನುವುದನ್ನು ಸ್ಪಷ್ಟಪಡಿಸಲಿಕ್ಕಾಗಿ ಪಾಠದ ಮೂರು ವಾಕ್ಯಗಳನ್ನು ಇಷ್ಟೊಂದು ದೀರ್ಘವಾದ ವಿಶ್ಲೇಷಣೆಗೆ ಒಳಪಡಿಸಬೇಕಾಯಿತು. ಮೂರು ದಶಕಗಳ ಅಂತರದಲ್ಲಿ, 1986ರ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೊಂಡ ಬಳಿಕ ಈ ಎಚ್ಚರ ಕಾಣಿಸಿಕೊಂಡಿರುವುದು ಸಮಾಧಾನ ತರುವ ಸಂಗತಿ: ಪರಿಸರ ಅಧ್ಯಯನ ಪಠ್ಯ ಸಹಿತ ಅಭ್ಯಾಸ ಪುಸ್ತಕ (1) ಒಂದನೇಯ ತರಗತಿ – 2009 (ಪ್ರಕಟಣೆ – ಕರ್ನಾಟಕ ಪಠ್ಯ ಪುಸ್ತಕ ಸಂಘ (ರಿ.) ಬೆಂಗಳೂರು)

ಈ ಅಭ್ಯಾಸ ಪುಸ್ತಕದಲ್ಲಿ ಪಾಠ – 11, ನಮ್ಮ ಕುಟುಂಬ ಹೀಗಿದೆ:

ಸಾಮರ್ಥ್ಯ: * ಕುಟುಂಬದ ಸದಸ್ಯರೊಂದಿಗೆ ಸಂಬಂಧವನ್ನು ಅರಿಯುವರು.
* ಮನೆಕೆಲಸದಲ್ಲಿ ಪರಸ್ಪರ ಸಹಕರಿಸುವುದನ್ನು ಕಲಿಯುವರು.

ನಮ್ಮ ಮನೆಯಲ್ಲಿರುವವರ ಪರಿಚಯವನ್ನು ನಿಮಗೆ ಮಾಡಿಸುತ್ತೇನೆ.

ನಮ್ಮ ಮನೆಯಲ್ಲಿ ನನ್ನ ಅಪ್ಪ, ಅಮ್ಮ ಇದ್ದಾರೆ. ಅಜ್ಜ, ಅಜ್ಜಿಯೂ ಇದ್ದಾರೆ. ಅವರೊಂದಿಗೆ ನನ್ನ ಅಣ್ಣ, ನಾನು, ನನ್ನ ತಮ್ಮ ಇದ್ದೇವೆ. ಇದು ನಮ್ಮ ಕುಟುಂಬ.

ಈ ಚಿತ್ರದಲ್ಲಿ ನಮ್ಮ ಕುಟುಂಬದವರೆಲ್ಲರೂ ಇದ್ದಾರೆ.

ನಿಮ್ಮ ಕುಟುಂಬದಲ್ಲಿ ಯಾರು ಯಾರು ಇದ್ದಾರೆ?

ರಾಜು ಮತ್ತು ರಮಾ ಅಣ್ಣ ತಂಗಿ. ಅವರು ಮನೆಯನ್ನು ಸ್ವಚ್ಛ ಮಾಡುತ್ತಿದ್ದಾರೆ. ಯಾರು ಕಸ ಗುಡಿಸುತ್ತಿದ್ದಾರೆ?

ಅವರ ತಾಯಿ ಏನು ಮಾಡುತ್ತಿದ್ದಾರೆ?

ಅವರ ತಂದೆ ಯಾವ ಕೆಲಸ ಮಾಡುತ್ತಿದ್ದಾರೆ?

ಅವರ ಕುಟುಂಬದಲ್ಲಿ ಎಲ್ಲರೂ ಮನೆಯ ಕೆಲಸಗಳನ್ನು ಹಂಚಿಕೊಂಡು ಮಾಡುತ್ತಾರೆ.

ನೀನು ಯಾವ ಯಾವ ಕೆಲಸಗಳನ್ನು ಮಾಡುವೆ? ಮನೆಯ ಕೆಲಸಗಳನ್ನು ಏಕೆ ಹಂಚಿಕೊಂಡು ಮಾಡಬೇಕು?

**ತಿಳಿ – ಕಲಿ**

ಅ. ಈ ಪ್ರಶ್ನೆಗಳಿಗೆ ಉತ್ತರ ಹೇಳು.

1. ನೀನು ನಿನ್ನ ತಾಯಿಗೆ ಹೇಗೆ ನೆರವಾಗುವೆ?
2. ನಿನ್ನ ತಂದೆಯ ಕೆಲಸಗಳಲ್ಲಿ ಹೇಗೆ ಸಹಾಯ ಮಾಡುವೆ?
3. ತಮ್ಮನಿಗೆ ಹೇಗೆ ಸಹಾಯ ಮಾಡುವೆ?

ಆ. ಸಂಬಂಧಗಳನ್ನು ತಿಳಿದುಕೊಂಡು ಬರೆ.

1. ನನ್ನ ಅಜ್ಜ ನನ್ನ ತಂದೆಗೆ ..................
2. ನನ್ನ ಅಪ್ಪ ಅಜ್ಜನಿಗೆ ................
3. ನನ್ನ ಅಪ್ಪ, ಅಮ್ಮನಿಗೆ ನಾನು ............ ನನ್ನ ತಮ್ಮ ..................
4. ನನ್ನ ತಮ್ಮನಿಗೆ ನಾನು ................
5. ನನ್ನ ಅಪ್ಪನ ತಮ್ಮ ನನಗೆ ...................
6. ನನ್ನ ಅಪ್ಪನ ಅಣ್ಣ ನನಗೆ .................
7. ನನ್ನ ಅಪ್ಪನ ತಂಗಿ ನನಗೆ .....................
8. ನನ್ನ ಅಮ್ಮನ ಅಣ್ಣ ನನಗೆ .................
9. ನನ್ನ ಅಮ್ಮನ ತಂಗಿ ನನಗೆ ................

ಇ. ಆಟ ಆಡು

ಅಪ್ಪ ಆಗಿ, ಅಮ್ಮ ಆಗಿ, ಅಣ್ಣ ತಂಗಿ ಅಥವಾ ಅಕ್ಕ ತಮ್ಮ ಆಗಿ, ಅಜ್ಜ ಅಜ್ಜಿಯರಾಗಿ 'ಮನೆ ಆಟ' ಆಡು.

ಈ. ಹಾಡಿ – ನಲಿ

ಅಪ್ಪನ ಅಪ್ಪ ಅಜ್ಜ
ಅಜ್ಜನ ಹೆಂಡತಿ ಅಜ್ಜಿ
ಅಜ್ಜಿಯ ಮಗ ನಮ್ಮಪ್ಪ
ಅಪ್ಪನ ಹೆಂಡತಿ ನಮ್ಮಮ್ಮ
ಅಮ್ಮನ ಮಗ ನಾನು
ನನ್ನ ಅಕ್ಕ ಪುಟ್ರಂಗಿ

ಅಪ್ಪನ ತಂಗಿ ಅತ್ತೆ
ಅತ್ತೆಯ ಗಂಡ ಮಾವ
ಅಕ್ಕನ ಗಂಡ ಭಾವ
ಎಲ್ಲರ ಪ್ರೀತಿಯ ಭಾವ
ಅಪ್ಪನ ತಮ್ಮ ಚಿಕ್ಕಪ್ಪ
ಅಪ್ಪನ ಅಣ್ಣ ದೊಡ್ಡಪ್ಪ

ಇಬ್ಬರೇ ಮಕ್ಕಳು ನಾವು ದೊಡ್ಡಪ್ಪನ ಜೊತೆ ದೊಡ್ಡಮ್ಮ

ಎಲ್ಲರ ಕಣ್ಮಣಿ ನಾವು ಚಿಕ್ಕಪ್ಪನ ಜೊತೆ ಚಿಕ್ಕಮ್ಮ

ಎಲ್ಲರ ಜೊತೆಯಲಿ ನಾವು

ಮನೆಯಲಿ ಸದಾ ನಗುವೆವು

1980ರಲ್ಲಿ ಬಳಕೆಯಲ್ಲಿದ್ದ ಪಾಠದೊಂದಿಗೆ ತುಲನೆ ಮಾಡಿದಾಗ, ಅಲ್ಲಿ ಕಾಣಿಸುವ ಪಾತ್ರಗಳ ಹಂಚುವಿಕೆಯೊಂದಿಗೆ ಈ ಪಾಠದಲ್ಲಿ ಬರುವ ಪಾತ್ರಗಳ ಹಂಚುವಿಕೆಯನ್ನು ಹೋಲಿಸಿದಾಗ ಈ ಪಾಠದಲ್ಲಿ ಪಾತ್ರಗಳ ಹಂಚುವಿಕೆಯ ಹಿಂದೆ ಲಿಂಗನ್ಯಾಯದ ಪರಿಕಲ್ಪನೆ ಕೆಲಸ ಮಾಡಿರುವುದನ್ನು ಗಮನಿಸಬಹುದು:

ಅಣ್ಣ ಮತ್ತು ತಂಗಿ ಮನೆಯನ್ನು ಸ್ವಚ್ಛ ಮಾಡುತ್ತಿರುವುದನ್ನು ತೋರಿಸುವ ಚಿತ್ರದಲ್ಲಿ ಅಣ್ಣ ಬೆನ್ನು ಬಗ್ಗಿಸಿ ಪೊರಕೆ ಹಿಡಿದು ಕಸ ಗುಡಿಸುತ್ತಿದ್ದಾನೆ. ಆದ್ದರಿಂದ ಕಸ ಗುಡಿಸುವುದು, ಮುಸುರೆ ತೊಳೆಯುವುದು ('ಕಸ – ಮುಸುರೆ ಮಾಡುವುದು') ಹೆಣ್ಣಿನ ಕೆಲಸ, ಅವಳು ಅದಕ್ಕಾಗಿಯೇ ಹುಟ್ಟಿದವಳು, ಅದಕ್ಕಾಗಿಯೇ ಇರುವವಳು ಎಂಬ ಊಳಿಗಮಾನ್ಯ ಸಮಾಜದ, ಪುರುಷ ಪ್ರಧಾನ ಅಥವಾ ಪಿತೃಪ್ರಧಾನ ಸಮಾಜದ ಪಡಿಯಚ್ಚು ಇಲ್ಲಿ ಬದಲಾಗಿದೆ. ಪಾತ್ರಗಳ ಅದಲು ಬದಲು (role reversal) ಇಲ್ಲಿ, ಪ್ರಾಯಶ: ಪ್ರಪ್ರಥಮ ಬಾರಿಗೆ, ವಾಸ್ತವವಾಗಿದೆ.

ತಾಯಿ ಮತ್ತು ತಂದೆಯನ್ನು ತೋರಿಸುವ ಚಿತ್ರ ಕೂಡ ಲಿಂಗನ್ಯಾಯದ ಸಾಧ್ಯತೆಗಳನ್ನು ತುಂಬ ಸೂಚ್ಯವಾಗಿ ಹೇಳುತ್ತದೆ: ಸಾಂಪ್ರದಾಯಿಕ ಉಡುಪನ್ನೆ ಸಾಂಪ್ರದಾಯಿಕವಾಗಿಯೆ ಧರಿಸಿರುವ ಮತ್ತು ಗೌರವ ಹುಟ್ಟುವಂತೆ ಇರುವ ಹೆಣ್ಣೇ (ತಾಯಿ) ಇಲ್ಲಿ ಕೂಡ 'ಅಡುಗೆ ಮಾಡು'ತ್ತಾಳಾದರೂ, ಮೂರು ದಶಕಗಳ ಹಿಂದಿನ ಪಾಠದಲ್ಲಿ ಬರುವ ತಂದೆಯಂತೆ ಇಲ್ಲಿ ತಂದೆ (ಮತ್ತು ರವಿ) ಪೇಟೆಗೆ ಹೋಗುವುದಿಲ್ಲ. ತಂದೆ (ಗಂಡು) ಕೂಡ ಅಡುಗೆ ಮನೆಯಲ್ಲೇ ಇದ್ದಾನೆ; ಅಷ್ಟೇ ಅಲ್ಲ ಆತ ತಾಯಿಗೆ (ಹೆಣ್ಣಿಗೆ) ಅಡಿಗೆ ಕೆಲಸದಲ್ಲಿ ನೆರವಾಗುತ್ತಿದ್ದಾನೆ: ತರಕಾರಿ ಹಚ್ಚುತ್ತಿದ್ದಾನೆ. ಹೀಗೆ, ಮನೆಯನ್ನು ಸ್ವಚ್ಛಗೊಳಿಸುವುದು, ಅಡಿಗೆ ಮಾಡುವುದು ಇಲ್ಲಿ ಕುಟುಂಬದ ಎಲ್ಲ ಸದಸ್ಯರ ಕೆಲಸ ಮತ್ತು ಜವಾಬ್ದಾರಿಯಾಗಿದೆ. ಪಾಠದಲ್ಲಿ 'ಹಂಚಿಕೊಂಡು ಮಾಡು', 'ಸಹಾಯ ಮಾಡು', 'ನೆರವಾಗು' ಎಂಬ ಪುನರುಕ್ತಿಗಳ ಮೂಲಕ ಸಹಕಾರ, ಪರಸ್ಪರ ಸಹಾಯ,

ಸೌಹಾರ್ದತೆಯ ತತ್ವಗಳನ್ನು ಹೇಳಿಕೊಡಲಾಗಿದೆ. ಹೆಣ್ಣೆಂದರೆ ಅಡಿಗೆ ಕೆಲಸದವಳು, ಬಡಿಸುವವಳು, ಬಟ್ಟೆ ಒಗೆಯುವವಳು (ಧೋಬಿ) ಎಂಬ ಅತಾರ್ಕಿಕ ಸಾಮಾನ್ಯೀಕರಣಕ್ಕೂ, ಹೆಣ್ಣೆಂದರೆ ಸಹಕಾರ, ಸಹಾಯಕ್ಕೆ ಅರ್ಹಳು, ಕುಟುಂಬದ ಎಲ್ಲ ಸದಸ್ಯರೂ – ಗಂಡು ಹೆಣ್ಣೆಂಬ ಭೇದವಿಲ್ಲದೆ – ಆಕೆಯ ಜತೆ ಸಹಕರಿಸಿ ದುಡಿದರೆ ಮಾತ್ರ ಕುಟುಂಬ ಸಂತೋಷದ ನೆಲೆವೀಡಾಗುತ್ತದೆ ಎಂಬ ಸಂದೇಶ ನೀಡುವ ಸುಧಾರಿತ ನಿಲುವಿಗೂ ಇರುವ ವ್ಯತ್ಯಾಸ ಸ್ತ್ರೀ ಸಬಲೀಕರಣದ ಯುಗದಲ್ಲಿ ಅಪೇಕ್ಷಣೀಯವಾದ ವ್ಯತ್ಯಾಸ. 'ಲಿಂಗನ್ಯಾಯ' ಎಂಬ ಪದಪುಂಜವನ್ನು ಬಳಸದೆ ನಮ್ಮ ಪಠ್ಯಪುಸ್ತಕಗಳಲ್ಲಿ ಹೆಣ್ಣಿಗೆ ಹೇಗೆ ಲಿಂಗನ್ಯಾಯ ದೊರಕಿಸಿಕೊಡಬಹುದೆಂಬುದಕ್ಕೆ 'ನಮ್ಮ ಕುಟುಂಬ' ಒಂದು ಉತ್ತಮ ಉದಾಹರಣೆ.

ಯಾಕೆಂದರೆ ಲಿಂಗ (gender) ಎಂಬುದು ಗಂಡು/ಹೆಣ್ಣಿನ ಅಸ್ಮಿತೆ (identity)ಯ ಸಾಮಾಜಿಕ ಸಂರಚನೆ (construction). ಈ ಅಸ್ಮಿತೆ 'ಸೆಕ್ಸ್' ಪದ ನೀಡುವ ಅಸ್ಮಿತೆಗಿಂತ ಭಿನ್ನವಾದದ್ದು. 'ಸೆಕ್ಸ್' ಎಂಬುದು ಪುರುಷರು ಮತ್ತು ಮಹಿಳೆಯರ ನಡುವೆ ಜೀವಶಾಸ್ತ್ರೀಯವಾಗಿ (biologically) ಆಧಾರಿತವಾದ ಪ್ರತ್ಯೇಕತೆ (distinction). ಸಾಮಾಜಿಕ ವರ್ಗೀಕರಣ ಪ್ರಕ್ರಿಯೆಯ ಅವಿಭಾಜ್ಯ ಅಂಗ 'ಜೆಂಡರ್'. ಜೆಂಡರ್ ಒಂದು ಸಾಮಾಜಿಕ ಸಂದರ್ಭದೊಳಗೆ ಅರ್ಥ ಮಾಡಿಕೊಳ್ಳಬೇಕಾದದ್ದು. ಗಂಡಸಿಗೆ ಆರೋಪಿಸಲಾಗುವ ಗಂಡುತನ (masculinity), ಚುರುಕುತನ, ತರ್ಕ, ಮತ್ತು ಹೆಣ್ಣಿಗೆ ಆರೋಪಿಸಲಾಗುವ ಸ್ತ್ರೀತ್ವ (faminity)ವು ಸಹಜ, ಜೈವಿಕವಾಗಿ ಆಧಾರಿತ ಅನ್ನಿಸಿದರೂ ಇವುಗಳು ವಾಸ್ತವಿಕವಾಗಿ ಸಾಂಸ್ಕೃತಿಕ ನಿರ್ಮಾಣಗಳು ಮತ್ತು ಪರಿಸರಾವಲಂಬಿ ಕೂಡ. ಆದ್ದರಿಂದ ಪಠ್ಯಪುಸ್ತಕಗಳಲ್ಲಿ ಹೆಣ್ಣನ್ನು ಚಿತ್ರಿಸುವಾಗ, ಲಿಂಗನ್ಯಾಯದ ದೃಷ್ಟಿಯಿಂದ, ಆಕೆಯ ದೈಹಿಕ ಲಕ್ಷಣಗಳಿಗೆ ನೀಡುವ ಮಹತ್ವಕ್ಕಿಂತ ಆಕೆಯ ಸಾಮಾಜಿಕ ಲಕ್ಷಣಗಳಿಗೆ ಹೆಚ್ಚು ಮಹತ್ವ ನೀಡಬೇಕಾಗುತ್ತದೆ. ಹೀಗಾಗಿ ಪಠ್ಯಲೇಖಕರು ಆಕೆ ಅಡಿಗೆ ಮನೆ ಜೀವಿ ಎಂಬ ಭಾವನೆ ಬರದಂತೆ ಆಕೆ ಮನೆ ಕೆಲಸದಲ್ಲಿ ಎಲ್ಲರ ಸಹಾಯ, ಸಹಕಾರದಿಂದ ಸಂತೋಷಪಡುವ ಸಾಮಾಜಿಕ ಜೀವಿ ಎಂಬ ಅಂಶಕ್ಕೆ ಹೆಚ್ಚಿನ ಒತ್ತು ನೀಡಬೇಕಾಗುತ್ತದೆ.

ಪಠ್ಯದ ಮೇಲುಮೈ ಸಂರಚನೆ ಮತ್ತು ಆಳದ ಸಂರಚನೆ, ಹಾಗೂ ಸುಪ್ತ ಪಠ್ಯಕ್ಕೆ ಇನ್ನೊಂದು ಉದಾಹರಣೆ ಇಲ್ಲಿದೆ:

ಇಂಥ ಕಲಾ ಪ್ರದರ್ಶಕ, ಸಂಸ್ಕೃತಿ ಪ್ರಸಾರಕ – 'ಬಹುರೂಪಿ' ಸಮಾಜ ಕರ್ನಾಟಕದಂತೆ ಮಹಾರಾಷ್ಟ್ರ, ಗುಜರಾಥ, ಪಂಜಾಬ ಮುಂತಾದ ಇತರ ಪ್ರದೇಶಗಳಲ್ಲಿಯೂ ಇದೆ. ಈ ಸಮಾಜದ ಕೆಲವರು ಇತ್ತೀಚೆಗೆ ತಮ್ಮ ಪರಂಪರಾಗತವಾದ ಈ ವೃತ್ತಿಯನ್ನು ಬಿಡುತ್ತಿದ್ದಾರೆ. ಒಕ್ಕಲುತನ, ಬೆತ್ತದ ಕೆಲಸಗಳಂಥ ಇತರ ಉದ್ಯೋಗಗಳಿಗೆ ಅಂಟಿಕೊಳ್ಳತೊಡಗಿದ್ದಾರೆ. ಇದರಿಂದಾಗಿ ಮನೋರಂಜನೆಯೊಡನೆ ಮನೋವಿಕಾಸಕ್ಕೂ ಎಡೆಗೊಡುವ ಈ ಅಪರೂಪದ ಪ್ರತಿಭೆ ಅಳಿಸಿಹೋಗುವಂಥ ಪರಿಸ್ಥಿತಿ ಉಂಟಾಗಿದೆ. (ಕನ್ನಡ ಭಾರತಿ–5, 19800

ಈ ಪಠ್ಯದಲ್ಲಿ ವ್ಯಕ್ತವಾಗುವ 'ಅಪರೂಪದ ಪ್ರತಿಭೆ'ಯ ಕುರಿತಾದ ಮೆಚ್ಚುಗೆ, ಅದು ('ಅಪರೂಪದ ಪ್ರತಿಭೆ') ಅಳಿಸಿ ಹೋಗುವಂಥ ಪರಿಸ್ಥಿತಿ ಉಂಟಾಗಿರುವ ಬಗ್ಗೆ ಬೇಸರ ಅಥವಾ ವಿಷಾದ, ಇಂತಹ ಒಂದು ಸಾಂಸ್ಕೃತಿಕ ರೂಪವನ್ನು ಉಳಿಸಿಕೊಳ್ಳಬೇಕೆಂಬ ಕಾಳಜಿ, ಉಳಿಸಿಕೊಳ್ಳಲಿಕ್ಕಾಗಿ ಸರಕಾರ ಅಥವಾ ಸಮಾಜ ಏನಾದರೂ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂಬ ಪರೋಕ್ಷ ಹಾಗೂ ಸೂಚ್ಯ ಸಲಹೆ ಇವೆಲ್ಲವೂ ಪಠ್ಯದ ಮೇಲುಮೈ ಸಂರಚನೆಯನ್ನು ವಿಶ್ಲೇಷಿಸಿದಾಗ ಕಂಡು ಬರುವ ಧನಾತ್ಮಕ ಅಂಶಗಳು. ಟಿಪಿಕಲ್ ಅಮೆರಿಕನ್ ಮಾದರಿಯಲ್ಲಿ ಹೇಳುವುದಾದರೆ 'Nice. Very nice. We ought to preserve it.' ಎನ್ನಬಹುದು.

'ಸಂಸ್ಕೃತಿ ಹದ್ದುಗಳು' (culture vultures) ಇಂತಹ 'ಅಳಿವಿನಂಚಿನಲ್ಲಿರುವ' ಕಲಾ ಸ್ವರೂಪ 'ವಿನಾಶದ ಅಂಚಿನಲ್ಲಿದೆ' ಎಂಬ ಸುದ್ದಿ ತಿಳಿಯುತ್ತಲೆ ತಮ್ಮ 'ವಿಶ್ವಸ್ತ ಮಂಡಳಿ' ಅಥವಾ 'ದತ್ತಿ ನಿಧಿ'ಯ ಸರ್ವ ಸದಸ್ಯರ ಸಭೆ ಕರೆದು, ಈ ಕಲಾ ಪ್ರಕರದ ರಕ್ಷಣೆಗಾಗಿ ನಿಲುವಳಿ ಸೂಚಿಸಿ ಠರಾವು ಮಂಡಿಸಿ ಅದನ್ನು ಅನುಮೋದಿಸಿ ಅದಕ್ಕೆ ಒಂದಷ್ಟು ಲಕ್ಷವೋ ಕೋಟಿಯೋ ಹಣ ಮಂಜೂರು ಮಾಡಿ ಮಂಡಳಿಯ ಅಧ್ಯಕ್ಷರು/ಕಾರ್ಯದರ್ಶಿ/ಸದಸ್ಯರು ಹವಾನಿಯಂತ್ರಿತ ಕಾರುಗಳಿಗೆ ಧುಮುಕಿ ಸಮೀಪದ ವಿಮಾನ ನಿಲ್ದಾಣಕ್ಕೆ ಧಾವಿಸಿ ಪ್ರಯಾಣ ಮಾಡಿ, ಪಂಚತಾರಾ ಹೋಟೆಲುಗಳಲ್ಲಿ ಉಳಿದುಕೊಂಡು ಕಲಾವಿದರ ಸಂದರ್ಶನ, ವೀಡಿಯೋ ಮಾಡಿಕೊಂಡು.

ಕಲಾಪ್ರಕಾರದ ದಾಖಲೀಕರಣ ನಡೆಸಿ ವಿಮಾನದಲ್ಲಿ ಹಿಂದಕ್ಕೆ ತಮ್ಮ ನೆಲೆಗೆ ಹಾರಿಬಿಡುತ್ತಾರೆ. ಎಲ್ಲವೂ ಮಾಧ್ಯಮದ ಪ್ರಚಾರದೊಂದಿಗೆ ನಡೆದುಬಿಡುತ್ತದೆ.

ಆದರೆ ಪಠ್ಯದ ಆಳದ ಸಂರಚನೆ ಹಾಗೂ ಆ ಮೂಲಕ ರಚಿಸಬಹುದಾದ ಸುಪ್ತ ಪಠ್ಯ ಹೇಗಿರಬಹುದು? ವಾಚ್ಯವಾಗಿ ಮೆಚ್ಚುಗೆ–ವಿಷಾದ–ಕಾಳಜಿಯ ಸುತ್ತ ಗಿರಕಿ ಹೊಡೆಯುವ ಪಠ್ಯ ಸೂಚ್ಯವಾಗಿ, ಸುಪ್ತವಾಗಿ ಏನನ್ನು ಹೇಳುತ್ತಿರಬಹುದು? ಕಲಾವಿದರ ಕಲೆಯ ಬಗ್ಗೆ ಸಮಾಜ ತೋರುವ ಆಸಕ್ತಿ ಅವರ ಕಲಾತ್ಮಕ ನೆಲೆಯ ಬಗ್ಗೆ ತೋರುವ ಕುತೂಹಲ ಅವರ ಆರ್ಥಿಕ ನೆಲೆಯ ಬಗ್ಗೆಯೂ ವ್ಯಕ್ತವಾಗುತ್ತದೆಯೇ?

ಈ ಪಠ್ಯದ ಸುಪ್ತ ಪಠ್ಯವನ್ನು ಹೀಗೆ ಗುರುತಿಸಬಹುದು:

ಇಂಥ ಕಲಾಪ್ರದರ್ಶಕ, ಸಂಸ್ಕೃತಿ ಪ್ರಸಾರಕ – 'ಬಹುರೂಪಿ' ಸಮಾಜ ಕರ್ನಾಟಕದಂತೆ ಮಹಾರಾಷ್ಟ್ರ, ಗುಜರಾಥ, ಪಂಜಾಬ ಮುಂತಾದ ಇತರ ಪ್ರದೇಶಗಳಲ್ಲಿಯೂ ಇದೆ. ಕರ್ನಾಟಕದಲ್ಲಿ ಮಾತ್ರ ಇರುವುದಲ್ಲ. ಇದೊಂದು ಸಮಾಧಾನಕರ ವಿಷಯ. ಆದರೆ ಈ ಸಮಾಜದ ಕೆಲವರು ಇತ್ತೀಚೆಗೆ ತಮ್ಮ ಪರಂಪರಾಗತವಾದ ಈ ವೃತ್ತಿಯನ್ನು ಬಿಡುತ್ತಿದ್ದಾರೆ. ಇದು ಸಂತೋಷದ ಸಂಗತಿಯಲ್ಲ. ಇವರು ಒಕ್ಕಲುತನ, ಬೆತ್ತದ ಕೆಲಸಗಳಂಥ ಇತರ ಉದ್ಯೋಗಗಳಿಗೆ ಅಂಟಿಕೊಳ್ಳತೊಡಗಿದ್ದಾರೆ. ಇದು ಕೂಡ ಸಂತೋಷದ ಸಂಗತಿಯಲ್ಲ, ತುಂಬ ಬ್ಯಾಸರದ ಸಂಗತಿ. ಯಾಕೆಂದರೆ ಹೀಗೆ ಇವರು ಒಕ್ಕಲುತನ, ಬೆತ್ತದ ಕೆಲಸಗಳಂಥ ಇತರ ಉದ್ಯೋಗಗಳಿಗೆ ಅಂಟಿಕೊಳ್ಳುವುದರಿಂದ ಇವರು ಅಲೆಮಾರಿ ಜೀವನ ನಡೆಸಿ ಊರಿಂದ ಊರಿಗೆ ಹೋಗುತ್ತ ನಮ್ಮಂತಹ ಮೃಷ್ಟಾನ್ನ ಪುಷ್ಟರಿಗೆ, ಮಧ್ಯಮ ವರ್ಗದ ಸುಖಜೀವಿಗಳಿಗೆ ಮನೋರಂಜನೆ ಸಿಗುವ ಸವಲತ್ತು ತಪ್ಪಿಹೋಗುತ್ತದೆ. ಈ ಪ್ರತಿಭೆ ಅಳಿಸಿಹೋದರೆ ನಮ್ಮಂಥವರ ಗತಿ ಏನು? ಈ ಪ್ರತಿಭೆ ಅಳಿಸಿಹೋಗಬಾರದು. ಅದನ್ನು ಉಳಿಸಿಕೊಳ್ಳಬೇಕು. ಅದನ್ನು ಉಳಿಸಿಕೊಳ್ಳಬೇಕಾದರೆ ಬಹುರೂಪಿಗಳು ಅಲೆಮಾರಿ ಜೀವನ ನಡೆಸುತ್ತ, ಅವರ ಮಕ್ಕಳು ಶಾಲೆಗೆ ಹೋಗದೆ ಊರ ಶಾಲಾ ಮಕ್ಕಳಿಗೆ ಮನರಂಜನೆ ಒದಗಿಸುತ್ತ ಅವರು ಈಗ ಇರುವ ಸ್ಥಿತಿಯಲ್ಲೆ ಇರಬೇಕು. ಅವರ ಸಾಮಾಜಿಕ ಆರ್ಥಿಕ ಸ್ಥಿತಿ ಬದಲಾದರೆ, ಅವರು ಕೂಡ ನಮ್ಮ ಹಾಗೆ ಉದ್ಯೋಗಗಳಿಗೆ ಅಂಟಿಕೊಂಡು ಒಂದು ಕಡೆ ನೆಲೆ ನಿಂತರೆ ಅವರ ಕಲೆ ಉಳಿಯುವುದಿಲ್ಲ. ಅದು ಉಳಿಯಬೇಕು.

ಅದನ್ನು 'ನಾವು' ಉಳಿಸಬೇಕು. 'ಅವರು' ಅದನ್ನು ಉಳಿಸುವ ನಮ್ಮ ಯೋಜನೆಗೆ ಒಪ್ಪಿ ಈಗಿರುವ ಸ್ಥಿತಿಯಲ್ಲೆ ಮುಂದುವರಿದಲ್ಲಿ ಅವರ ಕಲೆ ಉಳಿಯುತ್ತದೆ. ಇಂತಹ ಕಲೆಯ ಉಳಿವಿಗಾಗಿ ನಾವು ದುಡಿಯೋಣ, ಶ್ರಮಿಸೋಣ. ಜೈ ಕರ್ನಾಟಕ! ಜೈ ಭಾರತ್ ಮಾತಾ!

**ಊಳಿಗಮಾನ್ಯ ಹಾಗೂ ಸಾಂಪ್ರದಾಯಿಕ ಎರಕದಲ್ಲಿ ಮಹಿಳೆಯರ ಪಡಿಯಚ್ಚೀಕರಣಕ್ಕೆ ನೆರವಾಗುವ ಸಾಮಾಜಿಕ ಹಾಗೂ ಕೌಟುಂಬಿಕ ಶ್ರೇಣೀಕರಣ.**

**ಪೀಠಿಕೆ**

ಶಿಕ್ಷಣ–ಮುಖ್ಯವಾಗಿ ಲಿಬರಲ್ ಶಿಕ್ಷಣ – ಗಂಡು ಹೆಣ್ಣುಗಳಿಗೆ ತಮ್ಮಲ್ಲಿ ಆತ್ಮಗೌರವ ಮೂಡಿಸಿ 'ಸಮಾನತೆ' ಎನ್ನುವ ಪದದ ಅರ್ಥವನ್ನು ಮನದಟ್ಟು ಮಾಡಿಸಿದಾಗ, ಅಂತಹ ಶಿಕ್ಷಣ ಅರ್ಥಪೂರ್ಣ ಸಾಮಾಜಿಕ ಬದಲಾವಣೆಗೆ ದಾರಿ ಮಾಡಿಕೊಡುತ್ತದೆ – ಎನ್ನುವುದು ಒಂದು ನಂಬಿಕೆ. ತಲೆಮಾರುಗಳಿಂದ ತೀವ್ರತರವಾದ ಶೋಷಣೆಗೆ ಗುರಿಯಾದ ಹೆಣ್ಣಿಗೆ ಶಿಕ್ಷಣ ದೊರೆತಲ್ಲಿ ಸಮಾಜದ ಮುಖವೇ ಬದಲಾಗುತ್ತದೆ, ಅದರ ಚಲನಶೀಲತೆಗೆ ಹೊಸ ಆಯಾಮ ದೊರಕುತ್ತದೆ ಎನ್ನುವುದು ಹಲವರ ಅಭಿಪ್ರಾಯ.

ಈ ನಂಬಿಕೆ ಮತ್ತು ಅಭಿಪ್ರಾಯವನ್ನು ತಳ್ಳಿಹಾಕುವಂತಿಲ್ಲ. ಆದರೆ ಈ ದೇಶದಲ್ಲಿ ಶಿಕ್ಷಣ – ಮುಖ್ಯವಾಗಿ ಮಹಿಳೆಯರ ಶಿಕ್ಷಣ ಏನನ್ನು ಸಾಧಿಸಿದೆ ಎಂದು ಗಂಭೀರವಾಗಿ ಯೋಚಿಸಿದಾಗ ಎದ್ದು ಕಾಣುವ ಒಂದು ಅಂಶವೆಂದರೆ, ಶಿಕ್ಷಣ ಮಹಿಳೆಯರನ್ನು (ಮುಖ್ಯವಾಗಿ ನಮ್ಮ ನಗರಗಳಲ್ಲಿ) ಆರ್ಥಿಕವಾಗಿ ಸ್ವಾವಲಂಬಿಗಳಾಗಿಸುವಲ್ಲಿ ಬಹಳ ಸಹಕಾರಿಯಾಗಿದೆ ಎನ್ನುವುದು. ಅಂದರೆ ತಾವು ಪಡೆದ ಪದವಿ, ಶಿಕ್ಷಣದಿಂದಾಗಿ ಹೆಣ್ಣು ನೌಕರಿ ದೊರಕಿಸಿಕೊಂಡು ಗಂಡಿನ ಕೈಯಲ್ಲಿ ಆರ್ಥಿಕ ಶೋಷಣೆ (economic exploitation)ಗೊಳಗಾಗುವುದು ತಪ್ಪಿದೆ. ಆದರೆ ಅವರು ಪಡೆದ, ಪಡೆಯುತ್ತಿರುವ ಶಿಕ್ಷಣವು ಅವರನ್ನು ತಮ್ಮ ಮತ್ತು ತಮ್ಮ ಸುತ್ತಮುತ್ತ ನಡೆಯುವ ದಬ್ಬಾಳಿಕೆ, ಕ್ರೌರ್ಯ, ಅನ್ಯಾಯ, ಹಿಂಸೆಗಳಿಗೆ ಸ್ಪಂದಿಸುವಂತೆ ಮಾಡುವಲ್ಲಿ ಶೋಚನೀಯವಾಗಿ ಸೋತಿದೆ, ಸೋಲುತ್ತಿದೆ. ಅವರು ಪಡೆಯುವ ಶಿಕ್ಷಣ, ಐಟಿ (ಮಾಹಿತಿ ತಂತ್ರಜ್ಞಾನ), ಬಿಟಿ (ಜೈವಿಕ ತಂತ್ರಜ್ಞಾನ), ಎಮ್‌ಬಿಎ (ವಾಣಿಜ್ಯ ಆಡಳಿತ ಸ್ನಾತಕೋತ್ತರ ಪದವಿ)ಗಳು ಅವರನ್ನು ಬಹುರಾಷ್ಟ್ರೀಯ ಕಂಪೆನಿಗಳ, ಕಾರ್ಪೊರೇಟ್ ಸಂಸ್ಥೆಗಳ ಭಾರೀ ಸಂಬಳದ ನೌಕರಿ ಗಿಟ್ಟಿಸಿಕೊಂಡು ಪ್ರತಿಷ್ಠಾ ಪೂಜಕರನ್ನಾಗಿ ಮಾಡುತ್ತಿವೆಯೇ ಹೊರತು ದಮನಕ್ಕೊಳಗಾಗುವ ಇತರ ಹೆಣ್ಣುಗಳ ಬಗ್ಗೆ ಭಾವನಾತ್ಮಕವಾಗಿ ಮೆದುವಾಗಲು, ಅಂತಹ ಹೆಣ್ಣುಗಳ ಉದ್ದೇಶಕ್ಕಾಗಿ, ಅಂತಹ ಹೆಣ್ಣುಗಳಿಗೆ ನ್ಯಾಯ ದೊರಕಿಸಲಿಕ್ಕಾಗಿ ಪ್ರತಿಭಟಿಸಲು ಸಿದ್ಧಗೊಳಿಸುತ್ತಿಲ್ಲ. ನಮ್ಮ

ಕಾಲೇಜುಗಳ, ವಿಶ್ವವಿದ್ಯಾಲಯಗಳ ವಿದ್ಯಾರ್ಥಿನಿ ಸಮುದಾಯ ಕಾಲೇಜು ವಿಶ್ವವಿದ್ಯಾಲಯಗಳ ಆವರಣದಲ್ಲಿ ಸುಗಂಧಭರಿತ ವಾತಾವರಣವನ್ನು ನಿರ್ಮಿಸುತ್ತದೆಯೇ ಹೊರತು ಅನ್ಯಾಯದ ವಿರುದ್ಧ ಪ್ರತಿಭಟಿಸುವುದು, ಹೋರಾಡುವುದು ಮುಖ್ಯ ಅಂತ ತಿಳಿಯುವುದಿಲ್ಲ. ಊಳಿಗಮಾನ್ಯ ಹಾಗೂ ಸಾಂಪ್ರದಾಯಿಕ ಎರಕದಲ್ಲಿ ನಮ್ಮ ಸಮಾಜ ಹೆಣ್ಣನ್ನು ಬೆಳೆಸುವ ರೀತಿ, 'ಅಡಿಗೆ ಮಾಡು-ಬಡಿಸು-ಬಟ್ಟೆ ಒಗೆ' ಎರಕದಲ್ಲಿ ಆಕೆಯನ್ನು ಪಡಿಯಚ್ಚೀಕರಿಸುವ ವಿಧಾನ ಮತ್ತು ಈ ಎರಕದಲ್ಲಿ ಆಕೆಗೆ ಸಮಾಜ ಕೊಡಮಾಡಿರುವ ಸ್ಥಾನವೂ ಇದಕ್ಕೆ (ಶಿಕ್ಷಿತ ಮಹಿಳೆಯರು ಅನ್ಯಾಯದ ವಿರುದ್ಧ ಪ್ರತಿಭಟಿಸದಿರುವುದಕ್ಕೆ) ಕಾರಣ ಎನ್ನಬಹುದು.

ಊಳಿಗಮಾನ್ಯ (feudal) ಹಾಗೂ ಸಾಂಪ್ರದಾಯಿಕ (conservative) ಎರಕದಲ್ಲಿ ಮಹಿಳೆಯರ ಪಡಿಯಚ್ಚೀಕರಣಕ್ಕೆ ಹೇಗೆ ನಮ್ಮ ಸಾಮಾಜಿಕ ಹಾಗೂ ಕೌಟುಂಬಿಕ ಶ್ರೇಣೀಕರಣ ಮತ್ತು ಕುಟುಂಬದ ಸದಸ್ಯರ ನಡುವೆ ಪಾತ್ರಗಳ ಹಂಚಿಕೆ ನೆರವಾಗುತ್ತದೆ ಎಂಬುದನ್ನು ನಮ್ಮ ಪಠ್ಯಪುಸ್ತಕಗಳು ಹೆಣ್ಣನ್ನು ಚಿತ್ರೀಕರಿಸುವ ರೀತಿಯ ವಿಶ್ಲೇಷಣೆಯ ಮೂಲಕ ಗುರುತಿಸಲು ಇಲ್ಲಿ ಪ್ರಯತ್ನಿಸಲಾಗಿದೆ.

ತಾಯಿ ಮಕ್ಕಳಿಗೆ ಹೇಳಿದಳು:

"ಉಷಾ, ಇಲ್ಲಿ ಬಾ, ನೀನು ಮೊದಲು ಎಲ್ಲ ಆರತಿಗಳನ್ನು ತೊಳೆ. ನೀನೂ ಬಾ ಭಾರತಿ. ನೀನು ದೇವರ ಕೋಣೆಯನ್ನು ಸ್ವಚ್ಛ ಮಾಡು. ತೋಟಕ್ಕೆ ಹೋಗಿ ಹೂವು ತಾ. ಆಮೇಲೆ ಅಜ್ಜಿಗೆ ದೇವರ ಕೋಣೆಯನ್ನು ಸಿಂಗರಿಸಲು ಸಹಾಯ ಮಾಡಿರಿ. ಇಂದು ಬಹಳ ಕೆಲಸವಿದೆ."

ಇಷ್ಟು ಹೇಳಿ ಅವಳು ಅಡುಗೆಯ ಮನೆಗೆ ಹೋದಳು. ಸಿಹಿತಿಂಡಿಗಳನ್ನು ತಯಾರಿಸಲು ತೊಡಗಿದಳು.

ತಂದೆಯು ಹೇಳಿದನು – "ರವಿ, ನೀನು ಬಾ. ನಾವು ಪೇಟೆಗೆ ಹೋಗಬೇಕಾಗಿದೆ".

ತಂದೆ ಹಾಗೂ ರವಿ ಪೇಟೆಗೆ ಹೋದರು. ಎಲ್ಲ ಸಾಮಾನುಗಳನ್ನು ತಂದರು.

ಈ ಪಠ್ಯದ ಮೇಲ್ಮೈ ರಚನೆಯ ಪ್ರಕಾರ ನಮ್ಮ ಪಠ್ಯಪುಸ್ತಕಗಳಲ್ಲಿ ಹೆಣ್ಣು ಯಾವಾಗಲೂ ಅಡುಗೆ ಮನೆಗೆ ಹೋಗುತ್ತಾಳೆ; ಗಂಡು ಪೇಟೆಗೇ ಹೋಗುತ್ತಾನೆ. ಹೂವು ತರುವುದು, ಕೊಳೆ ತೆಗೆಯುವುದು, ಅಲಂಕರಿಸುವುದು ಹೆಣ್ಣಿನ ಕೆಲಸ. ಸಾಮಾನುಗಳನ್ನು ತರುವುದು ಗಂಡಿನ ಕೆಲಸ.

ಈ ಮೊದಲು ವಿಶ್ಲೇಷಿಸಲಾದ ಮೊದಲ ಪಠ್ಯದ ಮೂರು ವಾಕ್ಯಗಳನ್ನು, ಅಲ್ಲಿ ಹೆಣ್ಣಿಗೆ ನಿಗದಿಪಡಿಸಲಾದ ಪಾತ್ರ (assigned role)ವನ್ನು ಈ ಮೇಲಿನ ಪಠ್ಯದಲ್ಲೂ ಹೆಣ್ಣಿಗೆ ನಿಗದಿಪಡಿಸಲಾದ ಪಾತ್ರದೊಂದಿಗೆ ಹೋಲಿಸಿ ನೋಡಿದಾಗ ಪಾತ್ರ ನಿಗದಿಪಡಿಸುವಿಕೆಯಲ್ಲಿ ಕಾಣಿಸುವ ಸಾಮ್ಯತೆ ಗಮನಾರ್ಹವಾಗಿದೆ. ಆದರೆ ಈಗ (2010) ಬಳಕೆಯಲ್ಲಿರುವ ಪರಿಸರ ಅಧ್ಯಯನ (2009) ಪಠ್ಯಪುಸ್ತಕದ 'ಪಾಠ–೧೧, ನಮ್ಮ ಕುಟುಂಬ'ದಲ್ಲಿ ಪಾತ್ರ ನಿಗದಿಪಡಿಸುವಿಕೆಯಲ್ಲಿ ಕಂಡುಬರುವ ವ್ಯತ್ಯಾಸ ಗಣನೀಯವಾದುದು. ಯಾಕೆಂದರೆ ಹೂವು ತರುವುದು, ಹೂವನ್ನು ಮುಡಿದುಕೊಳ್ಳುವುದು, ಸಿಂಗರಿಸುವುದು, ಸಿಂಗರಿಸಿಕೊಳ್ಳುವುದು – ಇದಕ್ಕಷ್ಟೇ ಹೆಣ್ಣು ಲಾಯಕ್ಕು ಎನ್ನುವ ಮನೋಧರ್ಮವನ್ನು ಪ್ರಾಥಮಿಕ ಶಾಲಾ ಹಂತದಲ್ಲೆ ಹೆಣ್ಣು ಮಕ್ಕಳ ಮನಸ್ಸಿನ್ಲಿ ಅಚ್ಚೊತ್ತಿದರೆ, ಈ ರೀತಿಯ, ಪಡಿಯಚ್ಚೀಕರಣದಲ್ಲಿ ಬೆಳೆಯುವ ಹೆಣ್ಣು ಮಕ್ಕಳು, ಕಾಲೇಜು ಹಂತಕ್ಕೆ ಬರುವಾಗ ಅವರಿಗೆ ಕಾಲೇಜುಗಳು, ಸ್ನಾತಕೋತ್ತರ ಕೇಂದ್ರಗಳು ಒಂದು ಫ್ಯಾಶನ್ ಪೆರೇಡ್ ನಡೆಸುವ, ಇಂದಿನ ಜಾಹೀರಾತು ಮಾರುಕಟ್ಟೆ ಪರಿಭಾಷೆಯಲ್ಲಿ 'ಕ್ಯಾಟ್‌ವಾಕ್' ಮಾಡುವ ಮತ್ತು ಪುಸ್ತಕದ ಬದನೆಕಾಯಿಯನ್ನು ಗಟ್ಟಿ ಮಾಡಿಸುವ ಕೇಂದ್ರಗಳಾಗುವುದು ಸಹಜ, ಮತ್ತು ಪ್ರಾಯ: ಸರಿ. ಯಾಕೆಂದರೆ ಶಿಕ್ಷಣದ ಮೂಲಕ ನಡೆಯುವ ಹೆಣ್ಣಿನ ಸಾಮಾಜೀಕರಣ (socialisation)ದ ಪ್ರಕ್ರಿಯೆಯಲ್ಲೆ ತಾನು ಅಲಂಕಾರದ ಒಂದು ವಸ್ತು, ಸಿಂಗಾರದ ಒಂದು ಗೊಂಬೆ ಎನ್ನುವ ಭಾವನೆ ಅಚ್ಚೊತ್ತಿದರೆ ಆಕೆ ತನಗೆ ಸಾಮಾಜಿಕ ಜವಾಬ್ದಾರಿಯೂ ಇದೆ ಎಂಬುದನ್ನು ಮರೆತುಬಿಡುತ್ತಾಳೆ. ಪರಿಣಾಮವಾಗಿ, ದಲಿತ ಹೆಣ್ಣೊಬ್ಬಳನ್ನು ಕಂಬಕ್ಕೆ ಕಟ್ಟಹಾಕಿ ಬಡಿದಾಗಲಾಗಲಿ, ಬಡ ಹೆಣ್ಣೊಬ್ಬಳು ಅತ್ಯಾಚಾರಕ್ಕೊಳಗಾದಾಗಲಾಗಲಿ, ಶೋಷಣೆಗೊಳಗಾದಾಗಲಾಗಲಿ ನಮ್ಮ ಕಾಲೇಜುಗಳ, ಇಂಜಿನಿಯರಿಂಗ್/ಮೆಡಿಕಲ್ ಮಹಾವಿದ್ಯಾಲಯಗಳ ವಿದ್ಯಾರ್ಥಿನಿ ಸಮುದಾಯ ಅದನ್ನು ಪ್ರತಿಭಟಿಸಿ ಬೀದಿಗಿಳಿಯುವುದಿಲ್ಲ.

ಅವರು ಪಡೆಯುವ ಶಿಕ್ಷಣ ಅವರು ಸಾಮಾಜಿಕವಾಗಿ ತೊಡಗುವಂತೆ ಮಾಡುವುದಿಲ್ಲ. ಈ ನಿಟ್ಟಿನಲ್ಲಿ 1986ರ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೊಂಡ ಬಳಿಕ ಬಳಕೆಗೆ ಬಂದಿರುವ ಪಠ್ಯಪುಸ್ತಕಗಳಲ್ಲಿ ಹೆಣ್ಣಿನ ಚಿತ್ರಣಕ್ಕೆ ಸಂಬಂಧಿಸಿದಂತೆ ಕಂಡುಬರುವ ಹೊಸ ಚಿಂತನೆ, ಹೊಸ ದೃಷ್ಟಿಕೋನ ಪ್ರಶಂಸನೀಯ.

## ಗ್ರಹಿಕೆಯ ರೀತಿ ಮತ್ತು ಮನೋಧರ್ಮದಲ್ಲಿ ಬದಲಾವಣೆ

ಪಠ್ಯಪುಸ್ತಕಗಳಲ್ಲಿ ಕಂಡುಬರುವ ಸಾಂಪ್ರದಾಯಿಕ ಪಾತ್ರ ಹಂಚಿಕೆಯ ಪಡಿಯಚ್ಚಿನಲ್ಲಿ ತಯಾರಾದವರಂತೆ ಬೆಳೆಯುವ ಹೆಣ್ಣುಮಕ್ಕಳು ಮುಂದಕ್ಕೆ ಕಾಲೇಜು ಹಂತಕ್ಕೆ ಬಂದಾಗ, ಅಥವಾ ಕಾಲೇಜು ಶಿಕ್ಷಣ ಮುಗಿಸಿ ಸಾಂಸಾರಿಕ ಬದುಕಿಗೆ ಕಾಲಿಟ್ಟ ಬಳಿಕ ಅವರು ತಮ್ಮ ಸುತ್ತಣ ಸಮಾಜವನ್ನು, ಪರಿಸರವನ್ನು ಗ್ರಹಿಸುವ ರೀತಿ ಹೇಗಿರುತ್ತದೆ? ಅವರ ಮನೋಧರ್ಮದಲ್ಲಿ, ಅನ್ಯಾಯ ದಬ್ಬಾಳಿಕೆ ಶೋಷಣೆಗೆ, ಹೆಣ್ಣಿನ ಶೋಷಣೆಗೆ ಅವರು ಪ್ರತಿಕ್ರಯಿಸುವ ರೀತಿಯಲ್ಲಿ ಏನಾದರೂ ಬದಲಾವಣೆ ಉಂಟಾಗುತ್ತದೆಯೇ?

ಶಿಕ್ಷಿತ ಯುವತಿಯರು ತಾವು ಮಿನಿಸ್ಕರ್ಟ್ ಅಥವಾ ಜೀನ್ಸ್ ಧರಿಸುವುದನ್ನು ನಿಲ್ಲಿಸಿದ ಕೂಡಲೆ, ಅಂದರೆ ಮದುವೆಯಾದ ಕೂಡಲೆ ಸೀರೆಯ ಕುರಿತು, ಸೀರೆಯನ್ನೇ ತೊಟ್ಟ ಈ ದೇಶದ ಆದರ್ಶ ನಾರಿಯರ ಕುರಿತು ಮಾತಾಡತೊಡಗುತ್ತಾರೆ. 'ನಮ್ಮ ಪರಂಪರೆ ಏನು? ನಮ್ಮ ನಾರಿಯರ ಸೀತಾ ಸಾವಿತ್ರಿಯರ – ಆದರ್ಶ ಎಂದರೇನು?!' ಅಂತೆಲ್ಲ ಬೀಗುತ್ತಾ, ಸಾಧ್ಯವಾದೆಡೆಗಳಲ್ಲೆಲ್ಲಾ ಭಗಿನೀ ಸಮಾಜ, ಮಹಿಳಾ ಸೇವಾಶ್ರಮ, ಮಹಿಳಾ ಸಮಾಜಗಳನ್ನು, 'ಹೆಣ್ಣು ಸಿಂಹ' ಕ್ಲಬ್‌ಗಳನ್ನು ಸ್ಥಾಪಿಸಿ ಶಿಶು ಪ್ರದರ್ಶನ, ಫ್ಯಾಶನ್‌ಶೋ, ಸ್ಥಳದಲ್ಲೆ ಚಿತ್ರ ಬರೆವ ಸ್ಪರ್ಧೆಗಳನ್ನೇರ್ಪಡಿಸುತ್ತಾರೆ. ಇವರು 'ಸಾಮಾಜಿಕ ಅನಿಷ್ಟ'ಗಳ ವಿರುದ್ಧ ಪ್ರತಿಭಟಿಸುವುದೂ ಇದೆ. ಆದರೆ ಇವರು ಪಡೆದ 'ಅಡಿಗೆ ಮಾಡು-ಬಡಿಸು-ಬಟ್ಟೆ ಒಗೆ' ಮಾದರಿಯ ಶಿಕ್ಷಣ ಸಾಧ್ಯವಾಗಿಸುವ ಇವರ ಪ್ರತಿಭಟನೆ ಯಾವತ್ತೂ ಸಾಮಾನ್ಯವಾಗಿ 'ಭಾರತೀಯ ಸ್ತ್ರೀ ಸಮಾಜದ ಘನತೆಗೆ ಕುಂದನ್ನು ಉಂಟುಮಾಡುವ' ವಿಷಯಗಳ ಕುರಿತಾಗಿರುತ್ತದೆ (ಉದಯವಾಣಿ, ಜುಲೈ 3, 1978).

ಶಿಕ್ಷಿತ ಮಹಿಳೆಯರು ಅಮೂರ್ತ, ಅಸಾಧ್ಯ ಆದರ್ಶಗಳ ಕುರಿತು ತಲೆಕೆಡಿಸಿಕೊಳ್ಳುವಷ್ಟು, ಕೋಮುದ್ವೇಷದಲ್ಲಾಗುವಂತೆ ಕಾಲ್ಪನಿಕ ಶತ್ರುವನ್ನು ಸದೆಬಡಿಯಲು ಸಿದ್ಧರಾಗುವ ಹಾಗೆ, ಮೂರ್ತ ಕ್ರೌರ್ಯ, ಅನ್ಯಾಯ, ಹಿಂಸೆಯ ಕುರಿತು ತಲೆಕೆಡಿಸಿಕೊಳ್ಳುವುದಿಲ್ಲ; ಪ್ರತಿಭಟನೆಗೆ ಸಿದ್ಧರಾಗುವುದಿಲ್ಲ.

ಈ ವಿಷಯ ಭಾರತೀಯ ಸಮಾಜದಲ್ಲಿ ಮಹಿಳಾ ಶಿಕ್ಷಣದ ಕುರಿತು ವಿಶೇಷವಾಗಿ ಹಾಗೂ ಶಿಕ್ಷಣದ ಕುರಿತು ಸಾಮಾನ್ಯವಾಗಿ ಯೋಚನೆ ಮಾಡುವ, ಯೋಜನೆ ರೂಪಿಸುವ ಶಿಕ್ಷಣ ತಜ್ಞರಿಗೂ ಸಮಾಜ ಶಾಸ್ತ್ರಜ್ಞರಿಗೂ ಮುಖ್ಯವಾಗಬೇಕು. ಯಾಕೆಂದರೆ ಸದ್ಯದ ಶಿಕ್ಷಣ ಕ್ರಮದಲ್ಲಿ ಪಡೆಯುವ ಶಿಕ್ಷಣ ವಿದ್ಯಾರ್ಥಿನಿಯರಿಗೆ ಶೋಷಣೆ, ಅನ್ಯಾಯದ ವಿರುದ್ಧ ಪ್ರತಿಭಟಿಸುವ ಮನೋಧರ್ಮವನ್ನು ದೊರಕಿಸಿಕೊಡುತ್ತಿಲ್ಲ.

ಆದ್ದರಿಂದ ನಮ್ಮ ಪಠ್ಯಗಳಲ್ಲಿ ಮಹಿಳೆಯರಿಗೆ ನೀಡಲಾದ ಹಾಗೂ ಮಹಿಳೆಯರು ನಿರ್ವಹಿಸುವ ಪಾತ್ರಗಳಲ್ಲಿ ಒಂದು ಮಾದರಿ ಬದಲಾವಣೆ (paradigm shift)ಯ ಅಗತ್ಯವಿದೆ. ಸ್ತ್ರೀ ಸಬಲೀಕರಣ, ಸ್ತ್ರೀಶಕ್ತಿ ಸಹಾಯಕ ಗುಂಪುಗಳು ಮತ್ತು ಸ್ತ್ರೀ ಸ್ವಸಹಾಯ ಗುಂಪುಗಳು ಸಮಾಜದಲ್ಲಿ ತಮ್ಮ ಅಸ್ತಿತ್ವವನ್ನು ಈಗಾಗಲೇ ಋಜುವಾತುಪಡಿಸಿರುವ ಹಿನ್ನೆಲೆಯಲ್ಲಿ ಇಂತಹ ಒಂದು ಮಾದರಿ ಬದಲಾವಣೆಯ ಸಾಧ್ಯತೆಯನ್ನು ಮುಂದಿನ ಭಾಗದಲ್ಲಿ ಚರ್ಚಿಸಲಾಗಿದೆ.

## ಮಹಿಳೆಯರಿಗೆ ನೀಡಲಾದ ಹಾಗೂ ಮಹಿಳೆಯರು ನಿರ್ವಹಿಸುವ ಪಾತ್ರಗಳಲ್ಲಿ ಮಾದರಿ ಬದಲಾವಣೆ (Paradigm Shift)

ಈ ಅಧ್ಯಯನದಲ್ಲಿ ಈಗಾಗಲೆ ನಡೆಸಲಾಗಿರುವ ನಮ್ಮ ಪಠ್ಯಪುಸ್ತಕಗಳ ಕೆಲವು ಭಾಗಗಳ ವಿಶ್ಲೇಷಣೆಯಿಂದ ಪಾರಂಪರಿಕವಾಗಿ ಈ ದೇಶದಲ್ಲಿ ಹೆಣ್ಣಿಗೆ ನೀಡಲಾಗಿರುವ ಪಾತ್ರಗಳು, ಪಡಿಯಚ್ಚುಗಳು ಎಂತಹವುಗಳು, ಯಾವುವು ಎಂಬುದು ಸ್ಪಷ್ಟವಾಗಿದೆ. 'ಆರ್ಯರ ಕಾಲದಲ್ಲಿ ನಮ್ಮ ದೇಶದಲ್ಲಿ ಹೆಂಗಸರಿಗೆ ಉನ್ನತಸ್ಥಾನವಿತ್ತು. ಮಹಿಳೆಯರನ್ನು ಗೌರವಿಸಲಾಗುತ್ತಿತ್ತು. ಸನಾತನ ಧರ್ಮದಲ್ಲಿ ಸ್ತ್ರೀಯೇ ಆದಿಶಕ್ತಿ. ಅವಳೇ ಮಾತೃದೇವತೆ, ಭೂದೇವಿ. ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾ: (ಎಲ್ಲಿ ಹೆಂಗಸರು ಪೂಜಿಸಲ್ಪಡುತ್ತಾರೋ ಅಲ್ಲಿ ದೇವತೆಗಳು ರಮಿಸುತ್ತಾರೆ) ಎಂದು ಸಾರಿದ ದೇಶ ಇದು' ಅಂತೆಲ್ಲ ಬೊಗಳೆ ಹೊಡೆಯುವ ಭಾರತೀಯ ಸಮಾಜದ ಮನಸ್ಸುಗಳಲ್ಲಿ ಹೆಣ್ಣಿನ ಬಗ್ಗೆ ಹುದುಗಿರುವ ಕ್ರೌರ್ಯ ಸಾಮಾನ್ಯವಾದದ್ದಲ್ಲ. ವರದಕ್ಷಿಣೆಗಾಗಿ ವಧುದಹನ, ತಮ್ಮ ಜಾತಿಯವನಲ್ಲದವನನ್ನು ಪ್ರೀತಿಸಿದಳು ಎಂಬ ಕಾರಣಕ್ಕಾಗಿ ಆಗಾಗ ನಡೆಯುವ 'ಗೌರವ ಹತ್ಯೆ' (honour killing)ಗಳು, ಕೇವಲ ಆರ್ಥಿಕ ಲಾಭದ ದೃಷ್ಟಿಯಿಂದ ನಡೆಸುವ ಹೆಣ್ಣು ಭ್ರೂಣಹತ್ಯೆಗಳು ಈ ಕ್ರೌರ್ಯದ ಕೆಲವು ಮಾದರಗಳು. ಗಂಡು ಮಗು ಹುಟ್ಟಿದಾಗ ಜಾಗಟೆ ಹೊಡೆದರೆ ಹೆಣ್ಣು ಹುಟ್ಟಿದಾಗ ಬಟ್ಟಲು ಬಡಿಯುವ ಕ್ರಮ ಇಲ್ಲಿತ್ತು; ಹಳ್ಳಿಗಳಲ್ಲಿ ಈಗಲೂ ಇರಬಹುದು. ಆದ್ದರಿಂದ ಸಮಾನತೆ, ಲಿಂಗತಾರತಮ್ಯ, ಗಂಡಿಗಿಂತ ಹೆಣ್ಣು ಕೀಳು ಎಂಬ ಭಾವನೆಗಳು ಮಡುಗಟ್ಟಿರುವ ಭಾರತೀಯ ಸಮಾಜದಲ್ಲಿ ಮಹಿಳೆಯರಿಗೆ ನೀಡಲಾದ ಹಾಗೂ ಅವರು ನಿರ್ವಹಿಸುವ, ನಿರ್ವಹಿಸುತ್ತ ಬಂದಿರುವ ಪಾತ್ರಗಳಲ್ಲಿ ಬದಲಾವಣೆ ತರುವುದು ಸುಲಭದ ಕೆಲಸವಲ್ಲ. ಆದರೂ ಕಳೆದ ಕೆಲವು ದಶಕಗಳಲ್ಲಿ 'ಗಂಡು ಸೀಮೆ' ಅನ್ನಿಸಿಕೊಂಡಿದ್ದ ರಂಗಗಳಲ್ಲಿ ಮಹಿಳೆಯರು ಸಾಧನೆಗೈದು ಹೆಣ್ಣು ನಿರ್ವಹಿಸಲಾಗದ ಕೆಲಸವೇ ಇಲ್ಲ ಎಂದು ಸಾಬೀತು ಮಾಡಿದ್ದಾರೆ. 2010ರ ಮಾರ್ಚ್ 8ರಂದು ಅಂತಾರಾಷ್ಟ್ರೀಯ ಮಹಿಳಾ ದಿನದಂದು ಕೇವಲ ಮಹಿಳೆಯರೇ ಎಲ್ಲ ಕೆಲಸಗಳನ್ನೂ ನಿರ್ವಹಿಸಿ ಮೊತ್ತಮೊದಲ ಬಾರಿಗೆ 'ಅಖಿಲ ಮಹಿಳಾ ಹಾರಾಟ' (all-women crew) ನಡೆಸಿ ನೇರ, ತಡೆರಹಿತ ವಿಮಾನ ಚಾಲನೆ ಮಾಡಿ ಮುಂಬಯಿಯಿಂದ ನ್ಯಾಯಾರ್ಕ್ ನಗರಕ್ಕೆ ಏರ್ ಇಂಡಿಯಾದ ಅಂತಾರಾಷ್ಟ್ರೀಯ ವಿಮಾನ

ಯಾನದ ಹಾರಾಟ ನಡೆಸಿದರು. ಈಗ ಭಾರತೀಯ ರಕ್ಷಣಾ ಪಡೆ, ಪೊಲೀಸ್, ಸೇನೆ, ಕಮಾಂಡೋ ಪಡೆ – ಎಲ್ಲದರಲ್ಲೂ ಮಹಿಳೆಯರು ಪುರುಷರಿಗೆ ಸಮಬಲರಾಗಿ ದುಡಿಯುತ್ತಿದ್ದಾರೆ; ವಿಭಿನ್ನ ರಂಗಗಳಲ್ಲಿ ಪಾತ್ರ ವಹಿಸುತ್ತಿದ್ದಾರೆ. ಮಹಿಳೆಯರ ಸಬಲೀಕರಣಕ್ಕೆ ಕಿರೀಟವಿಟ್ಟಂತೆ ಮಾರ್ಚ್ 10,2010ರಂದು ರಾಜ್ಯ ಸಭೆ ಮಹಿಳಾ ಮೀಸಲಾತಿ [33%] ಮಸೂದೆಯನ್ನು ಅಂಗೀಕರಿಸಿತು.

ಇಂತಹ ಪಾತ್ರ ಮಾದರಿ ಬದಲಾವಣೆಗೆ ನಮ್ಮ ಪಠ್ಯಪುಸ್ತಕಗಳು ಮಹತ್ವ ನೀಡಬೇಕು. ಇದು ಸಾಧ್ಯವಾಗಬೇಕಾದರೆ 'ಹೆಣ್ಣಿಗೆ ಅಸಾಧ್ಯ' ಎಂದು ತಲತಲಾಂತರದಿಂದ ಸಮಾಜ ತಿಳಿದಿದ್ದ ಗಂಡು ಕ್ಷೇತ್ರಗಳಲ್ಲಿ ವಿಶಿಷ್ಟ ಸಾಧನೆ ಮಾಡಿದ ತ್ಯಾಗ, ಧೈರ್ಯ, ಸಾಹಸ ಪ್ರದರ್ಶಿಸಿದ ಭಾರತೀಯ ಮಹಿಳೆಯರ ಯಶೋಗಾಥೆಗಳು, ಸಾಹಸ ಕಥೆಗಳು ನಮ್ಮ ಹೆಣ್ಣುಮಕ್ಕಳಿಗೆ ಅವರು ಓದುವ ಪಠ್ಯಪುಸ್ತಕಗಳಲ್ಲಿ ಲಭ್ಯವಾಗಬೇಕು. 'ನಾನೂ ಅವರ ಹಾಗೆ ಆಗಬೇಕು' ಎನ್ನುವ ಧನಾತ್ಮಕ ಚಿಂತನೆ ಮೂಡುವಂತೆ ಹೆಣ್ಣು ಮಕ್ಕಳನ್ನು ಆ ಯಶೋಗಾಥೆಗಳು ಪ್ರೇರೇಪಿಸಬೇಕು. ಇಂತಹ ಮಾದರಿ ಬದಲಾವಣೆಯ ಉದಾಹರಣೆಯಾಗಿ ಇಲ್ಲಿ ಆರು ಮಂದಿ ಮಹಿಳೆಯರ ಸಾಧನೆಗಳನ್ನು ಉದಾಹರಿಸಲಾಗಿದೆ: ಸಾವಿಯಬ್ಬೆ (ಅನುಬಂಧ–4), ಗಂಗೂಬಾಯಿ ಹಾನಗಲ್ಲ (ಅನುಬಂಧ–5), ಭಾಂವ್ರಿ ದೇವಿ (ಅನುಬಂಧ–6), ನೀರಜಾ ಬಾನೊಟ್ (ಅನುಬಂಧ–2), ಕಿರಣ್ ಬೇಡಿ ಮತ್ತು ಕಲ್ಪನಾ ಚಾವ್ಲಾ. ಇವರಲ್ಲಿ ಪುರುಷರಿಗೆ ಸರಿಮಿಗಿಲೆಂಬಂತೆ ಯುದ್ಧರಂಗದಲ್ಲಿ ಹೋರಾಡಿ ಗಂಡನೊಡನೆ ಸಾವನ್ನಪ್ಪಿ, ಹೆಣ್ಣು ಅಬಲೆ ಎಂಬುದನ್ನು ಹುಸಿಗೊಳಿಸಿದ ಸಾವಿಯಬ್ಬೆ ಮಾಸ್ತಿಯವರ 'ಸಾವಿಯಬ್ಬೆ' ಸಣ್ಣಕತೆಯ ನಾಯಕಿ ಈಗಾಗಲೇ ಪಠ್ಯಪುಸ್ತಕಗಳ ಮೂಲಕ ವಿದ್ಯಾರ್ಥಿಗಳಿಗೆ ಪರಿಚಿತಳಾಗಿದ್ದಾಳೆ. ಪಾಟೀಲ ಪುಟ್ಟಪ್ಪನವರ 'ನವ ಕರ್ನಾಟಕದ ನಿರ್ಮಾಪಕರು' ಗ್ರಂಥದಿಂದ ಆಯ್ದುಕೊಂಡ 'ಗಂಗೂಬಾಯಿ ಹಾನಗಲ್ಲ' ಪ್ರಬಂಧ ಕೂಡ 'ಕನ್ನಡ ಭಾರತಿ–೮'ರಲ್ಲಿ ಸೇರ್ಪಡೆಗೊಂಡಿದೆ. 'ಕನ್ನಡ ಕಸ್ತೂರಿ–೯'ರಲ್ಲಿ ಭಾಂವ್ರಿದೇವಿ ಪಠ್ಯದ ಭಾಗವಾಗಿದ್ದಾರೆ. ನೀರಜಾ ಬಾನೊಟ್ ಮತ್ತು ಕಲ್ಪನಾ ಚಾವ್ಲಾ ಕೂಡ ಪಠ್ಯಪುಸ್ತಕಗಳಲ್ಲಿ ಪಾಠದ ರೂಪದಲ್ಲಿ ವಿದ್ಯಾರ್ಥಿನಿಯರಿಗೆ ಸ್ಫೂರ್ತಿಯಾಗಿದ್ದಾರೆ. ಕಿರಣ್ ಬೇಡಿ 'ಕನ್ನಡದ ಕಿರಣ್ ಬೇಡಿ' ಚಲನಚಿತ್ರದ ಮೂಲಕ ಕನ್ನಡನಾಡಿನ ಮನೆಮಾತಾಗಿದ್ದಾರೆ. ಇವರೆಲ್ಲ ಹೆಣ್ಣಿಗೆ ವಹಿಸಲಾಗಿರುವ ಪಾತ್ರಗಳಲ್ಲಿ

ಆಗಿರುವ ಮಾದರಿ ಬದಲಾವಣೆಗೆ ಉಜ್ವಲ ಉದಾಹರಣೆಗಳು. ಇಂತಹ ಇನ್ನಷ್ಟು ಪಾಠಗಳನ್ನು ಪಠ್ಯಕ್ರಮದಲ್ಲಿ ಸೇರಿಸಿಕೊಳ್ಳಬಹುದು.

ಇಂತಹ ಮಹಿಳೆಯರಲ್ಲಿ ಮೂರು ಮಂದಿ ಮಹಿಳೆಯರ ಸಾಧನೆಗಳನ್ನು ಇಲ್ಲಿ ಗಮನಿಸಿ, ಇವರನ್ನು ಶಿಕ್ಷಕರು ಪಠ್ಯದಲ್ಲಿ ಯಾವ ದೃಷ್ಟಿಕೋನದಿಂದ ವಿದ್ಯಾರ್ಥಿಗಳಿಗೆ ಪರಿಚಯಿಸಬೇಕೆಂದು ಚರ್ಚಿಸಲಾಗಿದೆ.

ಗದ್ಯಪಾಠ

## ೧೧. ಧೀರೆ ನೀರಜಾ

ಮಕ್ಕಳೇ ಸ್ತ್ರೀ ಅಬಲೆಯಲ್ಲ: ಸಂದರ್ಭ ಬಂದಾಗ ಎಂತಹ ತ್ಯಾಗಕ್ಕೂ ಸಿದ್ಧಳು ಎಂಬುದನ್ನು ತೋರಿಸಿಕೊಟ್ಟವರಲ್ಲಿ ನೀರಜಾ ಬಾನೋಟ್ ಒಬ್ಬಳು. ನೀರಜಾ ಬಾನೋಟ್ ಸುಪ್ರಸಿದ್ಧ ಪತ್ರಕರ್ತ ಹರೀಶ್ ಬಾನೋಟ್ ಮತ್ತು ರಮಾ ಬಾನೋಟ್ ಅವರ ಮಗಳು. ಅತ್ಯಂತ ಸುಂದರಿ. ತನ್ನ 17ನೇ ವಯಸ್ಸಿನಲ್ಲೇ ಪ್ರಸಿದ್ಧ ರೂಪದರ್ಶಿ ಎನಿಸಿದ್ದಳು.

ನೀರಜಾ ಅವಳ ಮದುವೆಯಾಯಿತು. ಗಂಡ ವರದಕ್ಷಿಣೆಗಾಗಿ ಪೀಡಿಸಿದಾಗ ಅವಳ ವೈವಾಹಿಕ ಜೀವನ ಮುರಿದುಬಿತ್ತು. ದು:ಖದಲ್ಲಿದ್ದ ತಂದೆಗೆ ಸಮಾಧಾನ ಹೇಳಿದಳು. 'ಅಪ್ಪಾ ಒಂದಲ್ಲ ಒಂದು ದಿನ ನೀವು ನನ್ನ ಬಗ್ಗೆ ಹೆಮ್ಮೆ ಪಡುವಂತೆ ಸಾಧಿಸಿ ತೋರಿಸುತ್ತೇನೆ' ಎಂದು ಸಂತೈಸಿದಳು. ಎಂತಹ ಕಷ್ಟದಲ್ಲಿಯೂ ನೀರಜಾ ಬದುಕಿನಿಂದ ಹಿಮ್ಮೆಟ್ಟಲಿಲ್ಲ.

ಕೆಲವೇ ದಿನಗಳಲ್ಲಿ ನೀರಜಾ 'ಪ್ಯಾನ್ ಆಮ್' ವಿಮಾನ ಸಂಸ್ಥೆಯಲ್ಲಿ ಗಗನಸಖಿಯಾಗಿ ಕೆಲಸಕ್ಕೆ ಸೇರಿದಳು. ನಗುನಗುತ್ತಲೆ ಕರ್ತವ್ಯ ನಿರ್ವಹಿಸುತ್ತಾ, ತನ್ನ ಸ್ವಂತ ನೋವನ್ನು ಮರೆತಳು. ಎಲ್ಲರಿಗೂ ಆತ್ಮೀಯಳಾದಳು.

ಮರುವರ್ಷ 1986ರ ಸೆಪ್ಟೆಂಬರ್ 7ರಂದು ವಿಮಾನ ಮುಂಬಯಿಯಿಂದ ನ್ಯೂಯಾರ್ಕಿಗೆ ಹೊರಟಿತ್ತು. ಮಧ್ಯೆ ನಾಲ್ಕು ಮಂದಿ ವಿಮಾನಗಳ್ಳರು ಕರಾಚಿಯಲ್ಲಿ ವಿಮಾನವನ್ನು ವಶಪಡಿಸಿಕೊಂಡರು. 400 ಮಂದಿ ಪ್ರಯಾಣಿಕರು ಜೀವಭಯದಿಂದ ಹೆದರಿದರು. ನೀರಜಾಳ ಬದುಕಿನಲ್ಲಿ ಮತ್ತೊಂದು ಅಗ್ನಿಪರೀಕ್ಷೆ ಎದುರಾಯಿತು. ತಾನು ಈ ವಿಪತ್ತಿನಿಂದ ಸುಲಭವಾಗಿ ತಪ್ಪಿಸಿಕೊಳ್ಳಬಹುದಾಗಿತ್ತು. ತಂದೆಗೆ ತಾನಿತ್ತ ವಚನ ಆಗ ನೆನಪಾಗಿರಬೇಕು. ನೀರಜಾ ತನ್ನ ಜೀವಕ್ಕಿಂತ ಇತರರ ಕ್ಷೇಮವೇ ಮುಖ್ಯವೆಂದು ತೀರ್ಮಾನಿಸಿದಳು. ಪ್ರಾಣಭೀತರಾದ ಪ್ರಯಾಣಿಕರಿಗೆ 17 ಗಂಟೆಗಳ ಕಾಲ ಧೈರ್ಯ ತುಂಬುತ್ತಾ ನಗುನಗುತ್ತಾ ಕರ್ತವ್ಯ ನಿರ್ವಹಿಸಿದಳು. ವಿಮಾನಗಳ್ಳರಿಗೆ ಗೊತ್ತಾಗದಂತೆ ಪ್ರಯಾಣಿಕರು ತಪ್ಪಿಸಿಕೊಳ್ಳಲು ತುರ್ತುದ್ವಾರವನ್ನು ತೆಗೆದಳು.

ಇದನ್ನು ಕಂಡ ಒಬ್ಬಾತ ಅವಳತ್ತ ಗುಂಡಿನ ಮಳೆಗರೆದ. ಪ್ರಯಾಣಿಕರಿಗಾಗಿ ತನ್ನ ಜೀವವನ್ನೇ ಬಲಿಯಿತ್ತಳು. ಆಗ ನೀರಜಾಗೆ ಕೇವಲ ಇಪ್ಪತ್ನಾಲ್ಕು ವರ್ಷ ವಯಸ್ಸು.

ನೀರಜಾ ಕೊನೆಯ ಉಸಿರಿನವರೆಗೆ ಕರ್ತವ್ಯವನ್ನು ನಿರ್ವಹಿಸಿದಳು. ಅವಳ ಸಮಯಪ್ರಜ್ಞೆಯಿಂದ ನೂರಾರು ಪ್ರಯಾಣಿಕರ ಜೀವ ಉಳಿಯಿತು. ತಾನು ಕೊಟ್ಟ ಮಾತನ್ನು ಉಳಿಸಿಕೊಂಡಳು. ಭಾರತದ ವೀರನಾರಿಯರ ಸಾಲಿಗೆ ಸೇರಿದಳು. ಧೈರ್ಯ ಮತ್ತು ತ್ಯಾಗಕ್ಕೆ ಮತ್ತೊಂದು ಹೆಸರೇ ಧೀರೆ ನೀರಜಾ!

ಭಾರತ ಸರ್ಕಾರ ಧೈರ್ಯ, ಸಾಹಸಕ್ಕೆ ಕೊಡುವ ಅತ್ಯನ್ನತ ಪ್ರಶಸ್ತಿ ಅಶೋಕ ಚಕ್ರ. ಅದನ್ನು ಪಡೆದ ಏಕೈಕ ಮಹಿಳೆ ನೀರಜಾ ಬಾನೋಟ್. ಅವಳ ಆದರ್ಶವನ್ನು ಅಳವಡಿಸಿಕೊಂಡು ದೇಶ ಸೇವೆಗೆ ಸಿದ್ಧರಾಗೋಣ.

(ಕನ್ನಡ ಕಲಿ–ನಲಿ, ೪ – ನಾಲ್ಕನೇ ತರಗತಿ – ೨೦೦೮, ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.), ಬೆಂಗಳೂರು)

**ನೀರಜಾ ಬಾನೊಟ್**

ಈ ಪಾಠದ ಮೊದಲ ವಾಕ್ಯದಲ್ಲಿ ಮಕ್ಕಳಿಗೆ ನೀಡಲಾಗಿರುವ ಸಂದೇಶ ('ಸ್ತ್ರೀ ಅಬಲೆಯಲ್ಲ; ಸಂದರ್ಭ ಬಂದಾಗ ಎಂತಹ ತ್ಯಾಗಕ್ಕೂ ಸಿದ್ಧಳು') ಎಳೆಯ ಮಕ್ಕಳ ಮನಸ್ಸಿನಲ್ಲಿ ಅಚ್ಚೊತ್ತಿ ನಿಲ್ಲುವಂತೆ ಶಿಕ್ಷಕರು ಮಾಡಬೇಕು. ಹೆಣ್ಣೊಬ್ಬಳು ವಿಮಾನಗಳ್ಳರಿಗೆ ಗೊತ್ತಾಗದಂತೆ ಪ್ರಯಾಣಿಕರು ತಪ್ಪಿಸಿಕೊಳ್ಳಲು ತುರ್ತುದ್ವಾರವನ್ನು ತೆಗೆದು, ಅದನ್ನು ಕಂಡ ಒಬ್ಬಾತ (ವಿಮಾನಗಳು) ಅವಳತ್ತ ಗುಂಡಿನ ಮಳೆಗರೆದಾಗ, ಆಕೆ ಪ್ರಯಾಣಿಕರಿಗಾಗಿ ತನ್ನ ಜೀವವನ್ನೇ ಬಲಿಯಿತ್ತದ್ದು 10-11ರ ಹರೆಯದ ಹೆಣ್ಣು ಮಕ್ಕಳಿಗೆ ತಾವೂ ಧೀರೆ ನೀರಜಾಳ ಹಾಗೆ ಎಂತಹ ತ್ಯಾಗಕ್ಕೂ ಸಿದ್ಧರಾಗಬೇಕು ಎಂಬ ಪ್ರೇರಣೆಯನ್ನು ಒದಗಿಸಬಲ್ಲದು. ನೀರಜಾ ತನ್ನ ಜೀವವನ್ನೇ ಬಲಿಯಿತ್ತಾಗ ಆಕೆಗೆ ಕೇವಲ ಇಪ್ಪತ್ತನಾಲ್ಕು ವರ್ಷ ಎಂಬ ಅಂಶವನ್ನೂ ಶಿಕ್ಷಕರು ಒತ್ತಿ ಹೇಳುವ ಅಗತ್ಯವಿದೆ.

ಆದರೆ ಇಂತಹ ಒಂದು ಪಾಠ ಕೂಡ ಭಾರತೀಯ ಪರಂಪರೆಯಲ್ಲಿ ಹೆಣ್ಣಿನ ಗುಣಗಾನ ಮಾಡುವಾಗ ಆಕೆ ಪ್ರೇಮಮಯಿ, ವಾತ್ಸಲ್ಯಮಯಿ ಮತ್ತು ತ್ಯಾಗಮಯಿ ಎಂದೇ ಗುಣಗಾನ ಮಾಡುತ್ತಿದ್ದ ಗಂಡು ಸಮಾಜದ ಚಾಣಾಕ್ಷತನದ ಒಂದು ಹುನ್ನಾರವಿರಬಹುದೆ ಎಂಬ ಅನುಮಾನ ಕಾಡಬಹುದು. ಯಾಕೆಂದರೆ 'ಕೆರೆಗೆ ಹಾರ'ದಲ್ಲಿ ಕೂಡ ಊರಿಗೆ ಮಳೆ ಬರಲೆಂದು ಹೆಣ್ಣನ್ನು ಬಲಿಕೊಡಲಾಗುತ್ತಿತ್ತು. ಆದರೆ ಆ ಹೆಣ್ಣು ಊರಗೌಡನ ಮಗಳಾಗಿರದೆ ಸೊಸೆಯಾಗಿರುತ್ತಿದ್ದಳು, ಯಾರದೋ ಮಗಳು ಸತ್ತರೆ ಅವನಿಗ್ಯಾಕೆ ಚಿಂತೆ? ಆದ್ದರಿಂದ ಕೆರೆಗೆ ಹಾರಿ ಪ್ರಾಣ ಬಿಡುವ ಹೆಣ್ಣನ್ನು ಹಾಡಿ ಹೊಗಳುವುದು ಮಾತ್ರ ಅವನ ಕೆಲಸವಾಗಿರುತ್ತಿತ್ತು.

ಇಲ್ಲಿ ಈ ಪಾಠದಲ್ಲಿ ಕೂಡ ಶಿಕ್ಷಕ/ಕಿ ಪಾಠದ ಯಾವ ಅಂಶಕ್ಕೆ ಒತ್ತು ಕೊಡುತ್ತಾನೆ/ಳೆ ಎಂಬುದನ್ನವಲಂಬಿಸಿ ಪಠ್ಯದ ಸುಪ್ತ-ಪಠ್ಯ ನಿರ್ಮಾಣಗೊಳ್ಳುವ ಸಾಧ್ಯತೆ ಇದೆ. ನೀರಜಾಳ ಧೈರ್ಯ ಸಾಹಸ, ತನ್ನ ಬದುಕನ್ನು ಅಪಾಯಕ್ಕೆ ಒಡ್ಡಿ ಇತರರಿಗೆ ನೆರವಾಗುವ ಆಕೆಯ ದೊಡ್ಡ ಗುಣದ ಮೇಲೆ ಶಿಕ್ಷಕಿಯ ಫೋಕಸ್ ಇದ್ದಾಗ ಪಾಠದ ಉದ್ದೇಶ ಈಡೇರುತ್ತದೆ. ಇದಕ್ಕೆ ಬದಲಾಗಿ ಆಕೆ, ನೀರಜಾ ತನ್ನ 17ನೇ ವಯಸ್ಸಿನಲ್ಲೇ ಪ್ರಸಿದ್ಧ ರೂಪದರ್ಶಿ, ಅಸಾಧಾರಣ ಚೆಲುವೆ ಎಂಬುದಕ್ಕೆ ಮಹತ್ವ ಕೊಟ್ಟು ಅವಳು ಅಷ್ಟು ಚಿಕ್ಕ ವಯಸ್ಸಿನಲ್ಲಿ ಪ್ರಾಣತ್ಯಾಗ ಮಾಡಿದ್ದು ದು:ಖದ ವಿಷಯ

ಎಂದು ಮಕ್ಕಳು ಆಕೆಗಾಗಿ ಕಣ್ಣೀರು ಸುರಿಸುವಂತೆ ಮಾಡಿದರೆ ಪಠ್ಯದ ಉದ್ದೇಶ ಈಡೇರಲಾರದು. ಭಾರತದ ವೀರನಾರಿ, ಧೈರ್ಯ, ತ್ಯಾಗ ಮತ್ತು ಇವೆಲ್ಲಕ್ಕಿಂತ ಮಿಗಿಲಾಗಿ ಸಮಯಪ್ರಜ್ಞೆ – ಈ ಅಂಶಗಳು ಮಕ್ಕಳ ಮನಸ್ಸಿನಲ್ಲಿ ನೆಲೆನಿಲ್ಲುವಂತೆ ಶಿಕ್ಷಕಿ ಪಠ್ಯವನ್ನು ಬಳಸಿಕೊಳ್ಳಬೇಕಾಗುತ್ತದೆ. ಅವಳ ಧೈರ್ಯಕ್ಕಿಂತ ಅವಳ (ಪ್ರಾಣ) ತ್ಯಾಗಕ್ಕೆ ಹೆಚ್ಚಿನ ಒತ್ತು ನೀಡಿದಲ್ಲಿ ಪಠ್ಯದ ನಿಜವಾದ ಸಂದೇಶ ಮಕ್ಕಳನ್ನು ಮುಟ್ಟದೇ ಇರುವ ಅಪಾಯವೂ ಇದೆ.

**ಕಿರಣ್ ಬೇಡಿ**

'ಉಕ್ಕಿನ ಮಹಿಳೆ, ಭಾರತದ ಮೊದಲ ಮಹಿಳಾ ಐಪಿಎಸ್ ಅಧಿಕಾರಿ' ಎಂಬ ಉಪಾಧಿಗೆ ಪಾತ್ರರಾಗಿರುವ ಕಿರಣ್ ಬೇಡಿಯವರ ಜೀವನ ಮತ್ತು ಸಾಧನೆ ಮಾಧ್ಯಮಿಕ ಅಥವಾ ಪ್ರೌಢಶಾಲಾ ಹಂತದ ಹೆಣ್ಣುಮಕ್ಕಳಿಗೆ ಒಂದು ಉಪಪಠ್ಯವಾಗಿ ನಿಗದಿಯಾಗುವ ಅರ್ಹತೆ ಹೊಂದಿದೆ. ಮಹಿಳಾ ಸಬಲೀಕರಣದಲ್ಲಿ ಮಹಿಳೆಯರು ಅಧಿಕಾರ ಮತ್ತು ಪ್ರಭಾವವುಳ್ಳ ಸರಕಾರಿ ಹುದ್ದೆಗಳಿಗೆ ನೇಮಕಗೊಳ್ಳುವುದು ಬಹಳ ಮುಖ್ಯವಾದ ಒಂದು ಹಂತ. ಪೊಲೀಸ್ ಹುದ್ದೆಗಳಿಗೆ ನೇಮಕವಾಗುವಂತೆ, ಪೊಲೀಸ್ ಇಲಾಖೆಗೆ ತಾವು ಸೇರಿ ಸೇವೆ ಸಲ್ಲಿಸುವಂತೆ, ಹೆಣ್ಣು ಮಕ್ಕಳನ್ನು ಶಾಲಾ ದಿನಗಳಲ್ಲಿ ಪ್ರೇರೇಪಿಸಬೇಕು. ಇಂತಹ ಪ್ರೇರೇಪಣೆಗೆ ಕಿರಣ್ ಬೇಡಿಯವರ ಬದುಕು ಮತ್ತು ಸಾಧನೆ ಸೂಕ್ತವಾದ ಪಠ್ಯವನ್ನೊದಗಿಸಬಲ್ಲದು.

1949ರಲ್ಲಿ ಜನನ, ಬಾಲ್ಯದಿಂದಲೇ ಹೊರಾಂಗಣ ಆಟೋಟಗಳಲ್ಲಿ ಆಸಕ್ತಿ, ತನ್ನ 17ನೇ ಹರೆಯದಲ್ಲೆ (1966) ರಾಷ್ಟ್ರೀಯ ಜೂನಿಯರ್ ಲಾನ್ ಟೆನ್ನಿಸ್ ಚ್ಯಾಂಪಿಯನ್‌ಶಿಪ್, 1972ರಲ್ಲಿ ಏಷ್ಯನ್ ಲಾನ್ ಟೆನ್ನಿಸ್ ಚ್ಯಾಂಪಿಯನ್‌ಶಿಪ್‌ಗಳಿಗೆ, ಕಾಲೇಜು ಉಪನ್ಯಾಸಕಿ, ಬಳಿಕ 1972ರಲ್ಲಿ ಐಪಿಎಸ್ ತೇರ್ಗಡೆಯಾಗಿ ಪೊಲೀಸ್ ಸೇವೆಗೆ ಧುಮುಕಿ ಭಾರತೀಯ ಪೊಲೀಸ್ ಇತಿಹಾಸದಲ್ಲಿ ಹೊಸ ಶಕೆ ಆರಂಭಿಸಿದ ಕೀರ್ತಿ.

ಡಿಐಜಿಯಾಗಿ ಮಿಜೋರಾಮ್ ದಂಗೆ ಅಡಗಿಸಿದ ಸಾಧನೆ, ಚಂಡೀಗಢದ ಲೆಫ್ಟಿನೆಂಟ್ ಗವರ್ನರ್ ಅವರ ಸಲಹಾಧಿಕಾರಿ, ಮಾದಕ ದ್ರವ್ಯ ವ್ಯವಹಾರ ನಿಯಂತ್ರಣ ಬ್ಯೂರೋದ ಮಹಾನಿರ್ದೇಶಕಿ. 'ಐ ಡೇರ್, ಇಟ್ಸ್ ಆಲ್‌ವೇಸ್ ಪಾಸಿಬಲ್' ಎಂಬ ಆತ್ಮಕಥನ 'ವ್ಹಾಟ್ ವೆಂಟ್ ರಾಂಗ್' ಎಂಬ ಅಂಕಣ ಬರಹಗಳ ಸಂಕಲನ, 'ದ ಮೋಟಿವೇಟಿಂಗ್ ಬೇಡಿ' – ಕಿರಣ್ ಬೇಡಿಯವರ ಪ್ರಕಟಿತ ಕೃತಿಗಳು. ಪ್ರೆಸಿಡೆಂಟ್ಸ್ ಗ್ಯಾಲಂಟರಿ ಅವಾರ್ಡ್, ವರ್ಷದ ಮಹಿಳೆ (1980), ಮಹಿಳಾ ಶಿರೋಮಣಿ, ಮದರ್ ತೆರೆಸಾ ಸ್ಮಾರಕ ಪ್ರಶಸ್ತಿಯೂ ಸೇರಿದಂತೆ ಹಲವಾರು ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಪ್ರಶಸ್ತಿಗಳನ್ನು ಗೆದ್ದುಕೊಂಡಿರುವ ಕಿರಣ್ ಬೇಡಿ ಇಂಡಿಯಾದ ಹೆಣ್ಣು ಮಕ್ಕಳಿಗೆ ನಿರಂತರ ಸ್ಫೂರ್ತಿಯ ಚಿಲುಮೆ.

ಸ್ತ್ರೀಶಕ್ತೀಕರಣದ ಕುರಿತು ನಮ್ಮ ಶಾಲಾ ಪಠ್ಯಗಳಲ್ಲಿ ಒಂದು ಪಾಠವನ್ನು ಸೇರಿಸಬೇಕೆಂದಾದಲ್ಲಿ 'ಕಿರಣ್ ಬೇಡಿ–ನೂತನ ಶಕ್ತಿ' ಎಂಬ ಶೀರ್ಷಿಕೆಯಲ್ಲಿ ಒಂದು ಪಾಠವನ್ನ ಪಠ್ಯಕ್ರಮದಲ್ಲಿ ಅಳವಡಿಸಬಹುದು. ನಮ್ಮ ಸಮಾಜವನ್ನು ಕಾಡುತ್ತಿರುವ ಲಂಚ, ಭ್ರಷ್ಟಾಚಾರ ಮತ್ತು ಪೊಲೀಸ್ ದೌರ್ಜನ್ಯವೆಂಬ ಅಂತರ್ – ಸಂಬಂಧಿ ಅನಿಷ್ಟತ್ರಯಗಳನ್ನು ತಡೆಯುವಲ್ಲಿ ಹೆಚ್ಚು ಹೆಚ್ಚು ಮಹಿಳೆಯರು ಪೊಲೀಸರಾಗಿ ಪ್ರಧಾನ ಪಾತ್ರವಹಿಸಬಲ್ಲರೆಂಬ ಭರವಸೆ ಇಟ್ಟುಕೊಂಡು ಬೇಡಿಯನ್ನು ಪಠ್ಯಕ್ರಮದ ಒಂದು ಭಾಗವಾಗಿ ಮಾಡಬಹುದು. ಈ ಭರವಸೆ ಎಷ್ಟರ ಮಟ್ಟಿಗೆ ಈಡೇರುತ್ತದೆಂಬುದನ್ನು ಕಾಲವೇ ನಿರ್ಣಯಿಸುತ್ತದೆ. ಆದರೂ ಈ ನಿಟ್ಟಿನಲ್ಲಿ ಪ್ರಯತ್ನ ಅನಿವಾರ್ಯ. ವಿಶ್ವ ಸಂಸ್ಥೆಯ ಶಾಂತಿಪಾಲನಾ ವಿಭಾಗದ ನಾಗರಿಕ ಪೊಲೀಸ್ ಸಲಹಾಧಿಕಾರಿ, ಮಾದಕ ವಸ್ತು ದಮನ, ಸಾರಿಗೆ ವ್ಯವಸ್ಥೆಯ ನಿರ್ದೇಶನ, ಅತಿಗಣ್ಯರ ಭದ್ರತೆ, ಸೆರೆಮನೆಗಳ ಮಹಾ ನಿರೀಕ್ಷಣಾಧಿಕಾರಿಯಾಗಿದ್ದ ಅವಧಿಯಲ್ಲಿ (1993–95) ದೆಹಲಿಯ ತಿಹಾರ್ ಜೈಲಿನಲ್ಲಿ ಯೋಗ ಧ್ಯಾನ, ಸಾಕ್ಷರತೆ ಮೊದಲಾದ ಕಾರ್ಯಕ್ರಮಗಳ ಅಳವಡಿಕೆ ಮೂಲಕ ಕೈದಿಗಳ ಮನಒಲಿಸಿ ಅವರನ್ನು ಸಭ್ಯನಾಗರಿಕರನ್ನಾಗಿ ಪರಿವರ್ತಿಸಿದ ಕಾರ್ಯಕ್ಕಾಗಿ, ವಿಶ್ವಮನ್ನಣೆ, ಈ ಸಾಧನೆಗಾಗಿ ರೇಮೋನ್ ಮ್ಯಾಗ್ಸೆಸೆ ಪ್ರಶಸ್ತಿ, ಜವಾಹರಲಾಲ್ ನೆಹರೂ ಫೆಲೋಶಿಪ್ – ಇವು ಯಾವ ವಿದ್ಯಾರ್ಥಿನಿಗಾದರೂ ಸ್ಫೂರ್ತಿದಾಯಕ ಸಾಧನೆಗಳು. ಶಿಕ್ಷಕರು ಈ ಸಾಧನೆಗಳಿಗೆ ಮಹತ್ವ ನೀಡಿ ವಿದ್ಯಾರ್ಥಿನಿಯರನ್ನು ಪೊಲೀಸ್ ಅಧಿಕಾರಿಗಳಾಗುವಂತೆ ಹುರಿದುಂಬಿಸಿದಲ್ಲಿ ಪಾಠದ ಉದ್ದೇಶ ಈಡೇರಿದಂತಾಗುತ್ತದೆ.

ಭಾರತದ ಪೊಲೀಸ್ ಸಂಶೋಧನ ಹಾಗೂ ಅಭಿವೃದ್ಧಿ ಬ್ಯೂರೋದ ಮಹಾನಿರ್ದೇಶಕಿಯಾಗಿ ಸೇವೆ ಸಲ್ಲಿಸಿದ ಬಳಿಕ 2007ರಲ್ಲಿ ಸ್ವಯಂ ನಿವೃತ್ತಿ, ಬಳಿಕ ತನ್ನದೇ ಆದ ಒಂದು ವೆಬ್‌ಸೈಟ್ ಆರಂಭಿಸಿ ಪೊಲೀಸ್ ಇಲಾಖೆ ಯಾವುದೇ ದೂರು ದಾಖಲಿಸಲು ನಿರಾಕರಿಸಿದಾಗ ಅಂತಹ ನಾಗರಿಕರ ದೂರು ಪಡೆದು ಅವರಿಗೆ ನ್ಯಾಯ ಒದಗಿಸುವ ಮಹಾಕಾರ್ಯ, ಬಡವರ ಮತ್ತು ಅಮಲುಕೋರರ ನೆರವಿಗಾಗಿ 'ನವಜ್ಯೋತಿ' ಮತ್ತು 'ಇಂಡಿಯಾ ವಿಷನ್' ಎಂಬ ಎರಡು ಸರಕಾರೇತರ ಸಂಸ್ಥೆಗಳ ಸ್ಥಾಪನೆ, ಈ ಸಂಸ್ಥೆಗಳ ಮೂಲಕ ಸಲ್ಲಿಸಿದ ಸೇವೆಗಾಗಿ ವಿಶ್ವಸಂಸ್ಥೆಯ 'ಸರ್ಜ್‌ಸ್ಯಾಟರೋಫ್ ಸ್ಮಾರಕ ಪ್ರಶಸ್ತಿ' ಬೇಡಿಯವರ ಇನ್ನಷ್ಟು ತುರಾಯಿಗಳು (ಮೈಥಿಲಿ ಎಸ್.2010)

## ಕಲ್ಪನಾ ಚಾವ್ಲಾ

"ಹರ್ಯಾಣದ ಒಂದು ಚಿಕ್ಕ ಪಟ್ಟಣದಿಂದ ಬಂದ ಈ ಭಾರತೀಯ ಮಹಿಳೆಯನ್ನು ಆಕಾಶ ಗಂಗೆಯ ಒಬ್ಬ ನಾಗರಿಕಳನ್ನಾಗಿ ಮಾಡಿದ ಧೈರ್ಯ ಮತ್ತು ದೃಢನಿರ್ಧಾರದ ಅಸಾಮಾನ್ಯ ಪ್ರಯಾಣವು ಎಲ್ಲರಿಗೂ ಹೆಮ್ಮೆಯ ಒಂದು ಮೂಲವಾಗಿ ಉಳಿಯುತ್ತದೆ".

–ಎ.ಪಿ.ಜೆ. ಅಬ್ದುಲ್ ಕಲಾಂ, ಭಾರತದ ಮಾಜಿ ರಾಷ್ಟ್ರಪತಿ

ಹರ್ಯಾನಾದ ಒಂದು ಚಿಕ್ಕ ಪಟ್ಟಣವಾದ ಕರ್ನಾಲ್‌ನಲ್ಲಿ ಸಂಪ್ರದಾಯಕರಣ ಕುಟುಂಬವೊಂದರಲ್ಲಿ ಜನಿಸಿದ ಕಲ್ಪನಾ ಚಾವ್ಲಾ ಚಿಕ್ಕ ಹುಡುಗಿಯಾಗಿದ್ದಾಗ ಆಕಾಶದಲ್ಲಿ ಮಿನುಗುವ ತಾರೆಗಳ ಕನಸು ಕಂಡವಳು. ಕಠಿಣ ಶ್ರಮ, ಅಸಾಮಾನ್ಯ ಬುದ್ಧಿಮತ್ತೆ ತನ್ನ ಸಾಮರ್ಥ್ಯದಲ್ಲಿ ತನಗಿದ್ದ ಅಗಾಧವಾದ ನಂಬಿಕೆಯಿಂದಾಗಿ ವ್ಯೋಮಯಾನ ಮಾಡಿದ ಮೊತ್ತಮೊದಲ ಭಾರತೀಯ ಮಹಿಳೆ ಕಲ್ಪನಾ ಚಾವ್ಲಾ. ನಾವೆಲ್ಲರೂ, ಮನಸ್ಸು ಮಡಿದರೆ, ನಕ್ಷತ್ರಗಳನ್ನು ತಲುಪಿಯೇವು ಎಂಬ ಸತ್ಯದ ದೃಢೀಕರಣವೇ ಕಲ್ಪನಾಳ ಜೀವನದ ಸಾರಂಶ, ತಿರುಳು ಮತ್ತು ತತ್ವ. ಕೊಲಂಬಿಯಾ ವ್ಯೋಮನೌಕೆಯಲ್ಲಿ ವ್ಯೋಮಯಾನ ಕೈಗೊಂಡು ತನ್ನ 7 ಮಂದಿ ಸಹವ್ಯೋಮ ಯಾನಿಗಳ ಜತೆ, ವ್ಯೋಮಯಾನ ಮುಗಿಸಿ 2003ರ ಫೆಬ್ರವರಿ 1ರಂದು ಮರಳುತ್ತಿದ್ದ ವ್ಯೋಮ ನೌಕೆ ಸ್ಫೋಟಗೊಂಡಾಗ ಆ ದುರಂತದಲ್ಲಿ ತನ್ನ 41ರ ಹರೆಯದಲ್ಲಿ ಆಕಾಶದಲ್ಲೆ ಸುಟ್ಟು ಬೂದಿಯಾಗಿ ಜಾಗತಿಕ ದಂತಕಥೆಯಾದವಳು ಕಲ್ಪನಾ. ತನಗೆ ಅತ್ಯಂತ ಪ್ರಿಯವಾದುದನ್ನೆ (ವ್ಯೋಮಯಾನ) ಮಾಡುತ್ತ ಅಸುನೀಗಿದ ಕಲ್ಪನಾಳ ಜೀವನಗಾಥೆ ಭಾವೀ ತಲೆಮಾರುಗಳಿಗೆ, ವಿಶೇಷವಾಗಿ ಮಹಿಳೆಯರಿಗೆ, ಒಂದು ಸ್ಫೂರ್ತಿ. ಕರ್ನಾಲ್‌ನಿಂದ ವ್ಯೋಮಕ್ಕೆ ಜಿಗಿದ ಭಾರತೀಯ ಮಹಿಳೆ, ಮಹಿಳೆಯರಿಗೆ ಅಸಾಧ್ಯವಾದುದೆಂದು ಪುರುಷ ಜಗತ್ತು ತಿಳಿದದ್ದನ್ನು ಸಾಧಿಸಿ ತೋರಿಸಿದ ಧೀರೆ.

'ಇಂಡಿಯಾ ಟುಡೆ' ಪತ್ರಿಕೆಗೆ ನೀಡಿದ ತನ್ನ ಕೊನೆಯ ಸಂದರ್ಶನದಲ್ಲಿ ತನ್ನ ಅದ್ಭುತ ಸಾಧನೆಗಳ ಗುಟ್ಟಿನ ಬಗ್ಗೆ ಹೇಳುತ್ತ ಕಲ್ಪನಾ ಚಾವ್ಲಾ ಆಡಿದ ಮಾತುಗಳಿವು: "ಒಂದು ಶಬ್ದದಲ್ಲಿ ಹೇಳುವುದಾದರೆ – ಪರ್ಸಿವಿಯರನ್ಸ್ (ಎಂತಹ ಕಷ್ಟವೇ ಎದುರಾದರೂ ಧೈರ್ಯ ಕುಂದದೆ ಮುನ್ನುಗ್ಗುವುದು)". ಆಕೆಯ ಗೆಳೆಯ ಅಕ್ಯುಫ್ ಕೊಲಂಬಿಯಾ ದುರಂತದ ಬಳಿಕ ತನ್ನ ವೆಬ್

ಪುಟದಲ್ಲಿ ಬರೆಯುತ್ತ ತನ್ನ ಮಗನಿಗೆ ಒಮ್ಮೆ ಕಲ್ಪನಾ ಬರೆದ ಸಾಲು, 'ನಕ್ಷತ್ರಗಳೆಡೆಗೆ ಕೈಚಾಚು" (Reach for the stars) ಎನ್ನುತ್ತಾನೆ: "ವಿಶ್ವದ ಎಲ್ಲ ಮಕ್ಕಳೂ ಕೇಳಿಸಿಕೊಳ್ಳಬೇಕಾದ ಕಲ್ಪನಾಳ ಸಂದೇಶ ಇದು. ನಾವು ಯಾವುದನ್ನು ಸಾಧ್ಯ ಎಂದು ನಂಬಿರುತ್ತೇವೋ ಅದನ್ನು ಮೀರಿದ್ದನ್ನು ತಲುಪುವ ಮೂಲಕ ಮಾತ್ರ ನಾವು ಅಸಾಧ್ಯವಾದುದನ್ನು ಸಾಧಿಸಬಹುದು."

ಕಲ್ಪನಾ ಚಾವ್ಲಾಳ ಜೀವನ ಚರಿತ್ರೆ ಬರೆದಿರುವ ಅನಿಲ್ ಪದ್ಮನಾಭನ್ ತನ್ನ ಕೃತಿಯನ್ನು ಹೀಗೆ ಕೊನೆಗೊಳಿಸುತ್ತಾರೆ: "ಭಾರತೀಯಳಾಗಿ ಜನಿಸಿದರೂ, ವ್ಯೋಮದಲ್ಲಿ, ಅಮೆರಿಕನಳಾಗಿ ನಿಧನಳಾದಳು. ನಿಜವಾದ ಅರ್ಥದಲ್ಲಿ ಓರ್ವ ಜಾಗತಿಕ ಪ್ರಜೆ. ಆಕೆ ಇಂಡಿಯಾ ಟುಡೇಗೆ ನೀಡಿದ ತನ್ನ ಅಂತಿಮ ಸಂದರ್ಶನದಲ್ಲಿ ಹೇಳಿದ ಹಾಗೆಯೇ, 'ಭೂಮಿಯೊಂದಿಗಿನ ಆ ಸಂಬಂಧ ಮತ್ತು ಮೆಲ್ವಿಚಾರಣೆ (stewardship)ಯನ್ನು ನನಗೆ ನೆನಪಿರುವ ತನಕ ನಾನು ಅನುಭವಿಸಿದ್ದೇನೆ ಮತ್ತು ಕೇವಲ ಭೂಮಿಯೊಂದಿಗಷ್ಟೇ ಅಲ್ಲ, ಇಡೀ ವಿಶ್ವದೊಂದಿಗೆ". (ಪದ್ಮನಾಭನ್: 2003)

ಈಗಾಗಲೇ ಇಂಗ್ಲಿಷ್ ಪಠ್ಯಪುಸ್ತಕದಲ್ಲಿ ಒಂದು ಪಾಠವಾಗಿರುವ ಕಲ್ಪನಾ ಚಾವ್ಲಾರವರ ಸಾಧನೆ ಗ್ರಾಮೀಣ ಪ್ರದೇಶದ ಬಡ ವಿದ್ಯಾರ್ಥಿನಿಯರಿಗೆ ಕನಸು ಕಾಣುವುದು ಕೂಡ ಕಷ್ಟ ಅನ್ನಿಸಬಹುದು. ಯಾಕೆಂದರೆ ವ್ಯೋಮಯಾನ, ವ್ಯೋಮಯಾನಿಯಾಗುವ ಕನಸು ಸಿರಿವಂತ ಹೆಣ್ಣುಮಗಳೊಬ್ಬಳ ಕೈಗೆ ಎಟಕಬಹುದಾದದ್ದು. ಆದರೂ ಕನಿಷ್ಟ ಪಕ್ಷ ವಿಮಾನದ ಪೈಲಟ್ ಆಗುವ ಮಟ್ಟಿಗಾದರೂ ಕಲ್ಪನಾ ಚಾವ್ಲಾ ಸಾಮಾನ್ಯ ವರ್ಗದ ಹೆಣ್ಣು ಮಗಳಿಗೆ ಸ್ಫೂರ್ತಿಯಾಗಬಲ್ಲಳು. ತರಗತಿಯಲ್ಲಿ ಶಿಕ್ಷಕರು ಈ ಆದರ್ಶ–ವಾಸ್ತವದ ಮಿತಿಯಲ್ಲೆ ಕಲ್ಪನಾ ಚಾವ್ಲಾ ವಿದ್ಯಾರ್ಥಿನಿಯರ ಕಲ್ಪನೆ ಗರಿಗೆದರುವಂತೆ ಮಾಡಬೇಕು. 'ಜಾಗತಿಕ ಪ್ರಜೆ'ಯ ಪರಿಕಲ್ಪನೆಗೆ ಒತ್ತು ನೀಡಿ, ಭವಿಷ್ಯದಲ್ಲಿ ವಿದ್ಯಾರ್ಥಿನಿಯರು ಮತೀಯವಾದಿಗಳಾಗದಂತೆ, ಸೆಕ್ಯುಲರ್‌ವಾದಿಗಳಾಗುವಂತೆ ಅವರನ್ನು ರೂಪಿಸಲು ಕೂಡ ಶಿಕ್ಷಕರು ಈ ಪಾಠವನ್ನು ಬಳಸಿಕೊಳ್ಳಬಹುದು.

## ಕರ್ನಾಟಕದಲ್ಲಿ ಸ್ತ್ರೀಶಕ್ತಿ ಚಳವಳಿ

### ಪೀಠಿಕೆ

ಮತದಾನದ ಹಕ್ಕು, ಸಮಾನ ಕೆಲಸಕ್ಕೆ ಸಮಾನ ವೇತನ, ರಾಜಕೀಯ ಹಕ್ಕುಗಳಲ್ಲಿ ಸಮಾನತೆಗಾಗಿ ಸ್ತ್ರೀವಾದಿಗಳು ನಡೆಸಿದ ಹೋರಾಟದಲ್ಲಿ ಸ್ತ್ರೀ ಸಬಲೀಕರಣ (Empowering Women) ಅಥವಾ (Empowerment of Women) ಪ್ರಬಲವಾಗಿ, ಒಂದು ಚಳವಳಿಯ ರೂಪದಲ್ಲಿ ಕಾಣಿಸಿದ್ದು 1980ರ ದಶಕದ ಬಳಿಕ. ಆ ಮೊದಲು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸುವ ಮೂಲಕ ಸ್ತ್ರೀ ಸಮಾನತೆ ಹಾಗೂ ಸ್ತ್ರೀ ಸಬಲೀಕರಣಕ್ಕಾಗಿ ಹೋರಾಡಿದ ಕರ್ನಾಟಕ ಮಹಿಳಾ ಹೋರಾಟಗಾರ್ತಿಯರಲ್ಲಿ ಕಮಲಾದೇವಿ ಚಟ್ಟೋಪಾಧ್ಯಾಯ, ಉಮಾಬಾಯಿ ಕುಂದಾಪುರ, ಕೃಷ್ಣಾಬಾಯಿ ಪಂಜೇಕರ್, ಯಶೋಧರಾ ದಾಸಪ್ಪ, ಸಿದ್ಧಮ್ಮ ಬಳ್ಳಾರಿ ಮತ್ತು ಗೌರಮ್ಮ ವೆಂಕಟರಾಮಯ್ಯ ಪ್ರಮುಖರು (ಶೈಲಜಾ:2008)

ಇತ್ತೀಚೆಗಿನ ವರ್ಷಗಳಲ್ಲಿ ವಿವಿಧೋದ್ದೇಶಗಳಿಗಾಗಿ ಸಂಘಟನೆಗೊಂಡು ಮಹಿಳೆಯರು ಹೋರಾಟ ನಡೆಸುತ್ತಿದ್ದಾರೆ. ಇವುಗಳಲ್ಲಿ ಮದ್ಯದ ಅಂಗಡಿಗಳು ಹಳ್ಳಿಗಳಲ್ಲಿ, ತಮ್ಮ ಊರುಗಳಲ್ಲಿ, ತಮಗೆ ತೊಂದರೆಯಾಗುವ ಜಾಗದಲ್ಲಿ ಬೇಡವೆಂದೋ ಅಥವಾ ತಮ್ಮ ಊರಿನಲ್ಲಿರುವ, ದಿಢೀರನೆ ತೆರೆದಿರುವ ಸಾಯಿಯ ಅಂಗಡಿ ಮುಚ್ಚಬೇಕೆಂದೋ ಮಹಿಳೆಯರು ನಡೆಸಿದ ಚಳವಳಿಗಳು, ಮತಪ್ರದರ್ಶನಗಳು ಬಲಿಷ್ಠ ಮದ್ಯದ ಲಾಬಿಯನ್ನು ಮಣಿಸುವಲ್ಲಿ ಯಶಸ್ವಿಯಾಗಿರುವುದು, ಅಥವಾ ಅಂತಹ ಪ್ರಕರಣಗಳಲ್ಲಿ ಸರಕಾರ ಮದ್ಯದ ಅಂಗಡಿಗಳನ್ನು ಮುಚ್ಚಲು, ಸ್ಥಳಾಂತರಿಸಲು ಆದೇಶಿಸಿರುವುದು ಸ್ತ್ರೀಸಬಲೀಕರಣದ ಯಶಸ್ಸನ್ನು ಹೇಳುತ್ತದೆ.

ಕರ್ನಾಟಕ ರಾಜ್ಯದ ಐದು ಜಿಲ್ಲೆಗಳಲ್ಲಿರುವ ಸ್ವ-ಸಹಾಯ ಗುಂಪುಗಳ ಸದಸ್ಯರಲ್ಲಿ 2006ರ ಸೆಪ್ಟೆಂಬರ್ ವೇಳೆಗೆ 76 ಶೇಕಡಾದಷ್ಟು ಸದಸ್ಯರು ಮಹಿಳೆಯರಿದ್ದರು. ರಾಜ್ಯದಲ್ಲಿ ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಮೈಸೂರು ಮತ್ತು ಧಾರವಾಡ ಜಿಲ್ಲೆಗಳಲ್ಲಿರುವ 20,532 ನವೋದಯ ಸ್ವ-ಸಹಾಯ ಗುಂಪುಗಳಲ್ಲಿ ಒಟ್ಟು 1,83,000 ಸದಸ್ಯರಿದ್ದು, ಇವರಲ್ಲಿ 1,37,000 ಮಂದಿ ಸದಸ್ಯರು ಮಹಿಳೆಯರು. 16,594 ನವೋದಯ ಗುಂಪುಗಳು ದಕ್ಷಿಣಕನ್ನಡ

ಜಿಲ್ಲೆಯೊಂದರಲ್ಲೆ ಕಾರ್ಯಾಚರಿಸುತ್ತಿವೆ. ಸಹಕಾರ ರಂಗದಲ್ಲಿ, ವಿಶೇಷವಾಗಿ ಸ್ವ–ಸಹಾಯ ಗುಂಪುಗಳ ವಿಷಯದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಸಾಧನೆ ರಾಜ್ಯದ ಇತರ ಜಿಲ್ಲೆಗಳ ಗ್ರಾಮೀಣ ಹಾಗೂ ಹಿಂದುಳಿದ ವರ್ಗಗಳಲ್ಲಿ, ಈ ವರ್ಗಗಳ ಮಹಿಳೆಯರಲ್ಲಿ ತಾವು ಆರ್ಥಿಕವಾಗಿ ಸ್ವಾವಲಂಬಿಗಳಾಗುವ ಭರವಸೆ ಮೂಡಿಸಿದೆ (ದಿ ಹಿಂದು, 01.09.2006).

ಸ್ತ್ರೀ ಸಬಲೀಕರಣ ಸ್ತ್ರೀಶಕ್ತಿ ಚಳವಳಿಯ ಬೆನ್ನೆಲುಬು. ಸ್ತ್ರೀ ಸಬಲೀಕರಣಕ್ಕೆ ಮುಖ್ಯವಾಗಿ ಬೇಕಾಗುವ ಎರಡು ಅಂಶಗಳೆಂದರೆ: ಆರ್ಥಿಕ ಸ್ವಾವಲಂಬನೆ ಮತ್ತು ರಾಜಕೀಯ–ಸಾಮಾಜಿಕ ಸಮಾನತೆಗೆ ಮುಕ್ತವಾದ ಅವಕಾಶ. ಮಹಿಳೆಯರನ್ನು ರಾಜಕೀಯವಾಗಿ ಹಾಗೂ ಸಾಮಾಜಿಕವಾಗಿ ಪುರುಷರಿಗೆ ಸಮಾನವಾಗಿಸುವ, ಅವರಿಗೆ ಸಮಾನ ರಾಜಕೀಯ ಅವಕಾಶ (space) ನೀಡುವ ಶತಮಾನದ ಕ್ರಾಂತಿಕಾರಕ ಹೆಜ್ಜೆಯಾಗಿ 2010ರ ಅಂತಾರಾಷ್ಟ್ರೀಯ ಮಹಿಳಾ ದಿನದಂದು ಭಾರತ ಸರಕಾರ ಸಂಸತ್ತಿನಲ್ಲಿ (ರಾಜ್ಯ ಸಭೆಯಲ್ಲಿ) ಮಹಿಳಾ ಮೀಸಲಾತಿ ಮಸೂದೆ ಮಂಡಿಸಿತು. ಸಂಸತ್ತಿನಲ್ಲಿ (ಲೋಕಸಭೆಯಲ್ಲಿ) ಮತ್ತು ರಾಜ್ಯಗಳ ಅಸೆಂಬ್ಲಿಗಳಲ್ಲಿ ಮಹಿಳೆಯರಿಗೆ 33% ಸ್ಥಾನಗಳನ್ನು ಮೀಸಲಿಡುವ ಈ ಮಸೂದೆ, ಕಾಯ್ದೆಯಾದಾಗ ಈ ದೇಶದ, ಕರ್ನಾಟಕ ರಾಜ್ಯದ ಸ್ತ್ರೀ ಸಬಲೀಕರಣದಲ್ಲಿ ದೊಡ್ಡ ಕ್ರಾಂತಿಯಾಗುತ್ತದೆ, ಅದು ಸ್ತ್ರೀಶಕ್ತಿ ಚಳವಳಿಯ ಶತಮಾನದ ಸಾಧನೆ ಅನ್ನಿಸಿಕೊಳ್ಳುತ್ತದೆ ಎಂದೆಲ್ಲ ವಾದಿಸಲಾಗಿದೆ.

ಆದರೆ ರಾಜ್ಯಸಭೆಗೆ ಅನ್ವಯಿಸದ ಈ ಮೀಸಲಾತಿ ವಿಚಿತ್ರ ಪರಿಸ್ಥಿತಿಯನ್ನು ನಿರ್ಮಿಸುವುದಲ್ಲದೆ, ಈಗ ಇರುವ ಮೀಸಲಾತಿ ಕೋಟಾದಲ್ಲಿ ಉಪ–ಕೋಟಾ (sub-quota) ಇಲ್ಲದಿರುವುದರಿಂದ ಮಹಿಳಾ ಮೀಸಲಾತಿಯ ಅರ್ಥ ಹಿಂದುಳಿದ ಜಾತಿಗಳ ಸವಲತ್ತನ್ನು ಕಸಿದುಕೊಂಡು ಇನ್ನಷ್ಟು ಮಂದಿ ಮೇಲ್ಜಾತಿಗಳ ಮಹಿಳಾ ಸಂಸದೆಯರು ಸಂಸತ್ತಿನಲ್ಲಿ ವಿರಾಜಮಾನರಾಗುವುದು.

ಸ್ತ್ರೀಶಕ್ತಿಗೆ, ಸ್ತ್ರೀಯರ ಸಬಲೀಕರಣಕ್ಕೆ ಮಹಿಳಾ ಮೀಸಲಾತಿ ಮಸೂದೆ ಏನು ಮಹತ್ತರ ಕಾಣಿಕೆ ಕೊಡುತ್ತದೆ? ಕಾಣಿಕೆ ಕೊಟ್ಟೀತು ಎಂಬ ಭರವಸೆ ಇಟ್ಟುಕೊಳ್ಳಬಹುದೆ? ಎಂದು ಅನುಮಾನ ಕಾಡುವುದು ಸಹಜ. ಯಾಕೆಂದರೆ ಮಹಿಳೆಯರು ಈಗಾಗಲೇ ನೂರಾರು ರೀತಿಯ

ತಾರತಮ್ಯಗಳನ್ನು ಅನುಭವಿಸುತ್ತಿದ್ದಾರೆ. ಹೆಣ್ಣು ಭ್ರೂಣ ಹತ್ಯೆ, ನವಜಾತ ಶಿಶುಹತ್ಯೆ ಹಾಗೂ ವರದಕ್ಷಿಣೆ ಸಾವುಗಳು ಮಹಿಳೆಯರ ಕೊಲೆಯ ತ್ರಿವಳಿ ವಿಧಾನಗಳಾಗಿವೆ. ಸಾಯದೆ ಬದುಕಿ ಉಳಿಯುವ ಹೆಣ್ಣುಗಳು, ಗಂಡು ಮಕ್ಕಳಿಗೆ ಹೋಲಿಸಿದರೆ, ಆಹಾರ, ಆರೋಗ್ಯ, ಶಿಕ್ಷಣ ಹಾಗೂ ವೃತ್ತಿ ಆಯ್ಕೆಯ ವಿಷಯಗಳಲ್ಲಿ ತಾರತಮ್ಯಕ್ಕೆ ಗುರಿಯಾಗುತ್ತಾರೆ. ವಯಸ್ಕ ಮಹಿಳೆಯರು ದೈಹಿಕ ದುರ್ಬಳಕೆ/ಹಿಂಸೆ ಹಾಗೂ ಅತ್ಯಾಚಾರಕ್ಕೊಳಗಾಗುತ್ತಾರೆ. ಮಹಿಳಾ ಕಾರ್ಮಿಕರಿಗೆ ಪುರುಷ ಕಾರ್ಮಿಕರಿಗೆ ನೀಡುವುದಕ್ಕಿಂತ ಕಡಿಮೆ ದಿನಗೂಲಿ ಕೊಡಲಾಗುತ್ತದೆ. ವಿಶ್ವದಲ್ಲೆ ಅತ್ಯಧಿಕ ಬಾಣಂತಿ ತಾಯಂದಿರು ಸಾಯುವುದು ಮತ್ತು ಅತ್ಯಧಿಕ ಮಹಿಳೆಯರು ರಕ್ತಹೀನತೆಯಿಂದ ಬಳಲುವುದು ಭಾರತದಲ್ಲಿ. ಹಳ್ಳಿಯ ಗಡಿ ದಾಟಿ ಚಿಕಿತ್ಸಾಲಯಕ್ಕೆ ಹೋಗುವಾಗ ತಮ್ಮ ಮೇಲೆ ದೈಹಿಕ ದಾಳಿ ನಡೆಯಬಹುದೆಂದು ಹೆಂಗಸರು ಹೆದರುತ್ತಾರೆ ಮತ್ತು ಚಿಕಿತ್ಸಾಲಯದವರೆಗೆ ಹಾಗೂ ಮತ್ತೆ ಹಿಂದಕ್ಕೆ ಅವರ ಜತೆ ಅವರ ಗಂಡಂದಿರು ನಡೆಯಬೇಕೆಂದರೆ ಅವರ ಒಂದು ದಿನದ ಸಂಬಳ ನಷ್ಟವಾಗುತ್ತದೆ.

ಅಸೆಂಬ್ಲಿಗಳಲ್ಲಿ ಹೆಚ್ಚು ಮಂದಿ ಮಹಿಳೆಯರು ಶಾಸಕಿಯರಾಗಿ ಕುಳಿತ ಕೂಡಲೆ ಇದೆಲ್ಲ ಬದಲಾಗುತ್ತದೆಯೇ? ಮಹಿಳೆಯರಿಗೆ ಲಿಂಗನ್ಯಾಯ ದೊರಕಿಸಲು ಈಗಾಗಲೆ ಈ ದೇಶದಲ್ಲಿ ಬೇಕಾದಷ್ಟು ಕಾನೂನುಗಳಿವೆ. ಆದರೆ ತಳಮಟ್ಟದಲ್ಲಿ ಈ ಕಾನೂನುಗಳನ್ನು ಅನುಷ್ಠಾನಗೊಳಿಸುವವರಿಲ್ಲ. ಸಾಮಾಜಿಕ ಅಂಗೀಕಾರವಿಲ್ಲದೆ ಲಿಂಗನ್ಯಾಯದ ನಿಯಮಗಳನ್ನು, ಕಾನೂನುಗಳನ್ನು ಅನುಷ್ಠಾನಗೊಳಿಸುವುದು ಸುಲಭಸಾಧ್ಯವಲ್ಲ. ಅಸೆಂಬ್ಲಿಗಳಲ್ಲಿ ಹೆಚ್ಚು ಶಾಸಕಿಯರು ಇದ್ದ ಮಾತ್ರಕ್ಕೆ ಲಿಂಗನ್ಯಾಯ ಮತ್ತು ಸ್ತ್ರೀ ಸಬಲೀಕರಣ ಪೂರ್ಣ ಯಶಸ್ವಿಯಾಗಿ, ಮಹಿಳೆಯರ ವಿರುದ್ಧ ಸಮಾಜ ನಡೆಸುವ ನಾನಾ ರೀತಿಯ ತಾರತಮ್ಯಗಳು ಕೊನೆಗೊಳ್ಳುವುದಿಲ್ಲ.

ಹಾಗಾದರೆ ಕರ್ನಾಟಕದಲ್ಲಿ ಸ್ತ್ರೀಶಕ್ತಿ ಚಳವಳಿಯ ಗೊತ್ತು ಗುರಿಗಳೇನು? ಅವು ಯಾವ ದಿಕ್ಕಿನಲ್ಲಿ ಸಾಗಬೇಕು?

ಸ್ತ್ರೀಶಕ್ತಿ ಚಳವಳಿ ಕರ್ನಾಟಕದ ಗ್ರಾಮಾಂತರ ಪ್ರದೇಶಗಳಲ್ಲಿ ಇನ್ನಷ್ಟು ಭದ್ರವಾಗಬೇಕು. ಗ್ರಾಮೀಣ ಮಹಿಳೆಯರ ಆರ್ಥಿಕ ಸ್ವಾವಲಂಬನೆಗೆ ನೆರವಾಗುವ ಮಹಿಳಾ ಸ್ವ-ಸಹಾಯ ಗುಂಪುಗಳಿಗೆ ಸರಕಾರ ನೆರವು ನೀಡಬೇಕು.

## ರಾಜಕೀಯ ಸರಿತನ (Political Correctness) ಮತ್ತು ಪಠ್ಯಗಳ ತಯಾರಿ

**ಪೀಠಿಕೆ**

### ಸೈದ್ಧಾಂತಿಕ ಹಿನ್ನೆಲೆ

ಲಿಂಗ (gender), ಜನಾಂಗೀಯ, ಸಾಂಸ್ಕೃತಿಕ, ಲೈಂಗಿಕ ಅಭಿಪ್ರೇರಣೆ (orientation), ಅಂಗವೈಕಲ್ಯ/ಅಸಾಮರ್ಥ್ಯ ಮತ್ತು ವಯೋಮಾನ-ಸಂಬಂಧಿ ಸಂದರ್ಭಗಳಲ್ಲಿ ಸಾಮಾಜಿಕ ಅವಮಾನ (social offense)ವನ್ನು ಕನಿಷ್ಠಗೊಳಿಸಲು ಪ್ರಯತ್ನಿಸುವಲ್ಲಿ ಭಾಷೆ, ವಿಚಾರಗಳು, ನೀತಿಗಳು (policies) ಮತ್ತು ವರ್ತನೆಯನ್ನು ಅರ್ಥೈಸುವ (denoting) ಒಂದು ಪದಪುಂಜವೇ ರಾಜಕೀಯ ಸರಿತನ (Political Correctness). ನಾಮ ವಿಶೇಷಣವಾಗಿ ಬಳಸುವಾಗ ರಾಜಕೀಯವಾಗಿ ಸರಿ (politically correct). ಈ ಎರಡೂ ಪದಪುಂಜಗಳ (terms) ಸಂಕ್ಷೇಪ ರೂಪ ಪಿಸಿ(PC). ಸದ್ಯದ ಬಳಕೆಯಲ್ಲಿ ಈ ಪದಪುಂಜಗಳು ತಿರಸ್ಕಾರ, ಅಸಮ್ಮತಿ ಅಥವಾ ಟೀಕೆಯನ್ನು ಅಭಿವ್ಯಕ್ತಿಸುವ (pejorative) "ಅಸಹನೆಉಳ್ಳ" ("intolerant") ಮತ್ತು "ಅಸಹನೆ" ("intolerence") ಎಂಬ ಅರ್ಥದಲ್ಲಿ ಬಳಕೆಯಾಗುತ್ತಿವೆ. ತಾನು 'ರಾಜಕೀಯವಾಗಿ ಸರಿಯಲ್ಲ' (ತಪ್ಪು) ಅಂದರೆ 'politically incorrect' ಎಂದು ಹೇಳಿಕೊಳ್ಳುವಾಗ ಅದು ಸೂಚ್ಯವಾಗಿ ಸ್ವ-ಸಮರ್ಥನೆ, ಸ್ವ ವಿವರಣೆ (self-description)ಯನ್ನು ಹೇಳುವ ಪದಪುಂಜವಾಗಿ ಬಳಕೆಯಾಗುತ್ತಿದೆ. (ವೈಕಿಪೀಡಿಯಾ, ದಿ ಫ್ರೀ ಎನ್‌ಸೈಕ್ಲೋಪೀಡಿಯಾ, 6.03.10ರಂದು ಅಂತರ್ಜಾಲದಿಂದ ಪಡೆದದ್ದು). ಅಂದರೆ ವ್ಯಕ್ತಿಯೊಬ್ಬ ತಾನು ಸಾಂಪ್ರದಾಯಿಕತೆ (orthodoxy)ಗೆ ಸೊಪ್ಪು ಹಾಕುವುದಿಲ್ಲ, ಸಾಂಪ್ರದಾಯಿಕತೆಯನ್ನು ಲೆಕ್ಕಿಸದೆ, ಅದರ ಬಂಧನ/ನಿಯಂತ್ರಣವನ್ನು ಮೀರಿ (unconstrained) ಮತ್ತು ಇನ್ನೊಬ್ಬನಿಗೆ/ಳಿಗೆ ಸಾಮಾಜಿಕವಾಗಿ ಅವಮಾನ ಅಥವಾ ಆತನ/ಳ ಭಾವನೆಗಳಿಗೆ ನೋವು ಆಗುತ್ತದೆ ಎಂದು ಭಯಪಡದೆ ಬಳಸುವ ಭಾಷೆ, ವಿಚಾರಗಳು ಮತ್ತು ವರ್ತನೆಯನ್ನು ಸೂಚಿಸುವ / ಧ್ವನಿಸುವ ಪದಪುಂಜವಾಗಿ 'ರಾಜಕೀಯವಾಗಿ ತಪ್ಪು' ಎಂಬ ಪದಪುಂಜ ಬಳಕೆಯಾಗುತ್ತಿದೆ.

ಇದನ್ನು ಸರಳೀಕರಿಸಿ ಹೇಳುವುದಾದರೆ ವಿವಿಧ ಜನಾಂಗ, ಧರ್ಮ, ಜಾತಿ, ಭಾಷೆ, ಸಂಸ್ಕೃತಿ, ವಯಸ್ಸು, ಮೈಬಣ್ಣ, ವರ್ತನೆ ಹಾಗೂ ವಿಚಾರಗಳನ್ನು ಹೊಂದಿರುವ ಒಂದು ಸಮಾಜದಲ್ಲಿ ಯಾವುದೇ ಒಬ್ಬ ವ್ಯಕ್ತಿ ಅಥವಾ ಸಮುದಾಯವನ್ನು ಉದ್ದೇಶಿಸಿ ಮಾತಾಡುವಾಗ ಅಥವಾ ಬರೆಯುವಾಗ ಯಾವ ವ್ಯಕ್ತಿಗೂ, ಗುಂಪಿಗೂ ಸಾಮಾಜಿಕವಾಗಿ ಅವಮಾನಕಾರಿ, ಅಥವಾ ಅದು ಲಿಂಗ, ಜಾತಿ/ಜನಾಂಗ, ಸಂಸ್ಕೃತಿ, ವಯಸ್ಸು ಮತ್ತು ಮೈಬಣ್ಣವನ್ನಾಧರಿಸಿ ತಾರತಮ್ಯ ಉಂಟು ಮಾಡುತ್ತದೆಂಬ ಭಾವನೆ ಉಂಟಾಗದ ಹಾಗೆ ಭಾಷೆಯನ್ನು, ಶಬ್ದಗಳನ್ನು ಬಳಸಿದರೆ ಅದು ರಾಜಕೀಯವಾಗಿ ಸರಿ, ಅಂದರೆ ಸಾಮಾಜಿಕವಾಗಿಯೂ ನೈತಿಕವಾಗಿಯೂ ಸರಿ. ಇದಕ್ಕೆ ಬದಲಾಗಿ ಯಾವುದೇ ಒಂದು ಶಬ್ದದ ಬಳಕೆಯಿಂದ ಯಾರಿಗೇ ಆದರೂ ಅವಮಾನವಾಗುತ್ತದೆ, ಆ ವ್ಯಕ್ತಿಗೆ ಅಥವಾ ಆತನ ಗುಂಪಿಗೆ ಅವಹೇಳನ ಮಾಡಿದಂತಾಗುತ್ತದೆ ಅನ್ನಿಸಿದಲ್ಲಿ ಅದು ರಾಜಕೀಯವಾಗಿ ಸರಿಯಲ್ಲ, ಅದು politically incorrect.

ಪಾಶ್ಚಾತ್ಯ ಸ್ತ್ರೀವಾದಿಗಳು ಮೊತ್ತ ಮೊದಲಾಗಿ ಇಂಗ್ಲಿಷ್ ಭಾಷೆಯಲ್ಲಿರುವ ಹಲವಾರು ಶಬ್ದಗಳನ್ನು ಬೆಟ್ಟು ಮಾಡಿ, ಆ ಶಬ್ದಗಳು ಪುರುಷ ಪ್ರಧಾನ/ಪಿತೃ ಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣನ್ನು ಕಡೆಗಣಿಸಲು, ಅವಮಾನಿಸಲು, ಅಮುಖ್ಯಗೊಳಿಸಲು ಬಳಸಲಾಗುವ ಶಬ್ದಗಳು; ಅವು ಸೆಕ್ಸಿಸ್ಟ್ (sexist) ಅಥವಾ ಲಿಂಗದ ನೆಲೆಯಲ್ಲಿ ಹೆಣ್ಣನ್ನು ಹಗುರಾಗಿ ನಡೆಸಿಕೊಳ್ಳುವ, ಅವಳಿಗೆ ಸಮಾನತೆಯನ್ನು ನಿರಾಕರಿಸುವ ಶಬ್ದಗಳು; ಆದ್ದರಿಂದ ಅವು ರಾಜಕೀಯವಾಗಿ ಸರಿಯಲ್ಲ; ಲಿಂಗ, ವಯಸ್ಸು ಇತ್ಯಾದಿಗಳ ನೆಲೆಯಲ್ಲಿ ಅವುಗಳಿಗೆ ಬದಲಿ ಪದಗಳನ್ನು (ರಾಜಕೀಯವಾಗಿ ಸರಿ ಆದ ಪದಗಳನ್ನು) ಬಳಸಬೇಕು ಎಂದು ವಾದಿಸಲಾರಂಭಿಸಿದರು. ಇಂತಹ ಸೆಕ್ಸಿಸ್ಟ್ ಅಥವಾ ಪುರುಷ ಪ್ರಾಧಾನ್ಯವನ್ನು ಮೆರೆಯುವ ಪದಗಳ ಸಾಲೇ ಇಂಗ್ಲೀಷ್ ಭಾಷೆಯಲ್ಲಿದೆ.

ಉದಾಹರಣೆಗೆ:

man-eater (ನರಭಕ್ಷಕ)

man-hour (ಒಂದು ಗಂಟೆಯಲ್ಲಿ ಒಬ್ಬ ವ್ಯಕ್ತಿ ಮಾಡುವ ಕೆಲಸ)

man of letters (ಸಾಹಿತಿ)

man-made

man-of-war (ಶಸ್ತ್ರಸಜ್ಜಿತವಾದ ಹಡಗು)

man-size (ದೊಡ್ಡದು)

manage

management

mango (ಮಾವು)

manhandle (ಥಳಿಸು)

mania (ಮನೋರೋಗ)

mankind (ಮನುಕುಲ)

manners (ವರ್ತನೆ, ನಡವಳಿಕೆ)

manpower (ಆಕ್ಸ್‌ಫರ್ಡ್ ಅಡ್ವಾನ್ಸ್‌ಡ್ ಲರ್ನರ್ಸ್ ಡಿಕ್ಶನರಿ, ಆಕ್ಸ್‌ಫರ್ಡ್, 1996)

ಇಂತಹ ಪದಗಳಲ್ಲಿ 'man' ಪದದ ಬದಲು ಯಾಕಾಗಿ 'woman' ಪದವನ್ನು ಬಳಸಬಾರದು? ಎಂಬ ಪ್ರಶ್ನೆ ಎದುರಾದಾಗ 'ವುಮನ್' ಪದದಲ್ಲೂ 'man' (wo<u>man</u>) ಇರುವುದರಿಂದ, ಅಂತಿಮವಾಗಿ 'womyn' ಎಂಬ ಪ್ರಯೋಗವನ್ನು ಅಥವಾ 'wofem' ಎಂಬ ಪದವನ್ನು ಬಳಸಬಹುದೆಂದು ಸೂಚಿಸಲಾಯಿತು. ಆದರೆ chairman, sportsman ಪದಗಳ ಬದಲು chairperson, sportsperson ಎಂಬ ಪದಗಳನ್ನು ಬಳಸುವಾಗಲೂ ಸ್ತ್ರೀವಾದಿಗಳು ಪುನ: ಅಲ್ಲಿ ಗಂಡು (son) ಪ್ರಾಬಲ್ಯವಿದೆ, son ಬದಲು 'daughter' (ಮಗಳು) ಅಂತ ಯಾಕೆ ಬಳಸಬಾರದು? ಎಂಬ ಪ್ರಶ್ನೆ ಎದುರಾಗಿ, ಅಂತಿಮವಾಗಿ ಈಗ ಮಹಿಳೆಯೊಬ್ಬರು ಒಂದು ಬ್ಯಾಂಕ್ ಅಥವಾ ಸಂಸ್ಥೆಯ ಮುಖ್ಯಸ್ಥೆಯಾಗಿದ್ದರೆ ಚೆಯರ್‌ಮ್ಯಾನ್ ಬದಲು ಚೆಯರ್‌ಪರ್ಸನ್ ಅಂತ ಕೂಡ ಹೇಳದೆ ಕೇವಲ 'chair' ಎಂದಷ್ಟೇ ಆಕೆಯನ್ನು ಕರೆಯಲಾಗುತ್ತದೆ. ಹಾಗಾಗಿ ಈಗ 'chair' ಎಂಬ ಪದ ರಾಜಕೀಯವಾಗಿ ಸರಿ ಅನ್ನಿಸಿಕೊಂಡಿದೆ. husband, wife, spouse ಪದಗಳಿಗೆ ಬದಲಾಗಿ companion ರಾಜಕೀಯವಾಗಿ ಸರಿಯಾದ ಶಬ್ದ. ರಾಜಕೀಯವಾಗಿ

ಸರಿಯಾದ ಪದಗಳ ಪದಪಟ್ಟಿಗಳು, ಅರ್ಥಕೋಶಗಳು ಕೂಡ ಬಂದಿವೆ. ಎ ಹ್ಯಾಂಡ್ ಬುಕ್ ಆಫ್ ಪೊಲಿಟಿಕಲಿ ಇನ್‌ಕರೆಕ್ಟ್ ಗೈಡ್ಸ್, ಪ್ರಕಾಶಕರು, ರೆಗ್ನರಿ ಎಡಿಟೋರಿಯಲ್ ಹೌಸ್‌ಗಳನ್ನು ಉದಾಹರಿಸಬಹುದು. (http://en.wikipedia.org/wiki/political correctness)

ಸಾಮಾಜಿಕವಾಗಿ ಒಬ್ಬ ವ್ಯಕ್ತಿಗೆ ಅಥವಾ ಸಮುದಾಯಕ್ಕೆ ಅವಮಾನಕಾರಿ ಅನ್ನಿಸದ ಭಾಷಾ ಪ್ರಯೋಗದ ಹುಡುಕಾಟದ ಫಲವಾಗಿ ಈಗ ಬಳಸಲಾಗುವ ಕೆಲವು ಪದಗಳನ್ನು ಕೆಳಗೆ ಕೊಡಲಾಗಿದೆ.

| ರಾಜಕೀಯವಾಗಿ ಸರಿಯಲ್ಲ | ರಾಜಕೀಯವಾಗಿ ಸರಿ |
|---|---|
| old (ಮುದುಕ/ಕಿ) | chronologically gifted (ವಯಸ್ಸಿನ ದೃಷ್ಟಿಯಿಂದ ಉಡುಗೊರೆ ಪಡೆದ) |
| bold (ಬೋಳು ತಲೆಯವ/ಳು) | follicularly challenged<br>ಅಥವಾ<br>hair disadvantaged |
| fat (ಬೊಜ್ಜು ಮೈಯವ/ಳು) | horizontally challanged<br>ಅಥವಾ<br>person of substance |
| housewife | domestic engineer<br>ಅಥವಾ<br>home maker |
| garbage collector (ಕಸ ತೆಗೆಯುವವ) | sanitation engineer |
| woman | w/o man, womyn |
| handicapped | physically challenged |
| ugly | visually challenging |

ಈ ದೇಶದ ಪಾಲಿಗೆ ಒಂದು ಶಾಪ ಮತ್ತು ಸವಾಲಾಗಿರುವ ಜಾತಿ ಪದ್ಧತಿ ತನ್ನ ಅತ್ಯಂತ ಸಂಕೀರ್ಣ ರೂಪಗಳಲ್ಲಿ ಮೂಲತ: ಒಂದಲ್ಲ ರೀತಿಯಲ್ಲಿ ಮನುಷ್ಯನನ್ನು ಅವಮಾನಿಸುವ ಒಂದು ವ್ಯವಸ್ಥೆ. ಮೇಲ್ಜಾತಿಗಳು, ಮಧ್ಯಮ ಜಾತಿಗಳು ಮತ್ತು ಕೆಳಜಾತಿಗಳೆಂದು ತನ್ನನ್ನು

ವರ್ಗೀಕರಿಸಿಕೊಂಡಿರುವ ಭಾರತೀಯ ಸಮಾಜದಲ್ಲಿ ಜಾತಿ ಹಾಗೂ ವಿವಿಧ ಮಟ್ಟಗಳ ಅಸ್ಪೃಶ್ಯತೆಯ ನೆಲೆಯಲ್ಲಿ ಅತ್ಯಂತ ಹೆಚ್ಚು ಅವಮಾನಕ್ಕೊಳಗಾದವರು, ಈಗಲೂ ಅವಮಾನಕ್ಕೊಳಗಾಗುತ್ತಿರುವವರು ದಲಿತರು. 1994ರಲ್ಲಿ ದಲಿತರಿಗೆ ಸಂಬಂಧಿಸಿ ಒಂದು ದೊಡ್ಡ ವಿವಾದ ಹುಟ್ಟಿಕೊಂಡಿತು. ದಲಿತ ನಾಯಕರಾಗಿರುವ ಕಾನ್ಶೀರಾಮ್ ಮತ್ತು ಮಾಯಾವತಿಯವರು ರಾಜಕೀಯ ಉದ್ದೇಶದಿಂದ ಗಾಂಧೀಜಿ ಬಗ್ಗೆ ನೀಡಿದ ಹೇಳಿಕೆಗಳು ದಲಿತ ರಾಜಕಾರಣದ ಕುರಿತು ಹೊಸ ಚರ್ಚೆ ಹಾಗೂ ಅನುಮಾನಕ್ಕೆ ಕಾರಣವಾದವು.

ಮೇಲ್ಜಾತಿಗಳು ತಮ್ಮ ಹಿತಾಸಕ್ತಿಗಳನ್ನು ಕಾಯ್ದುಕೊಳ್ಳಲು ಗಾಂಧೀಜಿಯ ಹೆಸರನ್ನು ಬಳಸಿಕೊಳ್ಳುತ್ತಿವೆಯೆಂದು ಬಹುಜನ ಸಮಾಜ ಪಕ್ಷಕ್ಕೆ ಅನ್ನಿಸಿದ್ದರಿಂದ ತಾನು ಗಾಂಧೀಜಿಯನ್ನು "ಅಧಃಪಾತಾಳಕ್ಕೆ ಇಳಿಸಬೇಕಾಯಿತು" ಎಂದ ಕಾನ್ಶೀರಾಮ್, ಗಾಂಧೀಜಿಯನ್ನು "ಜಾತಿವಾದಿ", "ಸನಾತನ ಚಾತುರ್ವರ್ಣ" ಜಾತಿಪದ್ಧತಿಯ ಪ್ರಬಲ "ಪ್ರತಿಪಾದಕ"ನೆಂದು ಕರೆದು ದೇಶದಲ್ಲಿ ವಿವಾದದ ಬಿರುಗಾಳಿ ಎಬ್ಬಿಸಿದರು, ಜತೆಗೆ "ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿ ಅಸ್ಪೃಶ್ಯರ ಉದ್ಧಾರಕರಂತೂ ಖಂಡಿತಾ ಅಲ್ಲ", "ಅಸ್ಪೃಶ್ಯತೆಯ ಬಗ್ಗೆ ಗಾಂಧೀಜಿಯವರದು ಸಂಪ್ರದಾಯವಾದಿ ನಿಲುವು; ಅಂಧ ಸನಾತನಿಯ ದೃಷ್ಟಿ", ಅವರು "ಅಸ್ಪೃಶ್ಯರನ್ನು ಹರಿಜನರೆಂದು ಕರೆದು ಅವಮಾನ ಮಾಡಿದರು" ಎಂದ ಕಾನ್ಶೀರಾಮ್ ಗಾಂಧೀಜಿ ದಲಿತರನ್ನು ಉಲ್ಲೇಖಿಸಲು ಬಳಸಿದ 'ಹರಿಜನ' ಶಬ್ದವನ್ನು ಕಾನೂನುಬದ್ಧವಾಗಿ ನಿಷೇಧಿಸಬೇಕೆಂದು ಕಾನ್‌ಪುರದಲ್ಲಿ ನಡೆದ ಪತ್ರಿಕಾಗೋಷ್ಠಿಯೊಂದರಲ್ಲಿ (ಎಪ್ರಿಲ್ 5, 1994) ಕರೆ ನೀಡಿದರು.

ಕುತೂಹಲದ ವಿಷಯವೆಂದರೆ 1994ರ ಎಪ್ರಿಲ್ 3ರಂದು ಮಂಗಳೂರಿನಲ್ಲಿ ನಡೆದ ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ। ಯು.ಆರ್.ಅನಂತಮೂರ್ತಿಯವರೊಡನೆ "ದಲಿತ ಬ್ಯಾಂಕ್ ಅಧಿಕಾರಿಗಳ ಒಕ್ಕೂಟದ ಮುಖಾಮುಖಿ ಸಂವಾದ"ದಲ್ಲಿ 'ಹರಿಜನ' ಶಬ್ದದ ಬಳಕೆಯನ್ನು ನಿಷೇಧಿಸುವ ಅವಶ್ಯಕತೆಯ ಕುರಿತೇ ಸುಮಾರು ಎರಡು ಗಂಟೆಗಳ ಕಾಲ ಚರ್ಚೆ ನಡೆಯಿತು. ಪತ್ರಿಕೆಗಳು ಒಂದು ಘಟನೆಯನ್ನು ಒಳಗೊಂಡಿದ್ದ ವ್ಯಕ್ತಿ ದಲಿತ ಸಮುದಾಯಕ್ಕೆ ಸೇರಿದವನಾಗಿದ್ದಲ್ಲಿ ಆತನ ಹೆಸರಿನ ಮುಂದೆ '.... ಹರಿಜನ' ಎಂಬ ಶಬ್ದವನ್ನು ಬಳಸಿ ಆತನ ಜಾತಿಯನ್ನು ಸೂಚಿಸುವುದು ಹೇಗೆ ಅವಮಾನಕಾರಿ ಮತ್ತು ಹೇಗೆ ಅದು ಇತರ ಊರುಗಳಲ್ಲಿ ಹಿಂಸೆಗೆ, ದಲಿತರ

ಮೇಲಣ ಹಲ್ಲೆಗೆ, ಅಂತಿಮವಾಗಿ ಊರಿನಲ್ಲಿ ಶಾಂತಿ ಹಾಗೂ ಕಾನೂನು ವ್ಯವಸ್ಥೆ ಹದಗೆಡುವುದಕ್ಕೆ ಕಾರಣವಾಗಬಹುದೆಂದು ವಿವರವಾಗಿ ಚರ್ಚಿಸಲಾಯಿತು. ಬಳಿಕ "ಪತ್ರಿಕೆಗಳು ಯಾವುದೇ ಜಾತಿಸೂಚಕ ಪದ ಬಳಸಕೂಡದೆಂದು ಈ ಸಭೆ ನಿಲುವಳಿ ಅಂಗೀಕರಿಸುತ್ತದೆ" ಎಂದು ಡಾ। ಅನಂತಮೂರ್ತಿಯವರು ಘೋಷಿಸಿದರು.

ಘೋಷಣೆ ಹೊರಡಿಸಿದ ಕೂಡಲೆ ಅಥವಾ ಒಂದು ಶಬ್ದವನ್ನು ಕಾನೂನುಬದ್ಧವಾಗಿ ನಿಷೇಧಿಸಿದ ಕೂಡಲೆ ವಸ್ತುಸ್ಥಿತಿ ಬದಲಾಗುತ್ತದೆಯೆ? ಎಂಬ ಪ್ರಶ್ನೆ ಎದುರಾಗಬಹುದು. ಆದರೆ ದಲಿತರಿಗೆ ತಮ್ಮನ್ನು ಕುರಿತು ಬಳಸಲಾಗುತ್ತಿರುವ ಶಬ್ದ ಅವಮಾನಕಾರಿ ಅಂತ ಅನ್ನಿಸಿದೆ ಮತ್ತು ತುಳಿತಕ್ಕೊಳಗಾಗಿರುವ ಒಂದು ಸಮುದಾಯಕ್ಕೆ ಹೀಗೆ ಅನ್ನಿಸುವುದೇ ಅದರ ಗತಿಸ್ಥಿತಿಯ ಬದಲಾವಣೆಯಲ್ಲಿ ಮೊದಲ ಹೆಜ್ಜೆ ಎಂಬುದನ್ನು ಮರೆಯಲಾಗದು. ಅಲ್ಲದೆ ಈ ಅನ್ನಿಸಿಕೆ ದಕ್ಷಿಣಕನ್ನಡ ಜಿಲ್ಲೆಯಿಂದ ಹಿಡಿದು ದೂರದ ಉತ್ತರಪ್ರದೇಶದವರೆಗೂ ಸಾಮಾನ್ಯ ಅನ್ನಿಸಿಕೆಯಾಗಿದೆ ಎನ್ನುವುದು ಕೂಡ ಗಮನಾರ್ಹ.

1990ರ ದಶಕದಲ್ಲಿ ದೂರದರ್ಶನದಲ್ಲಿ ಪ್ರಚಾರವಾದ, 8 ಕಂತುಗಳ 'ಡಾ। ಅಂಬೇಡ್ಕರ್' ಕಥಾಮಾಲಿಕೆ ಪ್ರಸಾರವಾದಾಗ ಅದು ಅಂಬೇಡ್ಕರ್‌ರವರ ಬದುಕು ಮತ್ತು ಸಾಧನೆಗಳನ್ನು ಗೇಲಿ ಮಾಡುತ್ತದೆ ಎಂದು ಮಹಾರಾಷ್ಟ್ರದ ದಲಿತ ನಾಯಕರು ಕ್ರುದ್ಧರಾದರು. ಅಂಬೇಡ್ಕರ್‌ರವರ ಪತ್ನಿ ಸವಿತಾ ಅಂಬೇಡ್ಕರ್ ದೂರದರ್ಶನದ ವಿರುದ್ಧ ನ್ಯಾಯಾಲಯಕ್ಕೆ ಹೋಗುವುದಾಗಿ ಬೆದರಿಕೆ ಹಾಕಿದರು. ಧಾರಾವಾಹಿಯ ಪ್ರಸಾರವನ್ನು ತಕ್ಷಣ ನಿಲ್ಲಿಸಬೇಕೆಂದು ಕೋರಿ ಅವರು ಅಂದಿನ ಪ್ರಧಾನಿ ಪಿ.ವಿ.ನರಸಿಂಹರಾಯರಿಗೆ ಪ್ರತಿಭಟನಾ ಪತ್ರ ಬರೆದರು. ಇಂದಿರಾಗಾಂಧಿಯವರ ಸಚಿವ ಸಂಪುಟದಲ್ಲಿ ಸಚಿವರಾಗಿದ್ದ ಶ್ರೀ ಪಿ. ಮೌರ್ಯರವರ ಈ ಕೆಳಗಿನ ಮಾತುಗಳನ್ನು ಗಮನಿಸಬೇಕು.

"ಯಾವತ್ತೂ 'ಹರಿಜನ' ಎನ್ನುವ ಶಬ್ದ ಬಳಸಬೇಡಿ. ದೇವದಾಸಿಯೊಬ್ಬಳಿಗೆ ಹುಟ್ಟಿದ ಮಗುವನ್ನು 'ಹರಿಜನ' ಎಂದು ಕರೆಯುತ್ತಾರೆ. ನೀವು ಈ ಶಬ್ದವನ್ನು ಬಳಸಿದರೆ ಅದರ ಅರ್ಥ ನೀವು ಯಾರನ್ನೋ ಅಕ್ಷರಶಃ ಹಡಬೆ ಮಗ ಎಂದು ಕರೆಯುತ್ತಿದ್ದೀರಿ ಎಂದಾಗುತ್ತದೆ. ಇದಕ್ಕೆ ಬದಲಾಗಿ ದಲಿತ ಅಥವಾ ಪರಿಶಿಷ್ಟ ಜಾತಿ ಮತ್ತು ಪಂಗಡಗಳು ಅನ್ನಿ". ಗಾಂಧೀಜಿಯವರು

ಅಸ್ಪೃಶ್ಯರನ್ನು 'ದೇವರ ಮಕ್ಕಳು' (ಹರಿಜನರು) ಎಂದು ಕರೆದಾಗ ಮುಂದೊಂದು ದಿನ ಆ ಹೆಸರೇ ಅಸ್ಪೃಶ್ಯವಾಗುತ್ತದೆಂದು ಅವರು ಕನಸಿನಲ್ಲಿಯೂ ಊಹಿಸಲಾರರು. 'ಹರಿಜನ' ಹೆಸರಿಗೆ ಸಂಬಂಧಿಸಿದಂತೆ ಆಗಿರುವ ಈ ಬದಲಾವಣೆಯ ಹಿಂದೆ ರಾಜಕೀಯವಾಗಿ ಹಾಗೂ ಸಾಮಾಜಿಕವಾಗಿ ದಲಿತರ ಚಿಂತನ ವಿಧಾನದಲ್ಲಾಗಿರುವ ಬದಲಾವಣೆ ಮತ್ತು 1989ರಲ್ಲಿ ವಿ.ಪಿ.ಸಿಂಗ್ ನೀಡಿದ ಮಂಡಲ್ ಘೋಷಣೆ ಮೂಡಿಸಿದ ಹೊಸ ಆತ್ಮ ವಿಶ್ವಾಸ, ಹೊಸ ಎಚ್ಚರ ಕೂಡ ಇದೆ.

ಈ ಹೊಸ ಎಚ್ಚರವೇ 'ಹರಿಜನ' ಎಂಬ ಪದ 'ರಾಜಕೀಯವಾಗಿ ಸರಿಯಲ್ಲ'ವೆಂದು ದಲಿತರಿಗೆ ಅನ್ನಿಸುವಂತೆ ಮಾಡಿತು.

ಪಠ್ಯಪುಸ್ತಕಗಳ ತಯಾರಿಕೆಯಲ್ಲಿ ಭಾರತದ/ಕರ್ನಾಟಕದ ಸಂದರ್ಭದಲ್ಲಿ 'ರಾಜಕೀಯ ಸರಿತನ'ದ ಪರಿಕಲ್ಪನೆ ಯಾಕೆ ಪ್ರಸ್ತುತವಾಗುತ್ತದೆಂದರೆ ಇಲ್ಲಿ ಜಾತಿ, ಧರ್ಮ, ಪಂಥ, ಭಾಷೆಯ ದೃಷ್ಟಿಯಿಂದ ವೈವಿಧ್ಯ ಇದೆ. ಈ ವೈವಿಧ್ಯ (diversity) ವನ್ನು ನಿರಾಕರಿಸುವ, 'ಒಂದು ದೇಶಕ್ಕೆ ಒಂದೇ ಧರ್ಮ, ಒಂದೇ ಭಾಷೆ, ಒಂದೇ ಉಡುಪು' ಎಂಬ ಭಾವನೆಯ ಬಲಪಂಥೀಯ ಶಕ್ತಿಗಳು, ಮೇಲ್ಜಾತಿಗಳವರು ಸಮಾಜದ ಕೆಳಸ್ತರದಲ್ಲಿರುವವರ ಬಗ್ಗೆ ಸೂಕ್ಷ್ಮಸಂವೇದಿ (sensitive)ಗಳಾಗದೆ ಇರುವ ಸಾಧ್ಯತೆ ಇದೆ. ಆಗ ಪಠ್ಯದ ಭಾಷೆಯ ಬಳಕೆ ಕೂಡ ಒರಟಾಗಿ, ಅಸೂಕ್ಷ್ಮ ಸಂವೇದಿ (insensitive)ಯಾಗಬಹುದು.

ಈಗ ಪಠ್ಯಪುಸ್ತಕಗಳ ರಚನೆಯಲ್ಲಿ ಹೆಣ್ಣಿನ ಸಮಾನತೆ ಮತ್ತು ಲಿಂಗನ್ಯಾಯಕ್ಕೆ ಸಂಬಂಧಿಸಿದಂತೆ 'ರಾಜಕೀಯ ಸರಿತನ' ಹೇಗೆ ಪ್ರಸ್ತುತವಾಬಹುದು ಎನ್ನುವುದನ್ನು ವಿಶ್ಲೇಷಿಸುವ ಪ್ರಯತ್ನ ಮಾಡಲಾಗುತ್ತದೆ.

1980ರ ದಶಕದಲ್ಲಿ ಕರ್ನಾಟಕದ ಶಾಲೆಗಳಲ್ಲಿ ಬಳಕೆಯಲ್ಲಿದ್ದ ಏಳನೇ ತರಗತಿಯ ಕನ್ನಡ ಪಠ್ಯಪುಸ್ತಕ 'ಕನ್ನಡ ಭಾರತಿ 7', ಈ ಪಠ್ಯಪುಸ್ತಕದ ಮೊದಲನೆಯ ಪಾಠ ವಾಯುಭೂತಿಯ ಕಥೆ. ವಾಯಭೂತಿ ಮತ್ತು ಅಗ್ನಿಭೂತಿ, ಇಬ್ಬರು ಸಹೋದರರು. ಅಣ್ಣ ಅಗ್ನಿಭೂತಿ, ತಮ್ಮ

ವಾಯುಭೂತಿ. ಅಣ್ಣ ಒಳ್ಳೆಯವ, ತಮ್ಮ ಕೆಡುಕಿ. ವಾಯುಭೂತಿ ವಿದ್ಯೆ ಕೊಟ್ಟ ಗುರುಗಳಿಗೇ ಅವಮಾನ ಮಾಡಿದ, ಧರ್ಮವನ್ನು ಹಳಿದ. ಮುಂದೆ ಓದಿ:

"ವಾಯುಭೂತಿಯು ಯೌವ್ವನ ಮದದಿಂದ ಗುರುಗಳನ್ನು ತಿರಸ್ಕರಿಸಿದುದರಿಂದಲೂ, ಧರ್ಮವನ್ನು ಹಳಿದುದರಿಂದಲೂ, ಅತ್ತಿಗೆಯನ್ನು ಅಪಮಾನಗೊಳಿಸಿದುದರಿಂದಲೂ ಕುಷ್ಠ ರೋಗಕ್ಕೆ ತುತ್ತಾಗಿ ನರಳಿ ಸತ್ತನು. ತಾನು ಹಿಂದೆ ಮಾಡಿದ ಪಾಪದ ಫಲವಾಗಿ ಕತ್ತೆಯಾಗಿ ಜನಿಸಿದನು. ಅನಂತರ ನಾಯಿಯಾಗಿ ಹುಟ್ಟಿ, ಸತ್ತು, ತರುವಾಯ ಮನುಷ್ಯ ಜನ್ಮದಲ್ಲಿ ಕುರೂಪಿಯೂ, ಕುರುಡಿಯೂ ಆದ ಹೆಣ್ಣಾಗಿ ಜನ್ಮ ತಾಳಿದನು."

ಮಧ್ಯ ಯುಗೀಯ ಸಮಾಜದ ನಂಬಿಕೆಗಳನ್ನು ಹೇಳುವ, ನಿರಪಾಯಕಾರಿ ಅಂತ ತೋರಿಕೆಗೆ ಕಾಣುವ ಪಠ್ಯ ಇದು. ಆದರೆ ಆಧುನಿಕ ಭಾರತದಲ್ಲಿ 20ನೇ ಶತಮಾನದ ಅಂತ್ಯದಲ್ಲಿ ಅಥವಾ 21ನೇ ಶತಮಾನದ ಆದಿಯಲ್ಲಿ ಈ ಭಾಗವನ್ನು ಓದುವ ವಿದ್ಯಾರ್ಥಿಗಳು–ಆಧುನಿಕ ವೈದ್ಯಕೀಯ ಆವಿಷ್ಕಾರಗಳ ಯುಗದಲ್ಲಿ – ಹೇಗೆ ಅರ್ಥೈಸಬಹುದು?

ಈ ಪಠ್ಯದಲ್ಲಿ ಮಧ್ಯಯುಗದ ಅಪರಾಧ (crime) ಮತ್ತು ಶಿಕ್ಷೆ (punishment)ಯ ಪರಿಕಲ್ಪನೆ ಇದೆ. ಜನರು ಅಪರಾಧ (ಗುರುಗಳನ್ನು ತಿರಸ್ಕರಿಸುವುದು, ಧರ್ಮವನ್ನು ಹಳಿಯುವುದು, ಭಾರತೀಯ ಸಂಸ್ಕೃತಿಯಲ್ಲಿ ತಾಯಿಗೆ ಸಮಾನಳೆಂದು ಪರಿಗಣಿಸಲ್ಪಡುವ ಅತ್ತಿಗೆಯನ್ನು ಹಳಿಯುವುದು) ಮಾಡದಂತೆ ತಡೆಯಲು ಅವರಲ್ಲಿ ಶಿಕ್ಷೆಯ ಭಯ ಮೂಡಿಸುವುದು ಪಠ್ಯದ ಉದ್ದೇಶಗಳಲ್ಲೊಂದು. ಆ ಶಿಕ್ಷೆ ಅವರೋಹಣ (descending) ಶ್ರೇಣಿಯಲ್ಲಿದೆ: ಜನರು ಭಯಪಡುತ್ತಿದ್ದ ಮತ್ತು ಬೀಭತ್ಸ ಎಂದು ತಿಳಿಯುತ್ತಿದ್ದ ಕುಷ್ಠರೋಗ, ಇದಕ್ಕಿಂತ ಕೀಳಾದದ್ದು ಕತ್ತೆ, ಇದಕ್ಕಿಂತಲೂ ಕೀಳು ನಾಯಿ, ನಾಯಿಗಿಂತಲೂ ಕೀಳಾದದ್ದು, ಹೀನವಾದದ್ದು ಕುರೂಪಿಯೂ ಕುರುಡಿಯೂ ಆದ ಹೆಣ್ಣು.

ಕುರೂಪಿ (ugly) ಮತ್ತು ಕುರುಡಿ (blind) ಎರಡೂ ಕೂಡ ಹೆಣ್ಣನ್ನು ಸಾಮಾಜಿಕವಾಗಿ ಅವಮಾನಿಸುವ ಶಬ್ದಗಳು. ಆಧುನಿಕ ಪಾಶ್ಚಾತ್ಯ ಜಗತ್ತು ರಾಜಕೀಯವಾಗಿ ಸರಿ ಅಲ್ಲದ ಈ ಶಬ್ದಗಳಿಗೆ ರಾಜಕೀಯವಾಗಿ ಸರಿ ಆಗಿರುವ 'visually challenging' ಮತ್ತು

'vision impaired' ಅಥವಾ 'visually challenged' ಎಂಬ ಶಬ್ದಗಳನ್ನು ಬಳಸಲು ಆರಂಭಿಸಿ ದಶಕಗಳೇ ಕಳೆದಿವೆ. ಆದ್ದರಿಂದ ಕನ್ನಡ ಪಠ್ಯದಲ್ಲಿ 'ಕುರೂಪಿ' ಮತ್ತು 'ಕುರುಡಿ ಶಬ್ದಗಳಿಗೆ ಬದಲಿ ಶಬ್ದಗಳನ್ನು ಹುಡುಕುವುದು ಪಠ್ಯರಚನೆಕಾರರ ಪಾಲಿಗೆ ಒಂದು ಪಂಥಾಹ್ವಾನವಾಗುತ್ತದೆ. ಉದಾಹರಣೆಗೆ 'ಕುರೂಪಿ' ಎನ್ನುವ ಬದಲು 'ಸುಂದರಿಯಲ್ಲದ' ಅಥವಾ 'ಚೆಲುವೆಯಲ್ಲದ' ಮತ್ತು 'ಕುರುಡಿ' ಎನ್ನುವ ಬದಲು 'ಕಣ್ಣು ಕಾಣಿಸದ' ಅಥವಾ 'ದೃಶ್ಯಶಕ್ತಿ ಇಲ್ಲದ' ಎನ್ನು ಶಬ್ದಗಳನ್ನು ಬಳಸಬಹುದು – 'ಹರಿಜನ' ಶಬ್ದದ ಬದಲಿಗೆ 'ದಲಿತ' ಶಬ್ದ ಬಳಸುವ ಹಾಗೆ.

ಮೇಲೆ ಉದ್ಧರಿಸಲಾದ ಪಠ್ಯದ ಮೇಲ್ಮೈ ಸಂರಚನೆಯನ್ನು ಗಮನಿಸಿದ ಬಳಿಕ ಅದರ ಆಳ ಸಂರಚನೆ ಅಥವಾ ಸುಪ್ತ–ಪಠ್ಯವನ್ನು ಹೀಗೆ ಗುರುತಿಸಬಹುದು:

ಗುರುಗಳನ್ನು ತಿರಸ್ಕರಿಸಿದರೆ, ಧರ್ಮವನ್ನು ಹಳಿದರೆ, ಅತ್ತಿಗೆಯನ್ನು ಅವಮಾನಗೊಳಿಸಿದರೆ ಕುಷ್ಠರೋಗ ಬರುತ್ತದೆ. ಈ ರೋಗ ಬಂದವರು ನರಳಿ ಸಾಯುತ್ತಾರೆ. ಆದ್ದರಿಂದ ನೀವು ನಿಮ್ಮ ಗುರುಗಳನ್ನು ತಿರಸ್ಕರಿಸಬೇಡಿ. ಧರ್ಮವನ್ನು ಹಳಿಯಬೇಡಿ. ನಿಮ್ಮ ಅತ್ತಿಗೆಯನ್ನು ಅವಮಾನಗೊಳಿಸಬೇಡಿ.

ನೀವು ಪಾಪವನ್ನು ಈ ಜನ್ಮದಲ್ಲಿಯೇ ಮಾಡಬೇಕಾಗಿಲ್ಲ. ಪಾಪ ಮಾಡಲು ಹಿಂದಿನ ಜನ್ಮ ಕೂಡ ಇದೆ. ಹಿಂದಿನ ಜನ್ಮದಲ್ಲೂ ನೀವು ಪಾಪ ಮಾಡಿ ಅದನ್ನು ಶೇಖರಿಸಿ ಇಡಬಹುದು – ಬ್ಯಾಂಕಿನಲ್ಲಿ ನೀವು ಹಣವನ್ನು ನಿಮ್ಮ ಉಳಿತಾಯ ಖಾತೆಗೆ ಜಮೆ ಮಾಡಿ ಶೇಖರಿಸಿ ಇಡುವ ಹಾಗೆ.

ಹಾಗೆ ನೀವು ಹಿಂದಿನ ಜನ್ಮದಲ್ಲಿ ಶೇಖರಿಸಿಟ್ಟ ಪಾಪವಿದ್ದರೆ ಒಂದು ಕತ್ತೆ ಹುಟ್ಟುತ್ತದೆ ಮತ್ತು ಆ ಕತ್ತೆ ಹಿಂದೆ ಮನುಷ್ಯನಾಗಿರುತ್ತದೆ.

ಅಂತಹ ಕತ್ತೆ ಸತ್ತರೆ ಮತ್ತೆ ನಾಯಿಯಾಗಿ ಹುಟ್ಟುತ್ತದೆ. ಆ ನಾಯಿ, ಅಂತಿಮವಾಗಿ ಮನುಷ್ಯ ಜನ್ಮದಲ್ಲಿ ಕುರೂಪಿಯೂ ಕುರುಡಿಯೂ ಆದ ಹೆಣ್ಣಾಗಿ ಹುಟ್ಟುತ್ತದೆ.

ಹಾಗಾದರೆ ನಮ್ಮ ಕನ್ನಡ ಪಠ್ಯಪುಸ್ತಕಗಳಲ್ಲಿ ಕನ್ನಡ ಸಾಹಿತ್ಯದ ಒಂದು ಭಾಗವಾಗಿರುವ ಪುರಾಣಗಳ ಜನ್ಮಕಥಾವಳಿ ಭಾಗ ಇರಕೂಡದೆ? ಅದನ್ನು ಪಠ್ಯದಿಂದ ಕೈಬಿಡಬೇಕೆ? ಕನ್ನಡ

ಸಾಹಿತ್ಯದ ವಿದ್ಯಾರ್ಥಿ ಅದನ್ನೆಲ್ಲ ಓದುವುದು ಬೇಡವೆ? ಎಂಬ ಪ್ರಶ್ನೆಗಳು ಎದುರಾಗುತ್ತವೆ. ಆಗ ಪಠ್ಯಲೇಖಕರು "ಈ ಭಾಗ ಕನ್ನಡ ಸಾಹಿತ್ಯದ ಒಂದು ಘಟ್ಟದ ಕಥಾವಸ್ತುವಿನ ಪ್ರಾತಿನಿಧಿಕವಾದ ಭಾಗ ಎಂಬ ಕಾರಣಕ್ಕಾಗಿ ಇದನ್ನು ಪಠ್ಯವಾಗಿ ಗೊತ್ತುಪಡಿಸಲಾಗಿದೆ. ಇಲ್ಲಿ ಬಳಕೆಯಾಗಿರುವ ಇಂತಿಂತಹ ಶಬ್ದಗಳು ಇಂದಿನ ಸಮಾಜದಲ್ಲಿ ಬಳಕೆಗೆ ಸೂಕ್ತವಲ್ಲ. ಇವುಗಳಿಗೆ ಬದಲಾಗಿ ಇಂತಿಂತಹ ಶಬ್ದಗಳನ್ನು, ಯಾರಿಗೂ ಅವಮಾನಕಾರಿಯಲ್ಲದ, ಪೂರ್ವಾಗ್ರಹ ಪೀಡಿತವಲ್ಲದ ಶಬ್ದಗಳನ್ನು ಬಳಸಬೇಕು" ಎಂಬ ಟಿಪ್ಪಣಿಯೊಂದಿಗೆ ಇಂತಹ ಪಠ್ಯವನ್ನು ವಿದ್ಯಾರ್ಥಿಗಳ ಅಧ್ಯಯನಕ್ಕೆ ನಿಗದಿಗೊಳಿಸಬಹುದು.

ಕಥೆಯ ಕೊನೆಯ ಭಾಗ ಕೂಡ ರಾಜಕೀಯವಾಗಿ ಸರಿ ಅಲ್ಲದ ವಾಕ್ಯಗಳನ್ನು ಹೊಂದಿದೆ:

"ಇತ್ತ, ಶಪಥ ಮಾಡಿದ್ದ ಸೋಮದತ್ತೆಯು (ವಾಯುಭೂತಿಯ ಅತ್ತಿಗೆ) ತನ್ನ ನಾಲ್ಕು ಜನ ಮಕ್ಕಳೊಂದಿಗೆ ಸತ್ತು, ಹೆಣ್ಣು ನರಿಯಾಗಿ ಜನಿಸಿದಳು....."

ಹೆಣ್ಣನ್ನು 'ಹೆಣ್ಣು ನರಿ'ಯೊಂದಿಗೆ ಸಮೀಕರಿಸುವುದು ಸ್ತ್ರೀಶಕ್ತೀಕರಣ, ಸ್ತ್ರೀ ಸಮಾನತೆ, ಮಹಿಳಾ ವಿಮೋಚನೆಯ ಘೋಷಣೆಗಳು ಮೊಳಗುತ್ತಿರುವ ಯಾವುದೇ ಸಮಾಜದಲ್ಲಾದರೂ ರಾಜಕೀಯವಾಗಿ ಸರಿಯಲ್ಲ.

ಮೇಲೆ ಉದ್ಧರಿಸಲಾದ ವಾಕ್ಯದಲ್ಲಿ ಹೆಣ್ಣಿನ ಬುದ್ಧಿಯನ್ನು ನರಿಬುದ್ಧಿಗೆ ಹೋಲಿಸಿ ಆಕೆಗೆ ಮಾಡಲಾಗಿರುವ ಸೂಕ್ಷ್ಮ ಅವಮಾನ ವಾಕ್ಯದ ಆಳ ಸಂರಚನೆಯಿಂದ ವ್ಯಕ್ತವಾಗುತ್ತದೆ.

ಒಟ್ಟಿನಲ್ಲಿ, ರಾಜಕೀಯ ಸರಿತನದ ಪರಿಕಲ್ಪನೆ ಕನ್ನಡದ ಸಂದರ್ಭಕ್ಕೆ ಹೊಸತೇ ಆದರೂ, ಈ ಪರಿಕಲ್ಪನೆಯ ನೆಲೆಯಲ್ಲಿ ಕರ್ನಾಟಕದ ಭಾಷೆ, ಸಾಹಿತ್ಯ, ಇತಿಹಾಸ ಪಠ್ಯಪುಸ್ತಕಗಳು ರಚಿತವಾದಾಗ ಪಠ್ಯಗಳು ಮೌಲಿಕವಾಗಿ ಹೆಚ್ಚು ಸ್ವೀಕಾರಾರ್ಹವಾದಾವು ಎನ್ನಬಹುದು. ಈಗಾಗಲೇ ದಲಿತ ಸಂವೇದನೆಯಲ್ಲಿ, ಪರೋಕ್ಷವಾಗಿ, ರಾಜಕೀಯ ಸರಿತನದ ಪರಿಕಲ್ಪನೆ ಅಭಿವ್ಯಕ್ತಗೊಳ್ಳುತ್ತಿದೆ. ಇದು ಕರ್ನಾಟಕದ ಕನ್ನಡ ಭಾಷಾ ಪಠ್ಯಪುಸ್ತಕದಲ್ಲಿ ಸ್ಥಾನ ಪಡೆದಿರುವುದು ಸಂತಸದ ವಿಷಯ. ಉದಾಹರಣೆಗೆ, ಮೂಡ್ನಾಕೂಡು ಚಿನ್ನಸ್ವಾಮಿಯವರ ಕವನ 'ನಾನೊಂದು ಮರವಾಗಿದ್ದರೆ'

(ಅನುಬಂಧ–7) ಎಂಟನೆಯ ತರಗತಿಯ ವಿದ್ಯಾರ್ಥಿಗಳಿಗೆ ಪಠ್ಯವಾಗಿದೆ. (ಕನ್ನಡ ಕಸ್ತೂರಿ–೮, ಪಠ್ಯಪುಸ್ತಕ ನಿರ್ದೇಶನಾಲಯ, ಬೆಂಗಳೂರು–೫೬, 2004).

ಸಮಕಾಲೀನ ಸಮಾಜದಲ್ಲಿ ದಲಿತರ ಬಗ್ಗೆ ಇರುವ ತಾರತಮ್ಯ ಧೋರಣೆಯನ್ನು ನೋಡಿ ನೋವಿನಿಂದ ಪ್ರತಿಕ್ರಯಿಸುವ ಕವಿ, ದಲಿತರ ಮೇಲೆ ಶತಮಾನಗಳಿಂದ ನಡೆಯುತ್ತ ಬಂದ ದೌರ್ಜನ್ಯವನ್ನು ಮೃದು ದನಿಯಲ್ಲಿ ವ್ಯಂಗದ ಮೂಲಕ ಇದಿರುಗೊಳ್ಳುತ್ತಾರೆ. ಕುಲ, ಮಡಿ–ಮೈಲಿಗೆ, ಅಸ್ಪೃಶ್ಯತೆಯ ಪರಿಕಲ್ಪನೆಗಳನ್ನು ವ್ಯಂಗದ ಚಾಟಿಯ ಮೂಲಕ ಧಿಕ್ಕರಿಸುವ ಕವಿ, ದಲಿತರ ಬಗ್ಗೆ ಇಷ್ಟೊಂದು ಕ್ರೌರ್ಯ ತೋರುವ ಜನರ ಮಧ್ಯೆ ತಾನು ಮನುಷ್ಯನಾಗುವುದಕ್ಕಿಂತ ಮರವಾಗಿ ಹುಟ್ಟುವುದೇ ಲೇಸು ಎಂದು ಹೇಳುವಾಗ ದಲಿತರ ಎಲ್ಲಾ ನೋವುಗಳಿಗೆ ಈ ಸಮಾಜದಲ್ಲಿ ಪರಿಹಾರ ಎಷ್ಟು ಕಷ್ಟ ಎಂಬುದನ್ನು ಸೂಚಿಸುತ್ತಾರೆ. ಪಕ್ಷಿ, ಪ್ರಾಣಿ, ಮರಗಳನ್ನು ಪ್ರೀತಿಸುವ ಮೇಲ್ಜಾತಿಯ ಜನ ತಮ್ಮ ಹಾಗೆಯೇ ಇರುವ ಮನುಷ್ಯನನ್ನು, ಅವ ದಲಿತ ಎಂಬ ಕಾರಣಕ್ಕಾಗಿ, ಪ್ರೀತಿಸುತ್ತಿಲ್ಲ ಎಂದು ಹೇಳುವಾಗ ಕವನದ ಸುಪ್ತಪಠ್ಯ 'ಇವರೂ ಮನುಷ್ಯರೇ?!' ಎಂದು ಸಿಟ್ಟು ಮತ್ತು ವ್ಯಂಗ್ಯ ಬೆರೆಸಿ ಕೇಳುತ್ತದೆ. 'ಇವರು ಮನುಷ್ಯರಲ್ಲ, ಇವರು ಮನುಷ್ಯತ್ವ ಕಳಕೊಂಡು ಈಗಾಗಲೇ ನಡೆದಾಡುವ ಹೆಣವಾಗಿದ್ದಾರೆ' ಎಂದೂ ಹೇಳುತ್ತದೆ.

ಇಂತಹ ಇನ್ನಷ್ಟು ಕವನಗಳು ನಮ್ಮ ಭಾಷೆ/ಸಾಹಿತ್ಯ ಪಠ್ಯಪುಸ್ತಕಗಳಲ್ಲಿ ಸ್ಥಾನ ಪಡೆಯುವ ಅಗತ್ಯವಿದೆ.

# ಅಧ್ಯಾಯ ಐದು : ಪಠ್ಯ ಪುಸ್ತಕಗಳು ಮತ್ತು ಕೋಮು ಸಾಮರಸ್ಯ

## ಪೀಠಿಕೆ

ಯಾವುದೇ ಸಮಾಜದಲ್ಲಿ ವ್ಯಕ್ತಿಯ ಒಟ್ಟು ಮನೋಧರ್ಮವನ್ನು, ಆತ ತನ್ನನ್ನು ಹಾಗೂ ಸಮಾಜದಲ್ಲಿರುವ ಇತರರನ್ನು ನೋಡುವ, ಗ್ರಹಿಸುವ, ಪರಿಭಾವಿಸುವ ರೀತಿಯನ್ನು ಮುಖ್ಯವಾಗಿ ಮೂರು ಘಟಕಗಳು ನಿರ್ಧರಿಸುತ್ತವೆ: ಕುಟುಂಬ, ಶಾಲೆ, ಮತ್ತು ಸಮಾಜ. ಈ ಮೂರೂ ಘಟಕಗಳು ಕಾಲ, ದೇಶಕ್ಕೆ ಸಂಬಂಧಿಸಿದಂತೆ ಯಾವುದೋ ಒಂದು ಧರ್ಮ ಅಥವಾ ಹಲವು ಧರ್ಮಗಳ ಬೋಧನೆ/ಆಚರಣೆಗಳಿಂದ ಪ್ರಭಾವಿತವಾಗಿರುತ್ತವೆ. ಸಹಬಾಳ್ವೆ, ಸಾಮರಸ್ಯ, ಸಹೋದರತ್ವ, ಸಹಕಾರ, ಪ್ರೀತಿ–ಗೆಳೆತನದ ನಾನಾ ರೀತಿಯ ಮನುಷ್ಯ ಸಂಬಂಧಗಳು, ಈ ಸಂಬಂಧಗಳಲ್ಲಿ ಮುಖ್ಯವಾಗುವ ಹಲವು ಮೌಲ್ಯಗಳು ಮತ್ತು ಇವೆಲ್ಲವುಗಳು ಸಾಧ್ಯವಾಗಬೇಕಾದರೆ ಕುಟುಂಬ, ಶಾಲೆ, ಸಮಾಜ, ಧಾರ್ಮಿಕ/ಪೂಜಾ ಸ್ಥಳಗಳಲ್ಲಿ ಇರಲೇಬೇಕಾದ ಶಾಂತಿ ಹಾಗೂ ಸಾಮರಸ್ಯ ಒಂದು ಸಮಾಜದ ಒಟ್ಟು ಆರೋಗ್ಯವನ್ನು ಸೂಚಿಸುತ್ತವೆ, ಮತ್ತು ನಿರ್ಧರಿಸುತ್ತವೆ ಕೂಡ. ಒಬ್ಬ ವ್ಯಕ್ತಿ ತನ್ನ ವೈಯಕ್ತಿಕ/ಖಾಸಗಿ ಹಾಗೂ ಸಾರ್ವಜನಿಕ ಬದುಕಿನಲ್ಲಿ ಅಳವಡಿಸಿಕೊಳ್ಳುವ ಮೌಲ್ಯಗಳನ್ನು ಮನೋಧರ್ಮಗಳನ್ನು ರೂಪಿಸುವ ಎರಡು ಮುಖ್ಯ ಅಂಶಗಳೆಂದರೆ ಶಿಕ್ಷಣ ಮತ್ತು ಧರ್ಮ. ಯಾವುದೇ ಸರಕಾರ ಅಂಗೀಕರಿಸುವ ಶಿಕ್ಷಣ ಕ್ರಮ ಮತ್ತು ಗೊತ್ತುಪಡಿಸುವ ಪಠ್ಯಕ್ರಮಗಳು ಹಾಗೂ ಪಠ್ಯ ಪುಸ್ತಕಗಳು ಸರಕಾರಕ್ಕೆ ಅಗತ್ಯ ಅನ್ನಿಸಿದಾಗ ವ್ಯಕ್ತಿಯು ದೇಶಕ್ಕಾಗಿ ಪ್ರಾಣಾರ್ಪಣೆ ಮಾಡಲು ಸಿದ್ಧವಿರುವ ಹಾಗೆ, ಆತನನ್ನು ದೇಶಕ್ಕಾಗಿ ದೇಹತ್ಯಾಗ ಮಾಡಲು ಸಿದ್ಧನಾಗುವ ಹಾಗೆ ಮಾಡಲು ಬೇಕಾದ ಮೌಲ್ಯಗಳಿಗೆ ಒತ್ತು ನೀಡುತ್ತವೆ: ಧೈರ್ಯ, ದೇಶಪ್ರೇಮ, ತ್ಯಾಗ, ಬಲಿದಾನ ಇತ್ಯಾದಿ. ದೇಶದ ಮೇಲೆ ಶತ್ರು ದೇಶವೊಂದು ಆಕ್ರಮಣ ಮಾಡಿದಾಗ ಶತ್ರುಗಳನ್ನು ಎದುರಿಸಿ ವೀರಾವೇಶದಿಂದ ಕಾದಾಡಲು, ಅಂದರೆ ದೇಶದ ಸೈನ್ಯಕ್ಕೆ ಸೇರಲು ವ್ಯಕ್ತಿಯನ್ನು ಅಣಿಗೊಳಿಸಬೇಕಾದರೆ ಆತ ಈ ಮೌಲ್ಯಗಳಿಗೆ ಬೆಟ್ಟದಷ್ಟು ಬೆಲೆಕೊಡುವ ಹಾಗೆ ಶಿಕ್ಷಣವು ಮಾಡಬೇಕಾಗುತ್ತದೆ. ಇಲ್ಲವಾದರೆ ದೇಶದ ನಾಗರಿಕರಲ್ಲಿ ಸೇನೆಗೆ ಸಮರ್ಥರಾದವರು ಸೇನೆಗೆ ಸೇರಲು ನಿರಾಕರಿಸಬಹುದು, ಅಥವಾ ಸೇನಾ ತರಬೇತಿ/ಸೇವೆ

ಕಡ್ಡಾಯವಿರುವ ದೇಶಗಳಲ್ಲಿ, ಅನೇಕ ಮಂದಿ ಮಾಡುವ ಹಾಗೆ, ಸೇನೆಗೆ ಸೇರ್ಪಡೆಗೊಳ್ಳುವುದರಿಂದ ತಪ್ಪಿಸಿಕೊಳ್ಳಲು ಹಣ, ವಶೀಲಿಬಾಜಿ ಬಳಸಬಹುದು.

ಕಾದಾಟ, ಹೋರಾಟಗಳನ್ನು ಉತ್ತಮ ಉದ್ದೇಶಗಳಿಗಾಗಿ (ಉದಾ: ದೇಶ ರಕ್ಷಣೆ, ಸಾಮಾಜಿಕ ನ್ಯಾಯ, ಸ್ವಾತಂತ್ರ್ಯ, ಸಮಾನತೆ) ಮಾಡುವಂತೆ ಪ್ರೇರೇಪಿಸಬೇಕಾದ ಶಿಕ್ಷಣ ಮತ್ತು ಇದಕ್ಕಾಗಿ ಶಿಕ್ಷಣದಲ್ಲಿ ಬಳಸಲಾಗುವ ಪಠ್ಯಪುಸ್ತಕಗಳು ಸಮಾಜದಲ್ಲಿ ಧಾರ್ಮಿಕ ಹಾಗೂ ಕೋಮುವಾದಿ ನೆಲೆಯಲ್ಲಿ ಜನರನ್ನು ಬೇರ್ಪಡಿಸಲು, ಕೋಮುದ್ವೇಷ ಹರಡಲು ಕಾರಣವಾಗಬಾರದು; ಪ್ರತ್ಯಕ್ಷವಾಗಿ ಅಲ್ಲವಾದರೂ ಪರೋಕ್ಷವಾಗಿಯಾದರೂ ಕೂಡ ಕಾರಣವಾಗಬಾರದು. ಐತಿಹಾಸಿಕ ಕಾರಣಗಳಿಂದಾಗಿ ಭಾರತ, ಪಾಕಿಸ್ತಾನ ಎಂಬ ಎರಡು ದೇಶಗಳಾಗಿ ಒಡೆದ ಭಾರತದಲ್ಲಿ ಕಳೆದ ಕೆಲವು ದಶಕಗಳಲ್ಲಿ ಕೋಮು ಗಲಭೆ, ಕೋಮು ಹಿಂಸೆ, ಕೋಮು ಸಂಬಂಧಿ ಗಲಭೆಗಳು ಸಾಕಷ್ಟು ಸಂಖ್ಯೆಯಲ್ಲಿ ನಡೆದು ದೇಶದ ಕೋಮು ಸಾಮರಸ್ಯಕ್ಕೆ ಬೆದರಿಕೆ ಒಡ್ಡಿವೆ. ಈ ಹಿನ್ನೆಲೆಯಲ್ಲಿ, ವಿಶೇಷವಾಗಿ ಇತಿಹಾಸ ಪಠ್ಯಗಳಿಗೆ ಸಂಬಂಧಿಸಿ, ಪಠ್ಯ ಪುಸ್ತಕಗಳು, ಮತೀಯವಾದ ಮತ್ತು ಕೋಮು ಸಾಮರಸ್ಯಕ್ಕಿರಬಹುದಾದ ನಂಟನ್ನು ಗುರುತಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

## ಕೋಮುವಾದ

ಅಧಿಕೃತ ಅಂಕಿ ಅಂಶಗಳ ಪ್ರಕಾರ 2001 ಮತ್ತು 2007ರ ನಡುವೆ, ಅಂದರೆ ಕೇವಲ ಆರು ವರ್ಷಗಳ ಅವಧಿಯಲ್ಲಿ ಭಾರತದಲ್ಲಿ ನಡೆದ ಕೋಮು ಸಂಬಂಧಿ ಗಲಭೆಗಳು/ಘಟನೆಗಳು 4845. ಈ ಘಟನೆಗಳಲ್ಲಿ ದುಡಿದವರ ಸಂಖ್ಯೆ 1947 ಮತ್ತು ಗಾಯ ಹೊಂದಿದವರು 16,792. (ಟೈಮ್ಸ್ ಆಫ್ ಇಂಡಿಯಾ, 7.9.2008). ಭಾರತದ ಹಲವು ರಾಜ್ಯಗಳು 'ದ್ವೇಷದ ಪ್ರಯೋಗಾಲಯ' ಗಳಾಗುತ್ತಿವೆ. (ಸೇಥಿ ಅತುಲ್: 2008). ಇಷ್ಟೆಲ್ಲ, ಅನಾಹುತಗಳಿಗೆ ಕಾರಣವಾಗುವ ಕೋಮುವಾದ ಅಥವಾ ಮತೀಯ ಮೂಲಭೂತವಾದ ಎಂದರೇನು?

ತೀರ ವೈಯಕ್ತಿಕವಾದ ಒಂದು ಅಜೆಂಡಾವನ್ನು ಕಾರ್ಯಗತಗೊಳಿಸುವುದಕ್ಕಾಗಿ ಧಾರ್ಮಿಕ ನಂಬಿಕೆಯೊಂದನ್ನು ಹೈಜಾಕ್ ಮಾಡುವುದೇ ಮತೀಯ ಮೂಲಭೂತವಾದ (ಜಗ್ ಸುರೈಯಾ:

2008). ಇದು ಒಂದು ನಂಬಿಕೆ ವ್ಯವಸ್ಥೆಯೊಳಗಷ್ಟೇ ಆರಂಭವಾಗುವುದಿಲ್ಲ ಅಥವಾ ಕೊನೆಗೊಳ್ಳುವುದಿಲ್ಲ, ಇದು ಎಲ್ಲ ನಂಬಿಕೆ ವ್ಯವಸ್ಥೆಗಳಲ್ಲೂ ಸಾಮಾನ್ಯ. ಕ್ರಿಶ್ಚಿಯನ್, ಸಿಖ್, ಬುದ್ಧಿಸ್ಟ್ ಮತ್ತು ನಾಸ್ತಿಕವಾದಿ ಮೂಲಭೂತವಾದಿಗಳಿದ್ದಾರೆ. ಹಿಂದೂ, ಇಸ್ಲಾಮ್ ಮೂಲಭೂತವಾದಿಗಳೂ ಇದ್ದಾರೆ. ಮತೀಯ ಮೂಲಭೂತವಾದಿ ರಾಜಕಾರಣದ ಬಹಳ ದೊಡ್ಡ ವೈದೃಶ್ಯ (ಕಾಂಟ್ರಡಿಕ್ಷನ್) ಎಂದರೆ, ಅದು ತನ್ನ ಉಗಮಕ್ಕೆ ಕಾರಣವಾಗುವ ಮೂಲ ಸಮಸ್ಯೆಯನ್ನು, ಆರ್ಥಿಕ ಹಿಂದುಳಿಕೆಯನ್ನು, ಅಲ್ಲಗಳೆಯುವಿಕೆ (economic deprivation)ಯನ್ನು ಬಗೆಹರಿಸಲಾರದು. ಸಾಮಾನ್ಯ ಭಾರತೀಯರು ಇನ್ನಷ್ಟು ಆಹಾರಕ್ಕಾಗಿ ಹಪಹಪಿಸುತ್ತಾರೆಯೇ ಹೊರತು ಇನ್ನಷ್ಟು ಕೋಟಿಗಳಿಗಾಗಿ ಅಲ್ಲ ..... ಬೇಸರದ ಸುದ್ದಿ ಎಂದರೆ ಇಂತಹ ಗಂಡಾಂತರ ತರಲು ಜನಸಂಖ್ಯೆಯ ಕೇವಲ 1% ಜನ ಸಾಕಾಗುತ್ತಾರೆ. (ಅಕ್ಬರ್ ಎಂ.ಜೆ.: 2008)

ಕರ್ನಾಟಕ ಕೂಡ ಸಾಕಷ್ಟು ಕೋಮು ಹಿಂಸೆಯನ್ನು ಅನುಭವಿಸಿದೆ. ತೀರ ಇತ್ತೀಚೆಗೆ 2008ರ ಸೆಪ್ಟೆಂಬರ್ ತಿಂಗಳಿನಲ್ಲಿ ದಕ್ಷಿಣ ಕನ್ನಡವೂ ಸೇರಿದಂತೆ ರಾಜ್ಯದ ಕೆಲವು ಕಡೆಗಳಲ್ಲಿ ಚರ್ಚ್‌ಗಳ ಮೇಲೆ ದಾಳಿ ನಡೆಯಿತು. ಈ ದಾಳಿಗೆ ಬಜರಂಗದಳ, ಶ್ರೀ ರಾಮಸೇನೆ ಹಾಗೂ ವಿಶ್ವ ಹಿಂದೂ ಪರಿಷತ್ ಮುಂತಾದ ಸಂಘಟನೆಗಳ ಕಾರ್ಯಕರ್ತರು ಪ್ರಮುಖ ಹೊಣೆಗಾರರಾಗಿದ್ದರು, ಇದು ಸಾಕ್ಷಿಗಳ ವಿಚಾರಣೆ ಆಧಾರದಲ್ಲಿ ಗೃಹಿಕೆಯಾಗಿದೆ ಎಂದು ನ್ಯಾ। ಸೋಮಶೇಖರ್ ಆಯೋಗ ಹೇಳಿತು. (ಉದಯವಾಣಿ, 2–2–2010).

ಸ್ವಾಮಿ ವಿವೇಕಾನಂದರು 1893ರಲ್ಲಿ ಚಿಕಾಗೋ ಸರ್ವಧರ್ಮ ಸಮ್ಮೇಳನದಲ್ಲಿ ಆಡಿದ್ದ ಮಾತುಗಳನ್ನು ಪ್ರಶಂಸಿಸುತ್ತಲೇ ಅಪಾಯಕಾರಿ ಧಾರ್ಮಿಕ ವಿಷ ವೃಕ್ಷಗಳನ್ನು ಬೆಳೆಸಿಕೊಳ್ಳುವುದು ನಮ್ಮ ದೇಶದಲ್ಲಿ ಒಂದು ಕ್ಷುದ್ರ ರಾಜಕೀಯ ಪ್ರಣಾಲಿಕೆಯಾಗಿ ಪರಿಣಮಿಸಿದೆ.

ಫ್ಯಾಸಿಸಂ ಎಂಬುದು ಕೇವಲ ಅಮಾನವೀಯವಾದ ಪ್ರತಿಕ್ರಿಯೆಯಲ್ಲ ಅದು ಬಂಡವಾಳಶಾಹಿಯ ಅತ್ಯಂತ ಮಾರಣಾಂತಿಕವಾದ ಆಯುಧ. ಮತೀಯ ಘರ್ಷಣೆಗಳು ಕಟ್ಟಕಡೆಗೆ ಸಮಾಜವನ್ನು ಕೊಂಡೊಯ್ಯುವುದು ಫ್ಯಾಸಿಸಂನತ್ತ ಎಂಬುದನ್ನು ಗಮನಿಸಿದರೆ, ಅವನ್ನು ನಿಯಂತ್ರಿಸದ ಪ್ರಭುತ್ವವು ಒಂದು ರೀತಿಯಲ್ಲಿ ಫ್ಯಾಸಿಸಂಗೆ ಕುಮ್ಮಕ್ಕು ನೀಡುತ್ತಿರುತ್ತದೆ ಎಂಬುದು

ಅರ್ಥವಾಗುತ್ತದೆ. ಆದ್ದರಿಂದ ಮತೀಯ ಘರ್ಷಣೆಗಳ ವಿರುದ್ಧದ ಸೈದ್ಧಾಂತಿಕ ಹೋರಾಟವು ಜನಪರವಾದ, ಪ್ರಜಾಪ್ರಭುತ್ವದ ಪರವಾದ ಮತ್ತು ಮೌಲ್ಯಯುತವಾದ ಸಂಸ್ಕೃತಿಯ ಪರವಾದ ಹೋರಾಟವಾಗಿರುತ್ತದೆ. (ಜಿ. ರಾಮಕೃಷ್ಣ: 2005). ಆಧುನಿಕ ಭಾರತದಲ್ಲಿ ಕೋಮುವಾದವೆಂಬುದು ಗತಕಾಲದ ಒಂದು ಪಳೆಯುಳಿಕೆ (remnant)ಯಲ್ಲ – ಮಧ್ಯಯುಗದ ಒಂದು ಹ್ಯಾಂಗ್ ಓವರ್ (hangover) ಅಲ್ಲ; 'ಗತಕಾಲದ ಒಂದು ಭಾಷೆ' ಯಲ್ಲ. ಅದೊಂದು ಆಧುನಿಕ ಸಿದ್ಧಾಂತ (ideology), ಗತಕಾಲದ ಸಿದ್ಧಾಂತಗಳ, ಸಂಸ್ಥೆ (institution) ಗಳ ಮತ್ತು ಐತಿಹಾಸಿಕ ಹಿನ್ನೆಲೆಯ ಕೆಲವು ವಿಷಯಗಳನ್ನು ಹಾಗೂ ಅಂಶಗಳನ್ನು ಒಳಗಾಗಿಸಿಕೊಂಡು ಒಂದು ಹೊಸ ಸೈದ್ಧಾಂತಿಕ ಮತ್ತು ರಾಜಕೀಯ ಸಂವಾದ (discourse) ಅಥವಾ ಬೆರಕೆ (mix) ಯನ್ನು ರಚಿಸುವುದಕ್ಕಾಗಿ ಹುಟ್ಟಿಕೊಂಡ ಒಂದು ಆಧುನಿಕ ಸಿದ್ಧಾಂತ. (ಬಿಪನ್‌ಚಂದ್ರ: 1986, ಪು.6)

ಕೋಮುಸಾಮರಸ್ಯದ ಬದಲು ಮತೀಯ ವಿದ್ವೇಷದ ಕಿಡಿಗಳು ದೇಶದ ಎಲ್ಲೆಡೆಗಳಲ್ಲೂ ಈಗ ಹೊಗೆಯಾಡುತ್ತಿದೆ. ದೇಶದ ಒಂದಲ್ಲ ಒಂದು ಮೂಲೆಯಲ್ಲಿ ಘರ್ಷಣೆಗಳು ಆಗಾಗ ಸಿಡಿದೇಳುತ್ತವೆ. ಮೊದಲೇ ದುರ್ಬಲವಾಗಿರುವ ದೇಶದ ಭಾವೈಕ್ಯವನ್ನು ಇವು ಮತ್ತಷ್ಟು ಶಿಥಿಲಗೊಳಿಸುತ್ತವೆ.

ಕೇಂದ್ರ ಗೃಹಸಚಿವ ಖಾತೆಯಿಂದ ಪ್ರಕಟವಾದ ಅಂಕಿಅಂಶಗಳ ಪ್ರಕಾರ 1961ರಿಂದ 70ರವರೆಗಿನ ಈ ಕಾಲಾವಧಿಯಲ್ಲಿ ಒಟ್ಟು 7964 ಮತೀಯ ಘರ್ಷಣೆಗಳು ನಡೆದಿದ್ದವು. ಸಾವಿರಾರು ಜನ ಇವುಗಳಲ್ಲಿ ಮಡಿದಿದ್ದರು. (ಎಸ್.ಆರ್.ಭಟ್: 2005).

ಹಿಂದೂ–ಮುಸ್ಲಿಂ ಸಂಬಂಧಗಳು ಸಮಕಾಲೀನ ಭಾರತದಲ್ಲಿ ವಿಪರೀತ ಕಲುಷಿತಗೊಂಡಿರುವುದಕ್ಕೆ, ಎರಡು ಸಮುದಾಯಗಳ ಮಧ್ಯೆ ಒಳಗಿಂದೊಳಗೇ ಕುದಿಯುತ್ತಿರುವ ಪರಸ್ಪರ ದ್ವೇಷಕ್ಕೆ ಕಾರಣಗಳಿವೆ, ಮತಾಂಧತೆ ಅಥವಾ ಧರ್ಮದ ಅಮಲು ಒಂದು ಮುಖ್ಯ ಕಾರಣ ಎನ್ನುವ ಭಟ್ ಅವರು ಮತಾಂಧತೆ ಕೋಮುವಾದವನ್ನು ಹೇಗೆ ಪ್ರೋತ್ಸಾಹಿಸುತ್ತದೆ? ಮನುಷ್ಯನನ್ನು ಹೇಗೆ ಮತಿಹೀನ ದಾನವನನ್ನಾಗಿ ಪರಿವರ್ತಿಸಿ ಪರಮತ ದ್ವೇಷವನ್ನು ಪೋಷಿಸುತ್ತದೆ, ಅದೊಂದು ವ್ಯಾಧಿಯಾಗಿ ಹೇಗೆ ಧಾರ್ಮಿಕ ಮೂಲ ನಿಷ್ಠಾವಾದವೆಂಬ

(religious fundamentalism) ಎಂಬ ಇನ್ನೊಂದು ವ್ಯಾಧಿಗೆ ಜನ್ಮ ನೀಡಿ ಸಂಪ್ರದಾಯಕರಣತೆ ಮತ್ತು ಪ್ರತಿಗಾಮಿತ್ವವನ್ನು ಬೆಂಬಲಿಸುತ್ತದೆ ಎಂದು ವಿವರಿಸುತ್ತಾರೆ. ಜತೆಗೆ ಎಲ್ಲ ಧರ್ಮೀಯರಲ್ಲೂ (ಇಸ್ಲಾಂ, ಸಿಖ್, ಹಿಂದೂ) ಧಾರ್ಮಿಕ ಮೂಲ ನಿಷ್ಠಾವಾದದ ಗಾಳಿ ಪ್ರಬಲವಾಗಿ ಬೀಸುತ್ತಿದೆ ಎಂಬುದನ್ನೂ ಗುರುತಿಸುತ್ತಾರೆ.

ದೇಶವನ್ನು ಆವರಿಸಿರುವ ಧಾರ್ಮಿಕ ಉನ್ಮಾದಕ್ಕೆ ಸರಕಾರ ಮತ್ತು ಆಳುವ ವರ್ಗಗಳನ್ನು ಪ್ರತಿನಿಧಿಸುವ ಎಲ್ಲ ರಾಜಕೀಯ ಪಕ್ಷಗಳು ಕೂಡ ಸಾಕಷ್ಟು ಕೊಡುಗೆ ನೀಡುತ್ತಿರುತ್ತವೆ.

ಸ್ವತ: ಸರಕಾರವೇ ಹೋಮ, ಹವನ, ಪೂಜೆ ಇತ್ಯಾದಿಗಳನ್ನು ಏರ್ಪಡಿಸುತ್ತದೆ. ರಾಜ್ಯದ ಮುಖ್ಯಮಂತ್ರಿಗಳು ಕನ್ನಂಬಾಡಿ ಕಟ್ಟೆಯಲ್ಲಿ ಪ್ರತಿವರ್ಷ ಕಾವೇರಿ ಹೊಳೆಗೆ ಪೂಜೆ ಮಾಡುವುದು ನಡೆದು ಬಂದಿದೆ. ಮಳೆ ಬರದಾಗ ರಾಜ್ಯದ ಧಾರ್ಮಿಕ ಕೇಂದ್ರಗಳಲ್ಲಿ ಮಳೆಗಾಗಿ ಪ್ರಾರ್ಥನೆ ಸಲ್ಲಿಸಬೇಕೆಂದು ವಿನಂತಿ ಮಾಡಿಕೊಳ್ಳುವುದೂ ವಾಡಿಕೆಯಾಗಿದೆ. ಕೋಮುವಾದ ಮತ್ತು ಧರ್ಮಾಂಧತೆಗೆ ಪ್ರೋತ್ಸಾಹ ನೀಡುವಲ್ಲಿ ಸರಕಾರಗಳು ಸ್ಪರ್ಧೆಗೆ ನಿಂತಂತೆ ವರ್ತಿಸುತ್ತವೆ. ರಾಮಜನ್ಮ ಭೂಮಿ – ಬಾಬರಿ ಮಸೀದಿ ವಿಷಯದಲ್ಲಿ ವಿವಾದಿತ ಸ್ಥಳವನ್ನು (1986ರಲ್ಲಿ) ಕೇಂದ್ರ ಸರಕಾರ ಏಕಪಕ್ಷೀಯವಾಗಿ ಹಿಂದುಗಳಿಗೊಪ್ಪಿಸಿ, ಮತಾಂಧತೆಗೆ ಕಾರಣವಾಯಿತು. ಹಾಗೆಯೇ ವಿವಾಹ–ವಿಚ್ಛೇದಿತ ಮುಸ್ಲಿಂ ಮಹಿಳೆಯರ ಜೀವನಾಂಶಕ್ಕೆ ಸಂಬಂಧಿಸಿದ ವಿಷಯದಲ್ಲಿ 'ಮುಸ್ಲಿಂ ಮಹಿಳಾ ಮಸೂದೆ'ಯನ್ನು ತಂದು ಇಸ್ಲಾಮೀ ಮೂಲ ನಿಷ್ಠಾವಾದಕ್ಕೆ ಅದು ಮಣಿಯಿತು. ಅದಕ್ಕೂ ಹಿಂದೆ ದಿವಂಗತ ಭಿಂದ್ರನ್ ವಾಲೆಯವರೊಂದಿಗೆ ಸಖ್ಯ ಬೆಳೆಸಿ ಸಿಖ್ ಮೂಲ ನಿಷ್ಠಾವಾದದ ಬೆಳವಣಿಗೆಗೂ ಕೇಂದ್ರ ಸರಕಾರ ಆಸ್ಪದ ನೀಡಿತ್ತು. ಭಿಂದ್ರನ್ ವಾಲೆ ದೆಹಲಿಗೆ ಬಂದಾಗ ಸ್ವತ: ಅಂದಿನ ರಾಷ್ಟ್ರಪತಿಗಳೇ ಭಿಂದ್ರನ್ ವಾಲೆಗೆ ಅಡ್ಡ ಬಿದ್ದು ಅವರ ಪಾದಧೂಳಿಯನ್ನು ಶಿರಸಾವಹಿಸಿದ್ದರು. ಇನ್ನೊಂದು ಸಂದರ್ಭದಲ್ಲಿ ಅವರೊಬ್ಬ ಉನ್ನತ ಧಾರ್ಮಿಕ ಮುಖಂಡರೆಂದು ರಾಜೀವ ಗಾಂಧಿಯವರೇ ಅವರನ್ನು ಹೊಗಳಿದ್ದರು (ಭಟ್ ಎಸ್.ಆರ್.: 2005).

ಬಾಬ್ರಿ ಮಸೀದಿ – ರಾಮಜನ್ಮ ಭೂಮಿ ವಿವಾದ ಭಾರತದಲ್ಲಿ ಕೋಮು ಹಿಂಸೆಯನ್ನು ಸಾಂಸ್ಥೀಕರಿಸಿತು (institutionalized) ಎಂದರೆ ತಪ್ಪಾಗಲಾರದು.

ರಾ.ಜ.ಭೂಮಿ ಚಳವಳಿಯ ಬಹುದೊಡ್ಡ ಸಾಧನೆಯೆಂದರೆ, ಜನ ಸಾಮಾನ್ಯರನ್ನು ಕೋಮು ಹಿಂಸೆಯಲ್ಲಿ ತೊಡಗಿಸಿದ್ದು. ಪ್ರತ್ಯಕ್ಷ ಹಿಂಸೆಗೆ ಹೇಸಿಕೊಳ್ಳುವ ಮಧ್ಯಮ ವರ್ಗದ ಸುಶಿಕ್ಷಿತರು, ಹೆಂಗಸರು ಮತ್ತು ಮಕ್ಕಳು ಸಹ, ಮುಂಬೈ, ಅಹ್ಮದಾಬಾದ್ ಮತ್ತು ಇತರ ಕಡೆಗಳಲ್ಲಿ ಮುಸ್ಲಿಮರ ವಿರುದ್ಧ ಹಿಂಸೆ, ಲೂಟಿಗಳನ್ನು ನಡೆಸಿದರು. ತಮ್ಮ ಕೃತ್ಯದ ಬಗ್ಗೆ ಪಶ್ಚಾತ್ತಾಪದ ಬದಲು ಈ ಜನಗಳಿಗೆ ಹೆಮ್ಮೆ ಇರುವುದು ಈ ಹಿಂಸೆಯ ಇನ್ನೊಂದು ಪ್ರಮುಖ ಲಕ್ಷಣ (ಪುಟ.192. ಜಿ.ರಾಜಶೇಖರ್, ಕೆ.ಫಣಿರಾಜ್: 2005)

ಇಂತಹ ಹಿಂಸೆಗೆ ಕಾರಣವಾಗುವ ಕೋಮುವಾದ, ಅಥವಾ ಮತೀಯವಾದದ ಬೆಳವಣಿಗೆಗೂ, ಈ ದೇಶದಲ್ಲಿ ಹಿಂದೂ-ಮುಸ್ಲಿಂ ಎಂಬ ಮನೋವಿಭಜನೆಯ ಸ್ಥಾಪನೆಗೂ ನಮ್ಮ ಪಠ್ಯಪುಸ್ತಕಗಳಲ್ಲಿರುವ ಕೆಲವು ಪಠ್ಯಗಳಿಗೂ ಏನಾದರೂ ಸಂಬಂಧವಿರಬಹುದೆ? ಅಥವಾ ನಮ್ಮ ಪಠ್ಯಗಳ ಲೇಖಕರು ತಮಗೇ ಅರಿವಿಲ್ಲದಂತೆ ಇಂತಹ ಸಂಬಂಧ ಸೃಷ್ಟಿಗೆ ಕಾರಣವಾಗುವ ಪಠ್ಯಗಳನ್ನು ಬರೆದಿರಬಹುದೆ? ಎಂದು ಶೋಧಿಸುವ ಪ್ರಯತ್ನ ಇಲ್ಲಿದೆ.

ಮತೀಯ ಸೌಹಾರ್ದತೆಯ, ಕೋಮುಸಾಮರಸ್ಯದ ಅವಶ್ಯಕತೆಯನ್ನು ಚಿಕ್ಕಮಕ್ಕಳಿಗೆ ಮನದಟ್ಟು ಮಾಡುವ ಸದುದ್ದೇಶ ನಮ್ಮ ಸಮಾಜ ವಿಜ್ಞಾನ ಪುಸ್ತಕಗಳಿರುವುದು ಸ್ಪಷ್ಟ. ಆದರೆ ಚಿಕ್ಕ ಮಕ್ಕಳ ಮನಸ್ಸಿನಲ್ಲಿ, ಆರಂಭದಿಂದಲೇ, ಭಾರತದಲ್ಲಿರುವವರು ಎಂದರೆ ಹಿಂದುಗಳು, ಮುಸ್ಲಿಮರು ಮತ್ತು ಕ್ರಿಶ್ಚಿಯನರು ಎಂಬ ಮೂರೇ ಪಂಗಡಗಳು ಎನ್ನುವ ಭಾವನೆಯನ್ನು ತುಂಬಬಾರದು. ಕರ್ನಾಟಕದಲ್ಲಿ ಬಳಕೆಯಲ್ಲಿದ್ದ ಎರಡನೇ ತರಗತಿಯ 'ಸಮಾಜ ಪರಿಚಯ'ದ ಮೂರನೇ ಪಾಠದಲ್ಲಿ ಒಂದು ಪುಟದಲ್ಲಿ ಹಿಂದುಗಳ ದೇವಸ್ಥಾನದ ಜೊತೆಗೆ ಮಸೀದಿಯ ಚಿತ್ರವಿದೆ. ಮತ್ತೊಂದು ಪುಟದಲ್ಲಿ ಪ್ರತ್ಯೇಕವಾಗಿ ಕ್ರೈಸ್ತ ದೇವಾಲಯವಿದೆ. ಮೊದಲ ನೋಟಕ್ಕೆ ಮಗುವಿನ ಮನಸ್ಸಿನಲ್ಲಿ ದಾಖಲಾಗುವ ಚಿತ್ರ ದೇವಸ್ಥಾನ ಮತ್ತು ಮಸೀದಿಯದ್ದು. ಯಾಕೆಂದರೆ ದೇವಸ್ಥಾನದ ಜೊತೆಗೆ ಜಿನಬಸದಿಯಾಗಲಿ, ಬೌದ್ಧ ದೇವಾಲಯವಾಗಲಿ ಯಾವುದೂ ಇಲ್ಲ. ದೇವಸ್ಥಾನ (ಹಿಂದು), ಮಸೀದಿ (ಮುಸ್ಲಿಂ) ಎಂಬ ಈ ಅಪ್ರಜ್ಞಾಪೂರ್ವಕವಾದ ವಿಭಜನೆ ಭವಿಷ್ಯದಲ್ಲಿ ಅದೇ ಮಕ್ಕಳ ಮನಸ್ಸಿನಲ್ಲಿ 'ಹಿಂದೂ-ಮುಸ್ಲಿಂ' ಎಂಬ ಮುದ್ರೆಯೊತ್ತಿ, 'ಮುಸ್ಲಿಂ' ಎಂಬ ಕಾಲ್ಪನಿಕ ಶತ್ರುವಿನ ಸೃಷ್ಟಿಗೆ ಹಾದಿಯಾಗಬಹುದು. ಒಂಬತ್ತನೆಯ ತರಗತಿಯ ಸಮಾಜ ವಿಜ್ಞಾನ –

ಇತಿಹಾಸ ಮತ್ತು ಪೌರನೀತಿಯಲ್ಲಿ ಇತಿಹಾಸ ಭಾಗದ 'ಮಧ್ಯಕಾಲೀನ ಭಾರತ ಮಹಮದ್ ಘಸ್ನಿ ಮತ್ತು ಮಹಮದ್ ಘೋರಿ – ಇವರ ದಂಡಯಾತ್ರೆಗಳು' ಎನ್ನುವ ಪಾಠದಲ್ಲಿ ಈ ಅಂಶಗಳು ಗಮನಾರ್ಹ:

ಮಹಮದ್ ಘಸ್ನಿ ಕ್ರಿ>ಶ.997ರಲ್ಲಿ ಅಫ್ಘಾನಿಸ್ತಾನದಲ್ಲಿ ಪಟ್ಟಕ್ಕೆ ಬಂದನು. ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡ ನಂತರ ಕ್ರಿ.ಶ.1000ರಿಂದ 1027ರ ಅವಧಿಯಲ್ಲಿ ಅವನು ಹದಿನೇಳು ಬಾರಿ ಭಾರತದ ಮೇಲೆ ಆಕ್ರಮಣ ನಡೆಸಿದನು. . . .

ಕ್ರಿ.ಶ.1009ರಲ್ಲಿ ಮಹಮದ್ ಘಸ್ನಿಯು ಲಾಹೋರಿನ ಬಳಿ ಇರುವ ಕಾಂಗ್ರ (ನಾಗರಕೋಟೆ) ಗೆ ಮುತ್ತಿಗೆ ಹಾಕಿ ಅಲ್ಲಿಯ ಸಂಪದ್ಭರಿತ ದೇವಾಲಯಗಳನ್ನು ಲೂಟಿ ಮಾಡಿದನು. ತನ್ನ ಸಂಪತ್ತಿನ ದಾಹವನ್ನು ತಣಿಸಿಕೊಳ್ಳಲು ಕ್ರಿ.ಶ.1009ರಿಂದ 1019ರ ವರೆಗೆ ಅನೇಕ ದಂಡಯಾತ್ರೆಗಳನ್ನು ಮಾಡಿ ಯಶಸ್ವಿಯಾದನು. ಸ್ಥಾನೇಶ್ವರ, ಮಥುರಾ, ಕನೋಜ್‌ಗಳು ಅವನ ದಾಳಿಗೆ ತುತ್ತಾಗಿ ನೂರಾರು ದೇವಾಲಯಗಳು ನಾಶ ಹೊಂದಿದವು.

**ಕ್ರಿ.ಶ.1024ರ ಸೋಮನಾಥ ದೇವಾಲಯದ ಮುತ್ತಿಗೆ**

ಮಹಮದ್ ಘಸ್ನಿಯ ಮಹತ್ವದ ದಾಳಿಗಳಲ್ಲಿ ಸೋಮುನಾಥ ದೇವಾಲಯದ ದಾಳಿಯೂ ಒಂದು. ಕಾಥೇವಾಡದ ದಕ್ಷಿಣ ತುದಿಯಲ್ಲಿರುವ ಸೋಮುನಾಥ ದೇವಾಲಯ ಅತ್ಯಂತ ಮಹತ್ವದ ಹಿಂದೂ ದೇವಾಲಯಗಳಲ್ಲಿ ಒಂದಾಗಿತ್ತು. ಅನುಪಮ ಸೌಂದರ್ಯದಿಂದಲೂ, ಅಪಾರ ಸಂಪತ್ತಿನಿಂದಲೂ ಕಂಗೊಳಿಸುತ್ತಿದ್ದ ದೇವಾಲಯ ಇದು. ಈ ದೇವಾಲಯವನ್ನು ಮುತ್ತಿ ಸಂಪತ್ತನ್ನು ಕೊಳ್ಳೆ ಹೊಡೆದ ಘಸ್ನಿಯು ದೇವಾಲಯದ ಮೂರ್ತಿಯನ್ನು ನಾಶಪಡಿಸಿದನು....... ಮಹಮದ್ ಘಸ್ನಿಯ ಮುಖ್ಯ ಆಶಯವೆಂದರೆ ಭಾರತದ ಅಪಾರ ಸಂಪತ್ತನ್ನು ದೋಚುವುದೇ ಆಗಿತ್ತು. ಈತನ ದಾಳಿಯಿಂದಾಗಿ ಭಾರತದ ಕಲೆ ಮತ್ತು ವಾಸ್ತುಶಿಲ್ಪಗಳಿಗೆ ಭಾರಿ ಹೊಡೆತ ಬಿದ್ದಿತು........ ಭಾರತದಿಂದ ಹೊಡೆದು ತಂದ ಅಪಾರ ಸಂಪತ್ತಿನಿಂದ ಆತನು ಘಸ್ನಿಯಲ್ಲಿ ಅಪಾರ ಸಂಖ್ಯೆಯಲ್ಲಿ ಅರಮನೆಗಳನ್ನು, ಮಸೀದಿಗಳನ್ನು, ವಿದ್ಯಾಮಂದಿರಗಳನ್ನು ಕಟ್ಟಿಸಿದನು .......

**ಮಹಮದ್ ಘೋರಿಯ ದಾಳಿಗಳು**

....... ಮುಂದೆ ಒಂದು ವರ್ಷದಲ್ಲಿ ಘೋರಿಯು, ಭಾರಿ ಸೇನೆಯೊಂದಿಗೆ ಬಂದು ಕ್ರಿ.ಶ.1192ರಲ್ಲಿ ಅದೇ ತರೈನಲ್ಲಿ ಪೃಥ್ವಿರಾಜನನ್ನು ಕೊಂದು ಅನೇಕ ದೇವಾಲಯಗಳನ್ನು ನಾಶಪಡಿಸಿದನು........ ಮಹಮದ್ ಘೋರಿಯು 1194ರಲ್ಲಿ ಮತ್ತೆ ಭಾರತಕ್ಕೆ ಬಂದು ಕನೋಜಿನ ದೊರೆ ಜಯಚಂದ್ರನನ್ನು ಚಾಂದ್ವಾರದ ಯುದ್ಧದಲ್ಲಿ ಸೋಲಿಸಿದನು. ವಾರಣಾಸಿಯನ್ನು ಕೊಳ್ಳೆ ಹೊಡೆದು ಕನೋಜನ್ನು ಆಕ್ರಮಿಸಿದನು. (ಪು.31)

ಈ ಇಡೀ ಕಥಾನಕದಲ್ಲಿ ಬಳಸಲಾಗಿರುವ ಆಕ್ರಮಣ, ಲೂಟಿ, ಸಂಪತ್ತಿನ ದಾಹ, ಮುತ್ತಿಗೆ, ದಾಳಿ, ಮುತ್ತಿ, ಕೊಳ್ಳೆಹೊಡೆದ, ದೋಚು, ಹೊಡೆದು ತಂದ, ಕೊಳ್ಳೆಹೊಡೆದು – ಪದಗಳನ್ನು ಗಮನಿಸಬೇಕು. ದರೋಡೆಕೋರನೊಬ್ಬನಿಗೆ ಸಂಬಂಧಿಸಿ ಬಳಸಲಾಗುವ ಪದಗಳಿವು.

ಈಗ ಸಮಾಜ ವಿಜ್ಞಾನ ಭಾಗ–1 – 10ನೆಯ ತರಗತಿ (1998)ಯ ಪಠ್ಯದ ಈ ಕೆಳಗಿನ ಕಥಾನಕವನ್ನು ಓದೋಣ:

**ಭಾರತಕ್ಕೆ ಯುರೋಪಿಯನ್ನರ ಆಗಮನ ಭಾರತದಲ್ಲಿ ಯುರೋಪಿಯನ್ ವಾಸ್ತವ್ಯಗಳ ಸ್ಥಾಪನೆ:**

ಯುರೋಪಿನೊಂದಿಗೆ ಭಾರತದ ವ್ಯವಹಾರ ಸಂಬಂಧವು ಪ್ರಾಚೀನ ಗ್ರೀಕರ ಕಾಲದಿಂದಲೂ ನಡೆದು ಬಂದಿದೆ. ಮಧ್ಯಯುಗದಲ್ಲಿ ಭಾರತವು ಯುರೋಪ್ ಮತ್ತು ದಕ್ಷಿಣ ಪೂರ್ವ ಏಷ್ಯಗಳೊಂದಿಗೆ ಮುಖ್ಯವಾಗಿ ಎರಡು ಮಾರ್ಗಗಳ ಮೂಲಕ ವ್ಯಾಪಾರ ಸಂಬಂಧವನ್ನು ಹೊಂದಿತ್ತು. . . .

**ಅಧ್ಯಾಯ 2**: ಭಾರತದಲ್ಲಿ ಬ್ರಿಟಿಷ್ ಅಧಿಕಾರದ ವಿಸ್ತರಣೆ ಬಂಗಾಳ ಬ್ರಿಟಷರ ಕೈವಶವಾದದ್ದು.

ಕರ್ನಾಟಕದಲ್ಲಿ ತಮ್ಮ ಹಿಡಿತವನ್ನು ಭದ್ರಪಡಿಸಿಕೊಂಡ ನಂತ ಇಂಗ್ಲಿಷರು ಬಂಗಾಳದಲ್ಲಿ ತಮ್ಮ ಅಧಿಕಾರವನ್ನು ಸ್ಥಾಪಿಸುವ ಕಡೆಗೆ ಗಮನವನ್ನು ಹರಿಸಿದರು. ಮೊಗಲ್ ಸಾಮ್ರಾಟನಿಂದ ಅವರು ಒಂದು ಫರ್ಮಾನನ್ನು ಪಡೆದುಕೊಂಡರು. ಈ ಫರ್ಮಾನಿನಿಂದಾಗಿ ತೆರಿಗೆಯನ್ನು ಕೊಡದೆ ಅವರು ಆಮದು ರಫ್ತುಗಳಲ್ಲಿ ತೊಡಗಬಹುದಾಗಿತ್ತು. ಅಲ್ಲದೆ ತಮ್ಮ ಸಾಮಗ್ರಿಗಳನ್ನು

ಮುಕ್ತವಾಗಿ ಸಾಗಿಸಲು ಅವರು 'ದಸ್ತಕ್' ಗಳನ್ನು (ಅಪ್ಪಣೆ ಚೀಟಿ) ನೀಡುವ ಹಕ್ಕನ್ನು ಪಡೆದುಕೊಂಡರು. ಈ ಫರ್ಮಾನುಗಳ ಸೌಲಭ್ಯವನ್ನು ಕಂಪೆನಿ ಮತ್ತು ಅದರ ಅಧಿಕಾರಿಗಳು ಸ್ವಂತ ಲಾಭಕ್ಕೆಂದು ಬಳಸಿಕೊಳ್ಳಲಾರಂಭಿಸಿದ್ದರಿಂದ ನವಾಬನಿಗೆ ಆರ್ಥಿಕವಾಗಿ ನಷ್ಟವಾಯಿತು.

**ಮೂರನೆಯ ಆಂಗ್ಲೋ-ಮೈಸೂರು ಯುದ್ಧ (1789-92)**

ಇಂಗ್ಲಿಷರು ದಕ್ಷಿಣದಲ್ಲಿ ಟಿಪ್ಪು ತಮ್ಮ ಅತ್ಯಂತ ಪ್ರಬಲ ಸ್ಪರ್ಧಿ ಹಾಗೂ ದಕ್ಷಿಣ ದೇಶವನ್ನು ತಾವು ಆಳಲು ಇರುವ ಏಕೈಕ ಅಡ್ಡಿಯೆಂದು ಭಾವಿಸಿದರು. ಹಾಗೆಯೇ ಟಿಪ್ಪು ಬ್ರಿಟಿಷರನ್ನು ಮನಸಾರೆ ದ್ವೇಷಿಸಿದ್ದೇ ಅಲ್ಲದೆ ಅವರನ್ನು ಈ ದೇಶದಿಂದಲೇ ಓಡಿಸಬೇಕೆಂಬ ಸಂಕಲ್ಪ ಹೊಂದಿದ್ದನು. ಟಿಪ್ಪು ವಿದ್ಯಾವಂತ, ಧೀರ ಮತ್ತು ಚಾಣಾಕ್ಷ ಯೋಧನಾಗಿದ್ದನು. 'ಮೈಸೂರು ಹುಲಿ' ಎಂಬ ಬಿರುದು ಅವನಿಗೆ ಸಾರ್ಥಕವಾಗಿತ್ತು.

ತಿರುವಾಂಕೂರಿನ ದೊರೆಯ ಮೇಲೆ ಟಿಪ್ಪು ಆಕ್ರಮಣ ಮಾಡಿದಾಗ ಮೂರನೆಯ ಮೈಸೂರು ಯುದ್ಧ ಆರಂಭವಾಯಿತು........ ಇಂಗ್ಲಿಷರು ಬೆಂಗಳೂರನ್ನು ಗೆದ್ದು ಶ್ರೀರಂಗ ಪಟ್ಟಣಕ್ಕೆ ನುಗ್ಗಿದರು. ಟಿಪ್ಪುವು ಸಂಧಾನಕ್ಕೆ ಬರದೆ ಬೇರೆ ಮಾರ್ಗವಿರಲಿಲ್ಲ. 1792ರ ಶ್ರೀರಂಗಪಟ್ಟಣದ ಕೌಲಿನಂತೆ ಟಿಪ್ಪುವು ಬ್ರಿಟಿಷ್ ಹಾಗೂ ಮಿತ್ರ ಸೇನೆಗಳಿಗೆ ತನ್ನ ರಾಜ್ಯದ ಅರ್ಧಭಾಗದಷ್ಟನ್ನು ಒಪ್ಪಿಸಿ ಕೊಡಬೇಕಾಯಿತು. ಅಲ್ಲದೆ ಯುದ್ಧದ ನಷ್ಟವನ್ನು ತುಂಬಿಕೊಡಲು 330 ಲಕ್ಷ ರೂಪಾಯಿಗಳನ್ನು ಕೊಡಬೇಕಾಯಿತು. ಈ ಪರಿಹಾರವನ್ನು ಕೊಡುವ ವರೆಗೆ ತನ್ನ ಇಬ್ಬರು ಮಕ್ಕಳನ್ನು ಒತ್ತೆಯಾಳುಗಳಾಗಿ ಇಡಬೇಕಾಯಿತು. ಹೀಗೆ ಮೂರನೆಯ ಮೈಸೂರು ಯುದ್ಧವು ದಕ್ಷಿಣದಲ್ಲಿ ಟಿಪ್ಪುವಿನ ಪ್ರಾಬಲ್ಯವನ್ನು ಇಳಿಸಿ ಬ್ರಿಟಿಷ್ ಪರಮಾಧಿಕಾರವನ್ನು ಸ್ಥಾಪಿಸಲು ನೆರವಾಯಿತು. . . . .

**ಆಂಗ್ಲೋ–ಸಿಖ್ ಯುದ್ಧಗಳು**

. . . . ಮರಾಠರ ಪತನದ ಕಾರಣಗಳೇ ಸಿಖ್ಖರಿಗೂ ಸರಿಯಾಗಿ ಅನ್ವಯಿಸುತ್ತವೆ. ಇವರ ಒಳವೈರ ಮತ್ತು ಅಂತರ್ಯುದ್ಧಗಳಿಂದಾಗಿ ಇಡೀ ಭಾರಕ್ಕೆ ಬ್ರಿಟಿಷರು ಸಾರ್ವಭೌಮರಾದರು.

ಘಸ್ನಿ ಮತ್ತು ಘೋರಿಯ ದಂಡಯಾತ್ರೆಗಳ ವಿವರಣೆ ಮತ್ತು ಭಾರತಕ್ಕೆ ಯೂರೋಪಿಯನ್ನರ ಆಗಮನದ ವಿವರಣೆಗಳನ್ನು ಹೋಲಿಸಿ ನೋಡಿದರೆ ಇತಿಹಾಸ ಪಠ್ಯ ರಚನೆಕಾರರ ದೃಷ್ಟಿಕೋನ ಗೊತ್ತಾಗುತ್ತದೆ. ಮೊದಲ ವಿವರಣೆಯಲ್ಲಿ ಬಳಸಲಾಗಿರುವ ಪದಗಳು ಲೂಟಿ, ಸಂಪತ್ತಿನ ದಾಹ, ಕೊಳ್ಳೆ, ದೋಚು ಇತ್ಯಾದಿಯಾದರೆ, ಭಾರತವನ್ನು ಮುಸ್ಲಿಂ ದೊರೆಗಳಿಗಿಂತಲೂ ಹೆಚ್ಚು ಸಮರ್ಥವಾಗಿ ಸುಮಾರು ಎರಡು ಶತಮಾನಗಳ ಕಾಲ ವ್ಯವಸ್ಥಿತವಾಗಿ ಕೌಲ್, ರೂಲ್ ಗಳ ಮರೆಯಲ್ಲಿ ಲೂಟಿ, ದರೋಡೆ ಮಾಡಿದ ಬ್ರಿಟಿಷರಿಗಾಗುವಾಗ ನಮ್ಮ ಪಠ್ಯಗಳು ಬಳಸುವ ಪದಗಳಿವು: ಯುರೋಪಿಯನ್ನರ ಆಗಮನ, ವಾಸ್ತವ್ಯ, ಸ್ಥಾಪನೆ, ತೆರಿಗೆಯನ್ನು ಕೊಡದೆ ಆಮದು – ರಫ್ತುಗಳಲ್ಲಿ ತೊಡಗುವುದು, ಹಕ್ಕನ್ನು ಪಡೆದುಕೊಳ್ಳುವುದು. ಘಸ್ನಿ ಮತ್ತು ಘೋರಿ ಭಾರತದ ಸಂಪತ್ತನ್ನು ಕೊಳ್ಳೆ ಹೊಡೆದರೆ ಬ್ರಿಟಿಷರು ನವಾಬನಿಗೆ 'ಆರ್ಥಿಕವಾಗಿ ನಷ್ಟ' ಉಂಟು ಮಾಡಿದರು. ಇವತ್ತಿಗೂ ಬಲಪಂಥೀಯ ಶಕ್ತಿಗಳು, ಹಿಂದೂ ಮತೀಯವಾದಿಗಳು ದೇಶದಲ್ಲಿ ಹಿಂದೂ–ಮುಸ್ಲಿಂ ದ್ವೇಷ ಹರಡಲು ಟ್ರಂಪ್ ಕಾರ್ಡ್ ಆಗಿ ಬಳಸಿಕೊಳ್ಳುವ ಒಂದು ವಿಷಯವೆಂದರೆ, ಮುಸ್ಲಿಮರು/ಮುಸ್ಲಿಂ ದೊರೆಗಳು ಈ ದೇಶದ ಮೇಲೆ ದಾಳಿ ಮಾಡಿ ಈ ದೇಶದ ಸಂಪತ್ತನ್ನು ದೋಚಿದರು, ಮತ್ತು ಸೋಮನಾಥ ದೇವಾಲಯವೊಂದನ್ನೆ ಹದಿನೇಳು ಬಾರಿ ದೋಚಲಾಯಿತು ಎಂಬುದನ್ನು, ಆದರೆ ಈ ದೊರೆಗಳು ದೋಚಿದ್ದಕ್ಕಿಂತ ನೂರಾರು ಪಾಲು ಸಂಪತ್ತನ್ನು ಬ್ರಿಟಿಷರು ಭಾರತದಿಂದ ದೋಚಿದರು ಎಂಬ ಸತ್ಯವನ್ನು ಮರೆಮಾಚುವ ಇತಿಹಾಸ ಪಠ್ಯಗಳು ಪ್ರಸಕ್ತ ಸಮಾಜದಲ್ಲಿ ಜನರು ಕೋಮುವಾದಿಗಳಾಗಲು ಸಹಕರಿಸುತ್ತವೆ. ಬಲಪಂಥೀಯ ಶಕ್ತಿಗಳಿಗೆ ಕೋಮು ದ್ವೇಷ ಹರಡಲು ಒಂದು ಸಲಕರಣೆಯಾಗುತ್ತವೆ. ಆದ್ದರಿಂದ ಮುಸ್ಲಿಂ ದೊರೆಗಳ ಕುರಿತಾದ ಕಥಾನಕದಲ್ಲಿ ಮತ್ತೆ ಮತ್ತೆ ಬಳಸಲಾಗುವ ದರೋಡೆಯ ಭಾಷೆಯನ್ನು ಮೃದುಗೊಳಿಸುವುದು ಅಗತ್ಯ ಹಾಗೂ ಬ್ರಿಟಿಷರು ಕೂಡ ಭಾರತಕ್ಕೆ ಬಂದದ್ದು ಇಲ್ಲಿಯ

ಸಂಪತ್ತಿಗಾಗಿಯೇ, 'ಸಂಪತ್ತಿನ ದಾಹ' ದಿಂದಾಗಿಯೇ ಹೊರತು ಈ ದೇಶವನ್ನು ಉದ್ಧಾರ ಮಾಡುವುದಕ್ಕಾಗಿ ಅಲ್ಲವೆಂಬ, ಕನಿಷ್ಠ ಪಕ್ಷ, ಸೂಚನೆಯನ್ನಾದರೂ ಇತಿಹಾಸ ಪಠ್ಯಗಳು ನೀಡಬೇಕು. ಹೀಗೆ ಮಾಡುವಾಗಲೂ ಆಧುನಿಕತೆಯನ್ನು ಸಾರಾಸಗಟಾಗಿ ತಿರಸ್ಕಾರದಿಂದ ನೋಡುವ ಪ್ರವೃತ್ತಿ ಇದೆ. ಉದಾಹರಣೆಗೆ, ಆಧುನಿಕತೆ ನಮಗೆ ಕೊಡಮಾಡಿದ ಇಂಗ್ಲಿಷ್ ಭಾಷೆ, ಈ ಭಾಷೆಯ ಮೂಲಕ ದೊರಕಿದ ವೈಚಾರಿಕತೆ, ವಿಚಾರ ಸ್ವಾತಂತ್ರ್ಯ, ಆಧುನಿಕ ದೃಷ್ಟಿಕೋನ–ಎಲ್ಲವನ್ನೂ 'ಬಿಳಿ ತೊಗಲಿನವನ ಹೊರೆ' ಎಂದೋ, ಆಧುನಿಕತೆ ಹಾಗೂ ಬಹುರೂಪಿ ಸಂಸ್ಕೃತಿಯನ್ನು ಮೆಚ್ಚುವವರನ್ನು 'ಮೆಕಾಲೆಯ ಮಕ್ಕಳು' ಎಂದೋ ಕೀಳಾಗಿ ಮಾತಾಡುವ, ಹಂಗಿಸುವ ಪ್ರವೃತ್ತಿ ಈಗ ಕಂಡುಬರುತ್ತಿದೆ. ಹೀಗೆ ತಿರಸ್ಕಾರದಿಂದ ನೋಡುವ, ಹಂಗಿಸುವ 'ಗಣ್ಯ'ರು ತಮ್ಮನ್ನು ಬಲಪಂಥೀಯ ಶಕ್ತಿಗಳೊಂದಿಗೆ ಗುರುತಿಸಿಕೊಳ್ಳುತ್ತಾರೆ ಎಂಬುದೂ ಗಮನಿಸಬೇಕಾದ ಅಂಶ. ಆಧುನಿಕತೆಯನ್ನು ತಿರಸ್ಕರಿಸುವ ಅಥವಾ ತಿರಸ್ಕಾರದಿಂದ ಕಾಣುವ ಜನರು 'ವಿದೇಶೀ ಸಂಸ್ಕೃತಿ ನಮಗೆ ಬೇಡ. ಜೀನ್ಸ್ ಬೇಡ. ಪ್ರಣಯಿಗಳ ದಿನಾಚರಣೆ ಬೇಡ. ವಿದೇಶೀ ವಿಚಾರಗಳು ಬೇಡ. ನಮಗೆ ನಮ್ಮ ಆರ್ಷೇಯ ಸಂಸ್ಕೃತಿ, ಸನಾತನ ಧರ್ಮ ಇರಲಿ' ಎನ್ನುತ್ತ, ಅಂತಿಮವಾಗಿ, 'ಒಂದು ದೇಶ, ಒಂದು ಧರ್ಮ, ಒಂದು ಭಾಷೆ, ಒಬ್ಬ ನಾಯಕ, ಒಂದು ಆಜ್ಞೆ' ಎಂಬಲ್ಲಿಗೆ ಬರುತ್ತಾರೆ. ಆದ್ದರಿಂದ ಇತಿಹಾಸ ಪಠ್ಯವನ್ನು ಬರೆಯುವಾಗ ಸಮದರ್ಶಿತ್ವ–ವಸ್ತುನಿಷ್ಠತೆಯಿಂದ ಬರೆಯುವ, ಯಾವುದೇ ಪಕ್ಷ ವಹಿಸದೆ ಯಾವುದೇ ತೀರ್ಮಾನ–ತೀರ್ಪು ನೀಡದೆ ನಿಷ್ಪಕ್ಷಪಾತವಾಗಿ ಬರೆಯುವ ಅಗತ್ಯವಿದೆ.

## ಶಿಕ್ಷಣದಲ್ಲಿ ಕೋಮುವಾದ ಮತ್ತು ಶಿಕ್ಷಣದ ಬಗ್ಗೆ ಕೋಮುವಾದಿ ಮನೋಧರ್ಮ

ಕೋಮುಗಲಭೆಗಳನ್ನು ಹತ್ತಿಕ್ಕುವುದು ಎಂದರೆ ಮತೀಯವಾದವನ್ನು ಮತಾಂಧತೆಯನ್ನು ಹತ್ತಿಕ್ಕುವುದೇ ಆಗಿದೆ. ಆದರೆ ಕೋಮುವಾದವನ್ನು ಹತ್ತಿಕ್ಕುವುದು ಹೇಗೆ? ಎಂಬ ಪ್ರಶ್ನೆಗೆ ಉತ್ತರ ಸುಲಭವಲ್ಲ. ಮತೀಯ ಸಾಮರಸ್ಯದ ಮಹತ್ವವನ್ನು ಶಾಲಾ ಮಕ್ಕಳಿಗೆ ಬೋಧಿಸಬೇಕೆಂಬ ಸಲಹೆ ನೀಡಬಹುದು. ಆದರೆ ಮಕ್ಕಳಿಗೆ ಮತೀಯ ಸಾಮರಸ್ಯವನ್ನು ಬೋಧಿಸುವ ಶಿಕ್ಷಕರು ಮೊದಲು ತಾವು ಸೆಕ್ಯುಲರ್ ಮನೋಧರ್ಮ ಬೆಳೆಸಿಕೊಳ್ಳಬೇಕಾಗುತ್ತದೆ. ಅವರು ಸ್ವತಃ ಮತ ನಿರಪೇಕ್ಷತೆ (ಸೆಕ್ಯುಲರಿಸಂ) ಯನ್ನು ಅಪೇಕ್ಷಿಸದೆ, ತಮ್ಮ ಬದುಕಿನಲ್ಲಿ, ಆಚರಣೆಯಲ್ಲಿ ಅಳವಡಿಸಿಕೊಳ್ಳದೆ ಮಕ್ಕಳಿಗೆ ಮತೀಯ ಸಾಮರಸ್ಯ ಬೋಧಿಸಲಾರರು.

ನಮ್ಮ ಶಿಕ್ಷಣ ವ್ಯವಸ್ಥೆಯ ಒಳಹೊಕ್ಕು ನೋಡಿದರೆ, ಶಿಕ್ಷಣದ ಜೀವಾಳವಾದ ಬಹಳ ಮಂದಿ ಶಿಕ್ಷಕರೇ ಕೋಮುವಾದಿ ಚಿಂತನೆ ಉಳ್ಳವರಾಗಿರುತ್ತಾರೆ. ಅಯೋಧ್ಯೆಯ ಬಾಬ್ರಿ ಮಸೀದಿ/ ವಿವಾದಾಸ್ಪದ ಕಟ್ಟಡವನ್ನು ಉರುಳಿಸಿದ ಜನರ ಬಗ್ಗೆ ಅಭಿಮಾನ ತೋರುವ ರಾಜಕೀಯ ಶಕ್ತಿಗಳ ಮುಖವಾಣಿಯಾಗಿರುವ ರಾಜಕೀಯ ಪಕ್ಷದಿಂದ ಚುನಾಯಿತರಾಗಿ ಬರುವವರಲ್ಲಿ ಶಿಕ್ಷಕ ಕ್ಷೇತ್ರದ ಪ್ರತಿನಿಧಿಗಳೂ ಇರುತ್ತಾರೆ, ಇದ್ದಾರೆ ಎಂಬುದೇ ಶಿಕ್ಷಕರ ಈ ಕೋಮುವಾದೀ ಮನೋಧರ್ಮಕ್ಕೆ ಸಾಕ್ಷಿ ಎನ್ನಬಹುದು.

ಈ ದೇಶದ, ರಾಜ್ಯದ ಬಹಳಷ್ಟು ಖಾಸಗೀ ಶಿಕ್ಷಣ ಸಂಸ್ಥೆಗಳು ಯಾವುದೋ ಒಂದು ಜಾತಿ/ಮತಕ್ಕೆ ಸೇರಿದವರು ಸ್ಥಾಪಿಸಿ ಸಾಧ್ಯವಾದಷ್ಟು ಮಟ್ಟಿಗೆ ತಮ್ಮ ಜಾತಿ/ಮತಕ್ಕೆ ಸೇರಿದವರ ಹಿತಾಸಕ್ತಿಗಳನ್ನು ಕಾಪಾಡಲು ತಮ್ಮ ಧರ್ಮ, ಧೋರಣೆಗಳನ್ನು ವಿದ್ಯಾರ್ಥಿಗಳ ತಲೆಯಲ್ಲಿ ತುಂಬಲು ಪ್ರಯತ್ನಿಸುವವುಗಳು. ಒಂದು ಕೋಮಿನವರು ತಮ್ಮ ಧಾರ್ಮಿಕ ಗ್ರಂಥದ ಪ್ರತಿಗಳನ್ನು ತಮ್ಮ ಸಂಸ್ಥೆಯ ಮಕ್ಕಳಿಗೆ ಉಚಿತವಾಗಿ ಹಂಚಿದಾಗ ಶಿಕ್ಷಕರು ಅದನ್ನು ಪ್ರತಿಭಟಿಸುವುದಕ್ಕೆ ಬದಲಾಗಿ 'ನಮ್ಮ ಧಾರ್ಮಿಕ ಸಾಹಿತ್ಯವನ್ನೂ ಹಂಚಿರಿ' ಎನ್ನುತ್ತಾರೆ. ಇದು ಶಿಕ್ಷಣದ ಬಗ್ಗೆ ಆ ಶಿಕ್ಷಕರಿಗಿರುವ ಕೋಮುವಾದಿ ಮನೋಧರ್ಮವನ್ನು ಸೂಚಿಸುತ್ತದಲ್ಲದೆ ಶಿಕ್ಷಣದಲ್ಲಿ ಕೋಮುವಾದದ ಬೆಳವಣಿಗೆಗೆ ಅಪಾಯಕಾರಿ ಸಾಧ್ಯತೆಯನ್ನು ಕೂಡ ಹೇಳುತ್ತದೆ.

ಶಿಕ್ಷಣದಲ್ಲಿ ಕೋಮುವಾದ ನುಸುಳಿಕೊಂಡಾಗ, 'ಅಲ್ಪಸಂಖ್ಯಾಕ' ವೆಂಬ ಹಣೆಪಟ್ಟಿ ಅಂಟಿಸಿಕೊಂಡ ಶಿಕ್ಷಣ ಸಂಸ್ಥೆಗಳು ನೈತಿಕ ಶಿಕ್ಷಣದ ಹೆಸರಿನಲ್ಲಿ ತಮ್ಮ ತಮ್ಮ ಸಂಸ್ಥೆಗಳಲ್ಲಿ ಧಾರ್ಮಿಕ ಗ್ರಂಥಗಳ ಪಠಣ ಬೋಧಿಸುವ, ಧಾರ್ಮಿಕ ಶಿಕ್ಷಣ ನೀಡುವ ಹಂತ ತಲುಪಿದಾಗ ಆ ಧಾರ್ಮಿಕ ಪಠ್ಯಗಳೇ ವಿದ್ಯಾರ್ಥಿಗಳ ಯೋಚನಾ ಪಕ್ರಿಯೆಯ ಭಾವನಾತ್ಮೀಕರಣಕ್ಕೆ ಸಾಧನವಾಗುತ್ತವೆ.

## ಪಠ್ಯಪುಸ್ತಕಗಳ ಮೂಲಕ ಯೋಚನಾ ಪ್ರಕ್ರಿಯೆಯ ಭಾವನಾತ್ಮೀಕರಣ (Emotionalisation)

ಧಾರ್ಮಿಕ ಪಠ್ಯಗಳನ್ನು ಬಳಸಿ ವಿದ್ಯಾರ್ಥಿಗಳ ಮಿದುಳು ತೊಳೆಯುವ (brainwash) ಕೆಲಸ ಒಂದೆಡೆಯಾದರೆ ತರಗತಿಯಲ್ಲಿ ಬಳಸುವ ಇತಿಹಾಸ ಪಠ್ಯಪುಸ್ತಕಗಳ ಮೂಲಕವೂ ವಿದ್ಯಾರ್ಥಿಗಳನ್ನು ಭಾವನಾತ್ಮಕವಾಗಿ ಹಿಂದೂ–ಮುಸ್ಲಿಂ ಅಥವಾ ಹಿಂದೂ–ಕ್ರಿಶ್ಚಿಯನ್ ಎಂದು ವಿಭಜಿಸುವ ಸಾಧ್ಯತೆಯನ್ನೂ ಗುರುತಿಸಬಹುದಾಗಿದೆ. ಈ ನಿಟ್ಟಿನಲ್ಲಿ ಭಾರತದ ಇತಿಹಾಸದಲ್ಲಿ ಮುಸ್ಲಿಂ ದೊರೆಗಳ ಆಳ್ವಿಕೆಯ ಕುರಿತಾಗಿ ಇರುವ ಕೆಲವು ಪಠ್ಯಗಳ ವಿಶ್ಲೇಷಣೆಯನ್ನು ಈ ಭಾಗದಲ್ಲಿ ಮಾಡುವ ಪ್ರಯತ್ನವಿದೆ.

ಕರ್ನಾಡಕದ ಕೆಲವು ಪಠ್ಯಗಳ ವಿಶ್ಲೇಷಣೆ ಮಾಡುವ ಮೊದಲು ಎರಡು ದೇಶಗಳ ಇತಿಹಾಸದ ಒಂದೇ ಘಟನೆಯನ್ನು ಅಂದರೆ, ಸ್ವಾತಂತ್ರ್ಯ ಹೋರಾಟವನ್ನು, ಹೇಗೆ ಭಿನ್ನವಾಗಿ ಹೇಳಲಾಗಿದೆ ಎಂಬುದಕ್ಕೆ ವಿವರಣೆಯಾಗಿ ಭಾರತ ಮತ್ತು ಪಾಕಿಸ್ತಾನಗಳ ಶಾಲಾ ಪಠ್ಯಗಳ ಒಂದು ಅಧ್ಯಯನವನ್ನು ಗಮನಿಸಬೇಕಾಗಿದೆ. ಶಾಲಾ ಪಠ್ಯಗಳಲ್ಲಿ ಇತಿಹಾಸವನ್ನು ಹೇಗೆ ತಿರುಚಲಾಗುತ್ತದೆಂಬುದಕ್ಕೂ ಇದು ಒಂದು ಉದಾಹರಣೆಯಾಗಬಲ್ಲದು. ಭಾರತ ಮತ್ತು ಪಾಕಿಸ್ತಾನಗಳಿಗೆ ಒಂದು ಸಮಾನ ಗತಕಾಲವಿದೆಯಾದರೂ, ಎರಡೂ ದೇಶಗಳ ಶಾಲಾ ಪಠ್ಯಪುಸ್ತಕಗಳಲ್ಲಿ ಸ್ವಾತಂತ್ರ್ಯ ಹೋರಾಟದ ಕತೆಯನ್ನು ತೀರ ಭಿನ್ನವಾದ ರೀತಿಯಲ್ಲಿ ಹೇಳಲಾಗಿದೆ. ಕೃಷ್ಣಕುಮಾರ್ (2001) ಉಭಯ ದೇಶಗಳ ಇತಿಹಾಸ ಪಠ್ಯಪುಸ್ತಕಗಳು ವಿಭಿನ್ನ ಸೈದ್ಧಾಂತಿಕ ಹಾಗೂ ಸಾಂಸ್ಕೃತಿಕ ಕಾರಣಗಳಿಗಾಗಿ ತಮ್ಮ ಇತಿಹಾಸಗಳನ್ನು ಹೇಗೆ ತಮತಮಗೆ ಬೇಕಾದಂತೆ (selectively) ಹೇಳುತ್ತವೆ ಎಂಬ ಕುರಿತು ವಿವರವಾದ ಅಧ್ಯಯನ ನಡೆಸಿದ್ದಾರೆ. ಎರಡೂ ದೇಶಗಳ ದೃಷ್ಟಿಕೋನ ಮತ್ತು ಅವು ತಮ್ಮ ಇತಿಹಾಸವನ್ನು ನೋಡುವ ರೀತಿಯಲ್ಲಿ ಯಾವ ರೀತಿಯ ಭಾರೀ ಅಂತರವಿದೆ ಎಂಬುದನ್ನು ತೋರಿಸಲು ಕುಮಾರ್ ಸದ್ಯದಲ್ಲಿ ಭಾರತ ಹಾಗೂ ಪಾಕಿಸ್ತಾನದ ಶಾಲೆಗಳಲ್ಲಿ ಬಳಕೆಯಲ್ಲಿರುವ ಇತಿಹಾಸ ಪಠ್ಯಪುಸ್ತಕಗಳ ತೌಲನಿಕ ಅಧ್ಯಯನ ನಡೆಸುತ್ತಾರೆ. ಎರಡೂ ದೇಶಗಳ ಆಧುನಿಕ ಇತಿಹಾಸದಲ್ಲಿ ಮಹತ್ವಪೂರ್ಣ ಪಾತ್ರ ವಹಿಸಿರುವ ಪ್ರಮುಖ ಘಟನೆಗಳನ್ನು ಉದಾಹರಣೆಗೆ, 1857ರಲ್ಲಿ ನಡೆದ ದಂಗೆ (rebellion), ಸ್ವಾತಂತ್ರ್ಯ ಹೋರಾಟ

ಹಾಗೂ ದೇಶದ ವಿಭಜನೆಯನ್ನು – ಅವರು ವಿವರವಾಗಿ ವಿಶ್ಲೇಷಣೆಗೆ ಒಡ್ಡುತ್ತಾರೆ. ಗಾಂಧಿ, ಜಿನ್ನಾ ಹಾಗೂ ಇಕ್ಬಾಲ್‌ರಂತಹ ನಾಯಕರ ಚಿತ್ರಣದಲ್ಲಿ ಕಂಡುಬರುವ ವ್ಯತ್ಯಾಸವನ್ನು ಗುರುತಿಸುತ್ತಾರೆ. ಭಾರತ–ಪಾಕಿಸ್ತಾನ ಎಂದೊಡನೆ ಕೇಳಿ ಬರುವ ಮಾಮೂಲು ಪ್ರತಿಕ್ರಿಯೆಗಳಿಂದ ಎದೆಗುಂದದೆ ದೇಶದ ವಿಭಜನೆಯ ಬಗ್ಗೆ ಭಾರತ ಹಾಗೂ ಪಾಕಿಸ್ತಾನದ ಶಾಲಾ ಮಕ್ಕಳು ಬರೆದ, ವಿಶೇಷ ಒಳನೋಟಗಳಿರುವ, ಪ್ರಬಂಧಗಳನ್ನೂ ವಿಶ್ಲೇಷಿಸುತ್ತಾರೆ.

ಕೃಷ್ಣಕುಮಾರ್‌ರವರ ಅಧ್ಯಯನದ ಪ್ರಕಾರ ಬ್ರಿಟಿಷರು ನಡೆಸಿದ ಭಾರದ ಆರ್ಥಿಕ ಶೋಷಣೆಯ ಕುರಿತು ದಾದಾಭ್ಯಾ ನೌರೋಜಿಯವರು ಮಾಡಿದ ಕಟುವಿಮರ್ಶೆ, ಕಾಂಗ್ರೆಸ್ ಪಕ್ಷದ ಮಂದಗಾಮಿ ನಾಯಕತ್ವ ಬ್ರಿಟಿಷರಿಗೆ ಸಲ್ಲಿಸಿದ ಬೇಡಿಕೆಗಳು ಮತ್ತು ಬಾಲಗಂಗಾಧರ ತಿಲಕರಂತಹ ಮಿಲಿಟೆಂಟ್ ರಾಷ್ಟ್ರೀಯವಾದಿ ನಾಯಕರ ವಿಷಯಕ್ಕೆ ಪಾಕಿಸ್ತಾನಿ ಪಠ್ಯಪುಸ್ತಕಗಳು ಗಮನವನ್ನೆ ನೀಡುವುದಿಲ್ಲ.

ಪಾಕಿಸ್ತಾನಿ ಪಠ್ಯಪುಸ್ತಕಗಳಲ್ಲಿ ಗಾಂಧೀಜಿಯ ವ್ಯಕ್ತಿತ್ವದ ಉಲ್ಲೇಖವೇ ಇಲ್ಲ. ಗಾಂಧೀಜಿಯ ಮೂಲಶಿಕ್ಷಣದ ಬಗ್ಗೆ (Basic Education) ಬರೆಯುವಾಗ ಪಾಕಿಸ್ತಾನದ ಒಂದೇ ಒಂದು ಪಠ್ಯಪುಸ್ತಕ ಕೂಡ ಪುಸ್ತಕಮಯ (bookish) ವಾದ ಪರೀಕ್ಷಾ–ಕೇಂದ್ರಿತವಾದ ವಸಾಹತುಶಾಹಿ ಶಿಕಣ ಪದ್ಧತಿಗೆ ಒಂದು ಬದಲಿ ವ್ಯವಸ್ಥೆ (alternative) ಯನ್ನು ಹುಡುಕುವುದು ಗಾಂಧೀಜಿಯ ಮುಖ್ಯ ಉದ್ದೇಶವಾಗಿತ್ತು ಎಂಬುದನ್ನು ಉಲ್ಲೇಖಿಸುವುದೇ ಇಲ್ಲ.

ಮೂಲ ಶಿಕ್ಷಣಕ್ಕೆ ಸಂಬಂಧಿಸದಂತೆ ವಾರ್ಧಾ ಯೋಜನೆ (Wardha Scheme) ಯನ್ನು ಪರಿಚಯಿಸುವಾಗ ಪಾಕಿಸ್ತಾನಿ ಶಾಲಾ ಇತಿಹಾಸಕಾರರು ಬಳಸುವ ಮಾತುಗಳಿವು:

ಗಾಂಧಿಯ ಮನಸ್ಸಿನ ಒಂದು ಸೃಷ್ಟಿಯಾಗಿದ್ದ ವಾರ್ಧಾ ಶಿಕ್ಷಣ ಯೋಜನೆಯನ್ನು ದೇಶದ ಪ್ರಾಂತ್ಯಗಳಲ್ಲಿ ಕಾಂಗ್ರೆಸ್ ಸರಕಾರ ಅನುಷ್ಠಾನಗೊಳಿಸಿತು. ಇದು ಸಂಪೂರ್ಣವಾಗಿ ಹಿಂದೂ ಆದರ್ಶಗಳಿಂದ ತುಂಬಿದ್ದ ಮೂಲಭೂತವಾಗಿ (essentially) ಒಂದು ಕೋಮುವಾದಿ (communal) ಯೋಜನೆ.

ಈ ಯೋಜನೆಯಲ್ಲಿ ಧರ್ಮದ ಬೋಧನೆಯನ್ನು ಸಂಪೂರ್ಣವಾಗಿ ಕಡೆಗಣಿಸಲಾಯಿತು ಮತ್ತು ಇದು ಓರ್ವ ಮುಸ್ಲಿಂ ಮಗುವನ್ನು ಅದರ ನಂಬಿಕೆಯಿಂದ ದೂರಮಾಡುವುದಕ್ಕೆ ಸಮನಾಗಿತ್ತು. ಮುಸ್ಲಿಂ ಮಕ್ಕಳು ಕಾಂಗ್ರೆಸ್ ಧ್ವಜಕ್ಕೆ ಗೌರವ ನೀಡಲೇ ಬೇಕಾಗಿತ್ತು. ವಂದೇ ಮಾತರಂ ಹಾಡಲೇ ಬೇಕಾಗಿತ್ತು. ಖಾದಿಯನ್ನು ಧರಿಸಲೇ ಬೇಕಾಗಿತ್ತು ಮತ್ತು ಗಾಂಧಿಯ ಚಿತ್ರವನ್ನು ಪೂಜಿಸಲೇ ಬೇಕಾಗಿತ್ತು. ಶಾಲೆಗಳಲ್ಲಿ ಉರ್ದುವಿಗೆ ಬದಲಾಗಿ ಹಿಂದಿಯನ್ನು ಬೋಧಿಸಲು ಆರಂಭಿಸಲಾಯಿತು. ತರಗತಿಗಳು ಆರಂಭವಾಗುವ ಮೊದಲು ವಿದ್ಯಾರ್ಥಿಗಳು ಮಹಾತ್ಮಾಗಾಂಧಿಯ ಚಿತ್ರಕ್ಕೆ ವಂದಿಸುತ್ತಿದ್ದರು ಮತ್ತು ಹಾಗೆ ವಂದಿಸುವಂತೆ ಮುಸ್ಲಿಂ ವಿದ್ಯಾರ್ಥಿಗಳನ್ನು ಕೂಡ ಬಲಾತ್ಕರಿಸಲಾಗುತ್ತಿತ್ತು. ಹಿಂದುಗಳು ' ವಂದೇ ಮಾತರಂ' ಎಂಬ ಗೀತೆಯನ್ನು ಹಾಡುವುದನ್ನು ಆಚರಣೆಗೆ ತಂದರು. ಆ ಗೀತೆಯಲ್ಲಿ ಮುಸ್ಲಿಮರ ಬಗ್ಗೆ ದ್ವೇಷದ ಭಾವನೆಗಳಿದ್ದವು (ಪು.185).

ಇತಿಹಾಸದ ಘಟನೆಗಳನ್ನು, ಮತ್ತು ಐತಿಹಾಸಿಕ ವ್ಯಕ್ತಿಗಳನ್ನು ಒಂದು ಪ್ರಭುತ್ವ ಹೇಗೆ ಶಾಲಾ ವಿದ್ಯಾರ್ಥಿಗಳ ಮನಸ್ಸನ್ನು ಪೂರ್ವಾಗ್ರಹಗಳಿಂದ ತುಂಬುವಂತೆ ಮಾಡಲು ಮತ್ತು ಹೇಗೆ ಅವರು ಭಾವನಾತ್ಮಕವಾಗಿ ಇಡೀ ಒಂದು ಸಮುದಾಯವನ್ನು, 'ದಿ ಅದರ್' (The other) ಅನ್ನು ದ್ವೇಷಿಸುವಂತೆ ಮಾಡಲು ಬಳಸಿಕೊಳ್ಳಬಹುದೆಂಬುಕ್ಕೆ ಇದು ಉದಾಹರಣೆ. '....... ಹಾಗೆ ವಂದಿಸುವಂತೆ ಮುಸ್ಲಿಂ ವಿದ್ಯಾರ್ಥಿಗಳನ್ನು ಕೂಡ ಬಲಾತ್ಕರಿಸಲಾಗುತ್ತಿತ್ತು', 'ವಂದೇ ಮಾತರಂ ಎಂಬ' ಗೀತೆಯಲ್ಲಿ ಮುಸ್ಲಿಮರ ಬಗ್ಗೆ ದ್ವೇಷದ ಭಾವನೆಗಳಿದ್ದವು, ವಾರ್ಧಾ ಒಂದು ಕೋಮುವಾದಿ ಯೋಜನೆ ಎನ್ನುವ ಅಪ್ಪಟ ಸುಳ್ಳುಗಳು ವಿದ್ಯಾರ್ಥಿಗಳ ಮನಸ್ಸಿನಲ್ಲಿ ತಳಊರುವಂತೆ ಮಾಡಲು ಪಾಕಿಸ್ತಾನದ ಇತಿಹಾಸ ಪಠ್ಯಗಳ ಬಳಕೆಯಾಗುತ್ತಿರುವುದು ವಿಷಾದನೀಯ. ಆದರೆ ಇತಿಹಾಸ ಪಠ್ಯ ಎಂಬುದೇ ಒಂದು ಪ್ರಭುತ್ವಕ್ಕೆ ತಾನು ಬಯಸುವ ಅಧಿಕೃತ ಮಿಥ್ಯೆ (official myth) ಗಳನ್ನು ನಾಗರಿಕರಿಗೆ ರವಾನಿಸಲು ಇರುವ ಒಂದು ಸಾಧನವಾಗಿರುವಾಗ ಇತಿಹಾಸ ಪಠ್ಯಗಳ ಬಳಕೆ ಯಾವ್ಯಾವ ಉದ್ದೇಶಗಳಿಗಾಗಿ ನಡೆಯುತ್ತದೆಂದು ನಿಖರವಾಗಿ ಹೇಳಲಾಗದು. ಇನ್ನು ಕರ್ನಾಟಕದ ಇತಿಹಾಸ ಪಠ್ಯಪುಸ್ತಕಗಳನ್ನು ಪರಿಶೀಲಿಸಬಹುದು.

ಒಂದು ದೇಶದ ಇತಿಹಾಸ ಎಂದರೆ ಆ ದೇಶದಲ್ಲಿ ಬೇರೆ ಬೇರೆ ಕಾಲದಲ್ಲಿ ಒಟ್ಟು ಜನ ಸಮುದಾಯ ಬದುಕಿನಲ್ಲಿ ತಮ್ಮನ್ನು ತೊಡಗಿಸಿಕೊಂಡಾಗ ಅನುಭವಿಸಿದ ನೋವು–ನಲಿವು, ಯಶಸ್ಸು–ಅಪಯಶಸ್ಸು, ಆತಂಕ–ಆಶ್ಚರ್ಯ, ಆಸೆ–ನಿರಾಸೆಗಳ ಮಾನವೀಯ ವಿವರ, ವಸ್ತುನಿಷ್ಠ ಕಥಾನಕ. ಈ ವಿವರಗಳನ್ನು ಓದುಗನಿಗೆ ಸಂವಹಿಸುವುದು ಇತಿಹಾಸ ಪುಸ್ತಕಗಳನ್ನು ಬರೆಯುವವರು ಮಾಡಬೇಕಾದ ಕೆಲಸ. ಆದರೆ ಇವತ್ತು ನಮ್ಮ ಶಾಲಾ ಇತಿಹಾಸ ಪುಸ್ತಕಗಳನ್ನು ಓದುವವನಿಗೆ ಇತಿಹಾಸ ಎಂದರೆ ಕೆಲವೇ ಕೆಲವು ಚಾರಿತ್ರಿಕ ಪುರುಷರ ಅಥವಾ ಧಾರ್ಮಿಕ ಮುಖಂಡರ ಕೊಡುಗೆ ಎಂಬ ಭಾವನೆ ಬರುತ್ತದೆ. ದೇಶಕ್ಕೆ ಸ್ವಾತಂತ್ರ್ಯ ಬರುವ ವರೆಗಿನ ಇತಿಹಾಸ ದೇಶವನ್ನಾಳಿ ಹೋದ ರಾಜಮಹಾರಾಜರುಗಳ ಇತಿಹಾಸವಾದರೆ, ಸ್ವಾತಂತ್ರ್ಯಾನಂತರದ ಇತಿಹಾಸ (ಇನ್ನೊಂದು ಶತಮಾನದ ನಂತರ ಶಾಲೆಗಳಲ್ಲಿ ಓದುವ ಮಕ್ಕಳಿಗೆ) ಈ ದೇಶದಲ್ಲಿ ಆಳ್ವಿಕೆ ನಡೆಸಿದ ರಾಷ್ಟ್ರಪತಿಗಳ, ಪ್ರಧಾನ ಮಂತ್ರಿಗಳ ಇತಿಹಾಸವಾಗಬಹುದು. ಬೇರೆ ಮಾತಿನಲ್ಲಿ ಹೇಳುವುದಾದರೆ, ಇತಿಹಾಸ ಯಾವತ್ತೂ ಆಳುವ ವರ್ಗ ತನ್ನ ಹಿತಾಸಕ್ತಿಗಳ ರಕ್ಷಣೆಗಾಗಿ ಬರೆಸುವ ಇತಿಹಾಸ, ಒಂದು ಸಮಾಜದಲ್ಲಿ ಮಕ್ಕಳು ಅಧ್ಯಯನ ಮಾಡುವ ಇತಿಹಾಸ ಆ ಸಮಾಜವನ್ನಾಳುವ ಸರಕಾರ ಗೊತ್ತುಪಡಿಸಿದ ಇತಿಹಾಸ, ಪಠ್ಯಪುಸ್ತಕ ಲೇಖಕರು ಬರೆಯುವ ಇತಿಹಾಸ. ಯಜಮಾನನನ್ನು ಓಲೈಸುವ ಆಳು ಯಜಮಾನನ ಆಸಕ್ತಿ, ಆಶಯಗಳ ವಿರುದ್ಧ ಹೇಗೆ ಸತ್ಯ ಹೇಳಲಾರನೋ ಹಾಗೆಯೇ ಸರಕಾರ ನೇಮಿಸಿದ ಲೇಖಕರು ಬರೆಯುವ ಇತಿಹಾಸ ಪಠ್ಯಗಳು ಸರಕಾರಕ್ಕೆ ಒಪ್ಪಿಗೆಯಾಗುವ ಅಭಿಪ್ರಾಯಗಳನ್ನಷ್ಟೆ ಹೇಳುವುದು ಸಾಧ್ಯ. ಹಾಗಾಗಿ ಬ್ರಿಟಿಷ್ ಸರಕಾರದ ಆಳ್ವಿಕೆಯ ಕಾಲದಲ್ಲಿ, ಸಾರ್ವತ್ರಿಕ ಚುನಾವಣೆಗಳಿಲ್ಲದ ಕಾಲದಲ್ಲಿ, ದೇಶದ ಯಾವುದೇ ಅಲ್ಪಸಂಖ್ಯಾತರ ಒಟ್ಟು ಮತಗಳ ಮೊತ್ತ ಅಧಿಕಾರಕ್ಕೆ ಬರಲು ಅನಗತ್ಯವಾಗಿದ್ದ ಕಾಲದಲ್ಲಿ ಅಂದಿನ ಇತಿಹಾಸ ಪಠ್ಯಪುಸ್ತಕಗಳು ಒಂದು ರೀತಿಯ 'ಸತ್ಯ'ವನ್ನು ಹೇಳುತ್ತಿದ್ದರೆ ಇಂದಿನ ಇತಿಹಾಸ ಪಠ್ಯಪುಸ್ತಕಗಳು ಇನ್ನೊಂದು ರೀತಿಯ 'ಸತ್ಯ'ವನ್ನು ಹೇಳುತ್ತವೆ. ಹೀಗಾಗಿ, ಇತಿಹಾಸವನ್ನು ಗಂಭೀರವಾಗಿ ಪರಿಗಣಿಸುವುದೇ ತಪ್ಪು ಇರಬಹುದು. ಇತಿಹಾಸದಿಂದ ಪಾಠ ಕಲಿಯುವವರು ಅಪರೂಪ, ಮತ್ತು ಇತಿಹಾಸ ಪಠ್ಯಗಳಲ್ಲಿ ಅಚ್ಚಾಗಿರುವ ಇತಿಹಾಸದ ಪಾಠಗಳನ್ನು ಸಂಪೂರ್ಣ ನಂಬುವುದೂ ಅಪಾಯಕಾರಿ. ಇತಿಹಾಸವೆಂಬುದು ಕಲ್ಪನೆ ಹಾಗೂ ಸಂವೇದನೆಗಳ

ಸಂಯೋಜನೆಯಿಂದ ಹುಟ್ಟುವ ಕತೆ, ಕಾವ್ಯ ಅಥವಾ ಕಾದಂಬರಿಯಲ್ಲ. ಆದರೂ ಇತಿಹಾಸ ಬರೆಯುವವನ ವೈಯಕ್ತಿಕ ಬೇಕು–ಬೇಡಗಳಿಗೆ, ವ್ಯಕ್ತಿನಿಷ್ಠ ಅಥವಾ ವ್ಯವಸ್ಥೆನಿಷ್ಠ ತಿಕ್ಕಲುತನಗಳಿಗೆ ಅಥವಾ ಇತಿಹಾಸ ಬರೆಸುವವನ/ಬರೆಸುವ ಪ್ರಭುತ್ವದ ನಿಲುವುಗಳಿಗೆ ಇತಿಹಾಸ ಬದ್ಧವಾಗಿರಬಹುದು. ಆದ್ದರಿಂದ ಇತಿಹಾಸ ಪಠ್ಯದಲ್ಲಿ ಬಳಸಲಾಗುವ ಪದಗಳು, ವಿಶೇಷಣಗಳು ಯಾವಕಾಲದಲ್ಲಿ ಯಾರಿಗೆ ಅನ್ವಯವಾಗುತ್ತವೆ ಅಥವಾ ಅನ್ವಯವಾಗುವುದಿಲ್ಲವೆಂದು ಹೇಳುವಂತಿಲ್ಲ. ಇದಕ್ಕೆ ಉದಾಹರಣೆಯಾಗಿ ಬ್ರಿಟಿಷರ ಆಡಳಿತದಲ್ಲಿ ಕನಾಟಕದ ಶಾಲೆಗಳಿಗೆ ಗೊತ್ತುಮಾಡಿದ್ದ ಇತಿಹಾಸ ಪಠ್ಯ ಮತ್ತು ಇಂದಿನ ಪಠ್ಯ ಟಿಪ್ಪು ಸುಲ್ತಾನನ ಬಗ್ಗೆ ಏನು ಹೇಳುತ್ತದೆ ಮತ್ತು ಇತಿಹಾಸದ ಆಭಾಸಗಳು ಯಾವ ರೀತಿ ಇರುತ್ತವೆ ಎಂದು ಪರಿಶೀಲಿಸಬಹುದು.

"ಈ ವೇಳೆಗೆ ಎಂಟು ವರ್ಷ ಕಾಲ ರಾಜ್ಯವಾಳಿದ ಟಿಪ್ಪುವು, ಮಲಯಾಳವನ್ನೂ ಕೊಡಗನ್ನೂ ಮೈಸೂರಿನ ಸುತ್ತಮುತ್ತಲೂ ಇದ್ದ ಇತರ ದೇಶಗಳನ್ನೂ ಜಯಿಸಿ ಸ್ವಾಧೀನ ಮಾಡಿಕೊಂಡಿದ್ದನು. ಅದರಿಂದ ಗರ್ವೋದ್ಧತನಾಗಿ ಹಿಂದೂ ದೇಶದಲ್ಲಿ ತಾನೇ ಅದ್ವಿತೀಯ ಪರಾಕ್ರಮಿ ಎಂದು ಭಾವಿಸಿಕೊಂಡಿದ್ದನು. ಇವನೂ ಔರಂಗಜೇಬನಂತೆಯೇ ತನ್ನಿಂದ ಪರಾಜಿತರಾದವರನ್ನೆಲ್ಲ ಬಲಾತ್ಕಾರದಿಂದ ಮಹಮ್ಮದೀಯ ಮತಕ್ಕೆ ಸೇರಿಸುತ್ತಲೂ ಅದಕ್ಕೆ ಇಷ್ಟಪಡದವರನ್ನು ಸಾವಿರ ಸಾವಿರವಾಗಿ ಕೊಲ್ಲುತ್ತಲೂ ಇದ್ದನು. ಇವನಿಗೆ ಇಂಗ್ಲಿಷರ ನೆರಳನ್ನು ಕಂಡರಾಗದು. ಎಂದಾದರೂ ಅವರನ್ನೆಲ್ಲ ಈ ದೇಶದಿಂದ ಅಟ್ಟಿಬಿಡುವುದಾಗಿ ಬಹಿರಂಗವಾಗಿ ಪ್ರತಿಜ್ಞೆ ಮಾಡಿದ್ದನು."

(ಹಿಂದೂ ದೇಶದ ಚರಿತ್ರೆ – ಲೋವರ್ ಸೆಕೆಂಡರಿ ತರಗತಿಗಳಿಗೆ – ಮ್ಯಾಕ್ಮಿಲನ್ ಮತ್ತು ಕಂಪೆನಿ ಲಿಮಿಟೆಡ್ – 1927)

ಅದೇ ಟಿಪ್ಪು ಸುಲ್ತಾನನ ಬಗ್ಗೆ ಇಂದಿನ ಪಠ್ಯ ಏನು ಹೇಳುತ್ತದೆ ನೋಡಿ:

"ಟಿಪ್ಪು ಸುಲ್ತಾನ್ ಮೈಸೂರಿನ ಪ್ರಬಲ ಆಡಳಿತಗಾರ, ಅವನು ನೀತಿವಂತನೂ ದೇವರಲ್ಲಿ ಅಪಾರವಾದ ಭಕ್ತಿ ಉಳ್ಳವನೂ ಆಗಿದ್ದನು. ಒಳ್ಳೆಯ ವಿದ್ಯಾವಂತ, ಕನ್ನಡ, ಉರ್ದು ಮತ್ತು ಪರ್ಷಿಯನ್ ಭಾಷೆಗಳಲ್ಲಿ ಸರಾಗವಾಗಿ ಮಾತನಾಡಬಲ್ಲವನಾಗಿದ್ದನು. ಒಂದು ದೊಡ್ಡ

ಗ್ರಂಥಭಂಡಾರವನ್ನು ಹೊಂದಿದ್ದನು. ಧೀರ ಯೋಧನಾದ ಟಿಪ್ಪು ಸುಲ್ತಾನ್ ಚಂಚಲ ಸ್ವಭಾವದವನಾಗಿದ್ದನು. ಅವನು ಇಂಗ್ಲಿಷರ ಪ್ರಬಲ ಶತ್ರುವಾಗಿದ್ದನು. ಸ್ವಾತಂತ್ರ್ಯಪ್ರಿಯನಾಗಿದ್ದ ಅವನಿಗೆ 'ಮೈಸೂರು ಹುಲಿ' ಎಂಬ ಹೆಸರು ಸಾರ್ಥಕವಾಗಿದ್ದಿತು. ಇಂಗ್ಲಿಷರ ವಿರುದ್ಧ ಸಹಾಯ ಪಡೆಯಲು ಕಾಬೂಲ್, ಪರ್ಸಿಯ, ಫ್ರಾನ್ಸ್ ಮತ್ತು ಕಾನ್‌ಸ್ಟಾಂಟಿನೋಪಲ್‌ಗಳೊಡನೆ ಸಂಪರ್ಕ ಹೊಂದಿದ್ದನು. (ಸಮಾಜ ಪಾಠಗಳು – ಹತ್ತನೆಯ ತರಗತಿ).

ಹಿಟ್ಲರನ ಬಲಗೈ ಬಂಟನಾಗಿದ್ದು ಯುದ್ಧಕಾಲದ ಅಪರಾಧಗಳಿಗಾಗಿ ನಲ್ವತ್ತೊಂದು ವರ್ಷಗಳ ಕಾಲ ಕಾರಾಗೃಹ ಶಿಕ್ಷೆ ಅನುಭವಿಸಿ 1987 ಆಗಸ್ಟ್ 17ರಂದು ಆತ್ಮಹತ್ಯೆ ಮಾಡಿಕೊಂಡು ಸತ್ತ ರುಡಾಲ್ಫ್ ಹೆಸ್‌ನಿಗೆ ಸಂಬಂಧಿಸಿ ಬಳಸಲಾದ ವಿಶೇಷಣಗಳನ್ನು ಪರಿಶೀಲಿಸಿದರೆ ಇತಿಹಾಸದಲ್ಲಿ ವಿಶೇಷಣಗಳು ಹೇಗೆ ಬದಲಾಗುತ್ತಿರುತ್ತವೆ ಎಂಬುದು ತಿಳಿದೀತು. ಸುಮಾರು ಅರುವತ್ತು, ಲಕ್ಷ ಯೆಹೂದಿಗಳ ನರಹತ್ಯೆ. ಇನ್ನೂರು ಲಕ್ಷ ಯೆಹೂದಿಗಳ ನರಹತ್ಯೆ, ಇನ್ನೊಂದು ಲಕ್ಷ ರಶ್ಯನ್ ನಾಗರಿಕರ ಮತ್ತು ಯುರೋಪಿನಾದ್ಯಂತ ಇನ್ನೂ ಕೆಲವಾರು ಲಕ್ಷ ಜನರ ಸಾವಿಗೆ ಕಾರಣವಾದ ಮಾನವ ಇತಿಹಾಸದ ಅತ್ಯಂತ ಕ್ರೂರ, ಅನಾಗರಿಕವೆನ್ನಬಹುದಾದ ನಾಜಿಗಳ ಆಳ್ವಿಕೆಯಲ್ಲಿ ರುಡಾಲ್ಫ್ ಹೆಸ್ ಅಡಾಲ್ಫ್ ಹಿಟ್ಲರನ ಅಜ್ಞಾಧಾರಕನಾಗಿದ್ದ, ಆರಾಧಕನಾಗಿದ್ದ.

ಹೆಸ್‌ನ ಆತ್ಮಹತ್ಯೆಯ ಬಳಿಕ ಪಶ್ಚಿಮ ಜರ್ಮನಿಯಲ್ಲಿ ನವ–ನಾಜಿವಾದದ ಭಾವನೆಗಳ ಅಲೆಗಳೆದ್ದು ನಾಜಿವಾದ ಮರುಹುಟ್ಟು ಪಡೆಯುವ ಸ್ಪಷ್ಟ ಲಕ್ಷಣಗಳು ಕಾಣಿಸಿದುವು. ಇದು ರಾಜಸ್ಥಾನದಲ್ಲಿ ನಡೆದ ರೂಪಾ ಕನ್ವರ್‌ಳ ಆತ್ಮಹತ್ಯೆಯ ಬಳಿಕ ದೇವರಾಲ ಯಾತ್ರಾಸ್ಥಳವಾದದ್ದನ್ನು ಜ್ಞಾಪಿಸುತ್ತದೆ. ಮೂಲ ಆಶಯದಲ್ಲಿ ಸಮಾನ ಅಮಾನವೀಯ ಹಾಗೂ ಕ್ರೂರವಾದ ಸತಿ ಮತ್ತು ನಾಜಿವಾದ ಮರುಹುಟ್ಟು ಪಡೆಯುವ ರೀತಿ ಒಂದೇ ಬಗೆಯದು ಅನಿಸುತ್ತದೆ. ರೂಪಾ ಕನ್ವರ್ ತನ್ನ ಗಂಡನ ಚಿತೆಯ ಮೇಲೆ ಸುಟ್ಟು ಬೂದಿಯಾದ ಸತಿಸ್ಥಳ ಜನರ ಭಾವನೆಗಳನ್ನು ಕಲಕುವ 'ಪವಿತ್ರ' ಸ್ಥಳವಾಯಿತು. ಹೆಸ್ ನ ಶವ ಸಂಸ್ಕಾರ ನಡೆದ ಬವೇರಿಯಾದ ಅವನ ಹುಟ್ಟೂರು ನೂರಾರು ನವ ನಾಜಿಗಳಿಗೆ ನಾಜಿ ದೇವಾಲಯವಾಯಿತು. ರಾಜಸ್ಥಾನದ ಪತ್ರಿಕೆಗಳು ರೂಪಾ ಕನ್ವರ್ ಸತಿ ಹೋದ ಘಟನೆಯನ್ನು ವರ್ಣರಂಜಿತ ಕತೆಯಾಗಿ ಮಾಡಿದವು. ಪಶ್ಚಿಮ

ಜರ್ಮನಿಯ ಬಲಪಂಥೀಯ ಪತ್ರಿಕೆಗಳು ನವ ನಾಜಿಗಳ ಉತ್ಸಾಹದ ಬೆಂಕಿಗೆ ತುಪ್ಪ ಹೊಯ್ದವು. ನವ ನಾಜಿಗಳು ಹೆಸ್‌ನ ಶವಸಂಸ್ಕಾರ ನಡೆದ ಬವೇರಿಯಾದ ಹಳ್ಳಿಗೆ ಜಾತ್ರೆ ಬಂದರು.

ಇತಿಹಾಸದಲ್ಲಿ ಪದಗಳು ಮರುಕಳಿಸುತ್ತವೆ, ವಿಶೇಷಣಗಳು ಪರ್ಯಾಯವಾಗಿ ಬಳಸಲ್ಪಡುತ್ತವೆ. ಹಿಟ್ಲರ್ ಅಧಿಕಾರದಲ್ಲಿದ್ದವರೆಗೆ ನಾಜಿ ನಾಯಕನಾಗಿದ್ದ ಹೆಸ್ ಒಬ್ಬ ನಿಜವಾದ ಜರ್ಮನ್ ಹಾಗೂ ಮಹಾ ದೇಶಪ್ರೇಮಿ ಅನ್ನಿಸಿಕೊಂಡಿದ್ದ. ನಾಜಿ ವಾದ ಮಣ್ಣುಪಾಲಾಗಿ ಜರ್ಮನಿ ಪತನಗೊಂಡಾಗ ಅದೇ ಹೆಸ್ ಮಾನವದ್ರೋಹಿ ಹಾಗೂ ಯುದ್ಧ ಅಪರಾಧಿ ಅನ್ನಿಸಿಕೊಂಡ. ಬ್ರಿಟಿಷರ ಆಳ್ವಿಕೆಯಲ್ಲಿ 'ಗರ್ವೋದ್ಧತ' ನೆನ್ನಿಸಿಕೊಂಡ 'ಟಿಪ್ಪು'ವು ಬ್ರಿಟಷರು ಈ ದೇಶದಿಂದ ತೊಲಗಿದ ಬಳಿಕ 'ಟಿಪ್ಪು ಸುಲ್ತಾನ್' ಆಗಿ 'ಪ್ರಬಲ ಆಡಳಿತಗಾರ', 'ಧೀರ ಯೋಧ', 'ವಿದ್ಯಾವಂತ', 'ಸ್ವಾತಂತ್ರ್ಯಪ್ರಿಯ' ಅನ್ನಿಸಿಕೊಂಡ.

ಈಗ ಜರ್ಮನರು ನಾಜಿಗಳು ನಡೆಸಿದ ನರಮೇಧದ ಕುರಿತಾಗಲಿ, ಯೆಹೂದಿಗಳಿಗೆ ನೀಡಿದ ಚಿತ್ರಹಿಂಸೆಯ ಕುರಿತಾಗಲಿ ಮಾತಾಡಲು ಇಷ್ಟಪಡುವುದಿಲ್ಲ. ಪಶ್ಚಿಮ ಜರ್ಮನಿಯ ಕೊಲೊನ್ ನಗರದಲ್ಲಿರುವ ರೋಮನ್ ಮ್ಯೂಸಿಯಂಗೆ ಹೋದಾಗ ನಾನು ನಾಜಿಗಳು ಯೆಹೂದಿಗಳನ್ನು ಸೆರೆಯಲ್ಲಿಟ್ಟಿದ್ದ ಸೆರೆಮನೆಯ ಕೋಣೆಗಳನ್ನು (ಎಲ್ಡೀ ಹೌಸ್) ನೋಡಬೇಕೆಂದೆ. ಮ್ಯೂಸಿಯಂನ ಅಧಿಕಾರಿ ಮುಖ ಸಿಂಡರಿಸಿದ. ಕೊನೆಗೂ ಅವ ನನಗೆ ಎಲ್ಡೀ ಹೌಸ್‌ಗೆ ಹೋಗುವ ದಾರಿ ಹೇಳಿದ್ದು ಮನಸ್ಸಿಲ್ಲದ ಮನಸ್ಸಿನಿಂದಲೇ. ನಲ್ವತ್ತು ವರ್ಷಗಳ ಹಿಂದೆ ಮಾನವದ್ರೋಹಿ ಎಂದು ಕರೆಯಲ್ಪಟ್ಟ ಹೆಸ್ ಈಗ ಪುನಃ ನವನಾಜಿಗಳ ಪಾಲಿಗೆ ನಿಜವಾದ ಜರ್ಮನ್ ಆಗಿದ್ದಾನೆ. ಅಷ್ಟೇ ಅಲ್ಲ ಅವರ ಪಾಲಿಗೆ ಅವ ಒಬ್ಬ 'ಹುತಾತ್ಮ' ಕೂಡ ಹೌದು. ಅವ ಆತ್ಮಹತ್ಯೆ ಮಾಡಿಕೊಂಡು ಸತ್ತದ್ದಲ್ಲ. ಅವನ ಸಾವು ಒಂದು ಕೊಲೆ ಎನ್ನುವ ನವನಾಜಿಗಳು ಅವನ 'ಕೊಲೆ'ಗೆ ಪ್ರತೀಕಾರ ಮಾಡುವುದಾಗಿ ಪ್ರತಿಜ್ಞೆ ಮಾಡಿದರು.

ಪೂರ್ವ ಜರ್ಮನಿ ಕಮ್ಯೂನಿಸ್ಟರ ಆಳ್ವಿಕೆಯಲ್ಲಿದೆ. ಇದು ತಮ್ಮ 'ಪಿತೃಭೂಮಿ'ಯ ಕಾಲು ಭಾಗದಲ್ಲಿ ರಶ್ಯಾ ತನ್ನ ವಸಾಹತು ಸ್ಥಾಪಿಸಿದ್ದಲ್ಲದೆ ಬೇರೇನೂ ಅಲ್ಲ ಎನ್ನುವ ಭಾವನೆ ಜರ್ಮನಿಯಲ್ಲಿ ಬಲವಾಗುತ್ತಿದ್ದು ಅನೇಕ ಜರ್ಮನರು ಬ್ರಿಟನ್ನಿನ ಸುಪುತ್ರ, ಮಹಾಮುತ್ಸದ್ದಿ ವಿನ್‌ಸ್ಟನ್ ಚರ್ಚಿಲ್‌ನನ್ನೇ 'ಯುದ್ಧ ಪಾತಕಿ' (ವಾರ್ ಕ್ರಿಮಿನಲ್) ಎಂದು ಪರಿಗಣಿಸುತ್ತಿದ್ದಾರೆ.

ಪಶ್ಚಿಮದ ಮಿತ್ರರಾಷ್ಟ್ರಗಳು ಬ್ರಿಟಿಷ್ ಸೇನಾ ನೆಲೆಗಳಿಂದ ಅನೇಕ ಜರ್ಮನ್ ನಗರಗಳ ಮೇಲೆ ಬಾಂಬ್ ಹಾಕಿದ್ದವು. ಇದಕ್ಕೆ ಅನುಮತಿ ನೀಡಿದ್ದ ಚರ್ಚಿಲ್ ಜರ್ಮನರ ದೃಷ್ಟಿಯಲ್ಲಿ ಈಗ 'ವಾರ್ ಕ್ರಿಮಿನಲ್'!

ಹೆಸ್‌ನನ್ನು ಹೀರೊ ಎಂದು ಪರಿಗಣಿಸುವ ಮನೋಭಾವದಂತಹ ಯಾವುದೇ ಮನೋಭಾವ ಮತಾಂಧ ಹಾಗೂ ಮಿಲಿಟೆಂಟ್ ಮನೋಭಾವವನ್ನು ಸಂಕೇಶಿಸುತ್ತದೆಂದು ಬೇರೆ ಹೇಳಬೇಕಾಗಿಲ್ಲ. ರಾಮ ಜನ್ಮಭೂಮಿ ವಿವಾದವಿರಲಿ, ದೇವರಾಲದಲ್ಲಿ ದೇವಾಲಯ ನಿರ್ಮಾಣದ ಪ್ರಶ್ನೆ ಇರಲಿ, ಅಂತಿಮವಾಗಿ ಇವು ಕುಮ್ಮಕ್ಕು ನೀಡುವುದು ಮತಾಂಧ ಹಾಗೂ ಮಿಲಿಟೆಂಟ್ ಶಕ್ತಿಗಳಿಗೆ. ಆದ್ದರಿಂದಲೇ ಹೆಸ್‌ನಂತಹ ಯುದ್ಧಪಾತಿಕಿಯೊಬ್ಬನನ್ನು ಒಂದು ಸಮುದಾಯ ಹೀರೊ ವರ್ಶಿಪ್ ಮಾಡುವುದು ಆತಂಕಕ್ಕೆಡೆ ಮಾಡುತ್ತದೆ. ಆದರೆ ಇತಿಹಾಸ ಯಾರನ್ನು ಯಾವಾಗ ಪಾತಕಿ ಎನ್ನುತ್ತದೆ, ಯಾವಾಗ ಹೀರೊ ಎನ್ನುತ್ತದೆ, ಸರಕಾರಿ ಇತಿಹಾಸ ಯಾರನ್ನು ಏನಾಗಿಸುತ್ತದೆ ಎಂಬುದು ಮತ್ತಷ್ಟು ಆತಂಕದ ವಿಷಯ. ಹೀಗೆ, ಪಠ್ಯಪುಸ್ತಕಗಳಲ್ಲಿ ವಿದ್ಯಾರ್ಥಿಗಳು ಓದುವ ಇತಿಹಾಸ 'ಸರಕಾರಿ ಇತಿಹಾಸ'ವೇ ಆಗಿರುತ್ತದಾದರೂ, ಈ ಇತಿಹಾಸ ವಿರೋಧಾಭಾಸಗಳಿಂದ ಕೂಡಿದಾಗ ವಿದ್ಯಾರ್ಥಿಗಳು ಗೊಂದಲಕ್ಕೊಳಗಾಗುತ್ತಾರೆ. ಕರ್ನಾಟಕದಲ್ಲಿ 1980ರ ದಶಕದಲ್ಲಿ ಬಳಕೆಯಲ್ಲಿದ್ದ ಇತಿಹಾಸ ಪಠ್ಯಗಳಲ್ಲಿ ಇಂತಹ ಹಲವು ಆಭಾಸಗಳನ್ನು ಗುರುತಿಸಬಹುದು. ಈ ಕೆಳಗೆ ಇನ್ನೂ ಕೆಲವು ಉದಾಹರಣೆಗಳನ್ನು ಕೊಡಲಾಗಿದೆ.

'ವಿಜಯನಗರದ ಹಿಂದೂ ಸಾಮ್ರಾಜ್ಯ' – ಸಮಾಜ ಪರಿಚಯ ಪಾಠಗಳು – (ಆರನೆಯ ತರಗತಿ)

**ವಿಜಯನಗರ ಸಾಮ್ರಾಜ್ಯದಲ್ಲಿ ಜನರ ಸ್ಥಿತಿ**

ಸರ್ಕಾರ:– ಕೃಷ್ಣ ದೇವರಾಯನ ಮಾತಿನಲ್ಲಿಯೇ ವಿಜಯನಗರದ ಸರ್ಕಾರ ಹೇಗಿತ್ತು ಎಂಬುದನ್ನು ತಿಳಿಯಬಹುದು. "ಸಿಂಹಾಸನಾರೂಢನಾದ ರಾಜ ಧರ್ಮಭೀರುವಾಗಿರಬೇಕು. ಶಿಲ್ಪ ಕಲಾಕಾರರ ಸಖನಾಗಿರಬೇಕು. . . ಪ್ರಜೆಗಳ ಮೇಲೆ ಮಿತ ತೆರಿಗೆ ಇರಬೇಕು.." ಎಂದು ಹೇಳಿದ್ದಾನೆ. ಅಷ್ಟೇ ಅಲ್ಲದೆ ಅದೊಂದು ಯುದ್ಧಗಳ ಯುಗ. ಅದರಿಂದ ವಿಜಯನಗರದ ಅರಸರ ಬಳಿ ಪ್ರಬಲವಾದ ಸೈನ್ಯವಿತ್ತು.... ತೆರಿಗೆ ಭಾರವಾಗಿತ್ತು. ಶಿಕ್ಷೆ ಕ್ರೂರವಾಗಿತ್ತು.......

ಆರ್ಥಿಕ ಪರಿಸ್ಥಿತಿ:- ವಿಜಯನಗರ ಸಾಮ್ರಾಜ್ಯವು ಸಂಪದ್ಭರಿತವಾಗಿತ್ತು. ರಾಜ್ಯದ ನೀರಾವರಿ ನೀತಿಯಿಂದ ವ್ಯವಸಾಯ ಉತ್ತಮಗೊಂಡಿತ್ತು. ಅನೇಕ ಕಾರ್ಖಾನೆಗಳಿದ್ದುವು.......

ಸಾಮಾಜಿಕ ಪರಿಸ್ಥಿತಿ:- ಸಮಾಜದಲ್ಲಿ ಹೆಂಗಸರಿಗೆ ಉನ್ನತ ಸ್ಥಾನವಿತ್ತು. ರಾಜಕೀಯ, ಸಾಮಾಜಿಕ ಮತ್ತು ಸಾಹಿತ್ಯ ಕ್ಷೇತ್ರದಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ಅವರಿಗೆ ವಿದ್ಯಾಭ್ಯಾಸ ಸೌಲಭ್ಯಗಳೂ ಇದ್ದುವು. . **ಬಹುಪತ್ನೀತ್ವ, ಬಾಲ್ಯ ವಿವಾಹ** ರೂಢಿಯಲ್ಲಿದ್ದುವು."

ಈ ಮೇಲಿನ ಉದ್ಧೃತ ಭಾಗಗಳಲ್ಲಿರುವ ವಿರೋದಾಭಾಸಗಳನ್ನು ಗಮನಿಸಿ. 'ಮಿತ ತೆರಿಗೆ ಇರಬೇಕು' ಅಂತ ರಾಜನೇ ಹೇಳಿದ್ದಾದಲ್ಲಿ ಆ ಮಿತ ತೆರಿಗೆ 'ಭಾರ'ವಾಗುವುದು ಹೇಗೆ? ಅಥವಾ, ತೆರಿಗೆ ಭಾರವಾಗಿದ್ದದ್ದು ನಿಜವಾದಲ್ಲಿ ಅದು 'ಮಿತ ತೆರಿಗೆ'ಯಾದದ್ದದ್ದು ಸುಳ್ಳು ಅಥವಾ, ಕೃಷ್ಣ ದೇವರಾಯನೂ ಇಪ್ಪತ್ತನೇ ಶತಮಾನದ ರಾಜಕಾರಣಿಗಳ ಹಾಗೆ ಭಾಷಣಗಳಲ್ಲಿ ಮಾತ್ರ 'ಮಿತ ತೆರಿಗೆ ಇರಬೇಕು' ಅಂತ ಹೇಳಿ, ತೆರಿಗೆ ಮಿತವಾಗಿರುವಂತೆ ನೋಡಿಕೊಳ್ಳುವುದಾಗಿ ಪೊಳ್ಳು ಆಶ್ವಾಸನೆ ಕೊಟ್ಟು ವಾಸ್ತವದಲ್ಲಿ ಭಾರವಾದ ತೆರಿಗೆಗಳನ್ನೇ ಹೊರಿಸಿದ್ದಿರಬೇಕು. ತೆರಿಗೆ ಭಾರವಾಗಿದ್ದದ್ದಕ್ಕೂ ಸಾಮ್ರಾಜ್ಯವು ಸಂಪದ್ಭರಿತವಾಗಿದ್ದಕ್ಕೂ ಸಂಬಂಧ ಸ್ಪಷ್ಟವಿದೆ. ಬಡವರಿಗೆ (ಶ್ರೀಮಂತರಿಗಲ್ಲ) ತೆರಿಗೆ ಭಾರವಾಗಿದ್ದಿದ್ದರಿಂದಲೇ ಸಾಮ್ರಾಜ್ಯವು ಸಂಪದ್ಭರಿತವಾಗುವುದು ಸಾಧ್ಯವಾಗಿರಬೇಕು. ಹಾಗೆಯೇ, ಹೆಂಗಸರಿಗೆ ಸಮಾಜದಲ್ಲಿ ಉನ್ನತವಾದ ಸ್ಥಾನವಿದ್ದದ್ದು ಸತ್ಯವಾಗಿದ್ದಲ್ಲಿ ಬಹುಪತ್ನೀತ್ವ ರೂಢಿಯಲಿರುತ್ತಿರಲಿಲ್ಲ. ಬಹುಪತ್ನೀತ್ವ ರೂಢಿಯಲ್ಲಿರುತ್ತಿತ್ತು; ಅಥವಾ ಬಹುಪತ್ನೀತ್ವ ಬಹುಪತ್ನೀತ್ವಗಳೆರಡೂ ರೂಢಿಯಲ್ಲಿರುತ್ತಿದ್ದವು.

ಪ್ರಸಿದ್ಧ ಸಮಾಜವಾದಿ ಹಾಗೂ ಮಾಜಿ ವಿಧಾನ ಪರಿಷತ್ ಸದಸ್ಯ ದಿವಂಗತ ಎಸ್.ವೆಂಕಟರಾಮ್ ಕರ್ನಾಟಕದಲ್ಲಿ ಬಳಕೆಯಲ್ಲಿರುವ ಕೆಲವು ಪಠ್ಯಪುಸ್ತಕಗಳು ಹೇಗೆ ಹತಾಶೆ ಮತ್ತು ದಿಗ್ಭ್ರಮೆಯುಂಟು ಮಾಡುತ್ತವೆ ಎನ್ನುವುದನ್ನು ' ಬಹಿರಂಗವಾಗಿ ಸುಡಬೇಕಾದ ಈ ಪಠ್ಯಪುಸ್ತಕಗಳು' ಎನ್ನುವ ಅವರ ಉತ್ಕೃಷ್ಟ ಲೇಖನವೊಂದರಲ್ಲಿ ವಿವರಿಸಿದ್ದಾರೆ. ನಮ್ಮ ಇತಿಹಾಸ ಪಠ್ಯಗಳನ್ನು ಎಂತಹ "ಪಂಡಿತ"ರು, ಎಂತಹ "ಪ್ರಭೃತಿ"ಗಳು ಬರೆಯುತ್ತಾರೆ ಎನ್ನುವುದನ್ನು ತಿಳಿಯಲು ದಿ.ಎಸ್.ವೆಂಕಟರಾಮ್ ಕೊಡುವ ಉದಾಹರಣೆಗಳೇ ಸಾಕು:

**ಸಮಾಜದರ್ಶನ, ಇತಿಹಾಸ ಪೌರನೀತಿ, 9ನೇ ತರಗತಿ:**

"ಅನೇಕ ರಾಜಮಹಾರಾಜರು, ವೆಲ್ಲೆಸ್ಲಿಯ ಸಹಾಯಕ ಸೈನ್ಯ ಪದ್ಧತಿಗೆ ಒಪ್ಪಿ ಇಂಗ್ಲಿಷರ ಆಶ್ರಯವನ್ನು ಪಡೆದಿದ್ದರು. ಆದರೆ ಅವರು ತಮ್ಮ ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದರು. ಆದುದರಿಂದ ಡಾಲ್ ಹೌಸಿಯು ರಾಜರುಗಳು ಮಕ್ಕಳಿಲ್ಲದೆ ತೀರಿಹೋದರೆ ಅಂತಹ ರಾಜರು ತೆಗೆದುಕೊಳ್ಳುವ ದತ್ತು ಮಕ್ಕಳಿಗೆ ರಾಜ್ಯದ ಹಕ್ಕಿಲ್ಲ ಎಂಬ ಆಜ್ಞೆಯನ್ನು ಜಾರಿಗೆ ತಂದನು".

ಡಾಲ್ ಹೌಸಿಯನ್ನು ಕುರಿತು ಇಂಥ ನಾಚಿಕೆಗೆಟ್ಟ ಸಮರ್ಥನೆಯನ್ನು ಮಕ್ಕಳಿಗಾಗಿ ಬರೆದ ಪಂಡಿತರು ಯಾರು? ಅವರಿಗೆ ವಿಷಯ ನಿರೂಪಣೆಗೂ ವ್ಯಾಖ್ಯಾನಕ್ಕೂ ಇರುವ ವ್ಯತ್ಯಾಸ ಕೂಡ ತಿಳಿಯದೇ? ಇನ್ನು ಇಲ್ಲಿನ ವಾಕ್ಯ ರಚನೆ ಬಗ್ಗೆ ಏನೆನ್ನಬೇಕು? ಸತ್ತ ಮೇಲೆ ರಾಜರು ಮಕ್ಕಳನ್ನು ದತ್ತು ತೆಗೆದುಕೊಳ್ಳುವುದು ಹೇಗೆ? ಅದೇ ಪುಸ್ತಕ:

"ಇಂಡಿಯಾ ದೇಶದ ಏಳಿಗೆಗಾಗಿ ಇವನು ಅಂದರೆ ವಾರನ್ ಹೇಸ್ಟಿಂಗ್ಸನು ಅನೇಕ ಸುಧಾರಣೆಗಳನ್ನು ಮಾಡಿದನು."

ಮುಂದೆ ಅವನು ಮಾಡಿದ ಸುಧಾರಣೆಗಳ ವಿವರ ಇದೆ. ಹೇಸ್ಟಿಂಗ್ಸನು ಮತ್ತು ಭಾರತದ ಏಳಿಗೆ? ಇದನ್ನು ಬರೆದ ಪ್ರಭೃತಿಗೆ ಬ್ರಿಟನ್ನಿನ ಪಾರ್ಲಿಮೆಂಟ್ ಹೇಸ್ಟಿಂಗ್ಸನನ್ನು ಅವನು ಭಾರತದಲ್ಲಿ ನಡೆಸಿದ ಕ್ರೌರ್ಯ ಹಾಗೂ ಭ್ರಷ್ಟಾಚಾರಕ್ಕಾಗಿ ವಿಚಾರಣೆಗೆ ಗುರಿಪಡಿಸ ಹೊರಟಿತೆಂಬುದೂ ತಿಳಿದಿರಲಾರದು.

ಮತ್ತೆ:

"ಗಾಂಧೀಜಿಯವರು ಈ ಚಳವಳಿಗೆ (ಖಿಲಾಫತ್) ಬೆಂಬಲವನ್ನಿತ್ತರು. ಇದರಿಂದ ಭಾರತದಲ್ಲಿ ಹಿಂದೂ ಮುಸಲ್ಮಾನರ ಐಕ್ಯತೆಯನ್ನು ಸಾಧಿಸಬಹುದೆಂಬ ನಂಬಿಕೆಯನ್ನು ಅವರು ಇಟ್ಟಿದ್ದರು." ಗಾಂಧೀಜಿಯ ("ಜೀ" ಬಂದಾಗ "ಅವರು" ಬರುವುದಿಲ್ಲ, ದ್ವಿತ್ವವಾಗುತ್ತದೆ) ಈ ನಂಬಿಕೆಯ ಬಗ್ಗೆ ಎರಡು ಪ್ರೌಢ, ಪ್ರಾಮಾಣಿಕ ಅಭಿಪ್ರಾಯ ಸಾಧ್ಯ. ಆದರೆ ಇಂಥ ಬೋಳು

ವಾಕ್ಯದ ಅರ್ಥವನ್ನು ಮಕ್ಕಳು ಏನೆಂದು ಗ್ರಹಿಸಬೇಕು? ಇದನ್ನು ಬೇರೆ ರೀತಿ (ಅರ್ಥ ಸ್ಪಷ್ಟವಾಗುವಂತೆ) ಹೇಳಲು ಬಾರದೆ?

ಇನ್ನೊಂದು ಕಡೆ:

"1922ರಲ್ಲಿ ಉತ್ತರ ಪ್ರದೇಶದಲ್ಲಿರುವ ಚೌರಿಚೌರ ಎಂಬಲ್ಲಿ ಜನರು ಪೊಲೀಸ್ ಠಾಣೆಯನ್ನು ಸುಟ್ಟರು. 22 ಮಂದಿ ಪೊಲೀಸರು ಭಸ್ಮವಾದರು. ಸರ್ಕಾರವು ಗಾಂಧೀಜಿಯವರನ್ನು ಬಂಧಿಸಿ ೬ ವರ್ಷ ಶಿಕ್ಷೆ ವಿಧಿಸಿತು." ಮಕ್ಕಳು ಗ್ರಹಿಸಬಲ್ಲ ಈ ಒಕ್ಕಣೆಯ ತರ್ಕವನ್ನು ಈ ಪ್ರತಿಭಾನ್ವಿತ ಲೇಖಕರು ಸ್ವತ: ಮನಗಾಣಲಿಲ್ಲವೆ?

ಇನ್ನೊಂದು ಕಡೆ:

"ಈ ಚಳವಳಿಯು (೧೯೪೨ರ ಚಳವಳಿ) ಅಹಿಂಸಾತ್ಮಕವಾಗಿರಬೇಕೆಂದು ಗಾಂಧೀಜಿಯವರ ಆಸೆಯಾಗಿದ್ದರೂ, ಅದು ಎಲ್ಲ ಕಡೆಗಳಲ್ಲೂ ಹಿಂಸಾತ್ಮಕ ರೂಪ ತಾಳಿತು."

ಎಲ್ಲ ಕಡೆಗಳಲ್ಲೂ? ಯಾರ ಸಂಶೋಧನೆ ಇದು?

ಮುಂದೆ:

"ನಿಜಾಮರು ಭಾರತದ ಒಕ್ಕೂಟಕ್ಕೆ ಸೇರಲು ಪ್ರಾರಂಭದಲ್ಲಿ ಒಪ್ಪಲಿಲ್ಲ. ತಾವು ಸ್ವತಂತ್ರವಾಗಿರುವುದಾಗಿಯೂ ಮತ್ತು ಒಂದು ಸ್ವತಂತ್ರ ರಾಷ್ಟ್ರಕ್ಕೆ ದೊರಕುವ ಸ್ಥಾನಮಾನಗಳು ತಮಗೆ ದೊರಕಬೇಕೆಂದೂ ಪ್ರತಿಪಾದಿಸಿದರು. ಇದಕ್ಕೆ ಅನುಕೂಲವಾಗಿ ಪಾಕಿಸ್ತಾನದ ಗವರ್ನರ್ ಜನರಲ್ ಆಗಿದ್ದ ಜಿನ್ನರವರು ೧೯೪೮ನೇ ಜೂನ್‌ನಲ್ಲಿ ಹೈದರಾಬಾದು ಒಂದು ಸ್ವತಂತ್ರ ರಾಜ್ಯವೆಂದು ಮಾನ್ಯತೆ ನೀಡಿದರು. ಆದರೆ ಆ ರಾಜ್ಯದಲ್ಲಿ ಬಹುಸಂಖ್ಯಾತ ಹಿಂದೂಗಳು ಭಾರತದ ಒಕ್ಕೂಟಕ್ಕೆ ಸೇರಲು ಬಯಸಿದರು."

ಹಾಗಾದರೆ ಕಾಶ್ಮೀರದ ಬಹುಸಂಖ್ಯಾತ ಮುಸಲ್ಮಾನರು ಪಾಕಿಸ್ತಾನದೊಡನೆ ಸೇರಲು ಬಯಸಿದರೆ ನಮ್ಮ ತಕರಾರು ಏನು? ಹೈದರಾಬಾದು ಸಂಸ್ಥಾನದ ಭೌಗೋಲಿಕ, ಐತಿಹಾಸಿಕ ಹಾಗೂ ರಾಜ ನೈತಿಕ ಸ್ಥಿತಿಗತಿಯ ಎಂಥ ಅಸಂಬದ್ಧ ಸರಳೀಕರಣ, ಅಜ್ಞಾನ ಇದು? ಈ

ಪುಸ್ತಕದಲ್ಲಿ ರಾಷ್ಟ್ರಗೀತೆ ಕುರಿತು ಬರೆಯುವಾಗ "ವಂದೇಮಾತರಂ" ಕುರಿತು ಚಕಾರವಿಲ್ಲ. ಈ ಹಾಡನ್ನು ಹೇಳುತ್ತ ಎಷ್ಟು ಮಂದಿ ಗುಂಡಿಗೆ ಬಲಿಯಾದರು, ಗಲ್ಲಿಗೇರಿದರು ಎಂಬ ಪರಜ್ಞಾನವು ಬೇಡವೆ? ಇವತ್ತೂ ಸಹ ಇದು ಅನಧಿಕೃತ ರಾಷ್ಟ್ರಗೀತೆ ಅಲ್ಲವೆ? . . . . . . .

**ಸಮಾಜದರ್ಶನ, ಇತಿಹಾಸ ಹತ್ತನೇ ತರಗತಿ**

"ಗೆಲಿಲಿಯೋ ಪ್ರಾಂತ್ಯದ ನಜರತ್ ಎಂಬಲ್ಲಿ ಅವನು ಸ್ವಲ್ಪ ಸಮಯ ಇದ್ದುದರಿಂದ ಅವನನ್ನು ನಜರತ್‌ನ ಏಸುಕ್ರಿಸ್ತನೆಂದೂ ಹೇಳುವುದುಂಟು. ಅವನು ಬಹಳ ಶಾಂತರೀತಿಯಿಂದ ಜೀವನ ನಡೆಸುತ್ತಿದ್ದನು. ಸ್ವಲ್ಪ ಕಾಲ ಅವನು ಬಡಗಿಯಾಗಿಯೂ ದುಡಿದನು. ತನ್ನ ಹನ್ನೆರಡನೆಯ ವರ್ಷದಲ್ಲಿ ಅವನು ಜರೂಸಲೇಮಿಗೆ ಹೋದಾಗ ಅಲ್ಲಿಯ ಯೆಹೂದ್ಯರು, ದೇವಾಲಯದ ಅರ್ಚಕರೊಡನೆ ಸಂಭಾಷಣೆ ನಡೆಸುತ್ತಿದ್ದನು. ಸ್ವತಃ ಮತಬೋಧಕನಾಗಿರದಿದ್ದರೂ ಅವನಲ್ಲಿದ್ದ ಬುದ್ಧಿವಂತಿಕೆಯನ್ನು ಕಂಡು ಅವರು ಬೆರಗಾದರು."

ಈಗ ಬೆರಗಾಗುವುದು ನಮ್ಮ ಸರದಿ. ಬಹಳ ಶಾಂತರೀತಿಯಿಂದ ಜೀವನ ನಡೆಸುತ್ತಿದ್ದನು? ನಿರೀಕ್ಷೆ ಬೇರೆ ಏನಿತ್ತು? ಮತ ಬೋಧಕನಾಗಿರದಿದ್ದರೂ ಅವನಲ್ಲಿದ್ದ ಬುದ್ಧಿವಂತಿಕೆ! ಮತಬೋಧಕರಲ್ಲದವರು ದಡ್ಡರಾಗಬೇಕೆ? ಎಂಥ ಭವ್ಯ ವಿಷಯಕ್ಕೆ ಎಂಥ ಕ್ಷುಲ್ಲಕ ಪ್ರವೇಶ!

ಅದೇ ಪುಸ್ತಕ:

**ಮಹಮದ**

ಆಗಿನ ಕಾಲದಲ್ಲಿ ಅನೇಕರು ಮೂರ್ತಿ ಪೂಜೆ ಮಾಡುತ್ತಿದ್ದರು. ಮಕ್ಕಾದ 'ಕಾಬಾ' ಎಂಬ ದೇವಾಲಯದಲ್ಲಿ ಕರಿಶಿಲೆಯ ಹಲವು ವಿಗ್ರಹಗಳು ಇದ್ದುವು. ಮಹಮದನು ಜನರಲ್ಲಿದ್ದ ಮೂಢಭಾವನೆಯನ್ನೂ ಅನೈಕ್ಯವನ್ನೂ ಹೋಗಲಾಡಿಸಬೇಕೆಂದು ಬಯಸಿದನು.

"ಅವನು ಏಕಾಂತದಲ್ಲಿದ್ದೇ ಧ್ಯಾನಮಗ್ನನಾಗುತ್ತಿದ್ದನು. ಉಪವಾಸಗಳನ್ನು ಕೈಗೊಂಡನು. ಕೊನೆಗೆ ದೇವರಿಂದಲೇ ಕಳಿಸಿದ ಓರ್ವ ದೂತನ ಮೂಲಕ ತನ್ನ "ಸತ್ಯದರ್ಶನ"ವಾಯಿತೆಂದು ತಿಳಿದನು. ತನಗೆ ದೈವ ಪ್ರಚೋದನೆಯಿಂದ ತಿಳಿದುಬಂದ ಈ ಹೊಸ ಮತ ತತ್ವಗಳನ್ನು ತನ್ನ ಹೆಂಡತಿ ಮಕ್ಕಳಗೂ, ಕೆಲವು ಸ್ನೇಹಿತರಿಗೂ ಬೋಧಿಸಿದನು."

ದೇವಾಲಯದಲ್ಲಿ ಕೆಲವು ಕರಿಶಿಲೆಯ ವಿಗ್ರಹಗಳಿದ್ದು, ಜನರಲ್ಲಿದ್ದ ಮೂಢಭಾವನೆ? ಇದೆಂತಹ ಶಿಕ್ಷಣ. ಭಾರತದ ತುಂಬ ಇರುವ ದೇವಾಲಯಗಳಲ್ಲಿರುವ ಕರಿಶಿಲೆಯ ವಿಗ್ರಹಗಳನ್ನು ಕುರಿತು ಮಕ್ಕಳು ಏನು ತಿಳಿಯಬೇಕು? ಇದನ್ನು ಬೇರೆ ರೀತಿ ಹೇಳಲುಬಾರದೆ? ತನ್ನ "ಸತ್ಯದರ್ಶನ", "ದೈವ ಪ್ರಚೋದನೆ" ಹಾಗೆಂದರೇನು? ಬರೆದವರಿಗಾದರೂ ತಿಳಿದಿದೆಯೆ?

**ಹಿಟ್ಲರ್**

"ಜನರಲ್ಲಿ ಸಿಪಾಯಿ ಶಿಸ್ತು ರಕ್ತಗತವಾಗುವಂತೆ ಮಾಡಿದನು. ಎಲ್ಲರನ್ನು ಯೋಧರಂತೆ ಮಾಡಿದನು. ಇವನು ಕೈಗಾರಿಕೆ ವ್ಯಾಪಾರ ವಾಣಿಜ್ಯಾದಿಗಳನ್ನು ಉತ್ತಮಪಡಿಸಿದನು. ಜರ್ಮನರ ದಂಡು, ಜಲಾಂತರ ನೌಕಾ ನಾಶಕಾರಿಗಳ ಪಡೆ ಅತ್ಯಂತ ಬಲಶಾಲಿಯಾಗಿತ್ತು. ಸಾಮಾಜಿಕ ಐಕ್ಯತೆಯ ರಕ್ಷಣೆಗಾಗಿ ಯೆಹೂದ್ಯರನ್ನು ದೇಶಾಂತರ ಪಡಿಸಿದನು. "ಒಮದೇ ಜನ, ಒಂದೇ ಪಕ್ಷ, ಒಬ್ಬನೇ ನಾಯಕ" ಎಂದು ಜನರೆಲ್ಲ ಜಯಕಾರ ಮಾಡಿದರು." ಇಂಥ ಹಿಟ್ಲರ್ ಭಕ್ತಿಭಾವ ಪೂರಿತ ಪಾಠ ಇವತ್ತು ಖಂಡಿತ ಜರ್ಮನಿಯಲ್ಲಿಯೂ ಇಲ್ಲ. ಇದನ್ನು ಬರೆದವನಿಗೆ ನಡುಬೀದಿಯಲ್ಲಿ ಬಂದೂಕು ಸೇವೆಯೇ ಹಿತ. ಜಲಾಂತರ ನೌಕಾ ನಾಶಕಾರಿ? ಸಬ್‌ಮೆರಿನ್ ಅಂದರೆ ಮೈಲಿಗೆ ಆಗುತ್ತದೆಯೇ?

**ಇತಿಹಾಸ ಭಾಗ–1, ಐದನೆಯ ತರಗತಿ**

"ಆರ್ಯರಿಗೆ ತಮ್ಮ ಎತ್ತರದ ದೇಹಾಕೃತಿ, ಕೆಂಪು ಮೈಬಣ್ಣದ ಬಗ್ಗೆ, ಬಲು ಹೆಮ್ಮೆ. ಅವರು ಭಾರತದ ಮೂಲ ನಿವಾಸಿಗಳಾದ ಜನರನ್ನು ಸರಿಸಮಾನರಾಗಿ ಕಾಣುತ್ತಿರಲಿಲ್ಲ. ಈ ಮೂಲನಿವಾಸಿಗಳನ್ನು ದಸ್ಯುಗಳೆಂದು ಕರೆದರು."

ಈ ಗುಲಾಮೀ ಧಾಟಿಯ ಪರಿಣಾಮ ಭಾರತದಂತಹ ಮಿಶ್ರಜನರ ದೇಶದಲ್ಲಿ ಏನಾಗುತ್ತದೆ? ಎತ್ತರದ ದೇಹಾಕೃತಿ, ಕೆಂಪು ಮೈಬಣ್ಣದ ಹೆಮ್ಮೆ ಸಂಕುಚಿತ ದೃಷ್ಟಿಯ ಪರಿಣಾಮ ಎಂಬ ಮೌಲ್ಯದ ಮಾತನ್ನು ಸ್ಪಷ್ಟವಾಗಿ ಹೇಳದಿರುವುದು ಎಂಥ ಇತಿಹಾಸ? ಇಲ್ಲವಾದರೆ, ಎತ್ತರದ ದೇಹಾಕೃತಿ ಹಾಗೂ ಕೆಂಪು ಮೈಬಣ್ಣದ ಮಕ್ಕಳು ತಮ್ಮ ತರಗತಿಯ ಕುಳ್ಳ, ಕಪ್ಪನೆಯ ಆಕಾರದ ಮಕ್ಕಳನ್ನು ದಸ್ಯುಗಳೆಂದು ಕರೆಯಬಹುದಲ್ಲವೆ? ಈ ಎರಡನೇ ಗುಂಪಿನ ಮಕ್ಕಳು ತಾವು ಈ

ದೇಶದ ಮೂಲನಿವಾಸಿಗಳೆಂದೂ ಮೊದಲನೇ ಗುಂಪಿನ ಮಕ್ಕಳು ವಿದೇಶೀ ಆಕ್ರಮಣಕಾರರೆಂದೂ ಭಾವಿಸಿದರೆ ತಪ್ಪೇನು? ದ್ರಾವಿಡ ಚಳವಳಿಗೆ ಇಂಥ ಚರಿತ್ರೆಯ ಕೊಡುಗೆ ಏನು ಕಡಿಮೆ ಇದೆಯೆ?

ದಿವಂಗತ ಎಸ್. ವೆಂಕಟರಾಮ್ ಕೊಡುವ ಈ ಮೇಲಿನ ಉದಾಹರಣೆಗಳು ನಮ್ಮ ಇತಿಹಾಸ ಪಠ್ಯ ಪುಸ್ತಕಗಳು ಎಷ್ಟು ಅಸಂಗತ ವಿವರಣೆಗಳನ್ನೊಳಗೊಂಡಿರುತ್ತವೆ ಎನ್ನುವುದನ್ನೂ ಸೂಚಿಸುತ್ತವೆ.

1979–80ನೇ ಶೈಕ್ಷಣಿಕ ವರ್ಷದಲ್ಲಿ ಬಳಕೆಯಲ್ಲಿದ್ದ ಹತ್ತನೆಯ ತರಗತಿಯ 'ಸಮಾಜ ಪಾಠಗಳು–ಭಾಗ 1'ರಲ್ಲಿ ಹಿಟ್ಲರನ ಕುರಿತು ಇರುವ ಈ ವಾಕ್ಯಗಳನ್ನು ಓದಿ:

"ಕ್ರಿಯಾಶಕ್ತನೂ, ಮಹಾಕಾಂಕ್ಷೆ ಉಳ್ಳವನೂ ಹಾಗೂ ಪ್ರತಿಪಾದಕನೂ ಆದ ಹಿಟ್ಲರ್ ಈ ಪಕ್ಷ (ನಾಸಿ ಪಕ್ಷ)ದ ನಾಯಕನಗಿದ್ದನು . . . . ಜರ್ಮನ್ ಜನಾಂಗವು ವಿಶ್ವದಲ್ಲಿಯೇ ಶ್ರೇಷ್ಠವಾದುದೆಂಬ ವಿಚಾರಧಾರೆಯನ್ನು ಹರಸಿದನು. ಜರ್ಮನಿಯ ಯಹೂದಿಗಳನ್ನು ವಿದೇಶೀಯರೆಂದು ಕರೆದು ಅವರಿಗೆ ಕಿರುಕುಳ ಕೊಟ್ಟನು".

ಎಂತಹ ಸರಳೀಕರಣ! ಆರು ಮಿಲಿಯನ್ ಯೆಹೂದಿಗಳ ನರಹತ್ಯೆಗೈದದ್ದು ಕೇವಲ ಕಿರುಕುಳವೆ? ಕಾನ್ಸೆಂಟ್ರೇಶನ್ ಕ್ಯಾಂಪ್‌ಗಳಲ್ಲಿ ಯಹೂದಿಗಳ ನರಹತ್ಯೆಯ ದಾಖಲೆಯಾಗಿರುವ 'ನೈಟ್ ಆಂಡ್ ಫೋಗ್' (Night and Fog) ಚಲನಚಿತ್ರವನ್ನು ನೋಡಿದರೆ ತಿಳಿದೀತು – ಯಹೂದಿಗಳ ಹತ್ಯೆ ಅದೆಂತಹ ಭಯಾನಕ ಜನಾಂಗ ಹತ್ಯೆಯಾಗಿತ್ತು ಎನ್ನುವುದು. ಅಂತಹ ಹತ್ಯೆಗೆ ಕಾರಣನಾದವನನ್ನು ಯಹೂದಿಗಳಿಗೆ ಕೇವಲ 'ಕಿರುಕುಳ' ಕೊಟ್ಟವನೆನ್ನುವ ಲೇಖಕರ ಕ್ರಮಾಶೀಲತೆ, ಯೇಸುಕ್ರಿಸ್ತನ ಕ್ಷಮಾಶೀಲತೆಯನ್ನೂ ಮೀರಿಸುವಂತಹದಲ್ಲವೆ? ಯಹೂದಿಗಳ ಹೆಣದ ರಾಶಿಗಳನ್ನು ಬುಲ್ ಡೋಜರ್ ನಿಂದ ತಳ್ಳಿಕೊಂಡು ಹೋಗಿ ದೊಡ್ಡ ದೊಡ್ಡ ಹೊಂಡ (pit) ಗಳಿಗೆ ಉರುಳಿಸುವಂತಹ ಅಮಾನುಷಸ್ಥಿತಿಗೆ ಕಾರಣನಾದ ಹಿಟ್ಲರ್‌ನ ಕುರಿತು ನೀಡುವ ವಿವರಣೆಯಲ್ಲಿರುವ ಧ್ವನಿಗೂ ಗಾಂಧೀಜಿಯವರ ಕುರಿತು ನೀಡುವ ವಿವರಣೆಯಲ್ಲಿರುವ ಧ್ವನಿಗೂ ವ್ಯತ್ಯಾಸವೇ ಇಲ್ಲ. 'ದುಖೇಷು ಅನುದ್ವಿಗ್ನಮನಾಃ . . . . ।' ಈ ಕೆಳಗಿನ ಎರಡು ಭಾಗಗಳನ್ನು ಹೋಲಿಸಿ ನೋಡಿ (ಅದೇ ಪುಸ್ತಕ):

"ರಾಷ್ಟ್ರಪಿತ ಮಹಾತ್ಮಗಾಂಧಿ (1869–1948) . . . .

ದಕ್ಷಿಣ ಆಫ್ರಿಕದಲ್ಲಿ ವರ್ಣವಿಭೇಧ ನೀತಿಯನ್ನು ಯಶಸ್ವಿಯಾಗಿ ವಿರೋಧಿಸಿದ ತರುವಾಯ 1914ರಲ್ಲಿ (ಗಾಂಧೀಜಿ) ಭಾರತಕ್ಕೆ ಹಿಂತಿರುಗಿದರು. . . ಅವರು ಯುದ್ಧಾನಂತರ ಇಂಗ್ಲಿಷರ ವರ್ತನೆಯಿಂದ ಬಹಳವಾಗಿ ನಿರಾಸೆಗೊಂಡರು. . .

ಗಾಂಧೀಜಿಯವರಿಗೆ ಮತೀಯ ಐಕ್ಯತೆಯು ಧರ್ಮಕ್ಕೆ ಸಂಬಂಧಪಟ್ಟ ವಸ್ತುವಾಗಿತ್ತು. ವರ್ಣವಿಭೇದ ನೀತಿ, ಪ್ರತ್ಯೇಕತೆಯ ಕಾನೂನುಗಳು ಮತ್ತು ಅಸ್ಪೃಶ್ಯತೆ ಇವುಗಳನ್ನು ತೊಡೆದುಹಾಕಬೇಕೆಂಬುದು ಅವರ ನಿಲುಮೆಯಾಗಿದ್ದಿತು. . . ಅವರು ಮಾನವನ ವಿಶ್ವಭ್ರಾತೃತ್ವವನ್ನು ಒತ್ತಿ ಹೇಳಿದರು. ಎಲ್ಲ ಮಾನವೀಯ ಸಂಬಂಧಗಳೂ, ದ್ವೇಷದ ಆಧಾರದ ಮೇಲಲ್ಲ, ಪ್ರೀತಿಯ ಆಧಾರದ ಮೇಲೆ ಇರಬೇಕೆಂದು ನಂಬಿದ್ದರು. ಅವರು ನಿಮ್ನ ವರ್ಗದವರನ್ನು ಪ್ರೀತಿಸುತ್ತಿದ್ದರು ಮತ್ತು ಅವರನ್ನು "ಹರಿಜನರು" ಅಂದರೆ ದೇವರ ಮಕ್ಕಳು ಎಂದು ಕರೆದರು . . . "

**ಹಿಟ್ಲರ್**

"ಸ್ವದೇಶದಲ್ಲಿ ಹಿಟ್ಲರ್ ಹೆಚ್ಚು ಜನಪ್ರಿಯವಾಗಿದ್ದನು. ತನ್ನ ಪ್ರಜೆಗಳಿಗೆ ಉದ್ಯೋಗವಿತ್ತು ಸಮರ್ಪಕವಾದ ಆಡಳಿತವನ್ನು ಸ್ಥಾಪಿಸಿದನು....... ದೊಡ್ಡ ಆರ್ಥಿಕ ಸಂಸ್ಥೆಗಳನ್ನು ಅವನು ರಾಷ್ಟ್ರೀಕರಿಸಿದನು. ವೃದ್ಧಾಪ್ಯ ಮತ್ತು ಆರೋಗ್ಯ ವಿಮಾಯೋಜನೆಗಳನ್ನು ಜಾರಿಗೆ ತಂದನು . ."

ಇಲ್ಲಿರುವ ವ್ಯತ್ಯಾಸವೆಂದರೆ ಗಾಂಧೀಜಿಗೆ **ಬಹುವಚನ**, ಹಿಟ್ಲರ್ ನಿಗೆ **ಏಕವಚನ**

ಅದೇ ಪುಸ್ತಕ, ಪುಟ ೧೭೮–ಪಾಕಿಸ್ತಾನದೊಡನೆ ನಮ್ಮ ಸಂಬಂಧಗಳು:

"೧೯೭೧ರಲ್ಲಿ ಮೂರನೆಯ ಬಾರಿಗೆ ಈ ಎರಡು ದೇಶ (ಭಾರತ ಮತ್ತು ಪಾಕಿಸ್ತಾನ)ಗಳ ನಡುವೆ ಘರ್ಷಣೆಯಾಯಿತು. ಪಾಕಿಸ್ತಾನವು, ಯಾಹ್ಯಾಖಾನನ ಲಷ್ಕರಿ ಆಡಳಿತಕ್ಕೆ ಒಳಪಟ್ಟಿತ್ತು. ಆತನು ಪ್ರಜೆಗಳಿಂದ ಆಯ್ಕೆಯಾದ ಪೂರ್ವ ಬಂಗಾಳದ ನಾಯಕ ಶೇಖ್ ಮುಜೀಬರ್ ರೆಹಮಾನ್‌ರವರಿಗೆ ಅಧಿಕಾರವನ್ನು ಒಪ್ಪಿಸಲು ನಿರಾಕರಿಸಿದನು. ಇದು ಮುಜೀಬರನ್ನು ಪಶ್ಚಿಮ ಪಾಕಿಸ್ತಾನದಿಂದ ಬೇರ್ಪಡುವಂತೆ ಬಲವಂತ ಮಾಡಿತು . . . ದಂಗೆಗಳು ಪ್ರಾರಂಭವಾದುವು. . . ದಶಲಕ್ಷಗಳ ಸಂಖ್ಯೆಯಲ್ಲಿ ನಿರಾಶ್ರಿತರು ತಲೆತಪ್ಪಿಸಿಕೊಂಡು ಭಾರತಕ್ಕೆ ಬಂದರು. ಆ ಬೆಳವಣಿಗೆಯು ಭಾರತವು ಮಧ್ಯಪ್ರವೇಶ ಮಾಡುವಂತೆ ಬಲಪಡಿಸಿತು. 1971ರ ಡಿಸೆಂಬರ್ ತಿಂಗಳು 3ನೇ ತಾರೀಖು ಮಧ್ಯರಾತ್ರಿ ವೇಳೆಗೆ ಭಾರತದ ಸೈನ್ಯವು ಬಾಂಗ್ಲಾ ದೇಶವನ್ನು ಪ್ರವೇಶಿಸಿತು. ಕೇವಲ 13 ದಿನಗಳ ಹೋರಾಟದ ನಂತರ 1971ರ ಡಿಸೆಂಬರ್ 16ರಂದು ಪಾಕಿಸ್ತಾನಿ ಸೈನ್ಯವು ಶರಣಾಯಿತು. ಬಾಂಗ್ಲಾ ದೇಶದ ವಿಮೋಚನೆಯಾಯಿತು. ಶೇಖ್ ಮುಜೀಬರ್ ರೆಹಮಾನ್ ಅದರ ಪ್ರಧಾನಿಯಾದರು."

ಕನ್ನಡದಲ್ಲಿರುವ ಏಕವಚನ ಮತ್ತು ಗೌರವ ಸೂಚಕ ಬಹುವಚನದ ಮೂಲಕ ಭಾರತದ ವಿದೇಶ ನೀತಿಯನ್ನು ವಿವರಿಸುವ ಲೇಖಕರ ಜಾಣ್ಮೆಯನ್ನು ಗಮನಿಸಿ, ಯಾಹ್ಯಾಖಾನನು, ರೆಹಮಾನರು! 1947ರ ಪಾಕಿಸ್ತಾನ–ಭಾರತ ವಿಭಜನೆಯಿಂದಾಗಿ ಇಂದಿಗೂ ಪಾಕಿಸ್ತಾನದಲ್ಲಿ ತಮ್ಮ ಬಂಧುಗಳನ್ನು ಹೊಂದಿರುವ ಭಾರತೀಯ ಮುಸಲ್ಮಾನರಿಗೆ ಈ ವಚನ–ವ್ಯತ್ಯಾಸ ನೋವುಂಟು ಮಾಡುವ ಸಾಧ್ಯತೆಯನ್ನು ಮರೆತ ಲೇಖಕರು, ಬಾಂಗ್ಲಾದೇಶದಂತೆ ಪಾಕಿಸ್ತಾನವೂ ಭಾರತದ ನೆರೆ

ರಾಷ್ಟ್ರ: ನೆರೆಹೊರೆಯ ಸಂಬಂಧಗಳನ್ನು ಚೆನ್ನಾಗಿಟ್ಟುಕೊಳ್ಳುವ ದೃಷ್ಟಿಯಿಂದ ಬಾಂಗ್ಲಾದೇಶದ ಪ್ರದಾನಿಗೆ ಬಹುವಚನ ಪ್ರಯೋಗ ಎಷ್ಟು ಮುಖ್ಯವೋ ಪಾಕಿಸ್ತಾನದ ಪ್ರಧಾನಿಗೂ ಬಹುವಚನ ಪ್ರಯೋಗ ಅಷ್ಟೇ ಮುಖ್ಯ ಎನ್ನುವುದನ್ನೂ ಮರೆತಿದ್ದಾರೆ.

ದಿ.ಸ್.ವೆಂಕಟರಾಮ್ ಕೊಡುವ ಉದಾಹರಣೆಗಳೆಲ್ಲ 1979–80ರ ಶೈಕ್ಷಣಿಕ ವರ್ಷದವರೆಗೆ ಪಠ್ಯಪುಸ್ತಕಗಳಾಗಿದ್ದ ಪುಸ್ತಕಗಳಿಂದ ಆಯ್ದುಕೊಂಡವುಗಳು. ಆದರೆ ಅವು ನಮ್ಮ ಶಿಕ್ಷಣ ಪದ್ಧತಿಯ ಪ್ರಾತಿನಿಧಿಕ ಪುಸ್ತಕಗಳಾದ್ದರಿಂದ ದಿ.ಎಸ್.ವೆಂಕಟರಾಮ್ ಹೇಳುವ ಮಾತುಗಳು ಯಾವತ್ತಿಗೂ ಪ್ರಸ್ತುತ ಅಂತ ತಿಳಿಯಲಾಗಿದೆ.

**ಪಠ್ಯಗಳಲ್ಲಿರಬಹುದಾದ ಭಾವನಾತ್ಮಕವಾಗಿ ಸೂಕ್ಷ್ಮವಾದ ಭಾಗಗಳ ತಿದ್ದುವಿಕೆ/ಪುನರ್‌ಲೇಖನ**

ವಿದ್ಯಾರ್ಥಿಗಳ ಭಾವನಾತ್ಮಕ ಆರೋಗ್ಯವನ್ನು ನಿರ್ಧರಿಸುವಲ್ಲಿ ಪಠ್ಯಪುಸ್ತಕಗಳು ಕೂಡ ಪಾತ್ರವಹಿಸುತ್ತವಾದ್ದರಿಂದ ಇತಿಹಾಸ ಪಠ್ಯಗಳಲ್ಲಿರಬಹುದಾದ ಭಾವನಾತ್ಮಕವಾಗಿ ಸೂಕ್ಷ್ಮವಾದ (emotionally sensitive) ಅಥವಾ ಸೂಕ್ಷ್ಮವಾಗಬಹುದಾದ ಭಾಗಗಳನ್ನು ತಿದ್ದಿ ಪುನರ್ ಲೇಖಿಸುವ ಕಾರ್ಯ ನಡೆಸಬೇಕಾಗುತ್ತದೆ. ಸಮಾಜದಲ್ಲಿ ಕೋಮುಸಾಮರಸ್ಯ, ಶಾಂತಿ ಕಾಪಾಡಲು ಇತಿಹಾಸ ಪಠ್ಯಗಳ ಪುನರ್ ಲೇಖನದ ಸಾಧ್ಯತೆಗಳನ್ನು ಪರಿಶೀಲಿಸಬೇಕಾಗುತ್ತದೆ.

ಕಳೆದ ಎರಡು ಮೂರು ದಶಕಗಳಲ್ಲಿ ದೇಶದಲ್ಲಾಗಿರುವ ಸಾಮಾಜಿಕ-ರಾಜಕೀಯ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಶಾಲೆ ಕಾಲೇಜುಗಳಲ್ಲಿ ಈಗ ಬಳಕೆಯಲ್ಲಿರುವ ಪಠ್ಯಪುಸ್ತಕಗಳನ್ನು ಪರಿಷ್ಕರಿಸುವ, ಸಂಪೂರ್ಣವಾಗಿ ತಿದ್ದಿ ಬರೆಯುವ ಮಾತು ಕೇಳಿ ಬರುತ್ತಿದೆ. ಮಕ್ಕಳು ತರಗತಿಗಳಲ್ಲಿ ಓದುವುದಕ್ಕೂ ಮತ್ತೆ ಅವರು ಬೆಳೆದು ವಯಸ್ಕರಾದ ಮೇಲೆ ಬದುಕು ಹಾಗೂ ಸಮಾಜದ ವಿವಿಧ ಸಮುದಾಯಗಳ ಬಗ್ಗೆ ಹೊಂದುವ ಧೋರಣೆಗೂ ನೇರ ಸಂಬಂಧವಿದೆ ಎಂದು ಸ್ವಲ್ಪ ತಡವಾಗಿಯಾದರೂ ಪ್ರಭುತ್ವಕ್ಕೆ ಮನವರಿಕೆಯಾಗಿದೆ. ಇತ್ತೀಚೆಗೆ ದೇಶದ ನಾನಾ ಭಾಗಗಳಲ್ಲಿ ಪ್ರಬಲಗೊಂಡ ಕೋಮುವಾದ, ಮತೀಯ ಮೂಲಭೂತವಾದ, ಕೋಮು ಭಾವನೆಗಳು ಮತ್ತು ಹೆಚ್ಚುತ್ತಿರುವ ಸಾಮಾಜಿಕ ವಿದ್ವೇಷ, ಹಿಂಸೆ, ಕೋಮು ಗಲಭೆಗಳಿಗೆ ಕಾರಣಗಳನ್ನು ಹುಡುಕುತ್ತ ಹೊರಟ ಶಿಕ್ಷಣ ತಜ್ಞರು. ಇತಿಹಾಸಕಾರರು ಹಾಗೂ ಸಮಾಜ ಶಾಸ್ತ್ರಜ್ಞರು ದೇಶದ ಬೇರೆ ಬೇರೆ ರಾಜ್ಯಗಳಲ್ಲಿ ವಿದ್ಯಾರ್ಥಿಗಳು ಓದುವ ಇತಿಹಾಸ, ಪೌರನೀತಿ ಹಾಗೂ ಭಾಷಾ ಪಠ್ಯಪುಸ್ತಕಗಳನ್ನು ತೆರೆದು ನೋಡುವ ಶ್ರಮವಹಿಸಿ ತಮಗೆ ಕಂಡ ವಿಸಂಗತಿಗಳನ್ನು, ವಿಕೃತಿ ಗಳನ್ನು ಪಟ್ಟಿ ಮಾಡಿದ್ದಾರೆ. ವಿವಿಧ ಮತ,ಧರ್ಮ,ಜಾತಿ,ಪಂಗಡಗಳಿಗೆ ಸೇರಿದ ಜನ ವಾಸಿಸುವ ಇಂಡಿಯಾದಂತಹ ಒಂದು ದೇಶದಲ್ಲಿ ತಾವು ಓದುವ ಪಠ್ಯಪುಸ್ತಕಗಳಲ್ಲಿ-ಮುಖ್ಯವಾಗಿ ಇತಿಹಾಸ ಪಠ್ಯಪುಸ್ತಕಗಳಲ್ಲಿ ಮಕ್ಕಳು ಧಾರ್ಮಿಕ ಸಹನೆ ಮತ್ತು ಮತೀಯ ಬಾಂಧವ್ಯ-ಸಾಮರಸ್ಯಕ್ಕೆ ಮಾರಕವಾಗುವಂತಹ ತಪ್ಪು ಹಾಗೂ ವಿಕೃತ ವಿವರಗಳನ್ನು ಓದುವುದು ಖಂಡಿತವಾಗಿಯೂ

ರಾಷ್ಟ್ರೀಯ ಭಾವೈಕ್ಯಕ್ಕೆ ಹೊಡೆತ ನೀಡುತ್ತದೆ. ಹಿರಿಯ ಪ್ರೌಢ ಶಾಲಾ ಹಂತದಲ್ಲಿ ಬೋಧಿಸಲಾಗುತ್ತಿರುವ ಹನ್ನೆರಡು ಇತಿಹಾಸ ಪಠ್ಯಪುಸ್ತಕಗಳನ್ನು ಅವಲೋಕಿಸಿದ ಇತಿಹಾಸಕಾರರ ಸಮಿತಿಯೊಂದು ಇವುಗಳಲ್ಲಿ ಹೆಚ್ಚಿನ ಪುಸ್ತಕಗಳು "ಬೋಧಿಸಲು ಸುತರಾಂ ಯೋಗ್ಯವಲ್ಲ" ಎಂದಿರುವುದು ಎಲ್ಲ ಶಿಕ್ಷಣಾಸಕ್ತರ ಕಣ್ಣು ತೆರೆಸಬೇಕು.

ಅನೇಕ ಇತಿಹಾಸ ಪಠ್ಯಪುಸ್ತಕಗಳು "ಕರಾರುವಾಕ್ಕಾಗಿಲ್ಲದ ಮಾಹಿತಿ, ವಸ್ತುಸ್ಥಿತಿಯ ವಿಕೃತ ರೂಪ ಮತ್ತು ಮತೀಯವಾದಿ, ಜಾತಿವಾದಿ ಹಾಗೂ ಜನಾಂಗವಾದಿ" ಯಾದ ವಿವರಗಳನ್ನು ಹೊಂದಿರುವುದರಿಂದ ಇತಿಹಾಸವನ್ನು ರಾಷ್ಟ್ರೀಯ ಭಾವೈಕ್ಯ, ಸಮಗ್ರತೆ, ಸಾಮರಸ್ಯ ಹಾಗೂ ಏಕತೆಯ ದೃಷ್ಟಿಯಿಂದ ಪುನರ್ ಲೇಖಿಸಬೇಕೆಂದು ಹೇಳಲಾಯಿತು.

ಈ ವಾದಕ್ಕೆ ಕಾರಣಗಳಿಲ್ಲದಿಲ್ಲ. ನಮ್ಮ ದೇಶದ ಇತಿಹಾಸವನ್ನು ಬರೆದವರು, ಮುಖ್ಯವಾಗಿ, ಬ್ರಿಟಿಷ್ ವಿದ್ವಾಂಸರು. ವಸಾಹತುಶಾಹಿ ದೃಷ್ಟಿಕೋನದಿಂದ, ವಸಾಹತುಶಾಹಿಯ ಸಮರ್ಥನೆಗಾಗಿ ಬರೆದ ಇತಿಹಾಸ ಅದು, ಬ್ರಿಟಿಷರು ತಮ್ಮ ಯಾವುದೇ ವಸಾಹತುವಿನ ಇತಿಹಾಸ ಬರೆಯುವಾಗ ಅವರ ಮುಖ್ಯ ಆಸಕ್ತಿ ಆ ವಸಾಹತುವಿನಲ್ಲಿ ತಮ್ಮ ಆಳ್ವಿಕೆಯನ್ನು ಸಮರ್ಥಿಸಿಕೊಳ್ಳುವುದೇ ಆಗಿತ್ತು (ಈ ಮಾತು ಎಲ್ಲ ದೇಶಗಳ ಎಲ್ಲ ಪ್ರಭುತ್ವಗಳಿಗೆ ಈಗಲೂ ಅನ್ವಯಿಸುವ ಮಾತು). 'ನೈತಿಕ ಅಂಧಕಾರ'ದಲ್ಲಿ ತೊಳಲುತ್ತಿದ್ದ ಭಾರತಕ್ಕೆ ಬೆಳಕು ನೀಡಲು ಬಂದವರು ತಾವು, ತಮ್ಮ ವಸಾಹತುಶಾಹಿ ರಾಜಕೀಯ ಚಟುವಟಿಕೆಗಳು ನಿಜವಾಗಿ ಆಧ್ಯಾತ್ಮಿಕವಾದ ದೈವ ನಿಯಮಿತ ಕಾರ್ಯ (mission) ವೆಂಬ ಧೋರಣೆ ಮತ್ತು ದೃಷ್ಟಿಕೋನದಿಂದ ಇಂಡಿಯಾದ ಐತಿಹಾಸಕ ದಾಖಲೆಗಳನ್ನು, ಶಾಸನಗಳನ್ನು ಶ್ರಮವಹಿಸಿ ಅಭ್ಯಾಸ ಮಾಡಿದ ಬ್ರಿಟಿಷರು ತಮ್ಮ ಅಧಿಕಾರವನ್ನು ಉಳಿಸಿಕೊಳ್ಳುವುದಕ್ಕೆ ಪೂರಕವಾಗುವಂತಹ ಇತಿಹಾಸ ಬರೆದರು. ತಮ್ಮನ್ನು ಎಂದಾದರೂ 'ಈ ದೇಶದಿಂದ ಅಟ್ಟಿ ಬಿಡುವುದಾಗಿ ಬಹಿರಂಗವಾಗಿ ಪ್ರತಿಜ್ಞೆ ಮಾಡಿದ್ದ' ಟಿಪ್ಪು ಸುಲ್ತಾನನನ್ನು 'ಗರ್ವೋದ್ಧತ'ನೆಂದೂ 'ಔರಂಗಜೇಬನಂತೆಯೇ ತನ್ನಿಂದ ಪರಾಜಿತರಾದವರನ್ನೆಲ್ಲಾ ಬಲಾತ್ಕಾರದಿಂದ ಮಹಮ್ಮದೀಯ ಮತಕ್ಕೆ ಸೇರಿಸುತ್ತಲೂ ಅದಕ್ಕೆ ಮತಕ್ಕೆ ಸೇರಿಸುತ್ತಲೂ ಅದಕ್ಕೆ ಇಷ್ಟಪಡದವರನ್ನು ಸಾವಿರ ಸಾವಿರವಾಗಿ ಕೊಲ್ಲುತ್ತಲೂ ಇದ್ದ'ವನೆಂದೂ ವರ್ಣಿಸಿದರು. ಹೀಗೆ ಬರೆಯುವುದರಿಂದ ಅವರಿಗೆ ಹಿಂದುಗಳ ಮತ್ತು ಮುಸ್ಲಿಮರ ನಡುವಣ ಕಂದಕವನ್ನು ಇನ್ನಷ್ಟು

ಅಗಲ ಮಾಡುವುದು ಸಾಧ್ಯವಿತ್ತು ಮತ್ತು ಹೀಗೆ ಮಾಡುವುದು ಅವರಿಗೆ ತಮ್ಮ ಸಾಮ್ರಾಜ್ಯಶಾಹಿ ಆಸಕ್ತಿಗಳನ್ನು ಉಳಿಸಿಕೊಳ್ಳಲು ರಾಜಕೀಯವಾಗಿ ಅಗತ್ಯವಾಗಿತ್ತು.

ಹಿಂದೂ-ಮುಸ್ಲಿಂ ಕಂದಕವನ್ನು ದೊಡ್ಡದು ಮಾಡುವುದು ಬ್ರಿಟಿಷರ 'ಒಡೆದು ಆಳುವ ನೀತಿ'ಗೆ ಸಹಕಾರಿಯಾಗಿತ್ತು. ಭಾರತೀಯ ಸಂಸ್ಕೃತಿಯನ್ನು 'ಹಿಂದೂ ಸಂಸ್ಕೃತಿ' ಎಂದು ಕರೆಯುವುದು ಅವರಿಗೆ ರಾಜಕೀಯವಾಗಿ ಲಾಭದಾಯಕವಾಗಿತ್ತು. ದೇಶದ ವಿಭಿನ್ನ ಸಮುದಾಯಗಳು ಅನ್ಯಾಕ್ರಮಣಶೀಲತೆ(chauvinism)ಯನ್ನು ಬೆಳೆಸಿಕೊಂಡು ಸದಾ "ನಾವು ಮೇಲು", "ನಾವು ಮೇಲು", ಎಂದು ತಮ್ಮ ತಮ್ಮೊಳಗೆ ಕಚ್ಚಾಡುತ್ತ ಒಂದು ಶಕ್ತಿಯಾಗಿ ಎದ್ದು ನಿಲ್ಲದಿದ್ದರೆ ಭಾರತದ ಸಂಪತ್ತನ್ನು ಆರಾಮವಾಗಿ ಲಂಡನಿಗೆ ಸಾಗಿಸುತ್ತಿರಬಹುದು ಎಂಬುದು ಅವರ ಲೆಕ್ಕಾಚಾರವಾಗಿತ್ತು.

ಆದ್ದರಿಂದ ಅವರು ಭಾರತದ ಮಧ್ಯಯುಗದ ಇತಿಹಾಸವನ್ನು 'ಹಿಂದೂ-ಮುಸ್ಲಿಮರ ನಡುವಣ ತಿಕ್ಕಾಟ'ದ ದೃಷ್ಟಿಯಿಂದ ಬರೆದರು ಮತ್ತು ಇದೇ ದೃಷ್ಟಿಯನ್ನು ಮುಂದುವರಿಸಿಕೊಂಡು ಬ್ರಿಟಿಷ್ ಇತಿಹಾಸಕಾರರ ಧಾಟಿಯಲ್ಲಿ ಇತಿಹಾಸ ಬರೆದ ಪಂಡಿತರಿಗೆ ಆಧುನಿಕ ಭಾರತದ ಇತಿಹಾಸದಲ್ಲಿ ಭಾರತದ ಸ್ವಾತಂತ್ರ್ಯ ಹೋರಾಟದ ಮತ ನಿರಪೇಕ್ಷ (ಸೆಕ್ಯೂಲರ್) ಗುಣ ಮುಖ್ಯವಾಗಲೇ ಇಲ್ಲ ಎನ್ನುವುದು ಒಪ್ಪತಕ್ಕ ಮಾತು. ಸ್ವಾತಂತ್ರ್ಯಾನಂತರದ ದಶಕಗಳಲ್ಲಿ ಶಾಲೆಗೆ ಹೋದ ಮಕ್ಕಳು ಇಂತಹ ಪುಸ್ತಕಗಳನ್ನೇ ಓದಿ ಇದನ್ನೇ ನಿಜವಾದ ಇತಿಹಾಸವೆಂದು ಭ್ರಮಿಸಿದ್ದು ಸಹಜವೇ ಇದೆ ಮತ್ತು ಈಗ ಧರ್ಮವನ್ನು ರಾಜಕೀಯ ಅಧಿಕಾರ ಪಡೆಯಲು ಒಂದು ಉಪಕರಣವಾಗಿ ಸಾಧನವಾಗಿ ಬಳಸುತ್ತಿರುವ ಅನೇಕ ಮತೀಯ ಮೂಲಭೂತವಾದಿ ನಾಯಕರುಗಳೆಲ್ಲ ಇಂತಹ ಪಠ್ಯ ಪುಸ್ತಕಗಳನ್ನು ಓದಿದ ತಲೆಮಾರುಗಳಿಂದ ಬಂದವರೆಂಬುದು ಕೂಡ ಗಮನಾರ್ಹ.

1970ರ ದಶಕದಲ್ಲಿ 'ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿಯ ರಾಷ್ಟ್ರೀಯ ಸಮಿತಿ' ದೇಶದ ಶಾಲೆಗಳಲ್ಲಿ ಬೋಧಿಸಲಾಗುತ್ತಿರುವ ಇತಿಹಾಸ ಪಠ್ಯಪುಸ್ತಕಗಳ ಪುನರ್ವಿಮರ್ಶೆ ನಡೆಸಿದ ಬಳಿಕ ರಾಷ್ಟ್ರೀಯ ಭಾವೈಕ್ಯಕ್ಕೆ ಧಕ್ಕೆ ತರುವಂತಹ ಯಾವ ವಿಚಾರವೂ

ಪಠ್ಯಪುಸ್ತಕಗಳಲ್ಲಿರಕೂಡದೆಂಬುದು ಪಠ್ಯ ರಚನೆಯಲ್ಲಿ ಮುಖ್ಯ ಮಾರ್ಗದರ್ಶಿ ಸೂತ್ರವಾಯಿತು. ಅಂತಹದೇನಾದರೂ ಇದ್ದಲ್ಲಿ ನಾವು ಅದನ್ನು ಕಿತ್ತು ಹಾಕಿ ಇತಿಹಾಸವನ್ನು ಪುನರ್ ಲೇಖಿಸಬೇಕು ಎಂಬುದು ಸರಕಾರದ ಅಧಿಕೃತ ಧೋರಣೆಯಾಯಿತು.

ಆದರೆ ಇತಿಹಾಸವನ್ನು ಪುನರ್ ಲೇಖಿಸುವುದೆಂದಾಗ ಇತಿಹಾಸ ವಿದ್ವಾಂಸ ಪ್ರೊ ರಾಂ ಸ್ವರೂಪ್ ಕೇಳುವ ಪ್ರಶ್ನೆಗಳನ್ನು ಕೇಳಲೇ ಬೇಕಾಗುತ್ತದೆ:

"ಇತಿಹಾಸದ ಪುನರ್ ಲೇಖನ (rewriting) ಎಂದರೆ ಸತ್ಯ ಮತ್ತು ವಸ್ತುನಿಷ್ಠೆಗೆ ವಿದಾಯ ಹೇಳುವುದೆ? ಅಥವಾ ಉಪೇಕ್ಷಿಸಲ್ಪಟ್ಟ ಕೆಲವು ಸತ್ಯಗಳನ್ನು ಮತ್ತು ದೃಷ್ಟಿಕೋನಗಳನ್ನು ಪುನಃ ಸ್ಥಾಪಿಸುವುದೆ?"

ಸತ್ಯ ಮತ್ತು ವಸ್ತುನಿಷ್ಠೆಯನ್ನು ಬಲಿಕೊಟ್ಟು ತಿದ್ದಿ ಬರೆದದ್ದು ಇತಿಹಾಸವಾಗಲಾರದು. ಹಾಗೆ ಬಲಿಕೊಟ್ಟು ಬರೆದ ಇತಿಹಾಸದ ಬರೆವಣಿಗೆ ಅಧಿಕಾರದಲ್ಲಿರುವ ಪುಡಾರಿಗಳನ್ನು ಮತ್ತು ಪಕ್ಷವನ್ನು, ಅವರ ಕ್ರಿಯೆಗಳನ್ನು ಬೆಂಬಲಿಸುವ ಶಾಬ್ದಿಕ ಕಸರತ್ತು ಆಗುವ ಅಪಾಯವಿದೆ. ಆದರೆ ಈಗ ಇರುವ ಅಸತ್ಯ ಮತ್ತು ವಿಕೃತ ಸ್ವರೂಪಗಳನ್ನು, ಕರಾರುವಾಕ್ಕಾಗಿಲ್ಲದ ಮಾಹಿತಿಗಳನ್ನು ಪಠ್ಯ ಪುಸ್ತಕಗಳಿಂದ ಕಿತ್ತೆಸೆಯುವುದು ಕೂಡ ತುರ್ತಾಗಿ ಆಗಬೇಕಾದ ಕೆಲಸ. ಈಗಾಗಲೇ ಕೊಟ್ಟಿರುವ ಒದೆರಡು ಉದಾಹರಣೆಗಳನ್ನು ಗಮನಿಸಿದರೆ ಯಾಕೆ ಈ ಕೆಲಸ ಆಗಲೇಬೇಕೆಂದು ತಿಳಿದೀತು:

"ಆರ್ಯರಿಗೆ ತಮ್ಮ ಎತ್ತರದ ದೇಹಾಕೃತಿ, ಕೆಂಪು ಮೈಬಣ್ಣದ ಬಗ್ಗೆ ಬಲು ಹೆಮ್ಮೆ. ಅವರು ಭಾರತದ ಮೂಲನಿವಾಸಿಗಳಾದ ಜನರನ್ನು ಸರಿಸಮಾನವಾಗಿ ಕಾಣುತ್ತಿರಲಿಲ್ಲ. ಈ ಮೂಲನಿವಾಸಿಗಳನ್ನು ದಸ್ಯು ಗಳೆಂದು ಕರೆದರು."

ಖ್ಯಾತ ಸಮಾಜವಾದಿ ಎಸ್.ವೆಂಕಟರಾಮ್ ಈ ಮೇಲಿನ ಸಾಲುಗಳ ಬಗ್ಗೆ ಕೇಳುವ ಪ್ರಶ್ನೆಗಳಿವು:

"ಈ ಗುಲಾಮೀ ಧಾಟಿಯ ಪರಿಣಾಮ ಭಾರತದಂತಹ ಮಿಶ್ರ ಜನರ ದೇಶದಲ್ಲಿ ಏನಾಗುತ್ತದೆ? ಎತ್ತರದ ದೇಹಾಕೃತಿ, ಕೆಂಪು ಮೈ ಬಣ್ಣದ ಹೆಮ್ಮೆ ಸಂಕುಚಿತ ದೃಷ್ಟಿಯ ಪರಿಣಾಮ ಎಂಬ ಮೌಲ್ಯದ ಮಾತನ್ನು ಸ್ಪಷ್ಟವಾಗಿ ಹೇಳದಿರುವುದ ಎಂಥ ಇತಿಹಾಸ?

. . . (ಇತಿಹಾಸ ಭಾಗ–1, ಐದನೆಯ ತರಗತಿ)

1980–81ನೇ ಶೈಕ್ಷಣಿಕ ವರ್ಷದಿಂದ ಬಳಕೆಗೆ ಬಂದಿರುವ ಹತ್ತನೆಯ ತರಗತಿಯ 'ಸಮಾಜ ಪಾಠಗಳು–ಭಾಗ–1'ರಲ್ಲಿ 'ಪಾಕಿಸ್ಥಾನದೊಡನೆ ನಮ್ಮ ಸಂಬಂಧಗಳು' ಎನ್ನುವ ಶೀರ್ಷಿಕೆಯ ಕೆಳಗೆ ಏನು ಬರೆದಿದೆ ನೋಡಿ:

"1971ರಲ್ಲಿ ಮೂರನೆಯ ಬಾರಿಗೆ ಈ ಎರಡು ದೇಶ (ಭಾರತ ಮತ್ತು ಪಾಕಿಸ್ಥಾನ)ಗಳ ನಡುವೆ ಘರ್ಷಣೆಯಾಯಿತು. ಪಾಕಿಸ್ಥಾನವು ಯಾಹ್ಯಾಖಾನನ ಲಷ್ಕರಿ ಆಡಳಿತಕ್ಕೆ ಒಳಪಟ್ಟಿತು. ಆತನು ಪ್ರಜೆಗಳಿಂದ ಆಯ್ಕೆಯಾದ ಪೂರ್ವ ಬಂಗಾಳದ ನಾಯಕ ಮುಜಿಬುರ್ ರೆಹಮಾನ್ ರವರಿಗೆ ಅಧಿಕಾರವನ್ನು ಒಪ್ಪಿಸಲು ನಿರಾಕರಿಸಿದನು. ಇದು ಮುಜಿಬುರನ್ನು ಪಶ್ಚಿಮ ಪಾಕಿಸ್ಥಾನದಿಂದ ಬೇರ್ಪಡುವಂತೆ ಬಲವಂತ ಮಾಡಿತು. . . ."

ಕನ್ನಡದಲ್ಲಿರುವ ಏಕವಚನ ಮತ್ತು ಗೌರವ ಸೂಚಕ ಬಹುವಚನ ಇಲ್ಲಿ ಹೇಗೆ ಬಳಸಲಾಗಿದೆ ನೋಡಿ. ಯಾಹ್ಯಾಖಾನನು, ರೆಹಮಾನರು! 1947ರ ಭಾರತ–ಪಾಕಿಸ್ಥಾನ ವಿಭಜನೆಯಾಗಿ ಇಂದಿಗೂ ಪಾಕಿಸ್ಥಾನದಲ್ಲಿ ತಮ್ಮ ಬಂಧುಗಳನ್ನು ಹೊಂದಿರುವ ಭಾರತೀಯ ಮುಸ್ಲಿಮರು ಈ ವಚನ ವ್ಯತ್ಯಾಸವನ್ನು ಹೇಗೆ ಸ್ವೀಕರಿಸಿಯಾರು? ಇದು ಅವರಿಗೆ ನೋವನ್ನುಂಟುಮಾಡಬಾರದೇ? ಎಂಬುದನ್ನು ವಿವೇಚಿಸದೆ ಬರೆದ ಬರಹ ಇದು. ಬಾಂಗ್ಲಾದೇಶದಂತೆ ಪಾಕಿಸ್ಥಾನವೂ ಭಾರತದ ನೆರೆ ರಾಷ್ಟ್ರ: ನೆರೆ ಹೊರೆಯ ಸಂಬಂಧಗಳನ್ನು ಚೆನ್ನಾಗಿಟ್ಟುಕೊಳ್ಳುವ ದೃಷ್ಟಿಯಿಂದ ಬಾಂಗ್ಲಾದೇಶದ ಪ್ರಧಾನಿಗೆ ಬಹುವಚನ ಪ್ರಯೋಗ ಎಷ್ಟು ಮುಖ್ಯವೋ ಪಾಕಿಸ್ಥಾನ ಲಷ್ಕರಿ ಆಡಳಿತಗಾರರಿಗೂ ಬಹುವಚನ ಪ್ರಯೋಗ ಅಷ್ಟೇ ಮುಖ್ಯವಲ್ಲವೇ?

ನಮ್ಮ ಇತಿಹಾಸ ಪಠ್ಯ ಪುಸ್ತಕಗಳಲ್ಲಿರುವ ವಿಕೃತಿಗಳನ್ನು ಅಥವಾ ತಪ್ಪು ಅರ್ಥೈಸುವಿಕೆಗಳನ್ನು ಗುರುತಿಸುವ ಸರಕಾರದ ಅಧಿಕೃತ ಪರಿಶೀಲನಾ ಸಮಿತಿ ನೀಡಿರುವ ಈ ಉದಾಹರಣೆಯನ್ನು ಗಮನಿಸಿ:

"ಮುಸ್ಲಿಮರ ಬೇಡಿಕೆಯನ್ನಾಧರಿಸಿ ಕೋಮುವಾರು ಪ್ರಾತಿನಿಧ್ಯ ನೀಡಲಾಯಿತು".

ಈ ಬೇಡಿಕೆಯನ್ನು ಮುಂದಿಟ್ಟದ್ದು ಮುಸ್ಲಿಂ ಲೀಗ್ ಏ ಹೊರತು ದೇಶದ ಎಲ್ಲ ಮುಸ್ಲಿಮರಲ್ಲ. "ಎಲ್ಲ ಮುಸ್ಲಿಮರನ್ನು ಮುಸ್ಲಿಂ ಲೀಗ್‌ನೊಂದಿಗೆ ಸಮೀಕರಿಸುವುದು ತಪ್ಪಾಗುತ್ತದೆ."

ಹೀಗೆ ಐತಿಹಾಸಿಕವಾಗಿ ತಪ್ಪು ಮಾಹಿತಿ ನೀಡುವ ಮತೀಯ, ಜಾತಿವಾದಿ, ಅನ್ಯಾಕ್ರಮಣಶೀಲತೆಯ ಪೂರ್ವಾಗ್ರಹಪೀಡಿತ ವಿವರಗಳನ್ನು, ಸರಳೀಕರಣಗಳನ್ನು ಅಪಾಯಕಾರಿ ಸಾಮಾನ್ಯೀಕರಣಗಳನ್ನು ಪಠ್ಯಪುಸ್ತಕಗಳಿಂದ ಕಿತ್ತೊಗೆಯುವುದು ಸಾಮಾಜಿಕ ಬದುಕಿನ ಸಾಮರಸ್ಯವನ್ನು ಕಾಯ್ದುಕೊಳ್ಳಲು ಅಗತ್ಯವೆಂಬ ಬಗ್ಗೆ ಎರಡು ಮಾತಿಲ್ಲ. ರಾಷ್ಟ್ರೀಯ ಭಾವೈಕ್ಯದ ದೃಷ್ಟಿಯಿಂದ ಆಕ್ಷೇಪಾರ್ಹವೆನ್ನಿಸುವ ಸಂಗತಿಗಳನ್ನು, ಮಾಹಿತಿಗಳನ್ನು ಪರಿಷ್ಕರಿಸುವುದು ಒಮ್ಮೊಮ್ಮೆ 'ಸತ್ಯ ಮತ್ತು ವಸ್ತುನಿಷ್ಠತೆ'ಯ ದೃಷ್ಟಿಯಿಂದ ಆಕ್ಷೇಪಾರ್ಹವೆನ್ನಿಸಬಹುದಾದರೂ ಇದು ರಾಷ್ಟ್ರೀಯ ಭಾವೈಕ್ಯದ ದೃಷ್ಟಿಯಿಂದ ಅನಿವಾರ್ಯ, ಯಾವುದೋ ಒಂದು ಕಾಲದಲ್ಲಿ ಒಂದು ಸಮುದಾಯಕ್ಕೆ ಸೇರಿದ ದೊರೆಯೊಬ್ಬನನ್ನು 'ಗರ್ವೋದ್ಧತ' ಅಥವಾ 'ತನ್ನಿಂದ ಪರಾಜಿತರಾದವರನ್ನೆಲ್ಲಾ ಬಲಾತ್ಕಾರದಿಂದ' ತನ್ನ ಮತಕ್ಕೆ ಸೇರಿಸುತ್ತಿದ್ದವನೆಂದು ವರ್ಣಿಸಿರುವ ಕಾರಣಕ್ಕಾಗಿ ಈಗ ಜನಸಾಮಾನ್ಯರು ಅಂಗಡಿಯ ಪಡಿತರಕ್ಕಾಗಿ ಪರದಾಡುತ್ತಿರುವ ಕಾಲದಲ್ಲಿ ಕೋಮು ಗಲಭೆ ಸಂಭವಿಸಿ ಅಮಾಯಕರ ಹೆಣಗಳುರುಳುವುದಾದಲ್ಲಿ ಈ ನರಹತ್ಯೆಯನ್ನು ತಡೆಯಲಿಕ್ಕಾಗಿ ಆ ದೊರೆಯನ್ನು ಖಂಡಿತವಾಗಿಯೂ 'ಪ್ರಬಲ ಆಡಳಿತಗಾರ', 'ನೀತಿವಂತ','ದೇವರಲ್ಲಿ ಅಪಾರವಾದ ಭಕ್ತಿಯುಳ್ಳವ', 'ವಿದ್ಯಾವಂತ'. 'ಧೀರಯೋಧ', ಮತ್ತು 'ಸ್ವಾತಂತ್ರ್ಯಪ್ರಿಯ'ನೆಂದು ವರ್ಣಿಸಬೇಕಾಗುತ್ತದೆ. ಎಲ್ಲ ಸಮುದಾಯಗಳಿಗೆ ಸೇರಿದ ಎಲ್ಲ ದೊರೆಗಳನ್ನೂ ಹೀಗೆಯೇ ವರ್ಣಿಸಬೇಕಾಗಬಹುದು. ಹೀಗೆ ವರ್ಣಿಸುವುದು ಒಂದು ವೇಳೆ ಸುಳ್ಳು ಹೇಳುವುದಕ್ಕೆ ಸಮ್ಮನಾಗುತ್ತದಾದರೂ ಕೋಮು ಗಲಭೆಗಳಲ್ಲಿ ಸಾಯುವ ಬಡಪಾಯಿಗಳ ಜೀವ ಉಳಿಸುವುದಕ್ಕಾಗಿ ಹೇಳುವ ಈ 'ಸುಳ್ಳು' ಕೂಡ ಸತ್ಯದಷ್ಟೇ ಉಪಯೋಗಿ ಅಂತ ಸಮಾಧಾನಪಟ್ಟುಕೊಳ್ಳಬೇಕಾದೀತು. ಯಾಕೆಂದರೆ ಯಾವುದೋ ಕಾಲದಲ್ಲಿ ಮಜಾ ಉಡಾಯಿಸಿ ಸತ್ತ ದೊರೆಯೊಬ್ಬನ ಬಗ್ಗೆ ಬಳಸಲಾದ ವಿಶೇಷಣಗಳಿಗಾಗಿ ಈಗ ಜನ ಪರಸ್ಪರ ಕಾದಾಡುವುದು ಅರ್ಥಹೀನ. ಅಸಂಗತ ಮತ್ತು ಅಪಾಯಕಾರಿ. ಇಂತಹ ಕಾದಾಟವನ್ನು ತಪ್ಪಿಸಲಿಕ್ಕಾಗಿಯಾದರೂ ಸತ್ಯದೊಂದಿಗೆ ರಾಜಿ ಮಾಡಿಕೊಂಡು ಇತಿಹಾಸವನ್ನು ಪರಿಷ್ಕರಿಸುವುದಕ್ಕೆ ತಿದ್ದಿ ಬರೆಯುವುದಕ್ಕೆ ಸಹಮತ ನೀಡಬೇಕು.

ಯಾಕೆಂದರೆ ಮತೀಯ ಸಹನೆ, ಪರಧರ್ಮಸಹಿಷ್ಣುತೆ, ಕೋಮುಸಾಮರಸ್ಯ ಮತ್ತು ಶಾಂತಿಯುತ ಸಹಬಾಳ್ವೆಯನ್ನು ಬೋಧಿಸಬೇಕಾದ ಪಠ್ಯಪುಸ್ತಕಗಳೇ ಕೋಮುಗಲಭೆಗಳಿಗೆ ಕಾರಣವಾಗುವುದನ್ನು ಯಾವ ಬೆಲೆ ತೆತ್ತಾದರೂ ತಡೆಯಲೇಬೇಕು. ಜತೆಗೆ ನಮ್ಮ ಪಠ್ಯಕ್ರಮದಲ್ಲಿ ಬಳಕೆಯಾಗುವ ಭಾಷೆ/ಇತಿಹಾಸ ಪಠ್ಯಪುಸ್ತಕಗಳಲ್ಲಿ 'ಮಿರ್ಜಾರ ಮಾನವೀಯತೆ' (ಅನುಬಂಧ–7) ಯಂತಹ (ಡಿ.ವಿ.ಜಿ.:2004) ಪಾಠಗಳು ವಿದ್ಯಾರ್ಥಿಗಳಿಗೆ ಲಭಿಸಬೇಕು. ಓರ್ವ ಮುಸ್ಲಿಮರಾದ ಮಿರ್ಜಾರವರ ಶವಸಂಸ್ಕಾರಾದಿಗಳು ಮುಗಿದಾಗ ಸ್ಮಶಾನ ಪ್ರದೇಶದ ಗೇಟಿನಲ್ಲಿ ಬಿಕ್ಕಿ ಬಿಕ್ಕಿ ಅಳುತ್ತಿದ್ದ ಒಬ್ಬಾತ ಹಿಂದು, ಆತ ಯಾಕೆ ಅಳುತ್ತಿದ್ದ? ಎಂದು ಲೇಖಕರು (ಡಿ.ವಿ.ಜಿ.) ಕೇಳಿದಾಗ, ಆತ ಸಾರ್ವಜನಿಕ ಕೊಳಾಯಿಯಿಂದ ನೀರು ತರಲು ಆತನ ಬಸುರಿ ಹೆಂಡತಿ ಪಡುತ್ತಿದ್ದ ಪಾಡನ್ನು ಕಂಡು ಮಿರ್ಜಾರವರು ಎರಡು ದಿನಗಳೊಳಗಾಗಿ ಆತನ ಮನೆಯ ಸಮೀಪವೇ ಕೊಳಾಯಿ ಹಾಕಿಸಿಕೊಟ್ಟು ಮಾಡಿದ ಉಪಕಾರವನ್ನು ಸ್ಮರಿಸಿಕೊಳ್ಳುತ್ತಾನೆ. ಹಿಂದೂ–ಮುಸ್ಲಿ ಭಾವೈಕ್ಯ ಸಾಧಿಸಲು ಸಹಕಾರಿಯಾಗಬಹುದಾದ ಒಂದು ಅದ್ಭುತ ಪಠ್ಯ ಇದು.

ಆದರೆ ಪಾಠದ ಮೇಲುಗಡೆ ಪಾಠದ ಆಶಯವನ್ನು ಹೀಗೆ ಬರೆಯಲಾಗಿದೆ:

"ಕಾಯಕವೇ ಕೈಲಾಸವೆಂದು ಪ್ರಾಜ್ಞರು ಸಾರಿದ ವಾಣಿಯನ್ನು ಅರಿವು ಮಾಡಿಕೊಂಡು ಸೇವೆಯನ್ನು ಸಲ್ಲಿಸುವುದು ಉತ್ತಮರ ಲಕ್ಷಣವಾಗಿದೆ. ಅಧಿಕಾರ ದೊರೆತಾಗ ತನಗಾಗಿ ತಾನು ಎಂದು ಭಾವಿಸದೆ ಪರರಿಗಾಗಿ ತಾನು ಎಂದು ಭಾವಿಸಿ ಜನಸೇವೆಯನ್ನು ಮಾಡುವುದು ಎಲ್ಲರ ಕರ್ತವ್ಯವಾಗಿದೆ. ಜನರ ಸ್ಥಿತಿಗತಿಗಳನ್ನು ಪ್ರತ್ಯಕ್ಷಿಸಿ ನೋಡಿ, ಒಡನೆಯೇ ಪರಿಹಾರ ದೊರಕಿಸುವುದು ಅತ್ಯುತ್ತಮ ಮಾರ್ಗ ಎಂಬುದು ಈ ಪಾಠದ ಆಶಯವಾಗಿದೆ."

ಪಠ್ಯಪುಸ್ತಕ ಸಮಿತಿಯ ಸದಸ್ಯರು ಹೀಗೆ ಬರೆಯುವಾಗ ಇದೇ ಪಾಠ ಹಿಂದೂ–ಮುಸ್ಲಿಂ ಭಾವೈಕ್ಯವನ್ನೂ ಸಾರುತ್ತದೆ; ಮಿರ್ಜಾರಂತಹ ಒಬ್ಬ ಒಳ್ಳೆಯ ಮನುಷ್ಯ ಮುಸ್ಲಿಮರಿಗಷ್ಟೇ ಅಲ್ಲ, ಹಿಂದುಗಳಿಗೂ ಪ್ರೀತಿಪಾತ್ರರಾಗಿದ್ದರು; ಅವರು ಸತ್ತಾಗ ಹಿಂದುಗಳು ಕಣ್ಣೀರು ಮಿಡಿದರು; ಆದ್ದರಿಂದ ಹಿಂದೂ–ಮುಸ್ಲಿಂ ಎಂಬ ಮಾನಸಿಕ ವಿಭಜನೆ ಸರಿಯಲ್ಲ ಎಂದೂ ಬರೆದಿದ್ದರೆ ಪಾಠದ ಇನ್ನೊಂದು ಪ್ರಮುಖ ಆಶಯವನ್ನೂ ಅವರು ಗುರುತಿಸಿದಂತಾಗುತ್ತಿತ್ತು.

**ಕೋಮು ಸಾಮರಸ್ಯಕ್ಕೆ ಪಠ್ಯ ಪುಸ್ತಕಗಳ ಕೊಡುಗೆ: ವದಂತಿ ಹರಡುವಿಕೆಯನ್ನು ತಡೆಯುವ ಕ್ರಮಗಳು**

ಕೋಮು ಸಾಮರಸ್ಯಕ್ಕೆ ಪಠ್ಯಪುಸ್ತಕಗಳು ಯಾವ ರೀತಿ ತಮ್ಮ ಕೊಡುಗೆ ನೀಡಬಲ್ಲವು? ಕೋಮುಗಲಭೆ ಅಥವಾ ಕೋಮು ಹಿಂಸೆ ಕಾಣಿಸಿಕೊಂಡಾಗ ಅದು, ವಿಶೇಷವಾಗಿ ಪಟ್ಟಣಗಳಲ್ಲಿ, ಸಣ್ಣಪುಟ್ಟ ಊರುಗಳಲ್ಲಿ ಕಾಳ್ಗಿಚ್ಚಿನಂತೆ ಹರಡಲು ನೆರವಾಗುವ ವದಂತಿಗಳ ಹರಡುವಿಕೆಯನ್ನು ಹೇಗೆ ತಡೆಯಬಹುದು? ಎಂದು ಈ ಭಾಗದಲ್ಲಿ ವಿವೇಚಿಸಲಾಗಿದೆ.

ಪಠ್ಯಪುಸ್ತಕಗಳಲ್ಲಿ ಕೋಮುಸಾಮರಸ್ಯದ ಕುರಿತಾಗಿ ಮಾಧ್ಯಮಿಕ ಅಥವಾ ಪ್ರೌಢಶಾಲಾ ಹಂತದಲ್ಲಿ ಒಂದು ಪಾಠವನ್ನು ನಿಗದಿಗೊಳಿಸಬಹುದು. ಆ ಪಾಠವು ಕೋಮುರಾಜಕಾರಣವನ್ನು ಕಿತ್ತೆಸೆಯಬೇಕಾದ ಅವಶ್ಯಕತೆಯನ್ನು ಮತ್ತು ಭಾರತದಂತಹ ಬಹುರೂಪಿ (pluralist) ಸಮಾಜದಲ್ಲಿ ಸೆಕ್ಯುಲರಿಸಂನ ಮಹತ್ವವನ್ನು ವಿದ್ಯಾರ್ಥಿಗಳಿಗೆ ಮನದಟ್ಟುಮಾಡಿಸಬೇಕು.

ಕೋಮು ರಾಜಕಾರಣವನ್ನು ಯಾಕೆ ಕಿತ್ತೊಗೆಯಬೇಕು? ಎಂಬುದಕ್ಕೆ ಈ ದೇಶದಲ್ಲಿ 1980–90ರ ದಶಕದಲ್ಲಿ ನಡೆದ ಹಲವು ಘಟನೆಗಳನ್ನು ಪ್ರಸ್ತಾಪಿಸಬಹುದು. 1980ರ ದಶಕದ ಬಳಿಕ ದೇಶದ ರಾಜಕಾರಣದಲ್ಲಿ ಅಲ್ಲೋಲಕಲ್ಲೋಲ ಉಂಟುಮಾಡಿ ಅಪಾರಹಿಂಸೆಗೆ ಕಾರಣವಾದ ರಥಯಾತ್ರೆ, ಅಯೋಧ್ಯೆಯಲ್ಲಿ ನಡೆದ ಕರಸೇವೆ ಅಂತಿಮವಾಗಿ ಅಯೋಧ್ಯೆಯ ವಿವಾದಾಸ್ಪದ ಕಟ್ಟಡದ ಉರುಳಿಸುವಿಕೆ – ಈ ಎಲ್ಲ ಘಟನೆಗಳು ದೇಶದ ಜನಮಾನಸದಲ್ಲಿ ಇನ್ನೂ ಹಚ್ಚಹಸಿರಾಗಿ ಉಳಿದಿವೆ.

ದೇಶದ ನಾಯಕರು ರಾಜಕಾರಣ ಮತ್ತು ಧರ್ಮವನ್ನು ಬೆರೆಸಿದ ತಪ್ಪಿಗಾಗಿ ದೇಶ ದುಬಾರಿ ಬೆಲೆ ತೆರುತ್ತಲೇ ಇದೆ. ದೇಶವನ್ನು ಜನತಾ ಪ್ರತಿನಿಧಿಗಳಿರುವ ಸಂಸತ್ತು ಮತ್ತು ಸಂವಿಧಾನವನ್ನು ಎತ್ತಿ ಹಿಡಿಯುವ ನ್ಯಾಯಾಂಗ ಆಳಬೇಕೋ ಅಥವಾ ಮತೀಯ ಮೂಲಭೂತವಾದಿಗಳು, ಸಾಧು ಸಂತ–ಮಹಾಂತ–ಮುಲ್ಲಾಗಳು ಆಳಬೇಕೋ ಎಂಬ ಅಪಾಯಕಾರಿ ಹಂತಕ್ಕೆ ಭಾರತ ಬಂದು ತಲುಪಿದೆ. ಅಯೋಧ್ಯಾ ಸಮಸ್ಯೆಗೆ ನ್ಯಾಯಾಲಯ ಕಾನೂನು ಪರಿಹಾರವೋ ಅಥವಾ ನಂಬಿಕೆ ಆಧಾರಿತ ಬಲಪ್ರಯೋಗ ಪರಿಹಾರವೋ ಎಂಬ ಪ್ರಶ್ನೆಯನ್ನಾಧರಿಸಿ ರಾಷ್ಟ್ರದ ಸೆಕ್ಯುಲರ್ ಸ್ವರೂಪ ನಿರ್ಧಾರವಾಗುವ ನಿರ್ಣಾಯಕ ಘಟ್ಟದಲ್ಲಿದೆ. 1992ರಲ್ಲಿ ನ್ಯಾಯಾಲಯದ ಆಜ್ಞೆ ಉಲ್ಲಂಘಿಸಿ

ಮುಂದುವರಿದ ಕರಸೇವೆ ಕಾರ್ಯಾಚರಣೆ ತತ್ಕಾಲಕ್ಕೆ ಸ್ಥಾನಾಂತರಗೊಂಡಿತಾದರೂ ಮಂದಿರ-ಮಸೀದಿ ವಿವಾದ ಇದ್ದಲ್ಲೇ ಇದೆ. ಮಂದಿರ ಕಟ್ಟಲಾಗುತ್ತದೆ, ಮಸೀದಿಯನ್ನು ಉಳಿಸಲಾಗುತ್ತದೆ ಮತ್ತು ನ್ಯಾಯಾಲಯದ ಆಜ್ಞೆ ಉಲ್ಲಂಘನೆಯಾಗುವುದನ್ನು ನೋಡುತ್ತ ಸರಕಾರ ಕುಳಿತುಕೊಳ್ಳುವುದಿಲ್ಲ ಎಂಬುದನ್ನು ಸ್ಪಷ್ಟಪಡಿಸಿದ ಅಂದಿನ ಪ್ರಧಾನಿ ಪಿ.ವಿ.ನರಸಿಂಹ ರಾಯರು ನಾಲ್ಕು ತಿಂಗಳಲ್ಲಿ ಸಮಸ್ಯೆ ಬಗೆಹರಿಸುತ್ತೇನೆಂದು ತಾನು ಸಾಧುಗಳಿಗೆ ಆಶ್ವಾಸನೆ ನೀಡಿಲ್ಲ ಎಂದರು, ಎಲ್ಲ ಅಯೋಧ್ಯೆಯ ಖಟ್ಲೆಗಳನ್ನು ಒಂದೇ ನ್ಯಾಯಾಧಿಕರಣಕ್ಕೆ ಒಪ್ಪಿಸಲು ನಾಲ್ಕು ತಿಂಗಳ ಅವಕಾಶಬೇಕಾಗುತ್ತದೆ ಎನ್ನುವುದರ ಅರ್ಥ ಅಯೋಧ್ಯಾವಿವಾದ ನಾಲ್ಕು ತಿಂಗಳಲ್ಲಿ ಬಗೆಹರಿಯುತ್ತದೆ ಎಂದಲ್ಲ. ಅಂದರೆ ವಿವಾದ ಪರಿಹಾರದ ನಿಟ್ಟಿನಲ್ಲಿ ಮುಂದಿನ ಹಂತ ಎಲ್ಲ ಖಟ್ಲೆಗಳನ್ನು ಒಂದೇ ನ್ಯಾಯಾಧಿಕರಣಕ್ಕೆ ಒಪ್ಪಿಸುವುದು, ಆ ಮೇಲೆ ಪುನಃ ಖಟ್ಲೆ ತೀರ್ಮಾನವಾಗುವವರೆಗೆ ಕಾಯುವುದು.

ಆದರೆ ಅಂದಿನ ಕಾಂಗ್ರೆ ಸರಕಾರ ಕಾಯುವುದಲ್ಲದೆ ಬೇರೇನನ್ನೂ ಮಾಡಲು ಸಾಧ್ಯವಿರಲಿಲ್ಲ. ಯಾಕೆಂದರೆ ಅಯೊಧ್ಯಾ ವಿವಾದ ತೀವ್ರಗೊಳ್ಳಲು ಒಂದು ಅರ್ಥದಲ್ಲಿ ಕಾಂಗ್ರೆ ಸರಕಾರವೇ ಕಾರಣವಾಗಿತ್ತು. ಅಯೋಧ್ಯಾ ವಿವಾದ ನಿಜವಾಗಿ ತೀವ್ರಗೊಂಡದ್ದು ಶಾಬಾನೊ ಪ್ರಕರಣದೊಂದಿಗೆ, ಅಂದು ಮುಲ್ಲಾಗಳು ಮತ್ತು ಸ್ವಘೋಷಿತ ಮುಸ್ಲಿಂ ನಾಯಕರು ಹೇಳಿದಂತೆ ಕುಣಿದ ಕಾಂಗ್ರೆಸ್ ಸರಕಾರ ಬಳಿಕ ಮಹಾಂತರುಗಳ ತಾಳಕ್ಕೆ ತಕ್ಕಂತೆ ಕುಣಿಯುವ ಸ್ಥಿತಿಗೆ ತನ್ನನ್ನು ತಾನು ತಂದುಕೊಂಡಿತು. ಆದ್ದರಿಂದ ಅವರು ಕರಸೇವೆ ನಿಲ್ಲಿಸುವವರೆಗೆ ಕಾಯುವುದಲ್ಲದೆ ಬೇರೇನನ್ನೂ ಮಾಡದ ಸ್ಥಿತಿಯಲ್ಲಿ ಅದು ಇತ್ತು.

ಬಡ ಮುಸ್ಲಿಂ ಹೆಂಗಸೊಬ್ಬಳಿಗೆ ಮಾಸಾಶನ ನೀಡಬೇಕಾದ ನ್ಯಾಯಾಲಯದ ತೀರ್ಪಿನಿಂದಾಗಿ ಮುಸ್ಲಿಂ ವೈಯಕ್ತಿಕ ಕಾನೂನಿಗೆ, ಇಸ್ಲಾಂ ಧರ್ಮಕ್ಕೆ ಅಪಾಯ ಒದಗಿದೆ ಎಂದು ಮೌಲ್ವಿಗಳು ಮತ್ತು ಮುಸ್ಲಿಂ ಮತೀಯ ನಾಯಕರು ಬೊಬ್ಬೆ ಹೊಡೆದಾಗ ಅಂದಿನ ಕಾಂಗ್ರೆ ಸರಕಾರ ಅವರ ಒತ್ತಡಕ್ಕೆ ಮಣಿದಿತ್ತು. ಸಂಸತ್ತಿನಲ್ಲಿ ತನಗಿರುವ ಬಹುಮತವನ್ನು ಬಳಿಸಿಕೊಂಡು ಸುಪ್ರೀಂಕೋರ್ಟಿನ ತೀರ್ಪನ್ನು ಬುಡಮೇಲು ಮಾಡುವಂತೆ ತನ್ನ ಮೇಲೆ ಬಿದ್ದ ಒತ್ತಡಕ್ಕೆ ಸರಕಾರ ಶರಣಾಗಿತ್ತು. ಬಳಿಕ ಸಾಧುಸಂತರು ಮಹಾಂತರು ಸರಕಾರವನ್ನು ನಿಯಂತ್ರಿಸುವ ಹಂತ ತಲುಪಿದ್ದರು. ಆದ್ದರಿಂದಲೇ ಅವರು ಕರಸೇವೆಯ ನೇತೃತ್ವವಹಿಸಿದಾಗ ಕೇಂದ್ರ ಸರಕಾರ ಅವರನ್ನು

ವಿನಂತಿಸಿಕೊಳ್ಳುವುದಲ್ಲಿದೆ, ಅವರು ಪ್ರಸನ್ನರಾಗುವವರೆಗೆ ಕಾಯುವುದಲ್ಲದೆ ಬೇರೇನೂ ಮಾಡದಾಯಿತು.

ರಾಜಕಾರಣ ಮತ್ತು ಧರ್ಮದ ಬೆರಕೆಯಿಂದಾಗಿ ಅಯೋಧ್ಯಾ ದೇವಾಲಯದ ಪ್ರಶ್ನೆ ತನ್ನದೇ ಆದ ಆಯಾಮ ಪಡೆಯಿತು. ಅದು ಸ್ವತಂತ್ರ ಭಾರತ ಧರ್ಮನಿರಪೇಕ್ಷತೆಗೆ ಬದ್ಧವಾಗಿ ಉಳಿಯಿತ್ತದೋ ಅಥವಾ ಧರ್ಮ ನಿರಪೇಕ್ಷತೆಗೆ ವಿದಾಯ ಹೇಳುತ್ತದೋ ಎಂಬುದನ್ನು ನಿರ್ಧರಿಸುವ ಮತ್ತು ಭಾರತದ ಸೆಕ್ಯುಲರ್ ಗಣತಂತ್ರವನ್ನು ಸತ್ವಪರೀಕ್ಷೆಗೊಡ್ಡುವ ಜ್ವಲಂತ ಪ್ರಶ್ನೆಯಾಯಿತು. ಧರ್ಮ ನಿರಪೇಕ್ಷತೆಯನ್ನು ಆಯ್ದುಕೊಂಡ ಭಾರತ ಮಂದಿರ-ಮಸೀದಿಯ ಹೆಸರಿನಲ್ಲಿ ದಾಳಿಗೊಳಗಾಗಿದೆ. ದಾಳಿಕೋರರು ಇನ್ಯಾರೂ ಅಲ್ಲ; ರಾಜಕೀಯ ಲಾಭಕ್ಕಾಗಿ ಧರ್ಮವನ್ನು ಬಳಸಿಕೊಳ್ಳುತ್ತ ಬಂದಿರುವ ರಾಜಕೀಯ ನಾಯಕರು ಹಾಗೂ ಪಕ್ಷಗಳು ಮತ್ತು ಸ್ವಘೋಷಿತ ಧಾರ್ಮಿಕ ಮುಖಂಡರು.

ಆದ್ದರಿಂದ ಮತ ಬ್ಯಾಂಕ್ ರಾಜಕಾರಣಕ್ಕೆ ವಿದಾಯ ಹೇಳದಿದ್ದರೆ, ಕೋಮು ರಾಜಕಾರಣದ ಮೂಲಬೇರುಗಳನ್ನು ಕಿತ್ತೆಸೆಯದಿದ್ದರೆ ಅಯೋಧ್ಯಾ ವಿವಾದ ಬಗೆಹರಿಯವುದಿಲ್ಲವೆನ್ನುವುದು ಸ್ಪಷ್ಟವಾಗಿದೆ.

## ಸೆಕ್ಯುಲರಿಸಂ

ಭಾರತದ ಸಂವಿಧಾನವು 'ಇಂಡಿಯಾವನ್ನು ಒಂದು Sovereign Socialist Secular Democratic Republic ಆಗಿ' ಮಾಡಬೇಕು ಅನ್ನುತ್ತದೆ. 'ಕೋಮುವಾದ' ಎಂಬ ಪದಕ್ಕೆ ವಿರುದ್ಧಾರ್ಥ ಪದ ಎನ್ನಬಹುದಾದ 'ಸೆಕ್ಯುಲರ್' ಶಬ್ದದ ಹಿಂದಿ ಅನುವಾದದಲ್ಲಿ ಬಳಸಲಾದ ಪದಪುಂಜ "ಪಂಥ್ ನಿರಪೇಕ್ಷ್", 'ಧರ್ಮ ನಿರಪೇಕ್ಷ್' ಅಲ್ಲ. ಹೀಗಾಗಿ ಸೆಕ್ಯೂಲರಿಸಂ ಎಂಬುದು ಯಾವುದೇ ಧರ್ಮದ ಪಂಥಕ್ಕೆ, ಅದು ಜೈನಿಸಂ ಅಥವಾ ಸಿಖ್ಖಿಸಂ ಅಥವಾ ಬುದ್ಧಿಸಂ ಅಥವಾ ಇಸ್ಲಾಮ್ ಅಥವಾ ಕ್ರಿಶ್ಚಿಯಾನಿಟಿ ಅಥವಾ ಸನಾತನ ಯಾವುದೇ ಇರಲಿ, ಅದಕ್ಕೆ ಸ್ವಜನ ಪಕ್ಷಪಾತ ಮಾಡುವುದನ್ನು ಅಲ್ಲಗಳೆಯುತ್ತದೆ, ನಿರಾಕರಿಸುತ್ತದೆಂಬುದು ಸ್ಪಷ್ಟ; ಆದರೆ ಅದು 'ಧರ್ಮ'ವನ್ನು ಅಲ್ಲಗಳೆಯುವುದಿಲ್ಲ. ದುರದೃಷ್ಟವಶಾತ್, ಹಿಂದಿ ಅಥವಾ ಸಂಸ್ಕೃತದಲ್ಲಿ ನಾವು ಯಾವುದನ್ನು ಧರ್ಮ ಎಂದು ಕರೆಯುತ್ತೇವೋ, ಆ ಶಬ್ದದ ಅರ್ಥವನ್ನು ಹೇಳುವ ಶಬ್ದ ಇಂಗ್ಲಿಷ್‌ನಲ್ಲಿಲ್ಲ . . .

ಸಂವಿಧಾನದ 28ನೇ ಪರಿಚ್ಛೇದ (article ) ವು "No religious instruction shall be provided in any educational institution wholly maintained out of the State " ಎನ್ನುವಾಗ "It only means that no sectarian or sectional instructions will be imparted. This meaning of the word religion used in the constitution is reaffirmed by the language of the Article 26 of the constitution according to which" . . . every religious denomination or any section there of shall have the right to manage its own affairs in matters of religion (ಭಂಡಾರಿ ಎಮ್.ಎಸ್:2002, ಪು.54).

ಸೆಕ್ಯುಲರಿಸಂ ಎಷ್ಟರಮಟ್ಟಿಗೆ ಯಶಸ್ವಿಯಾಗಿದೆ? ಎಂಬುದನ್ನು ಈಗ ನೋಡೋಣ

ಧರ್ಮ ನಂಬಿಕೆಗೆ ಸಂಬಂಧಿಸಿದ ವಿಷಯ ಎನ್ನುತ್ತಾರೆ. ಆದರೆ ಮನುಷ್ಯನಿಗೆ ದೇವರಲ್ಲಿರುವ ವಿಶ್ವಾಸದ, ಭಕ್ತಿಯ ಅಂಶದ ಹೊರತು ಧರ್ಮ ಕೂಡ (ಕಾನೂನಿನ ಹಾಗೆ ಅಥವಾ ಸಂವಿಧಾನದ ಹಾಗೆ) ತರ್ಕ ಮತ್ತು ಬುದ್ಧಿಗೆ; ಮನುಷ್ಯನ ಸ್ವಾರ್ಥ, ಅಧಿಕಾರ, ಅಹಂಕಾರದ ಗಡಿಗಳಿಗೆ ಮತ್ತು ಸ್ವಾತಂತ್ರ್ಯದ ಇತಿಮಿತಿಗಳಿಗೆ ಸಂಬಂಧಿಸಿದ ವಿಷಯವೇ. ಉಣ್ಣಲು ತಿನ್ನಲು ಸಾಕಷ್ಟು ಇರುವವ ಉಪವಾಸ ವೃತ ಕೈಗೊಂಡಂತೆ ಕಾನೂನು ಕೂಡ ಮನುಷ್ಯ ತಾನು ಸ್ವಚ್ಛಂದವಾಗಿ ಮಾಡಬಹುದಾದ ಅನೇಕ 'ಗಮ್ಮತ್ತು'ಗಳನ್ನು ಮಾಡದಂತೆ ತನ್ನ ಮೇಲೆ ಸ್ವತ: ತಾನೇ ನಿಷೇಧ ಹೇರಿಕೊಳ್ಳುವ ಒಂದು ಪ್ರಕ್ರಿಯೆ. ತಾನು/ತನ್ನ ಸಮಾಜ ರಚಿಸಿರುವ ನ್ಯಾಯಾಂಗ ವ್ಯವಸ್ಥೆಯ ಆಜ್ಞೆಯಂತೆ ನಡೆದುಕೊಳ್ಳಲು ನೀಡುವ ಒಪ್ಪಿಗೆ. ನ್ಯಾಯಾಂಗ ವ್ಯವಸ್ಥೆಯನ್ನು ಅಥವಾ ನ್ಯಾಯಾಂಗ ತೀರ್ಪನ್ನು ಯಾವುದೇ ಕಾರಣಕ್ಕಾಗಿ ತಾನು ಒಪ್ಪುವುದಿಲ್ಲವೆಂದಾಗ ಮನುಷ್ಯ 'ಅರಣ್ಯ ಕಾನೂನನ್ನು' ಸಮರ್ಥಿಸಿದಂತಾಗುತ್ತದೆ. ಸಮಾಜದ ಎಲ್ಲರ ಭಾವನೆಗಳ, ನಂಬಿಕೆಯ ಅಭಿವ್ಯಕ್ತಿಗೆ ಅವಕಾಶ ದೊರಕದಂತೆ ತಡೆದ ಹಾಗಾಗುತ್ತದೆ. ಯಾಕೆಂದರೆ ಭಾವನೆಗಳ ಮೊತ್ತವಾಗಿರುವ ಪ್ರಾಣಿಗಳಿಂದ ಮನುಷ್ಯನನ್ನು ಪ್ರತ್ಯೇಕಿಸುವ ಅಂಶ ಅವನ ತರ್ಕ ಮತ್ತು ಬುದ್ಧಿಶಕ್ತಿ, ತರ್ಕ ಮತ್ತು ಬುದ್ಧಿಗೆ ವಿದಾಯ ಹೇಳಿ ಕೇವಲ ಭಾವನೆಗಳಿಗಷ್ಟೇ 'ಶರಣು ಶರಣು' ಎಂದಾಗ ಸಮಾಜದಲ್ಲಿ ಅರಾಜಕತೆಗೆ ಆಹ್ವಾನ ನೀಡಿದಂತಾಗುತ್ತದೆ.

ವ್ಯಕ್ತಿಯ ಜಾತಿಮತ ಧರ್ಮವನ್ನು ಪರಿಗಣಿಸದೆ ಎಲ್ಲರಿಗೂ, ಎಲ್ಲ ಭಾರತೀಯರಿಗೂ ಅವರವರ ಆಯ್ಕೆಯ ಧರ್ಮವನ್ನು ಆಚರಿಸುವ ಹಕ್ಕು ಇರಬೇಕೆನ್ನುವುದೇ ಧರ್ಮನಿರಪೇಕ್ಷತೆಯ, ಜಾತ್ಯತೀತತೆಯ ಆಶಯ. ಆದರೆ ಧರ್ಮ ಮತ್ತು ಮತದ ನಡುವೆ ಬಹಳ ವ್ಯತ್ಯಾಸವಿರುವುದರಿಂದ ನಮ್ಮ ದೇಶದಲ್ಲಿ 'ಧರ್ಮ ನಿರಪೇಕ್ಷತೆ' ಎಂಬ ಶಬ್ದವೇ ತಪ್ಪು ತಿಳಿವಳಿಕೆಗೆ ಅವಕಾಶ ಮಾಡಿಕೊಟ್ಟಿದೆ. 'ಧರ್ಮನಿರಪೇಕ್ಷತೆ' ಎಂದೊಡನೆ "ಹಾಗಾದರೆ ನಮಗೆ ಧರ್ಮ ಬೇಡವೆ?" ಎಂಬ ಪ್ರಶ್ನೆ ಎದುರಾಗುತ್ತದೆ. ಧರ್ಮದ ನಿಜವಾದ ಅರ್ಥದಲ್ಲಿ (ಕಳಬೇಡ ಕೊಲಬೇಡ ಹುಸಿಯ ನುಡಿಯಲು ಬೇಡ ಮುನಿಯಬೇಡ ಅನ್ಯರಿಗೆ ಅಸಹ್ಯಪಡಬೇಡ ಇತ್ಯಾದಿ) ಧರ್ಮ ಅಪೇಕ್ಷಣೀಯವಷ್ಟೇ ಅಲ್ಲ; ಅನಿವಾರ್ಯ ಕೂಡ–ಕಾನೂನಿನ ಹಾಗೆ ಅಥವಾ ಸಂವಿಧಾನದ ಹಾಗೆ. ನಿಜವಾಗಿ ನಿರಪೇಕ್ಷಣೀಯವಾದದ್ದು ಜಾತಿ, ಮತ ಅಥವಾ ಮತಕ್ಕಿಂತಲೂ ಹೆಚ್ಚಾಗಿ ಕೋಮು. ಆದ್ದರಿಂದ 'ಸೆಕ್ಯಲರಿಸಂ'ನ ಅರ್ಥ 'ಮತ ನಿರಪೇಕ್ಷತೆ' 'ಜಾತಿನಿರಪೇಕ್ಷತೆ' ಅಥವಾ 'ನಿರಪೇಕ್ಷತೆ' ಎಂದಾಗಬೇಕೆ ಹೊರತು ಧರ್ಮನಿರಪೇಕ್ಷತೆ ಎಂದಲ್ಲ.

ಸೆಕ್ಯುಲರಿಸಂ ಭ್ರಾತೃತ್ವ, ಸಮಾನತೆ, ಸರ್ವಧರ್ಮ ಸಮಭಾವ ಮತ್ತಿ ಸಹನೆಯನ್ನಾಧರಿಸಿದೆ. ಸೆಕ್ಯುಲರ್ ಮನೋಧರ್ಮ ಹೊಂದಿದವ ಎಲ್ಲ ಧರ್ಮಗಳಿಗೂ ನಿಷ್ಟನಾಗಿರುತ್ತಾನೆ – ಎಲ್ಲ ಧರ್ಮಗಳ ಮೂಲ ಬೋಧನೆ ಸಮಾನ ಎನ್ನುವ ಕಾರಣಕ್ಕಾಗಿ. ಆತ ತನ್ನ ಧರ್ಮಕ್ಕೆ ಇತರ ಧರ್ಮಗಳಿಗಿಂತ ತುಸು ಹೆಚ್ಚು ನಿಷ್ಠನಿರಬಹುದು. ಆದರೆ ಇದಕ್ಕೆ ವ್ಯತಿರಿಕ್ತವಾಗಿ ಕೋಮುವಾದವು ವ್ಯಕ್ತಿ ತನ್ನ ಕೋಮಿಗೆ, ತನ್ನ ಸಮುದಾಯಕ್ಕೆ ಮಾತ್ರ ನಿಷ್ಠನಾಗಿರಬೇಕು ಎನ್ನುತ್ತದೆ ಮತ್ತು ಪರಿಣಾಮವಾಗಿ ಸರ್ವಧರ್ಮ ಸಮಭಾವ ಮತ್ತು ಸಹನೆಯನ್ನು ಅನಗತ್ಯ ಮೌಲ್ಯಗಳೆಂದು ಪರಿಗಣಿಸುತ್ತದೆ.

ಸೆಕ್ಯುಲರಿಸಂನ ಪ್ರಕಾರ ರಾಷ್ಟ್ರವು ಯಾವುದೇ ಧರ್ಮಕ್ಕೆ ಬೆಂಬಲ ನೀಡಬಾರದು. ಯಾವುದೇ ಒಂದು ಸಮುದಾಯವನ್ನು ಮುದ್ದು ಮಾಡಬಾರದು. ರಾಷ್ಟ್ರದಲ್ಲಿ ಅನೇಕ ಮತಧರ್ಮಗಳಿರುವಾಗ ಯಾವುದೇ ಒಂದು ಮತದ ಸದಸ್ಯರಿಗೆ ವಿಶೇಷ ಸವಲತ್ತು ನೀಡುವುದಾಗಲಿ, ಅವರ ಬಗ್ಗೆ ವಿಶೇಷ ಒಲವು ತೋರುವುದಾಗಲಿ ತಾರತಮ್ಯ ನೀತಿಯಾಗುತ್ತದೆ. ಸರಕಾರ ಅಲ್ಪಸಂಖ್ಯಾತ ಸಮುದಾಯಗಳ ಬಗ್ಗೆ ಅತಿಮುದ್ದು ಧೋರಣೆ ತಳೆದಾಗ

ಬಹುಸಂಖ್ಯಾತರಿಗೆ ಧರ್ಮನಿರಪೇಕ್ಷತೆಯ ಕುರಿತು ಅನುಮಾನ ಮೂಡುತ್ತದೆ. ಅವರು ಅಸಹನೆ ಹಾಗೂ ವಿರೋಧ ವ್ಯಕ್ತಪಡಿಸುತ್ತಾರೆ. ಈ ದೇಶದಲ್ಲಂತೂ ಇಂತಹ ಅಸಹನೆಗೆ ಆಧಾರವೂ ಇದೆ. ಪತ್ರಕರ್ತೆ ತವ್‌ಲೀನ್ ಸಿಂಗ್ ನೀಡುವ ಈ ಉದಾಹರಣೆಯನ್ನು ಗಮನಿಸಿ: "ಶ್ರೀನಗರದ ಮಸೀದಿಯೊಂದರಲ್ಲಿದ್ದ ಸ್ಮಾರಕ (ಇದು ಪ್ರವಾದಿ ಮಹಮ್ಮದ್ ಪೈಗಂಬರರವರ ಒಂದು ಕೂದಲು ಎನ್ನಲಾಗಿದೆ) ಮಸೀದಿಯಿಂದ ನಾಪತ್ತೆಯಾದಾಗ ಆ ಕಾರಣಕ್ಕಾಗಿ ನಡೆದ ಹಿಂಸೆಯನ್ನು ಯಾರೂ ಪ್ರಶ್ನಿಸಲಿಲ್ಲ. ಅಥವಾ ಪ್ರತಿಯೊಬ್ಬರೂ ಯಾವುದನ್ನು ಸ್ಮಾರಕ ಎಂದು ತಿಳಿದಿದ್ದರೋ, ಕಾಣೆಯಾದದ್ದು ಅದೇ ಸ್ಮಾರಕವೆಂದು ನ್ಯಾಯಾಲಯದಲ್ಲಿ ಸಾಬೀತುಪಡಿಸುವಂತೆ ಸರಕಾರ ಹೇಳಲೂ ಇಲ್ಲ. ಆದರೆ ಅದೇ ಸರಕಾರ ರಾಮ ಹುಟ್ಟಿದ ಜಾಗದ ವಿಷಯದಲ್ಲಿ ಹಿಂದುಗಳು ನ್ಯಾಯಾಲಯದ ತೀರ್ಪನ್ನು ಒಪ್ಪಬೇಕೆನ್ನುತ್ತದೆ." ಇಂಥ ಸಂದರ್ಭದಲ್ಲಿ ಸರಕಾರದ ಧರ್ಮನಿರಪೇಕ್ಷತೆ ಜನರಿಗೆ ಹುಸಿ ಧರ್ಮನಿರಪೇಕ್ಷತೆಯಾಗಿ ಕಾಣುತ್ತದೆ. "ಸರಕಾರದಿಂದ ಸಹಾಯಧನ ಪಡೆಯುವ ಅನುದಾನಿತ ಶಾಲೆಗಳು ಹಿಂದೂ ಧಾರ್ಮಿಕ ಗ್ರಂಥಗಳನ್ನು ಬೋಧಿಸುವಂತಿಲ್ಲ. ಆದರೆ ಇಸ್ಲಾಮ್ ಬೋಧನೆ ಪಾಠಪಟ್ಟಿಯ ಅಂಗವಾಗಿರುವ ಮುಸ್ಲಿಂ ಶಾಲೆಗಳಿಗೆ ಸರಕಾರದ ಸಹಾಯಧನ ಸಿಗುತ್ತದೆ". ಅಥವಾ ಸರಕಾರದಿಂದ ಸಂಪೂರ್ಣ ಅನುದಾನ ಪಡೆಯುವ ಅಲ್ಪಸಂಖ್ಯಾತ ಸಮುದಾಯಗಳು ನಡೆಸುವ ಶಿಕ್ಷಣ ಸಂಸ್ಥೆಗಳು ಸಿಬಂದಿಯ ನೇಮಕಾತಿ, ಭಡ್ತಿ ಇತ್ಯಾದಿ ವಿಷಯಗಳಲ್ಲಿ ಬಹುಸಂಖ್ಯಾತರು ನಡೆಸುವ ಶಿಕ್ಷಣ ಸಂಸ್ಥೆಗಳು ಪಾಲಿಸಬೇಕಾದ ಸರಕಾರದ ನಿಯಮಗಳನ್ನು ಪಾಲಿಸಬೇಕಾಗಿಲ್ಲವೆಂದರೆ . . ತಾನು ಧರ್ಮನಿರಪೇಕ್ಷತೆಗೆ ಬದ್ಧವೆನ್ನುವ ಸರಕಾರವನ್ನು ಜನ ನಂಬುವುದಿಲ್ಲ.

ಅಲ್ಪಸಂಖ್ಯಾತರನ್ನು ಖುಶಿಪಡಿಸಿ ಅವರ ಮತಗಳನ್ನು ಬಗಲಿಗೆ ಹಾಕಿಕೊಳ್ಳುವ ರಾಜಕೀಯ ಆಟ ನಡೆಯುತ್ತಲೇ ಬಂದಿದೆ. ಅಯೋಧ್ಯೆಯ ವಿವಾದಗ್ರಸ್ತ ಭೂಮಿಯನ್ನು ಸರಕಾರವೇ ವಶಪಡಿಸಿಕೊಳ್ಳುವ ಆಧ್ಯಾದೇಶ ಎಷ್ಟು ದಿಢೀರಾಗಿ ಹೊರಬಿತ್ತೋ ಅಷ್ಟೇ ದಿಢೀರಾಗಿ ಸರಕಾರ ಆ ಆಧ್ಯಾದೇಶವನ್ನು ಹಿಂತೆಗೆದುಕೊಂಡಿತು. ಸರಕಾರದ ಇಂತಹ ಒಂದು ಕ್ರಮವನ್ನು ಒಂದು ಕೋಮಿನ ಒತ್ತಡಕ್ಕೆ ಸರಕಾರದ ಶರಣಾಗತಿಯೆಂದು ಬಹುಸಂಖ್ಯಾತರು ತಿಳಿಯುತ್ತಾರೆ.

ಪಾಬಾನೊ ಪ್ರಕರಣದಲ್ಲಿ ಸರಕಾರ ಮುಸ್ಲಿಮರ ಒತ್ತಡಕ್ಕೆ ಮಣಿದದ್ದು ಹಿಂದುಗಳ ಮನಸ್ಸಿನಲ್ಲಿ ಶಂಕೆ ಮೂಡಿಸಿತು. ಯಾವುದೇ ಸರಕಾರ ಮತೀಯ ಮೂಲಭೂತವಾದಿಗಳಿಗೆ ಶರಣಾಗುವುದೆಂದರೆ ಅದು ಧರ್ಮನಿರಪೇಕ್ಷತೆಗೆ ನೀಡುವ ಹೊಡೆತವೇ ಆಗುತ್ತದೆ.

ಸರಕಾರದ ಇಂತಹ ಕ್ರಮಗಳು ಧರ್ಮ ನಿರಪೇಕ್ಷತೆಯ ತತ್ವದಲ್ಲಿ ಜನರಿಗಿರುವ ನಂಬಿಕೆಯನ್ನು ಅಲ್ಲಾಡಿಸುತ್ತವೆ. ಸೆಕ್ಯುಲರಿಸಂ ಈ ದೇಶದಲ್ಲಿ ಸೋಲುತ್ತಿದೆಯೆಂದು ಅನ್ನಿಸುವಂತೆ ಮಾಡುತ್ತವೆ. ಆದರೆ ಇದು ಸಿದ್ಧಾಂತದ ತತ್ವದ ತಪ್ಪಲ್ಲ. ಸೆಕ್ಯುಲರಿಸಂ ತತ್ವವನ್ನು ರಾಜಕೀಯ ಲಾಭದ ದೃಷ್ಟಿಯಿಂದ ಅನುಷ್ಠಾನಗೊಳಿಸಿದ ಸ್ವತಂತ್ರ ಭಾರತದ ಜನನಾಯಕರ ತಪ್ಪು. ಎಲ್ಲ ಸೆಕ್ಯುಲರ್ ಶಕ್ತಿಗಳು ಸೇರಿ ಈ ತಪ್ಪನ್ನು ಸರಿಪಡಿಸಲು ಪ್ರಯತ್ನಿಸಬೇಕೇ ಹೊರತು ಸೆಕ್ಯುಲರಿಸಂ ತತ್ವಕ್ಕೇ ವಿದಾಯ ಹೇಳಕೂಡದು ಯಾಕೆಂದರೆ ಇಂಡಿಯಾ ಸೆಕ್ಯುಲರ್ ರಾಷ್ಟ್ರವಾಗಿ ಉಳಿಯದೇ ಇದ್ದಲ್ಲಿ ಹರಿಹಂಚಾಗುತ್ತದೆ. ಸಿಖ್ ರಾಷ್ಟ್ರ, ಬೋಡೋ ರಾಷ್ಟ್ರ, ಸವರ್ಣ ರಾಷ್ಟ್ರ ಇತ್ಯಾದಿ ಹಲವು ರಾಷ್ಟ್ರಗಳಾಗಬಹುದು. ಸೆಕ್ಯುಲರಿಸಮ್ಮಿಗೆ ಹೇಳುವ ವಿದಾಯ ರಾಷ್ಟ್ರೀಯ ದುರಂತಕ್ಕೆ ಆಮಂತ್ರಣವಾದೀತು. ಯಾಕೆಂದರೆ ಒಂದು 'ಪ್ಲೂರಲಿಸ್ಟ್' ಸಮಾಜವಾಗಿರುವ ಭಾರತಕ್ಕೆ ಸಹಬಾಳ್ವೆಯ ಹೊರತು ಅನ್ಯ ಮಾರ್ಗವಿಲ್ಲ.

ಸೆಕ್ಯುಲರಿಸಂ ಕೇವಲ ಮತಧರ್ಮಗಳಿಗಷ್ಟೇ ಅಲ್ಲ. ಸಂಸ್ಕೃತಿ ಹಾಗೂ ಭಾಷೆಗಳಿಗೆ ಕೂಡ ಅನ್ವಯವಾಗುವ, ಅನ್ವಯವಾಗಬೇಕಾದ ವಿಷಯ. ಬಹುಸಂಖ್ಯಾತರ ಧರ್ಮ ರಾಷ್ಟ್ರೀಯ ಧರ್ಮವೆಂದು ಘೋಷಿಸುವುದು ಹೇಗೆ ಸೆಕ್ಯುಲರಿಸಂನ ಆಶಯಕ್ಕೆ ವಿರುದ್ದವೋ ಬಹುಸಂಖ್ಯಾತರ ಭಾಷೆ (ಹಿಂದಿ)ಯನ್ನು ರಾಷ್ಟ್ರಭಾಷೆ ಎಂದು ಹೇಳುವುದು ಕೂಡ ಸೆಕ್ಯುಲರ್ ಧೋರಣೆಗೆ ವಿರುದ್ಧ. ಧರ್ಮಾಂಧತೆ ಎಷ್ಟು ನೇತ್ಯಾತ್ಮಕವೋ ಬಹುರೂಪೀ ಸಮಾಜವೊಂದರಲ್ಲಿ ಭಾಷಾಂಧತೆ ಕೂಡ ಅಷ್ಟೇ ನೇತ್ಯಾತ್ಮಕ. ಇವೆರದು ಅಂಧತೆಗಳಲ್ಲಿ ಪ್ರತಿಯೊಂದು ಅಂಧತೆಯೂ ಅಲ್ಪಸಂಖ್ಯಾತರನ್ನು ಸಹುಸಂಖ್ಯಾತರಿಂದ ಪ್ರತ್ಯೇಕಿಸುತ್ತದೆ. ಸಾಮಾಜಿಕ ಗೋಡೆಗಳನ್ನು ನಿರ್ಮಿಸುತ್ತದೆ; ಕೋಮುವಾದಕ್ಕೆ ಕುಮ್ಮಕ್ಕು ನೀಡುತ್ತದೆ.

ಬ್ರಿಟಿಷರು ಕೋಮುವಾದವನ್ನು ಪ್ರೋತ್ಸಾಹಿಸಿ ಬೆಳೆಸುವುದಕ್ಕೆ ರಾಜಕೀಯ ಕಾರಣಗಳಿದ್ದವು. ಭಾರತದ ಜನರು ತಮ್ಮ ತಮ್ಮ ಜಾತಿ ಮತ-ಧರ್ಮಗಳಿಗೆ ನಿಷ್ಠರಾಗಿರುವುದು ಬ್ರಿಟಿಷರ 'ಒಡೆದು

ಆಳುವ' ನೀತಿಗೆ ಸಹಕಾರಿ ಯಾಗಿತ್ತು. ಇಂಥ ನಿಷ್ಠೆ ದೇಶದ ಜನತೆ ಒಂದು ರಾಷ್ಟ್ರವಾಗಿ ರೂಪುಗೊಳ್ಳದಂತೆ ತಡೆದು ಜನರು ತಮ್ಮತಮ್ಮಲ್ಲೆ ಜಾತಿ–ಮತ–ಧರ್ಮಗಳ ಕಾರಣಕ್ಕಾಗಿ ಕಚ್ಚಾಡುವಂತೆ ಮಾಡಿ ಎಲ್ಲರೂ ಪರಕೀಯವಾದ ಬ್ರಿಟಿಷ್ ಸರಕಾರಕ್ಕೆ ನಿಷ್ಠೆ ತೋರುವಂತೆ ಮಾಡಿತು. ರಾಜಕೀಯವಾಗಿ ಬ್ರಿಟಿಷರು ಬಲಿಷ್ಠರಾಗುವಂತೆ ಮಾಡಿತು.

ಆದರೆ ಸ್ವತಂತ್ರ ಭಾರತದಲ್ಲಿ ಕೂಡ ರಾಜಕೀಯ ಪಕ್ಷಗಳು ಕೋಮುವಾದಕ್ಕೆ ಬೇರೆ ಬೇರೆ ಹಂತಗಳಲ್ಲಿ ಪ್ರೋತ್ಸಾಹ ನೀಡಿದ್ದು ಹಾಗೂ ಮತೀಯ ಮೂಲಭೂತಗಳವಾದಿಗಳನ್ನು ಖುಶಿಪಡಿಸಿದ್ದು ರಾಜಕೀಯ ಕಾರಣಕ್ಕಾಗಿ, ರಾಜಕೀಯ ಅಧಿಕಾರ ಪಡೆಯುವುದಕ್ಕಾಗಿ ಎನ್ನುವುದು ಇತಿಹಾಸದ ಒಂದು ವ್ಯಂಗ್ಯ ಮತ್ತು ಇಂತಹ ತುಷ್ಟೀಕರಣದಿಂದ ತಮ್ಮ ಸಮುದಾಯ ನಿಜವಾದ ಆರ್ಥಿಕ ಸಾಮಾಜಿಕ ಸವಲತ್ತುಗಳನ್ನು, ಶಿಕ್ಷಣ ಹಾಗೂ ನೌಕರಿಯ ಅವಕಾಶಗಳನ್ನು ಪಡೆಯಲಾರದೆಂಬುದನ್ನು ಮತೀಯ ಮೂಲಭೂತವಾದಿಗಳು ಮನಗಾಣದೆ ಹೋದದ್ದು ಆಯಾ ಸಮುದಾಯಗಳಿಗೆ ಸೇರಿದ ಜನಸಾಮಾನ್ಯರ ಪಾಲಿನ ದುರಂತ. ಒಂದು ಸಮುದಾಯದ ನಾಯಕನಿಗೆ ರಾಷ್ಟ್ರದ ಅತ್ಯುನ್ನತ ಪ್ರಶಸ್ತಿ ನೀಡುವುದರಿಮದ ಅಥವಾ ಆತನ ಭಾವಚಿತ್ರವನ್ನು ರಾಜಧಾನಿಯಲ್ಲಿ ಅನಾವರಣಗೊಳಿಸುವುದರಿಂದ ಅಥವಾ ಆತನ ಜನ್ಮದಿನವನ್ನು ರಾಷ್ಟ್ರೀಯ ರಜಾ ದಿನವೆಂದು ಘೋಷಿಸುವುದರಿಂದ ದೇಶದಲ್ಲಿ ಹೆಚ್ಚು ನೌಕರಿಗಳನ್ನು ಸೃಷ್ಟಿಸಿದಂತಾಗುವುದಿಲ್ಲ; ಆ ಸಮುದಾಯದ ಬಡವರ ಸ್ಥಿತಿಯನ್ನು ಸುಧಾರಿಸಿದಂತಾಗುವುದಿಲ್ಲ. ಇಂತಹ ಕ್ರಮಗಳೆಲ್ಲ ಪೈಸೆ ಖರ್ಚಿಲ್ಲದೆ ಮಾಡಬಹುದಾದ ತುಷ್ಟೀಕರಣ ಸತ್ರಗಳು ಮತ್ತು ಇಂತಹ ಸತ್ರಗಳಲ್ಲಿ ತೊಡಗುವ ರಾಜಕೀಯ ಪಕ್ಷಗಳನ್ನು ಮತದಾರರು ಬಹಿಷ್ಕರಿಸಿದಾಗ ಮಾತ್ರ ರಾಜಕೀಯದ ಕೋಮುಗೊಳಿಸುವಿಕೆಯನ್ನು ಕೊನೆಗೊಳಿಸಬಹುದು.

ಯಾಕೆಂದರೆ ಸೆಕ್ಯುಲರ್ ವಾದಿಗಳಷ್ಟೇ ಕೋಮುವಾದದ ವಿರುದ್ಧ ಸಮರ್ಥ ಹೋರಾಟ ನೀಡಲಾರರು. ಕೋಮು ನೆಲೆಯಲ್ಲಿ ತಮ್ಮನ್ನು ಖುಶಿಪಡಿಸುವ ಪ್ರಯತ್ನ ನಡೆಯುತ್ತಿದೆ. ಇದೊಂದು ತೇಪೆ ಹಾಕುವ ಕಾರ್ಯಕ್ರಮವೇ ಹೊರತು ತಮ್ಮ ಬಗ್ಗೆ ನಿಜವಾದ ಕಾಳಜಿ ಇಲ್ಲ ಎಂಬುದನ್ನರಿತು ಪ್ರತಿಯೊಂದು ಕೋಮಿಗೆ, ಮತಕ್ಕೆ ಸೇರಿದ ಜನರು ತುಷ್ಟೀಕರಣ ರಾಜಕೀಯದ ವಿರುದ್ಧ ದನಿಯೆತ್ತಿದಾಗ ಮಾತ್ರ ಕೋಮು ರಾಜಕಾರಣಿಗಳು ಜಾಗ ಖಾಲಿ ಮಾಡುತ್ತಾರೆ. ಆಗ

ಮಾತ್ರ ಜನರನ್ನು ಕೋಮುಗೊಳಿಸುವ, ಕಮ್ಯೂನಲೈಸ್ ಮಾಡುವ ಎಲ್ಲ ತಂತ್ರಗಳನ್ನು ವಿಫಲಗೊಳಿಸುವುದು ಸಾಧ್ಯ.

ಹಿಂದೂ ಧರ್ಮವನ್ನು ನಾನಾ ರೀತಿಗಳಲ್ಲಿ ಅರ್ಥೈಸಬಹುದಾದ್ದರಿಂದ ಕೋಮುವಾದಿಗಳು ಕೋಮುವಾದಕ್ಕೆ ಕೂಡ ಧಾರ್ಮಿಕ ಸಮರ್ಥನೆ (ದುಷ್ಟರ ವಿನಾಶ ಶಿಷ್ಟರ ರಕ್ಷಣೆ, ಧರ್ಮ ಗ್ಲಾನಿ ಇತ್ಯಾದಿ) ನೀಡಬಹುದು. ತಮ್ಮದು ಧರ್ಮ ಯುದ್ಧ ಎನ್ನಬಹುದು. ಆದರೆ ಯಾವುದೇ ಯುದ್ಧದ ಉದ್ದೇಶ ಅಂತಿಮವಾಗಿ ಹಿಂಸೆಯೇ ಆದ್ದರಿಂದ ಮತ್ತು ಕೋಮು ಹಿಂಸೆಯ ಹೆಚ್ಚಳ ಧರ್ಮನಿರಪೇಕ್ಷತೆ ಸೋಲುತ್ತಿರುವುದರ ಚಿಹ್ನೆಯಾದ್ದರಿಂದ ಈ ಸೋಲನ್ನು ತಡೆಯಬೇಕಾದರೆ ಮೊತ್ತಮೊದಲಾಗಿ ಕೋಮು ಭಾವನೆಯನ್ನು, ಸಮಾಜದ ಕೋಮುಗೊಳಿಸುವಿಕೆ (communalisation) ಯನ್ನು ತಡೆಯಬೇಕು. ಇದು ಕೇವಲ ಸೆಕ್ಯುಲರ್‌ವಾದಿಗಳ ಅಥವಾ ಬುದ್ಧಿಜೀವಿಗಳ ಪ್ರಯತ್ನದಿಮದ ಸಾಧ್ಯವಾಗುವುದಿಲ್ಲ. ಸೆಕ್ಯುಲರಿಸಂ ಸೋಲಿನ ಕಡೆಗೆ ಧಾವಿಸುವುದನ್ನು ತಡೆಯಬೇಕಾದರೆ ಸಮಾಜದ ಎಲ್ಲ ವರ್ಗಗಳು, ಎಲ್ಲ ಸಮುದಾಯಗಳು ರಾಜಕಾರಣಿಗಳ ಕೋಮು ಷಡ್ಯಂತ್ರಗಳನ್ನು ಮತ್ತು ಮತೀಯವಾದಿ ನಾಯಕರ ಕೋಮು ಸಂಚುಗಳನ್ನು ಗುರುತಿಸುವುದರ ಜತೆಗೆ ತಾವು ಎಲ್ಲೆಲ್ಲಿ ಕೋಮು ನೆಲೆಯಲ್ಲಿ ಯೋಚಿಸುತ್ತಿದ್ದೇವೆ. ಕಮ್ಯೂನಲ್ ಆಗುತ್ತಿದ್ದೇವೆ ಎಂಬುದನ್ನು ಮನಗಾಣಬೇಕು. ಕೋಮು ನೆಲೆಯಲ್ಲಿ ಯೋಚಿಸುವುದಕ್ಕೆ ಪ್ರತಿಯೊಬ್ಬನೂ ವಿದಾಯ ಹೇಳಿದಾಗ ಮಾತ್ರ ಸೆಕ್ಯುಲರಿಸಂ ಸೋಲದಂತೆ ತಡೆಯಬಹುದು.

**ಕೋಮುಗಲಭೆಗಳ ತಡೆಯುವಿಕೆ ಹಾಗೂ ಕೋಮು ಸಾಮರಸ್ಯದಲ್ಲಿ ಮಹಿಳೆಯರ ಪಾತ್ರ**

ಯಾವುದೋ ಒಂದು ಕ್ಷುಲ್ಲಕ ಕಾರಣಕ್ಕಾಗಿ ('ಅನ್ಯಕೋಮಿ'ನ ಹುಡುಗಿಯನ್ನು ಚುಡಾಯಿಸುವುದು) ಅಥವಾ ಯಾರೋ ಕಿಡಿಗೇಡಿಗಳು ಮಾಡಿದ ಕೃತ್ಯದಿಂದಾಗಿ (ಹಿಂದೂ ಪೂಜಾ ಸ್ಥಳದಲ್ಲಿ ಹಸುವಿನ ಬಾಲ, ಮುಸ್ಲಿಮರಿಗೆ ಪವಿತ್ರವಾದ ಸ್ಥಳದಲ್ಲಿ ಹಂದಿಯ ಮಾಂಸ ಎಸೆಯುವುದು) ಆರಂಭಗೊಳ್ಳುವ ಕೋಮು ಘರ್ಷಣೆ ಕೇರಿಯಿಂದ ಕೇರಿಗೆ, ಊರಿನಿಂದ ಊರಿಗೆ ಹರಡುವುದು ವದಂತಿಗಳನ್ನು ಮುಖೇನ/ಮೊಬೈಲ್ ಮೂಲಕ ಹರಡುವ ಮೂಲಕ. ಅಥವಾ ಈಗೀಗ ಸ್ಥಳೀಯ ಟಿವಿ ಚ್ಯಾನೆಲ್‌ಗಳು ಪ್ರಚೋದನಕಾರಿಯಾಗಿ ವರದಿಗಳನ್ನು ಮಾಡುತ್ತ ಒಂದು ಸಮುದಾಯದ ಸದಸ್ಯರನ್ನು ಕೆರಳಿಸುವಂತಹ ದೃಶ್ಯ (ವಿಶುವಲ್ಸ್)ಗಳನ್ನು ಟಿವಿಯಲ್ಲಿ ಪ್ರಸಾರ ಮಾಡುವ ಮೂಲಕ. ಇಂತಹ ಸಂದರ್ಭಗಳಲ್ಲಿ ಮನೆಯ <u>ಒಳಗೆ</u> ಇರುವ ಗಂಡಸರು ಮನೆಯ <u>ಹೊರಗೆ</u> ಹೋಗದಂತೆ ಮನೆಯಲ್ಲಿರುವ ಮಹಿಳೆಯರು, ಸ್ವತಃ ಭಾವೋದ್ವೇಗಕ್ಕೊಳಗಾಗದೆ, ಪುರುಷರನ್ನು ತಡೆಯುವ ಮೂಲಕ ಗಲಭೆ ಹರಡದಂತೆ ತಡೆಯಬಹುದು.

ಹಾಗೆಯೇ ಮನೆಯಲ್ಲಿ ಗಂಡಸರು ಕೋಮುದ್ವೇಷದ ಮಾತುಗಳನ್ನಾಡುವಾಗ ಮಹಿಳೆಯರು ಮಧ್ಯಪ್ರವೇಶಿಸಿ ವಿವೇಕದ, ತಿಳಿವಳಿಕೆಯ ಮಾತುಗಳನ್ನಾಡುವ ಮೂಲಕ ಗಂಡಸರನ್ನು ಸಮಾಧಾನಪಡಿಸಲು ಪ್ರಯತ್ನಿಸಬೇಕು. 'ಗಲಭೆಯಾದಾಗ, ಯಾವುದೇ ಕೋಮುಹಿಂಸೆ ಸಂಭವಿಸಿದಾಗ ಅಂತಿಮವಾಗಿ ಅತ್ಯಂತ ಹೆಚ್ಚು ಸಂಕಷ್ಟಕ್ಕೊಳಗಾಗುವವರು ನಾವು ಮನೆಯ ಹೆಂಗಸರು, ಮತ್ತು ಮಕ್ಕಳು. ನೀವು ಗಲಭೆಯಲ್ಲಿ ಗಾಯಗೊಂಡು ಆಸ್ಪತ್ರೆಗೆ ಸೇರಿದರೆ, ಅಥವಾ ಗೋಲಿಬಾರಿನಲ್ಲಿ ಸತ್ತರೆ ಕುಟುಂಬದ ಹೊಣೆ, ಹೊರೆ ಹೊರಬೇಕಾದವರು ನಾವು, ಮನೆಯ ಹೆಂಗಸರು ಎಂಬ ಅಂಶವನ್ನು ಮಹಿಳೆಯರು ಪುರುಷರಿಗೆ ಮನದಟ್ಟು ಮಾಡಿಸಬೇಕು.

ಆಗಿಂದಾಗ್ಯೆ, ಸ್ಥಳೀಯ ಮಟ್ಟದಲ್ಲಿ, ಮಹಿಳಾ ಸಂಘಟನೆಗಳು ತಮ್ಮ ಸದಸ್ಯರ ಸಭೆ ಕರೆದು ಕೋಮು ಸಾಮರಸ್ಯದ ಕುರಿತು ಚರ್ಚೆ, ಗೋಷ್ಠಿ, ಕಮ್ಮಟಗಳನ್ನು ನಡೆಸಬಹುದು.

'ಕೋಮುಸಾಮರಸ್ಯ ಕಾಪಾಡುವುದರಲ್ಲಿ ಮಹಿಳೆಯರ ಪಾತ್ರ' ಎಂಬ ವಿಷಯದ ಕುರಿತು ಸ್ಥಳೀಯ ಶಾಲೆ ಕಾಲೇಜುಗಳ ವಿದ್ಯಾರ್ಥಿಗಳಿಗೆ ಪ್ರಬಂಧ ಸ್ಪರ್ಧೆ, ಭಾಷಣ ಸ್ಪರ್ಧೆ ಹಾಗೂ

ಚರ್ಚಾಕೂಟಗಳನ್ನು ಏರ್ಪಡಿಸುವ ಮೂಲಕ, ಕೋಮು ಸಾಮರಸ್ಯ ಅಭಿಯಾನಗಳನ್ನು ಹಮ್ಮಿಕೊಳ್ಳುವುದರ ಮೂಲಕ ಕೋಮುಸಾಮರಸ್ಯಕ್ಕೆ ಸಂಬಂಧಿಸಿ ಮಹಿಳೆಯರಲ್ಲಿ ಎಚ್ಚರ, ಜಾಗೃತಿ ಮೂಡಿಸಬೇಕು.

ತಮ್ಮ ಊರಿನಲ್ಲಿ ಈ ಹಿಂದೆ ಕೋಮು ಗಲಭೆ ನಡೆದಿದ್ದಲ್ಲಿ ಆಗ ಅನ್ಯಮತೀಯ ಬಂಧುಗಳ ಪ್ರಾಣ ರಕ್ಷಿಸಿದ ಮಹಿಳೆಯರ ಸಾಧನೆಯನ್ನು ಗುರುತಿಸಿ ಅವರನ್ನು ಸಾರ್ವಜನಿಕವಾಗಿ ಅಭಿನಂದಿಸುವ, ಸನ್ಮಾನಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವ ಮೂಲಕವೂ ಮಹಿಳೆಯರು ಕೋಮುಸಾಮರಸ್ಯದ ಮಹತ್ವದ ಬಗ್ಗೆ ಯುವತಿಯರಲ್ಲಿ ಎಚ್ಚರ ಉಂಟುಮಾಡಲು ಸಾಧ್ಯ.

ಖಾಸಗಿ ಮಾತುಕತೆಗಳಲ್ಲಿ ಮಹಿಳೆಯೊಬ್ಬಳು ಕೋಮುವಾದಕ್ಕೆ ಕುಮ್ಮಕ್ಕು ಕೊಡುವ, ಕೋಮುದ್ವೇಷ ಹರಡಲು ನೆರವಾಗುವ ಮಾತುಗಳನ್ನಾಡುತ್ತಿದ್ದರೆ ಆಕೆಯನ್ನು ತಡೆದು ಸವಿಯಾದ ಒತ್ತಾಯದ ಮೂಲಕ ಆಕೆಗೆ ನಿಜವಿಷಯವನ್ನು ತಿಳಿಸಿ ವಾತಾವರಣವನ್ನು ತಿಳಿಗೊಳಿಸಲು ಪ್ರಯತ್ನಿಸುವ ಮೂಲಕವೂ ಸಮಾಜದಲ್ಲಿ ಕೋಮು ಸಾಮರಸ್ಯ ಕಾಪಾಡುವಲ್ಲಿ ಮಹಿಳೆಯರು ನಿರ್ಣಾಯಕ ಪಾತ್ರ ವಹಿಸಬಲ್ಲರು.

# ಅಧ್ಯಾಯ ಆರು

# ಕೋಮುಸಾಮರಸ್ಯದಲ್ಲಿ ಮಾನವೀಯ ಮೌಲ್ಯಗಳು

## ಪೀಠಿಕೆ

ಕರ್ನಾಟಕದ ಶಿಕ್ಷಣ ಕ್ರಮದಲ್ಲಿ ಬಳಕೆಯಾದ, ಬಳಕೆಯಾಗುತ್ತಿರುವ ಭಾಷೆ, ಸಾಹಿತ್ಯ ಮತ್ತು ಇತಿಹಾಸದ ಪಠ್ಯಗಳ ಕೆಲವು ಭಾಗಗಳ ಸೂಚ್ಯಾರ್ಥ, ಇಂಗಿತಗಳು, ಅವುಗಳ ಆಳದಲ್ಲಿ ಅವು ಸ್ಫುರಿಸಬಹುದಾದ ಅರ್ಥವನ್ನು ಶೋಧಿಸಿ ಮಹಿಳೆಯರ ಸ್ಥಾನಮನ ಹಾಗೂ ಅವರು ಕೋಮುಸಾಮರಸ್ಯ ಕಾಪಾಡಲು ಹೇಗೆ ನೆರವಾಗಬಹುದೆಂದು ತಿಳಿಯುವ ಉದ್ದೇಶದ ಅಧ್ಯಯನದ ಈ ಅಧ್ಯಾಯದಲ್ಲಿ ಕೋಮು ಸಾಮರಸ್ಯಕ್ಕಾಗಿ ಮಾನವೀಯ ಮೌಲ್ಯಗಳನ್ನು ಶಿಕ್ಷಣದಲ್ಲಿ ಹೇಗೆ ಅಳವಡಿಸಿಕೊಳ್ಳಬಹುದು, ಕೋಮುಸಾರಸ್ಯ ಕಾಪಾಡುವುದರಲ್ಲಿ ಮಾನವೀಯ ಮೌಲ್ಯಗಳ ಪಾತ್ರವೇನು, ನೀತಿ ಶಿಕ್ಷಣ ಹಾಗೂ ಮೌಲ್ಯ ಶಿಕ್ಷಣದ ಮಹತ್ವ ಹಾಗೂ ಇತಿಮಿತಿಗಳೇನು? ಎಂಬುದನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ. ಅಲ್ಲದೆ, ಮೌಲ್ಯಗಳ ಆಕೃತೀಕರಣದಲ್ಲಿ ಪಠ್ಯಪುಸ್ತಕಗಳ ಬಳಕೆ, ಸಮೂಹ ನಿಯಂತ್ರಿತ ಯೋಚನಾ ವಿಧಾನದ ಅ-ಸಾಂಸ್ಥೀಕರಣ, ಈ ಅ-ಸಾಂಸ್ಥೀಕರಣದಲ್ಲಿ ಮಹಿಳೆಯರು ವಹಿಸಬಹುದಾದ ಪಾತ್ರ ಮತ್ತು ಕೋಮು ಸಾಮರಸ್ಯಕ್ಕೆ ಸಂಬಂಧಿಸಿ ಶಿಕ್ಷಕರ ಸೂಕ್ಷ್ಮಗ್ರಾಹೀಕರಣದ ಅವಶ್ಯಕತೆಯನ್ನು ಕೂಡ ಚರ್ಚಿಸಲಾಗಿದೆ. ಜತೆಗೆ, ಸಮಾಜದಲ್ಲಿ ಕೋಮು ಸಾಮರಸ್ಯ ಕಾಪಾಡುವ ದೃಷ್ಟಿಯಿಂದ ಗಾಂಧೀಜಿಯವರ ವಿಚಾರಗಳನ್ನು ಆಧರಿಸಿ ಶಾಂತಿಶಿಕ್ಷಣದ ಒಂದು ಕೋರ್ಸನ್ನು ತಯಾರಿಸಲು ಸಾಧ್ಯವಾಗಬಹುದೆ? ಆಗಬಹುದಾದಲ್ಲಿ ಆ ಕೋರ್ಸ್‌ನ ಒಂದು ಮಾದರಿ ಪಠ್ಯ ಹೇಗಿರಬೇಕು? ಎಂದು ವಿವೇಚಿಸಲಾಗಿದೆ.

## ಶಿಕ್ಷಣದ ಗುರಿಗಳು

ಸಾಮಾನ್ಯವಾಗಿ ಶಿಕ್ಷಣವೆಂದರೆ ಓದಲು ಬರೆಯಲು ಕಲಿಯುವುದು ಹಾಗೂ ಕಲಿಸುವುದು. ಹೊಟ್ಟೆಪಾಡಿಗೆ ಏನಾದರೂ ಒಂದು ದಾರಿ ಹುಡುಕಿ ಕೊಡುವುದು ಅಥವಾ ದಾರಿ ಹುಡುಕಲು ಹೇಳಿಕೊಡುವುದು ಎಂದು ತಿಳಿಯಲಾಗುತ್ತದೆ. ಶಿಕ್ಷಣದ ಉದ್ದೇಶ ಇಷ್ಟೇ ಅಲ್ಲ; ಅದು

ಮನುಷ್ಯನನ್ನು ನಾಗರಿಕನನ್ನಾಗಿಸಿ, ನಾಗರಿಕನನ್ನಾಗಿಯೇ ಉಳಿಸಿ, ಸಮಾಜದಲ್ಲಿ ಆತ ಶಾಂತಿ-ಸಾಮರಸ್ಯ, ಕೋಮು ಸೌಹಾರ್ದ, ಕೋಮುಸಾಮರಸ್ಯ ಕಾಯ್ದುಕೊಳ್ಳುವ ಹಾಗೆ ನೋಡಿಕೊಳ್ಳುವ ಒಂದು ಪ್ರಕ್ರಿಯೆಯಾಗಬೇಕು. ಮನುಷ್ಯನನ್ನು ಮಾನವೀಯ (humane)ವಾಗಿ ಉಳಿಸುವುದು ಶಿಕ್ಷಣದ ಮುಖ್ಯ ಗುರಿಯಾಗಬೇಕು.

## ಮೌಲ್ಯಗಳ ವ್ಯಾಖ್ಯಾನ

ಮೌಲ್ಯ ಎನ್ನುವುದರ ಅಕ್ಷರಶಃ ಅರ್ಥ: ಯಾವುದಕ್ಕೆ ಒಂದು ಬೆಲೆ (price) ಇದೆಯೋ, ಯಾವುದು ಅಮೂಲ್ಯವೋ, ಪ್ರೀತಿಪಾತ್ರವೋ ಮತ್ತು ಯೋಗ್ಯ (worthwhile)ವೋ, ಮತ್ತು ಆದ್ದರಿಂದ ಯಾವುದಕ್ಕಾಗಿ ವ್ಯಕ್ತಿಯೊಬ್ಬ ಯಾತನೆಗೊಳಗಾಗಲು ಮತ್ತು ತ್ಯಾಗ ಮಾಡಲು ಸಿದ್ಧನಿರುತ್ತಾನೋ ಅದು ಮೌಲ್ಯ. ಬೇರೆ ಮಾತುಗಳಲ್ಲಿ ಹೇಳುವುದಾದರೆ ತತ್ವಗಳ ಒಂದು ಮೊತ್ತ (set) ಅಥವಾ ವರ್ತನೆಯ ಮಾನದಂಡ (standards)ಗಳೇ ಮೌಲ್ಯಗಳು. ಮೌಲ್ಯಗಳು ವ್ಯಕ್ತಿಯೊಬ್ಬನ/ಳ ವೈಯಕ್ತಿಕ ಮನೋಧರ್ಮಗಳನ್ನು ಹಾಗೂ ತೀರ್ಮಾನ (judgements) ಗಳನ್ನು, ನಿರ್ಧಾರಗಳನ್ನು ಹಾಗೂ ಆಯ್ಕೆಗಳನ್ನು, ವರ್ತನೆ ಹಾಗೂ ಸಂಬಂಧಗಳನ್ನು, ಕನಸುಗಳನ್ನು ಹಾಗೂ ದರ್ಶನವನ್ನು ಪ್ರತಿಬಿಂಬಿಸುತ್ತವೆ.

ವ್ಯಕ್ತಿಯೊಬ್ಬ ಅವನ ಅಥವಾ ಅವಳ ಸಾಮಾಜಿಕ ಸಂಬಂಧವನ್ನು ಲೆಕ್ಕಿಸದೆ ಬಯಸುವ ಮತ್ತು ಮೆಚ್ಚುವ (cherish) ಮೌಲ್ಯಗಳು ವೈಯಕ್ತಿಕ ಮೌಲ್ಯಗಳು.

ಸಮಾಜಕ್ಕೆ ಸಂಬಂಧಿಸಿದ ಮೌಲ್ಯಗಳು ಸಾಮಾಜಿಕ ಮೌಲ್ಯಗಳು. ಇತರರ ಜತೆ ನಮಗಿರುವ ಸಂಬಂಧದ ಕಾರಣಕ್ಕಾಗಿ ಈ ಮೌಲ್ಯಗಳನ್ನು ನಾವು ಗೌರವಿಸುತ್ತೇವೆ ಹಾಗೂ ಆಚರಿಸುತ್ತೇವೆ. ಉದಾ: ಉತ್ತರದಾಯಿತ್ವ, ಭ್ರಾತೃತ್ವ, ಪರಿಸರ ಕಾಳಜಿ, ಸೌಜನ್ಯ, ಸಂವಾದ, ಕರ್ತವ್ಯಪರಾಯಣತೆ, ಕ್ಷಮೆ, ಸ್ವಾತಂತ್ರ್ಯ, ಗೆಳೆತನ, ಕೃತಜ್ಞತೆ, ಅತಿಥಿ ಸತ್ಕಾರ, ನ್ಯಾಯ, ಪ್ರೀತಿ, ಔದಾರ್ಯ, ತಾಳ್ಮೆ, ಪಶ್ಚಾತ್ತಾಪ, ಜವಾಬ್ದಾರಿತನ, ಸೇವಾಮನೋಭಾವ, ಅನುಕಂಪ, ತಂಡ ಚಿಂತನೆ (team spirit), ತಾಳ್ಮೆ ಇತ್ಯಾದಿ.

ವ್ಯಕ್ತಿಯೊಬ್ಬನ ನಡತೆ ಮತ್ತು ವ್ಯಕ್ತಿತ್ವ, ಯಾವುದು ಸರಿ ಮತ್ತು ಸಾತ್ವಿಕವೋ (virtuous) ಅದಕ್ಕೆ ಬದ್ಧವಾಗಿರುವುದೇ ನೈತಿಕ ಮೌಲ್ಯಗಳು. ಸತತ ಪ್ರಯತ್ನ ಮತ್ತು ಉತ್ತಮ ಪುಸ್ತಕಗಳು ಹಾಗೂ ಸಂಸ್ಥೆಗಳ ಮೇಲಣ ಮುಂದುವರಿದ ಅವಲಂಬನೆಯು ವಿದ್ಯಾರ್ಥಿಗಳಿಗೆ ಸ್ಫೂರ್ತಿದಾಯಕ ಗುಣಗಳಾದ ಗಮನ ಕೇಂದ್ರೀಕರಣ, ಅಪಾರವಾದ ಪ್ರೇಮ, ನ್ಯಾಯ, ಪ್ರಾಮಾಣಿಕತೆ, ಪರಿಶುದ್ಧತೆ, ನಿಸ್ವಾರ್ಥ, ಬುದ್ಧಿ (wisdom), ನಿಷ್ಠೆ (faithfullness), ವಿನಯ, ಕ್ಷಮಾಗುಣ, ದಯೆ, ವಿಶ್ವಾಸಾರ್ಹತನ, ಇತರರಿಗೆ ಗೌರವ ನೀಡಿಕೆ, ವಿಧೇಯತೆ, ಮತ್ತು ಇತರ ಹಲವು, ಜೀವನೋಪಕರಣ (equipment of life) ನಿರ್ಮಾಣ ಸಹಾಯಕವಾದ ಮೌಲ್ಯಗಳನ್ನು ನೀಡುತ್ತವೆ (ಪ್ರಹಲ್ಲಾದ ಎನ್.ಎನ್.:2000)

ಹೊಟ್ಟೆಪಾಡಿಗಾಗಿ ಶಿಕ್ಷಣ ಎನ್ನುವ ಮುಖ್ಯ ಉದ್ದೇಶವಿಟ್ಟುಕೊಂಡು ಆಧುನಿಕ ಭಾರತ ಶಿಕ್ಷಿತವಾಗುತ್ತಿದೆ. ಇದರ ಪರಿಣಾಮವಾಗಿ ನಮ್ಮ ಪದವೀಧರರಲ್ಲಿ ಹೆಚ್ಚಿನವರು ಯಾವುದೇ ಮೌಲ್ಯಗಳಿಗೆ ಬೆಲೆ ಕೊಡದೆ ಹಣ, ಅಧಿಕಾರ ಹಾಗೂ ಕಂಫರ್ಟ್‌ಗಳ ಬೆನ್ನಹಿಂದೆ ಓಡುತ್ತದ್ದಾರೆ.

ಸದ್ಯದ ಜೀವನ ಕ್ರಮದ ಅವನತಿ (degeneration), ಸಾರ್ವಜನಿಕ ಹಾಗೂ ಖಾಸಗಿ ಜೀವನದ ನೀತಿಹೀನತೆ (demoralisation), ಹಾಗೂ ಮೌಲ್ಯಗಳ ಬಗ್ಗೆ ಗೌರವ ಇಲ್ಲದಿರುವುದು ಇತ್ಯಾದಿಗಳೆಗೆಲ್ಲ ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ನೈತಿಕ, ಧಾರ್ಮಿಕ ಹಾಗೂ ಆಧ್ಯಾತ್ಮಿಕ ಶಿಕ್ಷಣವನ್ನು ಉದ್ದೇಶಪೂರ್ವಕವಾಗಿ ಕಡೆಗಣಿಸಿರುವುದೇ ಕಾರಣ (ಪ್ರಹಲ್ಲಾದ:2000, ಪುಟ 3)

ಕಂಡೀಶನಿಂಗ್, ಕಲಿಕೆ ಮತ್ತು ಸಾಮಾಜೀಕರಣದ ಮೂಲಕ ಆಂತರೀಕರಿಸಲ್ಪಡುವ ಸಾಮಾಜಿಕವಾಗಿ ವ್ಯಾಖ್ಯಾನಿತ ಆಸೆಗಳು ಹಾಗೂ ಗುರಿಗಳೇ ಮೌಲ್ಯಗಳು (ಪ್ರಹಲ್ಲಾದ:2000, ಪುಟ 4). ಒಂದು ನಿರ್ದಿಷ್ಟ ಸಮುದಾಯದ ಸದಸ್ಯರು ಒಂದೋ ಸರಿ ಅಥವಾ ತಪ್ಪು ಎಂದು ಸಾಮಾನ್ಯವಾಗಿ ನಂಬಿರುವ ಕ್ರಿಯೆ (actions)ಗಳ ಮೌಲ್ಯಾಂಕನ (evaluations)ಗಳೇ ನೈತಿಕ ಮೌಲ್ಯಗಳು... ಭಾರತೀಯ ಸಂಸ್ಕೃತಿ ತನ್ನ ಆಧ್ಯಾತ್ಮಿಕ ಮೌಲ್ಯಗಳಲ್ಲೆ ಆಳವಾಗಿ ಬೇರೂರಿದೆ. (ಪ್ರಹಲ್ಲಾದ: 2002, ಪುಟ 6)

### ಮನವೀಯ ಮೌಲ್ಯಗಳು

ಒಂದು ಅರ್ಥದಲ್ಲಿ, ಶಿಕ್ಷಣವು ಮೌಲ್ಯಗಳ ಒಂದು ವ್ಯವಸ್ಥೆ ಅಥವಾ ವ್ಯವಸ್ಥಿತವಾಗಿ ಮಕ್ಕಳಲ್ಲಿ ಮಾನವೀಯ ಮೌಲ್ಯಗಳನ್ನು ರೂಢಿಸುವ ಒಂದು ಮಾನವೀಯ (humane) ಪ್ರಕ್ರಿಯೆ. ಮನುಷ್ಯನ ಯಾವ ವರ್ತನೆಯನ್ನು, ನಡವಳಿಕೆಯನ್ನು ಒಂದು ಆದರ್ಶ, ಒಂದು ಮಾದರಿ, ಹಾಗೂ ಅನುಕರಣೀಯ ಎಂದು ತಿಳಿಯಲಾಗುತ್ತದೋ ಅದನ್ನು ಮಾನವೀಯ ಮೌಲ್ಯ ಎನ್ನಬಹುದು. ಯಾವ ಮೌಲ್ಯಗಳು ವ್ಯಕ್ತಿಗೂ ಸಮಜಕ್ಕೂ ಉಪಯೋಗಕಾರಿ, ಒಳಿತು ಉಂಟುಮಾಡುವವುಗಳು, ಅರ್ಥಪೂರ್ಣವಾದವುಗಳು ಎಂದು ವ್ಯಕ್ತಿ ತಿಳೀಯುತ್ತಾನೋ ಅವು ಮಾನವೀಯ ಮೌಲ್ಯಗಳು. ಉದಾ: ಪ್ರೀತಿ, ನಿಷ್ಠೆ, ಗೆಳೆತನ, ವಿಶ್ವಾಸಾರ್ಹತೆ, ಪ್ರಾಮಾಣಿಕತೆ, ಸಮಾನತೆ, ಸ್ವಾತಂತ್ರ್ಯ, ಸಹೋದರತ್ವ, ಸತ್ಯ, ನ್ಯಾಯ, ಸಾರ್ವಜನಿಕ ಜೀವನದಲ್ಲಿ ಪರಿಶುದ್ಧತೆ, ಜ್ಞಾನ/ವಿದ್ವತ್‌ಗೆ ಗೌರವ ನೀಡುವುದು, ಹೆಣ್ಣನ್ನು ಗೌರವಿಸುವುದು, ಪರಧರ್ಮ ಸಹಿಷ್ಣುತೆ, ಪರಜೀವನ ವಿಧಾನ ಸಹನೆ, ತಾಳ್ಮೆ, ಸಹಬಾಳ್ವೆ, ಸಾಮರಸ್ಯ – ಎಲ್ಲವೂ ಮಾನವೀಯ ಮೌಲ್ಯಗಳೇ. ಸಮಾಜ ಹಾಗೂ ಒಂದು ಶಿಕ್ಷಣ ವ್ಯವಸ್ಥೆಯು ಪ್ರಚುರಪಡಿಸಬೇಕಾದ, ವಿದ್ಯಾರ್ಥಿಗಳಲ್ಲಿ ತುಂಬಬೇಕಾದ ಮೌಲ್ಯಗಳು ಇವು. ಈ ಮೌಲ್ಯಗಳನ್ನು ವ್ಯಕ್ತಿ ಗೌರವಿಸಿದಾಗ ಸಮಾಜದಲ್ಲಿ ಕೋಮು ಸಾಮರಸ್ಯ ನೆಲೆಸುತ್ತದೆ; ವ್ಯಕ್ತಿ, ನಿಜವಾದ ಅರ್ಥದಲ್ಲಿ, ನೈತಿಕ ವ್ಯಕ್ತಿ (moral individual)ಯಾಗುತ್ತಾನೆ.

### ನೈತಿಕತೆ

ನೈತಿಕತೆಯು ಸುಲಭವಾಗಿ ವ್ಯಾಖ್ಯಾನಕ್ಕೆ ಸಿಗುವ ಪರಿಕಲ್ಪನೆಯಲ್ಲ. ಯಾಕೆಂದರೆ ಸಾಮಾನ್ಯವಾಗಿ 'ನೈತಿಕ' ಎಂದ ಕೂಡಲೆ ಸಮಾಜ/ಜನರು 'ಧಾರ್ಮಿಕ' ಎಂದೇ ಸಮೀಕರಿಸುತ್ತಾರೆ. ನೈತಿಕ ಶಿಕ್ಷಣ ಎಂದರೆ ಧಾರ್ಮಿಕ ಶಿಕ್ಷಣ ಎಂದೇ ತಿಳಿಯಲಾಗುತ್ತದೆ. ಆದರೆ ವಿಭಿನ್ನ ಧರ್ಮಗಳಲ್ಲಿರುವ ಮೂಲಭೂತವಾದ ಸಮಾನ ಅಂಶಗಳನ್ನು ಪರಿಗಣಿಸದೆ, ಒಂದು ನಿರ್ದಿಷ್ಟ ಧರ್ಮದ ನಂಬಿಕೆಗಳನ್ನು ಮತ್ತು ಬೋಧನೆಗಳನ್ನು ತಲೆಯೊಳಗೆ ತುಂಬು (indoctrination)ವ ಉದ್ದೇಶ ಇದ್ದಾಗ ಅದು ಧಾರ್ಮಿಕ ಶಿಕ್ಷಣವಾಗುತ್ತದೆ. ನೈತಿಕನಾಗಿರುವುದು ಮತ್ತು

ಧಾರ್ಮಿಕನಾಗಿರುವುದು-ಎರಡು ಕೂಡ ಸಮಾನಾರ್ಥಕ ಅಭಿವ್ಯಕ್ತಿ (expression)ಗಳಲ್ಲ. ಸರಿ ಮತ್ತು ತಪ್ಪು ತತ್ವಗಳನ್ನು ಅರ್ಥ ಮಾಡಿಕೊಳ್ಳಲು ಮತ್ತು ಸರಿಯಾದ ರೀತಿಯಲ್ಲಿ ಕ್ರಿಯಾಶೀಲನಾಗಿರುವುದು, ಸಮರ್ಥನಾಗಿರುವುದು ನೈತಿಕನಾಗಿರುವುದು ಎಂಬ ಮಾತಿನ ಅರ್ಥ. ಧಾರ್ಮಿಕನಾಗಿರುವುದೆಂದರೆ ಒಂದು ನಿಸರ್ಗಾತೀತ (supernatural) ಶಕ್ತಿಯಲ್ಲಿ ಅಥವಾ ದೇವರಲ್ಲಿ ನಂಬಿಕೆ ಹೊಂದಿರುವುದು. ನೈತಿಕವಾದ ವ್ಯಕ್ತಿಯೊಬ್ಬನಿಗೆ ತಾರ್ಕಿಕವಾಗಿ ಧರ್ಮದಲ್ಲಿ ನಂಬಿಕೆ ಇರಬೇಕಾದ ಅವಶ್ಯಕತೆ ಇಲ್ಲ. ಯಾವುದೇ ಧಾರ್ಮಿಕ ನಂಬಿಕೆಗೆ ನಿಷ್ಠನಾಗದೆ ವ್ಯಕ್ತಿಯೊಬ್ಬ ನೈತಿಕನಾಗಿ ಇರಬಲ್ಲ. ನಮ್ಮ ಸಮಾಜದಂತಹ ಒಂದು ಬಹುಮುಖಿ ಸಮಾಜದಲ್ಲಿ ಇದು ಇನ್ನಷ್ಟು ಸತ್ಯ. (ವೆಂಕಟಯ್ಯ:1998).

ಆದ್ದರಿಂದ ನೀತಿಯ ಕುರಿತು ಮಾತಾಡುವ ವ್ಯಕ್ತಿ ತನ್ನ ಜೊತೆ ಬದುಕುವ ಇತರರಿಗೆ ತೊಂದರೆಯಾಗದಂತೆ ಬದುಕನ್ನು ಹೆಚ್ಚು ಹೆಚ್ಚು ಸುಖಮಯವಾಗಿಸುವ, ಸಮೃದ್ಧಗೊಳಿಸುವ, ಸುಂದರಗೊಳಿಸುವ ಎಲ್ಲ ಕ್ರಿಯೆ, ವಸ್ತು, ವಿಷಯಗಳೂ ಉನ್ನತ ಮಟ್ಟದಲ್ಲಿ ನೈತಿಕವೇ ಆಗಿರುತ್ತವೆ ಎನ್ನುವುದನ್ನು ಒಪ್ಪಿಕೊಂಡೇ ಹೊರಡುತ್ತಾನೆ. ನಿಜವಾದ ಅರ್ಥದಲ್ಲಿ ನೈತಿಕ ಪ್ರಜ್ಞೆ ಉಳ್ಳವನಿಗೆ ನಮ್ಮ ವ್ಯವಸ್ಥೆ ತುಂಬ ಮಹತ್ವಪೂರ್ಣ ಅಂತ ಪರಿಗಣಿಸುವ ಹಲವು ವಿಷಯಗಳು ಕ್ಷುಲ್ಲಕವಾಗಿಯೂ, ವ್ಯವಸ್ಥೆಗೆ ಕ್ಷುಲ್ಲಕ ಅನಿಸುವ ವಿಷಯಗಳು ಮಹತ್ವಪೂರ್ಣವಾಗಿಯೂ ಅಥವಾ ಮಹತ್ವಪೂರ್ಣವಾದ ಕ್ಷುಲ್ಲಕತೆಯಾಗಿಯೂ ಕಾಣಿಸುತ್ತವೆ. ಅಂತಹವನಿಗೆ ಅನೀತಿಯುತ ಒಂದು ತತ್ವ, ನಿಯಮ, ಕ್ರಿಯೆ ಅಥವಾ ವ್ಯವಸ್ಥೆಗೆ ವಿರೋಧವಾಗಿ ನಡೆದುಕೊಳ್ಳುವುದೇ ತುಂಬ ನೈತಿಕವಾದ ಕ್ರಿಯೆಯಾಗುತ್ತದೆ.

ತೀವ್ರವಾಗಿ ಬದುಕುವುದನ್ನು ಅಮುಖ್ಯವಾಗಿ ಕಾಣುವ ನೀತಿ ಬಹಳ ಕಾಲ ಉಳಿಯಲಾರದು. ಎಷ್ಟೋ ವೇಳೆ ನಾವು ನೀತಿ ಎಂದರೆ ನಮ್ಮ ಹಾಗೆ ಬದುಕದೆ ನಮ್ಮ ಜೀವನ ಶೈಲಿಗಿಂತ ಬೇರೆಯಾದ ಜೀವನ ಶೈಲಿಯನ್ನು ರೂಪಿಸಿಕೊಂಡಿರುವವರ, ರೂಪಿಸಿಕೊಳ್ಳಲು ಯತ್ನಿಸುವವರ ಮೌಲ್ಯಗಳನ್ನು ಪ್ರಶ್ನಿಸುವುದು ಅಂತ ತಿಳಿಯುತ್ತೇವೆ. ನೀತಿಯ ಈ ಕಲ್ಪನೆ ನಮ್ಮ ಪಠ್ಯಪುಸ್ತಕಗಳಲ್ಲೂ ಅಭಿವ್ಯಕ್ತಿ ಪಡೆಯುತ್ತದೆ. (ಉದಾಹರಣೆ: 'ಎರಡುಗಿಳಿಗಳ ಕತೆ'). ಮೇಲುಜಾತಿಯವರ ಕ್ರಿಯೆಗಳು ನೈತಿಕ; ಅವರು ಉತ್ತಮರು, ಕೆಳಜಾತಿಯವರ ಕ್ರಿಯೆ ಅನೈತಿಕ;

ಅವರು ಕೆಟ್ಟವರು ಎನ್ನುವ ಅಭಿಪ್ರಾಯ ಈ ಕತೆಯಲ್ಲಿ ಸ್ಪಷ್ಟವಾಗುತ್ತದೆ. 'ನೀತಿ' ಎನ್ನುವುದನ್ನು ಈ ರೀತಿಯಾಗಿ ಅರ್ಥ ಮಾಡಿಕೊಂಡಿರುವವರಿಗೆ ಇತರರ ಖಾಸಗೀ ಜೀವನ ಇವರ ಸ್ವಂತ ಖಾಸಗೀ ಜೀವನಕ್ಕಿಂತ ಹೆಚ್ಚು ಕುತೂಹಲಪೂರ್ಣವಾಗಿ ಬಿಡುತ್ತದೆ. ಆದರೆ ಇದು ನೀತಿಯಲ್ಲ, ವಿಕೃತ ನೀತಿಯಾಗುತ್ತದೆ. ರಾಷ್ಟ್ರಪ್ರೇಮ ಮತ್ತು ಧರ್ಮ – ಈ ಎರಡು ತತ್ವಗಳನ್ನಾಧರಿಸಿರುವ ಎಲ್ಲ ಶಿಕ್ಷಣ ಪದ್ಧತಿಗಳೂ ಇಂತಹ 'ವಿಕೃತ' ನೀತಿಯ ಕಡೆಗೇ ವಾಲುತ್ತವೆ. ಯಾಕೆಂದರೆ ರಾಷ್ಟ್ರಪ್ರೇಮ ಮತ್ತು ಧರ್ಮ, ವ್ಯಕ್ತಿಯ ಭಾವನೆಗಳನ್ನು ಕೆಣಕುತ್ತವೆಯೇ ಹೊರತು ಅವನ ಬುದ್ಧಿಗೆ (reason) ತಾಗುವುದಿಲ್ಲ; ಮತ್ತು ನೀತಿ ಅನೀತಿಯ ಕುರಿತು ಯೋಚಿಸುವ ವ್ಯಕ್ತಿ ಶಾಂತನಾಗಿ, ಭಾವೋದ್ರೇಕ ರಹಿತನಾಗಿ ಬುದ್ಧಿ (reason)ಯ ನೆರವಿನಿಂದ ಯೋಚಿಸಬೇಕೇ ಹೊರತು ತಾನೇ ಸ್ವತ: ಭಾವನೆಗಳಿಗೊಳಗಾಗಿ ಅಲ್ಲ.

ರಾಷ್ಟ್ರಪ್ರೇಮ ಮತ್ತು ಧರ್ಮಗಳೆರಡೂ ವ್ಯಕ್ತಿಯ ಭಾವನೆಗಳನ್ನಷ್ಟೇ ಕೆಣಕುವುದರಿಂದ ಈ ತತ್ವಗಳನ್ನಾಧರಿಸಿ ನಿಂತಿರುವ ಯಾವುದೇ ಶಿಕ್ಷಣ ಪದ್ಧತಿ (ನಮ್ಮ ಶಿಕ್ಷಣ ಪದ್ಧತಿ) ಕೊಡುವ ಶಿಕ್ಷಣ, ವ್ಯಕ್ತಿಯನ್ನು ವೈಜ್ಞಾನಿಕವಾಗಿ ಯೋಚಿಸದಂತೆ ತಡೆಯುತ್ತದೆ. ಅಷ್ಟು ಮಾತ್ರವಲ್ಲ; ಸರಕಾರ, ಶಿಕ್ಷಣ ತಜ್ಞರು ವೈಜ್ಞಾನಿಕ ಚಿಂತನೆಯ ಕುರಿತು ಅದೆಷ್ಟು ಶಿಫಾರಸುಗಳನ್ನು ಮಾಡಿದರೂ, ಸ್ಲೋಗನುಗಳನ್ನು ಕೂಗಿದರೂ ಅವೈಜ್ಞಾನಿಕತೆಯೇ ತುಂಬ ವೈಜ್ಞಾನಿಕವಾಗಿ, ಅವೈಚಾರಿಕತೆಯೇ ತುಂಬ ವೈಚಾರಿಕವಾಗಿ ಶಿಕ್ಷಣ ಪದ್ಧತಿಯಲ್ಲಿ ನುಸುಳಿಕೊಳ್ಳುತ್ತದೆ. ಶಿಕ್ಷಣ ಪದ್ಧತಿ ಕೇವಲ ಯಥಾಸ್ಥಿತಿಯನ್ನು ಮುಂದುವರಿಸಿಕೊಂಡು ಹೋಗಲು ಒಂದು ಸಾಧನವಾಗುತ್ತದೆ; ಬೇರೆ ಬೇರೆ ಧರ್ಮಗಳಲ್ಲಿರುವ ವಿವಿಧ ರೀತಿಯ ಬಾಬಾಗಳ ಪ್ರಭಾವದಲ್ಲೇ ಉಳಿಯುತ್ತದೆ. ಆಗ ಶಿಕ್ಷಣ ವಿದ್ಯಾರ್ಥಿಗಳನ್ನು ಯೋಚನೆಗೆ ಹಚ್ಚುವ ಬದಲು, ಸಾಮಾಜಿಕ ವಿಪರ್ಯಾಸಗಳ ವಿರುದ್ಧ, ಆರ್ಥಿಕ ಹಾಗೂ ಧಾರ್ಮಿಕ ಕೇಂದ್ರಗಳ ಕಪಿಮುಷ್ಠಿಯ ವಿರುದ್ಧ ಪ್ರತಿಭಟನೆಯ ಸೊಲ್ಲೆತ್ತುವಂತೆ ಅಣಿಗೊಳಿಸುವ ಬದಲು, ಸಾಮೂಹಿಕ ಆಷಾಡಭೂತಿತನವನ್ನು ಹರಡುತ್ತದೆ– ಆಷಾಢಭೂತಿತನವೇ ನೀತಿ ಅಂತ ಅನ್ನಿಸತೊಡಗುವುದರಿಂದ. ರಾಷ್ಟ್ರಪ್ರೇಮವನ್ನು, ಸ್ವಧರ್ಮಾಭಿಮಾನವನ್ನು ವಿದ್ಯಾರ್ಥಿಗಳ ಮನಸ್ಸಿನಲ್ಲಿ ಅತಿಯಾಗಿ ಉದಾತ್ತೀಕರಿಸುವ ಶಿಕ್ಷಣ ಪದ್ಧತಿ ಫ್ಯಾಸಿಸ್ಟ್ ಚಿಂತನೆಗೆ ದಾರಿಮಾಡಿಕೊಡುತ್ತದೆ. ಜರ್ಮನಿಯಲ್ಲಿ ನಾಜಿವಾದ ಬೆಳೆದದ್ದು ರಾಷ್ಟ್ರಪ್ರೇಮದ ಇಂತಹ ಅತಿ

ಉದಾತ್ತೀಕರಣದಿಂದಾಗಿಯೇ. ವಿದೇಶೀ ಜೀವನ ವಿಧಾನ ಅನುಕರಣೆಯಿಂದಾಗಿ ನಮ್ಮ ವಿದ್ಯಾರ್ಥಿಗಳಲ್ಲಿ ನೈತಿಕತೆ ಕಡಿಮೆಯಾಗುತ್ತಿದೆ; ದೇವರು ಧರ್ಮಗಳಲ್ಲಿ ನಿಷ್ಠೆ, ನಂಬಿಕೆ ಕಡಿಮೆಯಾಗುತ್ತಿದೆ; ಹಾಗೂ ನಮ್ಮ ಸಮಾಜದ ಎಲ್ಲ ಸಮಸ್ಯೆಗಳಿಗೂ ಆಧ್ಯಾತ್ಮಿಕತೆಯಲ್ಲಿ ನಂಬಿಕೆ ಕಡಿಮೆಯಾಗುತ್ತಿರುವುದೇ ಕಾರಣವಾಗಿದೆ; ಆದ್ದರಿಂದ ಈ ಆಧ್ಯಾತ್ಮಿಕ ಶೂನ್ಯವನ್ನು ತುಂಬಿದರೆ ನಮ್ಮ ಎಲ್ಲಾ ಸಮಸ್ಯೆಗಳೂ ಪರಿಹಾರವಾಗುತ್ತವೆ ಎನ್ನುವ ಕೂಗು ಸಂಪ್ರದಾಯಶರಣ ಸಜ್ಜನರಿಂದ ಆಗಾಗ ಕೇಳಿಬರುತ್ತದೆ. ನೈತಿಕ ಶಿಕ್ಷಣ, ಮೂಲ ಶಿಕ್ಷಣದ ಅಂಗವಾಗಬೇಕು ಎನ್ನುವ ಉದ್ದೇಶದಿಂದ ಶಿಕ್ಷಣ ಪದ್ಧತಿಯಲ್ಲಿ ವಾರಕ್ಕೆ ಒಂದೋ ಎರಡೋ ಗಂಟೆ ನೀತಿ ಪಾಠ ಹೇಳಲಾಗುತ್ತಿದೆ. ಇದಕ್ಕಾಗಿ ಹಲವಾರು ವಿದ್ಯಾಸಂಸ್ಥೆಗಳಲ್ಲಿ ಬಳಸಲಾಗುತ್ತಿರುವ ಪಠ್ಯಪುಸ್ತಕಗಳಲ್ಲಿ ಮೊದಲನೆಯ ತರಗತಿಯಲ್ಲಿ ಓದಿಸಲಾಗುವ ಪಠ್ಯಪುಸ್ತಕದ ಮೊದಲ ಪಾಠ ಹೀಗಿದೆ:

"ಮೊದಲು ದೇವರು ಮಾತ್ರ ಇದ್ದ. ಪ್ರಪಂಚ ಇರಲಿಲ್ಲ. ದೇವರು ನೀಲಿ-ಆಕಾಶ ಮಾಡಿದ. ದೇವರು ಸೂರ್ಯನನ್ನು ಮಾಡಿದ (made). ಸೂರ್ಯ ಹಗಲು ಪ್ರಕಾಶಿಸುತ್ತಾನೆ. ದೇವರು ಚಂದ್ರನನ್ನು ಮಾಡಿದ.

ದೇವರು ಭೂಮಿಯನ್ನು ಮಾಡಿದ. ಅವನು ಸಮುದ್ರವನ್ನು ಮಾಡಿದ. ಭೂಮಿ ಮೇಲೆ ಅವನು ಪ್ರಾಣಿಗಳನ್ನು ಇಟ್ಟ : ಸಿಂಹಗಳು, ಕುದುರೆಗಳು, ದನಗಳು, ಹಕ್ಕಿಗಳು, ಮರಗಳು. ದೇವರು ನೀರನ್ನು ಮಾಡಿದ. ನೀರಿನಲ್ಲಿ ದೇವರು ಮೀನುಗಳನ್ನಿಟ್ಟ.

ದೇವರು ಪ್ರಪಂಚವನ್ನು ಮಾಡಿದ. ಅದು ಒಳ್ಳೆಯದಾಗಿತ್ತು." ಈ ಪಾಠದಿಂದ ಹೊರಹೊಮ್ಮುವ ನೀತಿ ಯಾವುದು?

ಎರಡನೆಯ ಪಾಠ ಹೀಗಿದೆ:

"ದೇವರು ಬೆಟ್ಟಗಳನ್ನು ಮಾಡಿದ. ದೇವರು ಬೆಟ್ಟಗಳಲ್ಲಿ ಇದ್ದಾನೆ. ದೇವರು ಸಮುದ್ರವನ್ನು ಮಾಡಿದ. ಅವನು ನೀರಿನಲ್ಲಿ ಇದ್ದಾನೆ. ದೇವರು ನೀಲಿ ಆಕಾಶ ಮಾಡಿದ. ಅವನು ಆಕಾಶದಲ್ಲಿ ಇದ್ದಾನೆ. ದೇವರು ಮರಗಳನ್ನು ಮಾಡಿದ. ಅವನು ಮರಗಳಲ್ಲಿ ಇದ್ದಾನೆ.

ದೇವರು ಪ್ರಪಂಚವನ್ನು ಮಾಡಿದ. ದೇವರು ಎಲ್ಲಾ ಕಡೆಗಳಲ್ಲಿ ಇದ್ದಾನೆ! ದೇವರಿಲ್ಲದ ಜಾಗವೇ ಇಲ್ಲ. ದೇವರು ಎಲ್ಲಾ ಕಡೆ ಇದ್ದಾನೆ."

ಈ ಪಾಠದಿಂದ ಮಗು ಕಲಿಯುವ ನೀತಿ ಯಾವುದು?

ಮೂರನೆಯ ಪಾಠ:

"ಒಬ್ಬ ಮನುಷ್ಯ ಚಿಕ್ಕ ಹುಡುಗನೊಬ್ಬನೊಡನೆ ಕೇಳಿದ. ನಿನ್ನ ದೇವರು ದೊಡ್ಡ ದೇವರೆ ಅಥವಾ ಚಿಕ್ಕ ದೇವರೆ? ಆ ಹುಡುಗ ಉತ್ತರಿಸಿದ: ದೇವರು ಎಷ್ಟು ದೊಡ್ಡವನೆಂದರೆ ಇಡೀ ಪ್ರಪಂಚವೇ ಅವನಿಗೆ ಸಾಲದು. ಆದರೆ ದೇವರು ಎಷ್ಟು ಚಿಕ್ಕವನು ಎಂದರೆ ಅವನು ನನ್ನ ಹೃದಯದಲ್ಲಿ ಇದ್ದಾನೆ.

ದೇವರು ಎಲ್ಲವನ್ನೂ ಮಾಡಿದ. ಅವನು ಎಲ್ಲಾ ಕಡೆ ಇದ್ದಾನೆ. ದೇವರು ಬೆಟ್ಟದಲ್ಲಿದ್ದಾನೆ. ಆದರೆ ದೇವರು ಆಕಾಶದಲ್ಲಿದ್ದಾನೆ. ಆದರೆ ದೇವರು ಆಕಾಶ ಅಲ್ಲ.

ದೇವರಿಗೆ ದೇಹ ಇಲ್ಲ. ಅವನು ಒಂದು ಚೇತನ (spirit). ಅವನು ಎಲ್ಲಾ ಕಡೆ ಇದ್ದಾನೆ. ನಾವು ದೇವರನ್ನು ನೋಡುವುದು ಅಸಾಧ್ಯ. ಯಾಕೆಂದರೆ ಅವನು ಒಂದು ಚೇತನ. ಚೇತನಕ್ಕೆ ದೇಹ ಇಲ್ಲ."

"ದೇವರು ಒಂದು ಸುಂದರವಾದ ಪ್ರಪಂಚವನ್ನು ಮಾಡಿದ. ದೇವರು ಒಳ್ಳೆಯವ. ಅನಂತರ ಅವನು ಪ್ರಪಂಚಕ್ಕೆ ಅತ್ಯುತ್ತಮವಾದುದನ್ನು ಮಾಡಿದ. ದೇವರು ಮನುಷ್ಯರನ್ನು ಮಾಡಿದ. ಅವನು ಗಂಡಸನ್ನು ಮತ್ತು ಹೆಂಗಸನ್ನು ಮಾಡಿದ. ದೇವರು ಹುಡುಗರನ್ನು ಮತ್ತು ಹುಡುಗಿಯರನ್ನು ಮಾಡಿದ.

ಸಸ್ಯಗಳ ಹಾಗೆ, ಮನುಷ್ಯರು ಬದುಕಬಲ್ಲರು ಮತ್ತು ಬೆಳೆಯಬಲ್ಲರು. ಸಸ್ಯಗಳ ಹಾಗೆ, ಮನುಷ್ಯರು ಚಲಿಸಬಲ್ಲರು. ಆದರೆ ಸಸ್ಯಗಳು ಮತ್ತು ಪ್ರಾಣಿಗಳು ಯೋಚಿಸಲಾರವು, ಆಟ ಆಡಲಾರವು ಮತ್ತು ನಗಲಾರವು. ಮನುಷ್ಯ ಯೋಚಿಸಬಲ್ಲ, ಆಟ ಆಡಬಲ್ಲ ಮತ್ತು ನಗಬಲ್ಲ.

ಈ ಪ್ರಪಂಚದ ಮೇಲಿರುವ ಮಿಕ್ಕೆಲ್ಲವುಗಳಿಗಿಂತ ಮನುಷ್ಯ ಉತ್ತಮ. ದೇವರು ಪ್ರತಿ ಮನುಷ್ಯನಿಗೂ ಒಂದು ಆತ್ಮವನ್ನು ಕೊಟ್ಟ. ಆತ್ಮ ಮನುಷ್ಯನನ್ನು ಜೀವಂತವಾಗಿಡುತ್ತದೆ. ಆತ್ಮ ಮನುಷ್ಯನನ್ನು ಮಿಕ್ಕೆಲ್ಲವುಗಳಿಗಿಂತ ಹೆಚ್ಚು ಮುಖ್ಯನನ್ನಾಗಿಸುತ್ತದೆ."

(Moral Science Series-Better Living – Part one ಭಾಷಾಂತರ ಲೇಖಕನದು)

ಇಂತಹ, ಒಂದಾದರ ಮೇಲೊಂದರಂತೆ ಬರುವ ಪಾಠಗಳಿಂದ ನಮ್ಮ ಮಕ್ಕಳು ಏನು ನೀತಿ ಕಲಿತಾರು? ಈ ರೀತಿ ನೀತಿಯ ಹೆಸರಿನಲ್ಲಿ ಒಂದು ಜನಾಂಗವನ್ನು ಕೇವಲ ಅಂಧ ಅನುವರ್ತಿ (conformist)ಗಳನ್ನಾಗಿ ಮಾಡುವುದು, (ಪ್ರಾಣಿಗಳ ಪಟ್ಟಿಯಲ್ಲಿ ಮರಗಳನ್ನೂ ಸೇರಿಸುವುದು, ಪ್ರಾಣಿಗಳು ಆಟ ಆಡಲಾರವು ಅಂತೆಲ್ಲ ಸುಳ್ಳುಗಳನ್ನು ಕಲಿಸುವುದು,) ಯಾವುದೋ ಒಂದು ಧರ್ಮಗ್ರಂಥವನ್ನು ರಾಜಕೀಯ ವಶೀಲಿಯಿಂದಾಗಿಯೋ ಇನ್ಯಾವುದೋ ಕಾರಣಕ್ಕಾಗಿಯೋ ಅದರ ವ್ಯಕ್ತಿವಾಚಕಗಳನ್ನೆಲ್ಲ ತೆಗೆದು ಬೇರೆ ರೂಪದಲ್ಲಿ ವಿದ್ಯಾರ್ಥಿಗಳ ಮನಸ್ಸಿನೊಳಗೆ ತುರುಕಿ ಅವರನ್ನು ಸಂಪ್ರದಾಯ ಶರಣರನ್ನಾಗಿ ಮಾಡುವುದು ಸಾಮೂಹಿಕ ಆಷಾಢಭೂತಿತನಕ್ಕೆ ದಾರಿಯಾಗುತ್ತದೆ. ವಿಜ್ಞಾನ ತರಗತಿಗಳಲ್ಲಿ ಡಾರ್ವಿನನ ವಿಕಾಸವಾದವನ್ನು ಬೋಧಿಸುತ್ತಾ, ಭೂಮಿ ಚಂದ್ರ ಸೂರ್ಯರ ಉಗಮ ಮತ್ತು ಇರುವಿಕೆಯನ್ನು ವೈಜ್ಞಾನಿಕವಾಗಿ ವಿವರಿಸುತ್ತಾ, ಈ 'ನೀತಿಪಾಠ'ಗಳ ತರಗತಿಗಳಲ್ಲಿ "ಎಲ್ಲವೂ ದೇವರಿಂದಲೇ ಆಯ್ತು" ಅನ್ನುತ್ತಾ ಒಂದಕ್ಕೊಂದು ತದ್ವಿರುದ್ಧವಾದದ್ದನ್ನು ಕಲಿಸುತ್ತಾ ಮಾನಸಿಕ ಗೊಂದಲ ಉಂಟುಮಾಡುತ್ತಾ, ಇರುವುದನ್ನು ಹಾಗೆಯೇ (ಅದು ಅರ್ಥಹೀನವಾದಾಗ್ಯೂ) ಕಾಪಾಡಿಕೊಳ್ಳಲು ಪ್ರಯತ್ನಿಸುವುದು ಎಂದರೆ ಬೌದ್ಧಿಕ ಜಡತೆಗೆ ಆಹ್ವಾನಕೊಟ್ಟಂತೆಯೇ ಸರಿ.

ಇಂತಹ ತದ್ವಿರುದ್ಧ ಶಿಕ್ಷಣ ಕೊಟ್ಟಾಗ, "ಕಾದಂಬರಿಯ ನಾಯಕ ನಾಸ್ತಿಕನಾದ್ದರಿಂದ ಆ ಕಾದಂಬರಿ ಕಲಾಕೃತಿ (work of art)ಯೇ ಅಲ್ಲ". ಎನ್ನುವ ಪ್ರೊಫೆಸರುಗಳು ತಯಾರಾಗುತ್ತಾರೆ. ಜೀವಕೋಶದ ರಚನೆಯನ್ನು ಹೃದಯಂಗಮವಾಗಿ ವಿವರಿಸಿ ವಿದ್ಯಾರ್ಥಿಗಳು "ಈ ಜೀವ ಎಷ್ಟು ಅದ್ಭುತ!" ಅಂತ ಆಶ್ಚರ್ಯಪಡುತ್ತ ಈ ರಹಸ್ಯವನ್ನು ಮತ್ತಷ್ಟು ತಿಳಿದುಕೊಳ್ಳಬೇಕೆಂದು ಕೊಳ್ಳುತ್ತಿರುವಾಗಲೇ "ದೇವರು ಎಷ್ಟು ಬುದ್ಧಿವಂತಿಕೆಯಿಂದ ಸೃಷ್ಟಿ ಮಾಡಿದ್ದಾನೆ!" ಅಂತ ತಾವೇ

ಆಶ್ಚರ್ಯಪಟ್ಟು ಎಲ್ಲಾ ರಹಸ್ಯವನ್ನೂ ಬಹಳ ಸುಲಭವಾಗಿ ಭೇದಿಸಿಬಿಡುವ ಜೀವವಿಜ್ಞಾನ ಪ್ರೊಫೆಸರುಗಳು ತಯಾರಾಗುತ್ತಾರೆ.

ವಿದ್ಯಾರ್ಥಿಗಳಿಗೆ ನೈತಿಕ ಶಿಕ್ಷಣ ಎಂದಾಗ ಯಾರಿಂದ ಯಾರಿಗೆ ಎಂತಹ ರೀತಿಯ ನೀತಿ ಎನ್ನುವುದನ್ನು ವಿಶ್ಲೇಷಿಸಬೇಕು. ಯಾಕೆಂದರೆ ಐಶಾರಾಮ ಜೀವನ ನಡೆಸುವವರ ನೀತಿ ಹೊಟ್ಟೆಯಲ್ಲಿ ಬೆಂಕಿ ಹೊತ್ತಿಸಿಕೊಂಡು ಬದುಕುವವರ ನೀತಿಯಾಗಲಾರದು. ಆದ್ದರಿಂದ, ಈ ದೇಶದಲ್ಲಿ ಸುಖಭೋಗ ಜೀವನ ನಡೆಸುತ್ತಾ ಬಂದ ವರ್ಗ ರೂಪಿಸಿದ, ಜಾತಿ ಪದ್ಧತಿ, ಶೋಷಣೆ ಅಮಾನವೀಯತೆಗಳನ್ನೇ ವ್ಯವಸ್ಥೆಯ ಬೆನ್ನೆಲುಬಾಗಿ ಮಾಡಿಕೊಂಡ ಮೇಲುವರ್ಗ (ಪುರೋಹಿತ ವರ್ಗ) ರೂಪಿಸಿದ ನೀತಿ ಸಂಹಿತೆ ಶೋಷಣೆಗೆ ವಿರೋಧಿಯಾದ ಜಾತಿಪದ್ಧತಿ ರಹಿತವಾಗಬೇಕೆಂಬ ಬಯಕೆ ಹೊಂದಿರುವ ಹೊಸ, ಸ್ವತಂತ್ರ, ಮಾನವೀಯತೆಯೇ ಮುಖ್ಯವಾಗಿ ಇರುವ ಮುಕ್ತ ಸಮಾಜದ ಕನಸು ಕಾಣುತ್ತಿರುವವರಿಗೆ; ಹೊಸ ಆಸೆ ಹೊತ್ತು ಹೊಸ ಸಮಾಜದ ಹೊಸ ಭಾಷೆಗಾಗಿ ಆಸೆ ಪಡುವವರಿಗೆ; ತಮ್ಮನ್ನು ತಾವೇ ವ್ಯಾಖ್ಯಾನಿಸಿಕೊಳ್ಳಬೇಕಾಗಿರುವವರಿಗೆ ಅಪ್ರಸ್ತುತ (irrelevant)ವಾಗುತ್ತದೆ. ಭಾಷಾ ಪಠ್ಯಪುಸ್ತಕಗಳಲ್ಲಿ ಕಾಣಸಿಗುವ “ಕಳಬೇಡ ಕೊಲಬೇಡ ಹುಸಿಯ ನುಡಿಯಲುಬೇಡ” ಇತ್ಯಾದಿ ಇತ್ಯಾದಿ ಹಲವು ನೀತಿ ಮಾತುಗಳು ತುಂಬ ಅರ್ಥಪೂರ್ಣವೂ, ಅಪೇಕ್ಷಣೀಯವೂ, ರಾಗವಾಗಿ ಹಾಡಲ್ಪಟ್ಟಾಗ ಆನಂದದಾಯಕವೂ ಹೌದು. ಆರ್ಥಿಕವಾಗಿ ಸಾಕಷ್ಟು ಅನುಕೂಲ ಇರುವವ ಜೀವನ ನಿರ್ವಹಣೆಗಾಗಿ ಕಳದೆ, ಕೊಲದೆ, ಹುಸಿಯ ನುಡಿಯದೆ ಇರುವುದು ಸಾಧ್ಯ. ಆತ ಹಾಗೆ ಇರದಿದ್ದರೆ ಅದು ಅನೀತಿ. ಆದರೆ, ಜನಸಂಖ್ಯಾ ಸ್ಫೋಟದಿಂದಾಗಿ ಮನೆಯಲ್ಲಿ ಒಂದು ಹೊತ್ತಿನ ಊಟವೂ ದಿನೇ ದಿನೇ ಹೆಚ್ಚೆಚ್ಚು ದುರ್ಲಭವಾಗುತ್ತಿರುವಾಗ, ದೇಶದ ಸಂಪತ್ತು ಕೆಲವೇ ಕೆಲವು ಕೈಗಳಲ್ಲಿ ಕೇಂದ್ರೀಕೃತವಾಗಿರುವಾಗ, ಒಂದು ನೌಕರಿಗಾಗಿ ಒಂದು ಸಾವಿರ ಅಭ್ಯರ್ಥಿಗಳು ನುಗ್ಗುತ್ತಿರುವಾಗ, ಸುಳ್ಳು ಹೇಳದೆ ಲಂಚ ಕೊಡದೆ ನೌಕರಿ ಸಿಕ್ಕದಂತಾಗಿರುವಾಗ, ಈ ನೀತಿಗಳೆಲ್ಲ ಎಷ್ಟರ ಮಟ್ಟಿಗೆ ಗಟ್ಟಿ ಉಳಿದಾವು? ಎಷ್ಟರಮಟ್ಟಿಗೆ ‘ನೀತಿ’ ಅನ್ನಿಸಿಕೊಂಡಾವು?

ಭಾರತದ ಸಾಮಾಜಿಕ ವ್ಯವಸ್ಥೆಗೆ ನೀತಿಯ ಕುರಿತಾಗಿ ಇರುವ ಸ್ಪಷ್ಟ ಯೋಚನೆಗಳಿಗಿಂತ, ನಿಲುವುಗಳಿಗಿಂತ ಗೊಂದಲವೇ ಹೆಚ್ಚಾಗಿದೆ. ಈ ಗೊಂದಲ, ವ್ಯವಸ್ಥೆಯ ಕೊಡುಗೆಯಾದ ಶಿಕ್ಷಣ

ಪದ್ಧತಿಯಲ್ಲೂ ವ್ಯಕ್ತವಾಗುತ್ತದೆ. ಬದಲಾಗುವ ಸಮಾಜಕ್ಕನುಗುಣವಾಗಿ ಆ ಸಮಾಜದ ನೈತಿಕ ಮೌಲ್ಯಗಳೂ ಬದಲಾಗಬೇಕು. ನಮ್ಮಲ್ಲಿ ಹಾಗಾಗಿಲ್ಲ. ನಮ್ಮ ವ್ಯವಸ್ಥೆ, ನೀತಿ ಎಂದರೆ ನಪುಂಸಕತನ, ಪೂಜೆಗೆ ಯೋಗ್ಯವಾದ ಹಸುವಾಗುವುದು ಅಂತ ತಿಳಿದಿದೆ.

ಭಾರತದ ಸಾಮಾಜಿಕ ವ್ಯವಸ್ಥೆಗೆ ನೀತಿಯ ಕುರಿತಾಗಿ ಇರುವ ಸ್ಪಷ್ಟ ಯೋಚನೆಗಳಿಗಿಂತ, ನಿಲುವುಗಳಿಗಿಂತ ಗೊಂದಲವೇ ಹೆಚ್ಚಾಗಿದೆ. ಕೇವಲ "ದೇವರಿದ್ದಾನೆ, ಇದ್ದಾನೆ, ಎಲ್ಲಾ ಕಡೆ ಇದ್ದಾನೆ." ಅಂತ ಬಡಬಡಿಸುವುದರಿಂದ ಮನುಷ್ಯ ನೀತಿವಂತನಾಗುತ್ತಾನೆ ಅಂತ ತಿಳಿಯುವುದು ತಪ್ಪಾಗುತ್ತದೆ.

ನೀತಿ–ಅನೀತಿ ಎನ್ನುವುದು ಸಂಬಂಧಾವಲಂಬಿ (relative) ಯಾದ್ದರಿಂದ ಯಾವುದನ್ನೇ ಆದರೂ ಅನೀತಿ ಎನ್ನುವ ಮೊದಲು ತುಂಬ ಯೋಚಿಸಬೇಕು ಎನ್ನುವುದನ್ನು ನೈತಿಕ ವಿಜ್ಞಾನ ಪುಸ್ತಕಗಳು ಮಕ್ಕಳಿಗೆ ತಿಳಿಸಬೇಕು; ನಮ್ಮ ಸಮಾಜ ಯಾವುದನ್ನು ನೀತಿ ಅಂತ ಪರಿಗಣಿಸುತ್ತದೋ (ಉದಾ: ಹೆಂಡತಿ ಸತ್ತರೆ ಗಂಡ ಮರುವಿವಾಹವಾಗುವುದು ನೈತಿಕ ಆದರೆ ಗಂಡ ಸತ್ತಾಗ ಹೆಂಡತಿ ಪುನಃ ಮದುವೆಯಾಗುವುದು ಅನೈತಿಕ) ಅದರ ಹಿಂದೆ ಎಷ್ಟು ಅನೀತಿ ತುಂಬಿದೆ ಅಂತ ತಿಳಿಸುವ ಪ್ರಯತ್ನ ಮಾಡಬೇಕು. ನೀತಿ–ಅನೀತಿಯ ಪ್ರಶ್ನೆ ಮೂಲತಃ ಎಲ್ಲರ ಆತ್ಮಸಾಕ್ಷಿಗೆ ಸಂಬಂಧಪಟ್ಟ ವಿಷಯವಾದ್ದರಿಂದ ನೀತಿ–ಅನೀತಿಯ ಕುರಿತು ಜಿಜ್ಞಾಸೆ ಮಾಡುವ ಅಭ್ಯಾಸವನ್ನು ನೈತಿಕ ಶಿಕ್ಷಣ ತರಗತಿಗಳಲ್ಲಿ ಮಕ್ಕಳಿಗೆ ಮಾಡಿಸಬೇಕು. ಸಾಕಷ್ಟು ಪ್ರಶ್ನೆಗಳನ್ನು ಹಾಕಬೇಕು. ಉದಾಹರಣೆ: ಸಾಮಾಜಿಕ ಪ್ರತಿಷ್ಠೆಗಾಗಿ ನಾವು ಕೊಳಕನ್ನು ಹತ್ತಿಕ್ಕುವುದು ನೀತಿಯೇ? ಸಾವಿರಾರು ಜನ ದಿನದ ಅನ್ನಕ್ಕೂ ಗತಿ ಇಲ್ಲದೆ ಸಂಕಟ ಪಡುತ್ತಿರುವಾಗ, ದಿನದಿಂದ ದಿನಕ್ಕೆ ಏರುತ್ತಿರುವ ಭಿಕ್ಷುಕರ ಸಂಖ್ಯೆ (ಒಂದು ಅಂದಾಜಿನಂತೆ ಈ ದೇಶದ ಭಿಕ್ಷುಕರ ಸಂಖ್ಯೆ 85 ಲಕ್ಷಕ್ಕೂ ಮೀರಿದೆ – ಉದಯವಾಣಿ, ಮಾರ್ಚ್ 22, 1980) ಸಮಾಜಕ್ಕೆ ಹೆದರಿಕೆ ಹುಟ್ಟಿಸುತ್ತಿರುವಾಗ ಇಂದ್ರಪ್ರಸ್ಥದಲ್ಲಿ ಹವಾನಿಯಂತ್ರಿತ ಬಂಗಲೆಯೊಳಗೆ ಕುಳಿತು ಬಡವರ ಉದ್ಧಾರ ಹೇಗೆ? ಅಂತ ಸ್ವಾದಿಷ್ಟ ಪಾನೀಯ ಸವಿಯುತ್ತಾ ಸುಖಿಸುತ್ತಾ ಚರ್ಚಿಸುವುದು ನೀತಿಯೇ? ವರದಕ್ಷಿಣೆ ಪಡೆದು ಹಸುವನ್ನು ಕ್ರಯಕ್ಕೆ ಕೊಂಡ ಹಾಗೆ ಹೆಣ್ಣನ್ನು ಕೊಳ್ಳುವುದು ನೈತಿಕವೆ? ಆಹಾರದ ಕೃತಕ ಕೊರತೆಯಿಂದಾಗಿ ಜನ ಸಾಯುತ್ತಿದ್ದರೆ, ವರ್ತಕರ ದಾಸ್ತಾನು ಮಳಿಗೆಗಳಲ್ಲಿ ಆಹಾರ ಧಾನ್ಯಗಳ ಮೂಟೆಗಳು ತುಂಬಿದ್ದರೆ ಆಗ ಅಂತಹ

ಮಳಿಗೆಗಳನ್ನು ಲೂಟಿ ಮಾಡದೆ ಇರುವುದು ನೀತಿಯೇ? ಗಂಡ ಹೆಂಡತಿ ಪರಸ್ಪರ ಉದಾಸೀನರಾದಾಗ ಅವರಿಗೆ ವಿವಾಹ ವಿಚ್ಛೇದನಕ್ಕೆ ಅನುಮತಿ ಕೊಡದೆ ಇರುವುದು ನೀತಿಯೇ?

ನೈತಿಕ ವಿಜ್ಞಾನ ತರಗತಿಗಳು ಮಕ್ಕಳಿಗೆ ಪ್ರಶ್ನೆ ಕೇಳಲು ಅವಕಾಶ ಮಾಡಿಕೊಡಬೇಕು. ಸಾಧ್ಯವಾದಷ್ಟೂ, ಶಾಲೆಯಲ್ಲಿ ನಡೆಯುವ ಘಟನೆಗಳ ಮೂಲಕವೇ, ಮಕ್ಕಳ ದೈನಂದಿನ ಜೀವನದ ಆಗುಹೋಗುಗಳ ಮೂಲಕವೇ ಯಾವುದು ಸರಿ? ಯಾವುದು ತಪ್ಪು? ಯಾವುದು ನೀತಿ? ಯಾವುದು ಅನೀತಿ? ಎನ್ನುವುದನ್ನು ತಿಳಿಸುವ ಪ್ರಯತ್ನ ಮಾಡಬೇಕು.

ನಮ್ಮ ಶಿಕ್ಷಣ ಹೆಚ್ಚು ಒತ್ತು ಕೊಡಬೇಕಾಗಿರುವುದು ವಿದ್ಯಾರ್ಥಿಗಳಲ್ಲಿ ಧರ್ಮಜಾಗೃತಿ ಉಂಟುಮಾಡುವುದಕ್ಕಲ್ಲ, ಬದಲಾಗಿ ಸಾಮಾಜಿಕ ಜವಾಬ್ದಾರಿಯನ್ನುಂಟು ಮಾಡುವುದಕ್ಕೆ, 'ನನ್ನ ಸುತ್ತಮುತ್ತ ಬದುಕುವವರು ಆರೋಗ್ಯವಾಗಿರದೆ ನಾನು ಆರೋಗ್ಯವಾಗಿರುವುದು; ಅವರು ಸಂತೋಷವಾಗಿರದೆ ನಾನೊಬ್ಬ ಮಾತ್ರ ಸಂತೋಷವಾಗಿರುವುದು, ನನ್ನ ನೆರೆಬೀದಿ ಸ್ವಚ್ಛವಾಗಿರದೆ ನನ್ನ ಮನೆ ಸ್ವಚ್ಛವಾಗಿರುವುದು ಜನಸಂಖ್ಯೆ ಭಯಾನಕ ವೇಗದಲ್ಲಿ ಏರುತ್ತಿರುವ ಈ ಯುಗದಲ್ಲಿ ಅಸಾಧ್ಯ. ನನ್ನೂರಿನ ಬಹುಮಂದಿಗೆ ಹೊಟ್ಟೆಗೆ ಹಿಟ್ಟಿಲ್ಲದೆ ಇರುವಾಗ ನಾನು ಮತ್ತು ನನ್ನ ಕೆಲವರು ಮಾತ್ರ ಸುಖಾಸನಗಳಲ್ಲಿ ಹರಡಿಕೊಂಡು ಪುಷ್ಕಳ ಊಟ ಹೊಡೆಯುವುದು ಅಪಾಯಕಾರಿ' ಎನ್ನುವುದನ್ನು ನಮ್ಮ ಶಿಕ್ಷಣ ವಿದ್ಯಾರ್ಥಿಗಳಲ್ಲಿ ಮನದಟ್ಟು ಮಾಡಿಸಬೇಕಾಗಿದೆ. ಹಾಗೆಯೇ ವೈಜ್ಞಾನಿಕಾಗಿ ಯೋಚಿಸುವುದೆಂದರೆ ವಿಜ್ಞಾನ ವಿಷಯಗಳಲ್ಲಿ ಕೇವಲ ಪದವಿ ಪಡೆಯುವುದಲ್ಲ, ಬದಲಾಗಿ ಯಾವುದನ್ನೂ ಪ್ರಶ್ನಿಸದೆ ಬುದ್ಧಿಯ ಒರೆಗೆ ಹಚ್ಚದೆ ಒಪ್ಪಿಕೊಳ್ಳದೆ ಇರುವುದು ಎನ್ನುವುದನ್ನು ವಿಜ್ಞಾನ ಪಠ್ಯಪುಸ್ತಕ ಬರೆಯುವವರು ಪ್ರತಿಪುಸ್ತಕದ ಮೊದಲ ಪುಟದಲ್ಲಿ ಸ್ಪಷ್ಟವಾಗಿ ದಪ್ಪ ಅಕ್ಷರಗಳ್ಲಲಿ ಬರೆಯಬೇಕು.

ನೀತಿಯ ಕುರಿತಾದ ಜನರ ಮನೋಧರ್ಮ ಬದಲಾಗುವುದು ಸಾಮಾಜಿಕ ಬದಲಾವಣೆಯ ದೃಷ್ಟಿಯಿಂದ ಅವಶ್ಯಕ. ಈ ಮನೋಧರ್ಮವನ್ನು ಬದಲಾಯಿಸುವ ಕೆಲಸವನ್ನು ನೈತಿಕ ಶಿಕ್ಷಣ ಮಾಡಬೇಕು. ಸಮಾಜದ ಮುಖ ಬದಲಾದಂತೆ ನೈತಿಕ ಸಮಸ್ಯೆಗಳ ಮುಖವೂ ಬದಲಾಗುತ್ತದೆ ಎನ್ನುವುದನ್ನು ನೈತಿಕ ಶಿಕ್ಷಣ ಪಠ್ಯ ರಚಿಸುವವರು ಅರ್ಥ ಮಾಡಿಕೊಳ್ಳಬೇಕು.

ನಮ್ಮ ಶಿಕ್ಷಣ ಕಲಿಸಬೇಕಾದ ನೀತಿ ಯಾವುದು? ಎಂದರೆ, ಜೀವ ವಿರೋಧಿ ಮೌಲ್ಯಗಳನ್ನು ವಿರೋಧಿಸುವ ನೀತಿಯನ್ನು, ಯಜಮಾನ ಸಂಸ್ಕೃತಿಯನ್ನು ಕಿತ್ತೊಗೆಯುವ ಧೈರ್ಯದ ನೀತಿಯನ್ನು, ಯಾವುದೇ ಜಾತಿ ಪಂಗಡದಲ್ಲಿರುವ ತನ್ನ ಜಾತಿ/ಪಂಗಡದ ಇತರರಿಗೆ ಅವಮಾನವೆಸಗುವ, ಅವರ ಆತ್ಮ ಗೌರವಕ್ಕೆ ಧಕ್ಕೆ ತರುವ ಅಮಾನುಷ, ಅನಾಗರಿಕ, ಅರ್ಥಹೀನ ಆಚಾರಗಳನ್ನು. ಇದರ ಬದಲಾಗಿ, "ದೀನರಾಗಿ ದರಿದ್ರರಿಗೆ ಭಿಕ್ಷುಕರಿಗೆ ಅನುಕಂಪ ತೋರು, ಕರುಣೆ ತೋರು, ನೀನು ಲಪಟಾಯಿಸಿದ ನೂರರಲ್ಲಿ ಒಂದನ್ನು ದಾನಮಾಡು" ಎನ್ನುವ, ಬಡತನ ರೋಗರುಜಿನ ಅಸಹಾಯಕತೆಗಳನ್ನೇ ವೈಭವೀಕರಿಸುವ (glorify), ಹಾಗೆ ಅನುಕಂಪ ತೋರುತ್ತಾ ದಾನ ಮಾಡುತ್ತಾ ನಾವು ದೊಡ್ಡವರಾಗುತ್ತಾ ದೀನರನ್ನು ಕುಬ್ಜಗೊಳಿಸುವ ಮನುಷ್ಯನ ಘನತೆಗೇ ಘಾತ ಉಂಟುಮಾಡುವ ನೀತಿಯನ್ನಲ್ಲ.

## ನೈತಿಕ ಶಿಕ್ಷಣದ ನೆಪದಲ್ಲಿ ಬಹುಮುಖೀ ಸಂಸ್ಕೃತಿಯಲ್ಲಿ ಧಾರ್ಮಿಕ ಶಿಕ್ಷಣದ ಅಪಾಯ

ಭಾರತದಂತಹ ಒಂದು ಬಹುಮುಖೀ (pluralist) ಸಂಸ್ಕೃತಿಯಲ್ಲಿ, ವಿವಿಧ ಭಾಷೆ, ಜಾತಿ, ಮತ, ಪಂಥ, ಧರ್ಮ, ಆಹಾರ ವೈವಿಧ್ಯ, ಆಚಾರ ವಿಚಾರಗಳ ಜನರು ಜತೆಯಾಗಿ ಬಾಳುವ ಒಂದು ಸಮಾಜದಲ್ಲಿ ನೀತಿ ಶಿಕ್ಷಣ ಅಥವಾ ನೈತಿಕ ಶಿಕ್ಷಣದ ಹೆಸರಿನಲ್ಲಿ ಧಾರ್ಮಿಕ ಶಿಕ್ಷಣ ಶಾಲೆ ಕಾಲೇಜುಗಳೊಳಗೆ ನುಸುಳಿಕೊಳ್ಳುವ ಅಪಾಯ ಇದೆ. ಯಾಕೆಂದರೆ ಸದ್ಯದ ವ್ಯವಸ್ಥೆಯ ಟೀಕಾಕಾರರಲ್ಲಿ ಹಲವರು ಶಿಕ್ಷಣ ವ್ಯವಸ್ಥೆಯ ಎಲ್ಲ ದೋಷಗಳಿಗೂ ನೀತಿ ಶಿಕ್ಷಣವೇ ಪರಿಹಾರ, ಅಂತಹ ನೀತಿ ಶಿಕ್ಷಣ ಈಗ ಮಕ್ಕಳಿಗೆ ಸಿಗುತ್ತಿಲ್ಲ ಎಂದು ವಾದಿಸುತ್ತಾರೆ.

ಇಂದಿನ ಶಿಕ್ಷಣ ವ್ಯವಸ್ಥೆಯ ಬಗ್ಗೆ ದೂರುವ ಅನೇಕರು ಹೇಳುವ ಮಾತೆಂದರೆ, 'ಇಂದಿನ ಪಠ್ಯಪುಸ್ತಕಗಳಲ್ಲಿ ಮೌಲ್ಯಯುತವಾದ ಪಾಠಗಳಿಲ್ಲ. ಮುಖ್ಯವಾಗಿ ರಾಮಾಯಣ ಹಾಗೂ ಮಹಾಭಾರತದಿಂದ ಆಯ್ದ ಪಾಠಗಳಿಲ್ಲ. ನಾವೆಲ್ಲ ಕಲಿಯುವಾಗ ರಾಮಾಯಣ, ಭಾರತ ಹಾಗೂ ಭಾಗವತದಿಂದ ಆಯ್ದ ಪಾಠಗಳಿದ್ದವು. ಇವು ನಮ್ಮ ನೈತಿಕ ಪ್ರಜ್ಞೆಯನ್ನು ರೂಪಿಸಿದವು.' ಈ ಮಾತಿಗೆ ಅನೇಕ ಶಿಕ್ಷಕರೂ ದನಿಗೂಡಿಸುತ್ತಾರೆ. ಒಟ್ಟಿನಲ್ಲಿ ಅವರೆಲ್ಲರ ಆಕ್ಷೇಪವೆಂದರೆ ಸದ್ಯದ ಶಿಕ್ಷಣದಲ್ಲಿ 'ಮೌಲ್ಯ ಶಿಕ್ಷಣ'ಕ್ಕೆ ಅವಕಾಶ ಇಲ್ಲ ಎಂದು. (ರಾವ್ ಮಹಾಬಲೇಶ್ವರ: 2004)

ಆದರೆ ಈ ಆಕ್ಷೇಪ ನಿರಾಧಾರವಾದುದೆಂದು ಡಾ। ರಾವ್‌ರವರು ಉದಾಹರಣೆಗಳ ಮೂಲಕ ವಾದಿಸುತ್ತಾರೆ:

ಈ ಆಕ್ಷೇಪ ನಿರಾಧಾರವಾದುದು. ಇಂದು ದೇಶದಾದ್ಯಂತ ರಾಷ್ಟ್ರೀಯ ಶಿಕ್ಷಣ ನೀತಿ 1986 (ಪರಿಷ್ಕೃತ 1992) ಜಾರಿಯಲ್ಲಿದೆ. ಈ ಶಿಕ್ಷಣ ನೀತಿಯು ಭಾರತದ ಸ್ವಾತಂತ್ರ್ಯ ಸಂಗ್ರಾಮದ ಚರಿತ್ರೆ, ರಾಷ್ಟ್ರೀಯ ಅಸ್ಮಿತೆ, ಭಾರತದ ಸಾಂಸ್ಕೃತಿಕ ಪರಂಪರೆ, ಸಂವಿಧಾನಾತ್ಮಕ ಹಕ್ಕು ಬಾಧ್ಯತೆಗಳು, ಸಮಾನತೆ, ಪ್ರಜಾಪ್ರಭುತ್ವ ಹಾಗೂ ಸಮಾಜವಾದ, ಲಿಂಗ ಸಮಾನತೆ, ಸಾಮಾಜಿಕ ಅನಿಷ್ಟ ನಿವಾರಣೆ, ವೈಜ್ಞಾನಿಕ ಮನೋಭಾವದ ಬೆಳವಣಿಗೆ, ಪರಿಸರ ರಕ್ಷಣೆ, ಸಣ್ಣ ಕುಟುಂಬದ ಆಚರಣೆ ಮುಂತಾದ ಹತ್ತು ರಾಷ್ಟ್ರೀಯ ಮೂಲಾಂಶಗಳನ್ನು ಇದೇ ಮೊದಲ ಬಾರಿಗೆ ಗುರುತಿಸಿದೆಯಲ್ಲದೆ ಸಹನೆ, ಸಹಕಾರ, ಭ್ರಾತೃತ್ವ, ವಾತ್ಸಲ್ಯ, ಪರೋಪಕಾರ ಮೊದಲಾದ 84 ಮೌಲ್ಯಗಳನ್ನು ಎತ್ತಿ ಹೇಳಿದೆ. ಇವೆಲ್ಲವೂ ಎಲ್ಲ ಹಂತಗಳ ಪಠ್ಯಕ್ರಮದಲ್ಲಿ, ಪಠ್ಯಪುಸ್ತಕಗಳಲ್ಲಿ ಹಾಗೂ ಪಾಠ ಬೋಧನೆಯಲ್ಲಿ ಪ್ರತಿಬಿಂಬಿತವಾಗಬೇಕು ಎಂದು ನಿರ್ದೇಶಿಸಿದೆ. ಪಠ್ಯಪುಸ್ತಕಗಳ ರಚನೆಯಲ್ಲೂ ಈ ಮೂಲಾಂಶಗಳನ್ನು ಹಾಗೂ ಮೌಲ್ಯಗಳನ್ನು ಅಳವಡಿಸಲಾಗುತ್ತಿದೆ. ಭಾಷಾ ಪಾಠಪುಸ್ತಕಗಳ ರಚನೆಯಲ್ಲಂತೂ ಪ್ರತಿ ಪಾಠವನ್ನು ನಿಗದಿಪಡಿಸುವಾಗ ಮೇಲೆ ಹೇಳಿದ ಅಂಶಗಳನ್ನು ಚಾಚೂ ತಪ್ಪದೆ ಪಾಲಿಸಲಾಗುತ್ತಿದೆ. ಇದಕ್ಕಿಂತ ಮಿಗಿಲಾದ ಮೌಲ್ಯ ಶಿಕ್ಷಣ ಎಂದು ಪ್ರತ್ಯೇಕವಾದ ಅವಧಿ ನಿಗದಿಪಡಿಸಿ ಪಾಠ ಪಟ್ಟಿ ಒದಗಿಸುವುದಕ್ಕಿಂತ ಶಾಲಾ ಪಠ್ಯಕ್ರಮದ ಎಲ್ಲ ಚಟುವಟಿಕೆಗಳಲ್ಲಿ ಮೌಲ್ಯಾಂಶಗಳನ್ನು ಅಳವಡಿಸುವ ಈ ಕ್ರಮ ಹೆಚ್ಚು ಸೂಕ್ತ. ಹೀಗಿರುತ್ತ ಮೌಲ್ಯ ಶಿಕ್ಷಣಕ್ಕೆ ಎಡೆಯಿಲ್ಲ ಎನ್ನುವುದು ಅಸಂಬದ್ಧ ಪ್ರಲಾಪ. ಒಂದೊಮ್ಮೆ ಈ ಮೌಲ್ಯ ಶಿಕ್ಷಣ ಪರಿಣಾಮಕಾರಿ ಆಗುತ್ತಿಲ್ಲ ಎಂದಾದರೆ ಅದಕ್ಕೆ ಶಿಕ್ಷಕರನ್ನೇ ದೂರಬೇಕಾದೀತು. ಏಕೆಂದರೆ ಯಾವುದೇ ಪಾಠವನ್ನು ನಿಗದಿಪಡಿಸಿರುವ ಹಿನ್ನೆಲೆ ಏನು? ಅದರ ಬೋಧನ ಉದ್ದೇಶಗಳೇನು? ಎಂದು ಅರಿತು ಬೋಧಿಸುವುದು, ಮೌಲ್ಯಗಳನ್ನು ವಿದ್ಯಾರ್ಥಿಗಳ ಗಮನಕ್ಕೆ ತರುವುದು, ಮೌಲ್ಯ ಸ್ಪಷ್ಟೀಕರಣ ನೀಡುವುದು ಶಿಕ್ಷಕರ ಕರ್ತವ್ಯ. ಅದನ್ನು ಇಲಾಖೆಯೋ ಅಥವಾ ಮತ್ತಾರೋ ಮಾಡಲು ಬರುವುದಿಲ್ಲ.

ಇಂದಿನ ಪಠ್ಯಪುಸ್ತಕಗಳಲ್ಲಿ ರಾಮಾಯಣ, ಮಹಾಭಾರತ ಇತ್ಯಾದಿ ಪ್ರಾಚೀನ ಗ್ರಂಥಗಳಿಂದಾಯ್ದ ಭಾಗಗಳಿಲ್ಲ ಎನ್ನುವುದು ನಿರಾಧಾರವಾದ ಪೂರ್ವಾಗ್ರಹ ಪೀಡಿತ ಆರೋಪ. ಪ್ರಾಥಮಿಕ ಹಾಗೂ ಪ್ರೌಢಶಾಲಾ ಭಾಷಾ ಪಠ್ಯಪುಸ್ತಕಗಳಲ್ಲಿ ಪ್ರತಿ ತರಗತಿಯಲ್ಲೂ ಸಾಮಾನ್ಯವಾಗಿ ಒಂದಲ್ಲ ಒಂದು ಗದ್ಯ ಅಥವಾ ಪದ್ಯಪಾಠ ರಾಮಾಯಣ ಅಥವಾ ಮಹಾಭಾರತದ ಭಾಗವನ್ನು ಆಧರಿಸಿದೆ. ಹೀಗೆ ಆಯ್ದುಕೊಳ್ಳುವಾಗ ಉದಾತ್ತ ಮೌಲ್ಯಗಳ ಪ್ರತಿಪಾದನೆಯನ್ನು ಲಕ್ಷ್ಯದಲ್ಲಿಟ್ಟುಕೊಳ್ಳಲಾಗಿದೆ. ಮೇಲಾಗಿ ರಾಮಾಯಣ ಮಹಾಭಾರತಗಳಷ್ಟೇ ಮೌಲ್ಯದ ಗಣಿಗಳಲ್ಲ. ಇತರ ಸಾಹಿತ್ಯ ಭಾಗಗಳೂ ಮೌಲ್ಯ ಪ್ರತಿಪಾದನೆಯನ್ನು ಪ್ರಕಟವಾಗಿ ಇಲ್ಲವೆ ಪ್ರಚ್ಛನ್ನವಾಗಿ ಮಾಡುತ್ತವೆ. ಯಾವುದೇ ಸಾಹಿತ್ಯ ಕೃತಿಯ ಎಲ್ಲ ಅಂಗಗಳೂ ಉದಾತ್ತ ಮೌಲ್ಯಗಳನ್ನು ಪ್ರತಿಪಾದಿಸುತ್ತವೆ ಎನ್ನುವಂತಿಲ್ಲ. ರಾಮಾಯಣ ಹಾಗೂ ಮಹಾಭಾರತದಲ್ಲೂ ನಾವು ಹೇಸಿಗೆ ಪಡಬಹುದಾದ, ತಿರಸ್ಕರಿಸಬಹುದಾದ ಇಲ್ಲವೆ ತುಚ್ಛೀಕರಿಸಬಹುದಾದ ಹಲವು ಮೌಲ್ಯಗಳಿವೆ. ಆದುದರಿಂದ ರಾಮಾಯಣ ಹಾಗೂ ಮಹಾಭಾರತದಲ್ಲಿ ಆಯ್ದ ಭಾಗಗಳು ಪಠ್ಯದಲ್ಲಿದ್ದುದರಿಂದ ನಮ್ಮ ನೈತಿಕ ಪ್ರಜ್ಞೆ ಅರಳಿತು ಎಂಬ ಮಾತು ಪಾರ್ಶ್ವಸತ್ಯ.

ನಮ್ಮಲ್ಲಿ ಸಾಹಿತ್ಯ ಪ್ರಕಾರಗಳು ಅಭಿವೃದ್ಧಿ ಹೊಂದದೇ ಇದ್ದ ಕಾಲದಲ್ಲಿ ನಾವು ರಾಮಾಯಣ– ಮಹಾಭಾರತ ಕೃತಿಗಳಿಗೇ ಶರಣು ಹೋಗಬೇಕಾಗಿತ್ತು. ಇಂದು ಸಾಹಿತ್ಯ ಪಂಥಗಳು, ಪ್ರಕಾರಗಳು ವಿಪುಲವಾಗಿ ಬೆಳೆದಿವೆ.

## ತಳಮಟ್ಟದಲ್ಲಿ ಶಿಕ್ಷಕರ ಕೋಮುವಾದಿ ಮನೋಧರ್ಮ

ಸಮಾಜದಲ್ಲಿ ಶಾಂತಿ, ಸಹಬಾಳ್ವೆ ಹಾಗೂ ಕೋಮು ಸಾಮರಸ್ಯಕ್ಕಾಗಿ ಸರಕಾರ ಮತ್ತು ಶಿಕ್ಷಣ ತಜ್ಞರು ಯಾವುದೇ ಪಾಠವನ್ನು ಪಠ್ಯದಲ್ಲಿ ಅಳವಡಿಸಿದರೂ, ಅದೆಷ್ಟೇ ಆಧ್ಯಾತ್ಮಿಕ ಶಿಬಿರಗಳನ್ನು ನಡೆಸಿದರೂ ಅಂತಿಮವಾಗಿ ಅವೆಲ್ಲವೂ ಸಾಕಾರಗೊಳ್ಳಬೇಕಾದದ್ದು ಶಿಕ್ಷಕರ ಮೂಲಕ, ಶಾಲೆಯ ತರಗತಿಗಳಲ್ಲಿ 8ರಿಂದ 15ರ ವಯೋಮಾನದ ವಿದ್ಯಾರ್ಥಿಗಳ ಮನಸ್ಸಿನ ಮೇಲೆ ಗಾಢವಾದ ಪರಿಣಾಮ ಬೀರಬಲ್ಲವರು ಶಿಕ್ಷಕರು. ಆದ್ದರಿಂದ ತಳಮಟ್ಟದಲ್ಲಿ ಶಿಕ್ಷಕರು ಕೋಮುವಾದಿ ಮನೋಧರ್ಮವನ್ನು ಬೆಳೆಸಿಕೊಳ್ಳದೆ, ಕೋಮುವಾದಿಗಳಾಗದೆ ಯಾವುದೇ ಒಂದು ಧರ್ಮದ ವಕ್ತಾರರಾಗದೆ ಇರುವುದು ಭಾವೀ ಕೋಮುವಾದಿಗಳ ಜನನವನ್ನು ತಡೆಯುವಲ್ಲಿ ಬಹಳ ಮುಖ್ಯ ಪಾತ್ರವಹಿಸುತ್ತದೆ. ಆದರೆ ಇಂದು ಹಲವಾರು ಶಿಕ್ಷಕರು ತಮ್ಮ ಧರ್ಮದ ಧ್ವಜ ಹಿಡಿದೋ ಸಮವಸ್ತ್ರ ಧರಿಸಿಯೋ ತಮ್ಮ ಧಾರ್ಮಿಕ ಅಸ್ಮಿತೆಯನ್ನು ಅಫಿಲಿಯೇಶನನ್ನು ಜಾಹೀರುಪಡಿಸುವುದು ಕಾಣಿಸುತ್ತದೆ. ಇಂತಹ ಶಿಕ್ಷಕರು ತರಗತಿಗಳಲ್ಲಿ ಧಾರ್ಮಿಕ ಅಲ್ಪಸಂಖ್ಯಾತರ ಬಗ್ಗೆ ಯಾವ ರೀತಿಯ ಮಾತುಗಳನ್ನಾಡಬಹುದು, ಆ ಮಾತುಗಳನ್ನು ಕೇಳಿಸಿಕೊಳ್ಳುವ ಮಕ್ಕಳು ಪರಧರ್ಮದ ಬಗ್ಗೆ ಎಂತಹ ನಿಲುವುಗಳನ್ನು ಹೊಂದಬಹುದು ಎಂಬುದು ಊಹೆಗೆ ಬಿಟ್ಟ ವಿಚಾರ. ಇಂತಹ ಶಿಕ್ಷಕರು ತಾವು ಶಿಕ್ಷಕರಾಗಿರುವ ಸಂಸ್ಥೆಗಳಲ್ಲಿ ಮತೀಯವಾದದ ಬೀಜ ಬಿತ್ತುತ್ತಾರೆ. ಸಂಸ್ಥೆಯನ್ನೇ ಕೋಮುವಾದಿಯಾಗಿಸು (communalise)ತ್ತಾರೆ. ಮಂಗಳೂರಿಗೆ ಸಮೀಪದ ಪುತ್ತೂರು ತಾಲೂಕಿನ ಸರಕಾರಿ ಕಾಲೇಜೊಂದರಲ್ಲಿ ಒಂದು ನಿರ್ದಿಷ್ಟ ಧರ್ಮದ ಬ್ಯಾನರುಗಳು, ನೋಟೀಸು ಬೋರ್ಡ್‌ಗಳಲ್ಲಿ ಜಾಹೀರಾತುಗಳು ಕಾಣಿಸಿಕೊಂಡ ವರದಿಯನ್ನು ಇಲ್ಲಿ ಉಲ್ಲೇಖಿಸಬಹುದು (ಕರಾವಳಿ ಅಲೆ, ಮಂಗಳೂರು, 14.03.2010).

ಪ್ರತಿಯೊಂದು ಧರ್ಮದ ತಿರುಳು ಒಂದೇ, ಆಯಾ ಧರ್ಮದ ಆಚರಣೆಗಳಲ್ಲಿ ಮಾತ್ರ ವ್ಯತ್ಯಾಸವಿದೆ ಎಂಬ ಅರಿವನ್ನು ಧರ್ಮಗಳ ಕುರಿತಾದ ಶಿಕ್ಷಣ ಮಕ್ಕಳಲ್ಲಿ ಆರಂಭಿಕ ಹಂತದಿಂದಲೇ ಸೃಷ್ಟಿಸಬಲ್ಲದು. ಆದರೆ, ಧರ್ಮಗಳ ಕುರಿತಾದ ಶಿಕ್ಷಣದ ಪ್ರಶ್ನೆಯನ್ನು ಅತ್ಯಂತ ಜಾಗರೂಕತೆ ಹಾಗೂ ಸೂಕ್ಷ್ಮತೆಯಿಂದ ನಿಭಾಯಿಸಬೇಕಾಗುತ್ತದೆ. ಮೊತ್ತಮೊದಲಾಗಿ, ಶಿಕ್ಷಕರು ಎಲ್ಲ ಧರ್ಮಗಳ

ಮೂಲ ಗುರಿ/ಉದ್ದೇಶ (objectives)ಗಳನ್ನು ತಮ್ಮೊಳಗಾಗಿಸಿ (internalise)ಕೊಳ್ಳಬೇಕಾಗುತ್ತದೆ. ಮೂಲಭೂತವಾದ ಏಕತೆ ಹಾಗೂ ಎಲ್ಲ ಧರ್ಮಗಳಲ್ಲಿರುವ ಸಮಾನ ಅಂಶ (commonalities)ಗಳು ಶಿಕ್ಷಕರ ಶಿಕ್ಷಣದಲ್ಲಿ ಒಂದು ಸ್ಥಾನವನ್ನು ಪಡೆಯಬೇಕು. ವಿಶ್ವದ ಎಲ್ಲ ಧರ್ಮಗಳ ಮೂಲ ಸಿದ್ಧಾಂತಗಳ, ತತ್ವಗಳ ಅರಿವು ದ್ವೇಷ ಹಾಗೂ ಹಿಂಸೆಯನ್ನು ಹರಡುವ ನಿಟ್ಟಿನಲ್ಲಿ, ವಿಶ್ವ ಏಕತೆಯ ಸಂದರ್ಭದಲ್ಲಿ ಒಂದು ಪರಿಣಾಮಕಾರಿಯಾದ ಉಪಕರಣವಾಗಬಲ್ಲದು (ರಜ್‌ಪುತ್:2003, ಪುಟ 5)

ಆದ್ದರಿಂದ ಶಿಕ್ಷಕರು ಈ ಅರಿವನ್ನು ವಿದ್ಯಾರ್ಥಿಗಳಲ್ಲಿ ಹುಟ್ಟಿಸಬಲ್ಲರಾದರೆ ಮಾತ್ರ ತಳಮಟ್ಟದಲ್ಲಿ ಅವರು ಮಕ್ಕಳ ಮನಸ್ಸಿನಲ್ಲಿ ಸೆಕ್ಯುಲರ್ ಮನೋಧರ್ಮ ರೂಪುಗೊಳ್ಳುವಂತೆ ಮಾಡಲು ಶಕ್ಯರಾಗುತ್ತಾರೆ.

### ಮಾನವೀಯ ಮೌಲ್ಯಗಳ ಆಕೃತೀಕರಣದಲ್ಲಿ ಪಠ್ಯಪುಸ್ತಕಗಳ ಬಳಕೆ

ಮಾನವೀಯ ಮೌಲ್ಯಗಳನ್ನು ವಿದ್ಯಾರ್ಥಿಗಳಲ್ಲಿ ಪ್ರೇರೇಪಿಸುವ ಕೆಲಸವನ್ನು ಶಿಕ್ಷಕರು ತಾವು ಬಳಸುವ ಪಠ್ಯಪುಸ್ತಕಗಳ ಮೂಲಕ ಮಾಡಲು ಸಾಧ್ಯವಿದೆ. ಸಾರ್ವಕಾಲಿಕ ಮೌಲ್ಯಗಳಾದ ಗೆಳೆತನ, ಸಹವರ್ತಿತನ (companionship), ಪ್ರೀತಿ, ಕಷ್ಟದಲ್ಲಿರುವ ಇತರರಿಗೆ (ವಿಶೇಷವಾಗಿ ಅಶಕ್ತ ಮಹಿಳೆಯರಿಗೆ ಮತ್ತು ಮುದುಕ ಮುದುಕಿಯರಿಗೆ ನೆರವಾಗುವುದು), ಪ್ರಾಮಾಣಿಕತನ ಇತ್ಯಾದಿ ಮೌಲ್ಯಗಳ ಮಹತ್ವವನ್ನು ಸಾಹಿತ್ಯಪಠ್ಯದಲ್ಲಿ ಬರುವ ಕತೆ, ಕವಿತೆಗಳ ಮೂಲಕ ವಿದ್ಯಾರ್ಥಿಗಳಿಗೆ ಮನದಟ್ಟು ಮಾಡಿಸಬಹುದು. ಪ್ರೌಢಶಾಲಾ ಹಂತದಲ್ಲಿ ಬೇಂದ್ರೆಯವರ 'ಸಖೀಗೀತ'ವನ್ನು ಒಂದು ಪಠ್ಯವಾಗಿ ಬಳಸಿಕೊಳ್ಳಬಹುದು. ಮಾಧ್ಯಮಿಕ ಶಾಲಾ ಹಂತದ ಮಕ್ಕಳಿಗೆ ಪಂಚತಂತ್ರ ಕಥೆಗಳು ಉತ್ತಮ ಪಠ್ಯವಾಗಬಲ್ಲವು.

ಭಿನ್ನಮತ, ಸಂವಾದ, ಸಹಬಾಳ್ವೆ, ಧಾರ್ಮಿಕ ಸಹನೆ, ಭಾಷೆ ಮತ್ತು ಸಾಹಿತ್ಯದ ಪಠ್ಯಗಳಲ್ಲಿ ಮಾನವೀಯ ಸಂಬಂಧಗಳನ್ನು ವಸ್ತುವಾಗಿ ಉಳ್ಳ ಪಠ್ಯಗಳನ್ನು ಬೋಧಿಸುವಾಗ, ಉದಾಹರಣೆಗೆ ಯಾವುದೇ ಘರ್ಷಣೆ, ಗೆಳೆಯರ ನಡುವೆ ತಪ್ಪು ತಿಳಿವಳಿಕೆ, ಸಹೋದರರ ಮಧ್ಯೆ ಆಸ್ತಿಗಾಗಿ ಕಲಹ ಹಿಂದೂ-ಮುಸ್ಲಿಂ ಭ್ರಾತೃತ್ವದಂತಹ ಕಥಾವಸ್ತು ಚರ್ಚಿತವಾಗುವಾಗ ಶಿಕ್ಷಕರು ಭಿನ್ನಮತ, ಸಂವಾದ,

ಸಹಬಾಳ್ವೆ ಮತ್ತು ಧಾರ್ಮಿಕ ಸಹನೆಯನ್ನು ಅಂದಿನ ಬೋಧನೆಯ ಕೇಂದ್ರಬಿಂದುವಾಗಿ ಮಾಡಿಕೊಳ್ಳಬೇಕು. ಫ್ಯಾಸಿಸಂ, ಫ್ಯಾಸಿಸ್ಟರು, ಮತೀಯವಾದಿಗಳು ಹೇಗೆ ಭಿನ್ನಮತ, ಸಂವಾದ ಹಾಗೂ ಸಹನೆಯನ್ನು ಹತ್ತಿಕ್ಕಲು ಪ್ರಯತ್ನಿಸುತ್ತಾರೆ, ಇಂತಹ ಪ್ರಯತ್ನಗಳು ಹೇಗೆ ಸಮಾಜದಲ್ಲಿ ದ್ವೇಷ, ಅಸಹನೆಯ ವಾತಾವರಣ ಹರಡುತ್ತವೆ ಎಂಬುದನ್ನು ಉದಾಹರಣೆಗಳ ಮೂಲಕ ವಿಷದಪಡಿಸಬೇಕು.

ಉದಾಹರಣೆಗೆ "ಪ್ರಣಯಗಳ ದಿನ ಆಚರಿಸಕೂಡದು, ಹೆಣ್ಣುಮಕ್ಕಳು ಜೀನ್ಸ್ ಪ್ಯಾಂಟ್ ಧರಿಸಕೂಡದು, ಒಂದು ಧರ್ಮಕ್ಕೆ ಸೇರಿದ ಹುಡುಗಿ ಅನ್ಯಧರ್ಮೀಯ ಹುಡುಗನ ಜತೆ ಆಪ್ತವಾಗಿ ಮಾತಾಡಕೂಡದು" ಎಂದು ವಾದಿಸುವ ಶಕ್ತಿಗಳು ಇಂದು ಊರು ಊರಿನಲ್ಲಿ ಸಾಮಾಜಿಕ ಬಿಗಿತ ಉಂಟು ಮಾಡಲು ಪ್ರಯತ್ನಿಸುತ್ತಿದ್ದಾರೆ. ಊರಿನಲ್ಲಿ ಇಂತಹ ಪ್ರಕರಣಗಳು ನಡೆದಾಗ ಅಥವಾ ಪತ್ರಿಕೆಗಳಲ್ಲಿ ವರದಿಯಾದಾಗ ಆ ವರದಿಯನ್ನು ತರಗತಿಯಲ್ಲಿ ಉಲ್ಲೇಖಿಸಿ "ಈ ಘಟನೆಯನ್ನು ನೀವು ಹೇಗೆ ನಿಭಾಯಿಸುತ್ತೀರಿ"? ಎಂದು ವಿದ್ಯಾರ್ಥಿಗಳನ್ನು ಕೇಳಿ ಅವರಲ್ಲೆ ಪರಸ್ಪರ ಚರ್ಚೆ ನಡೆಯುವಂತೆ ಮಾಡಬಹುದು. ತರಗತಿಯನ್ನು ಎರಡು ಅಥವಾ 2ಕ್ಕಿಂತ ಹೆಚ್ಚು ಗುಂಪುಗಳಾಗಿ ವಿಂಗಡಿಸಿ, ಪ್ರತಿ ಗುಂಪಿಗೂ ಒಬ್ಬ ತಂಡದ ನಾಯಕನನ್ನು ನಿಗದಿಪಡಿಸಿ, ತಂಡಗಳಲ್ಲಿ 'ವಿದ್ಯಾರ್ಥಿನಿಯೊಬ್ಬಳು ಅನ್ಯಕೋಮಿನ ಯುವಕನ ಜತೆ ಮಾತಾಡಿದ ಘಟನೆ'ಯ ಕುರಿತು ಚರ್ಚೆ ನಡೆಯುವಂತೆ ಮಾಡಬಹುದು. ಚರ್ಚೆ ನಡೆಯುವ ವೇಳೆ ಶಿಕ್ಷಕರು ತರಗತಿಯನ್ನು ಮೇಲ್ವಿಚಾರಣೆ (monitor) ಮಾಡಬೇಕು.

ಚರ್ಚೆಗೆ 15–20 ನಿಮಿಷ ನಿಗದಿಗೊಳಿಸಬೇಕು. ಬಳಿಕ ಚರ್ಚೆಯ ಫಲಿತಾಂಶವನ್ನು ಹಾಗೂ ಘಟನೆ ಬಗ್ಗೆ ತಂಡದ ಸದಸ್ಯರ ಅಂತಿಮ ತೀರ್ಪನ್ನು ಪ್ರತಿ ತಂಡದ ನಾಯಕನೂ ಓದಿ/ಮೌಖಿಕವಾಗಿ ಹೇಳಬೇಕು. ಬೇಕಿದ್ದಲ್ಲಿ ಘಟನೆಯ ನಾಟಕೀಕರಣ (simulation)ವನ್ನು ಕೂಡ ವಿದ್ಯಾರ್ಥಿಗಳಿಂದ ಮಾಡಿಸಬಹುದು. ಶಿಕ್ಷಕರು ಸ್ವಲ್ಪ ಸೃಜನಶೀಲರಾದರೆ ಇಂತಹ ನಾಟಕೀಕರಣ ಹಾಗೂ ತಂಡ ಚರ್ಚೆ (group discussion)ಗಳ ಮೂಲಕ ಹಲವು ಮಾನವೀಯ ಮೌಲ್ಯಗಳನ್ನು ವಿದ್ಯಾರ್ಥಿಗಳಲ್ಲಿ ಆಕೃತೀಕರಿಸ(mould)ಬಹುದು.

## ಪಳೆಯುಳಿಕೀಕೃತ, ಸಮೂಹ ನಿಯಂತ್ರಿತ ಯೋಚನಾ ವಿಧಾನದ ಅ-ಸಾಂಸ್ಥೀಕರಣ (deschooling)

ಈ ಹಿಂದಿನ ಭಾಗದಲ್ಲಿ ಉಲ್ಲೇಖಿಸಲಾದ ಘಟನೆಗಳಿಗೆ ಸಂಬಂಧಿಸಿ ನಮ್ಮ ವಿದ್ಯಾರ್ಥಿಗಳು, ಅವರ ಪೋಷಕರು, ಮಹಿಳೆಯರು ಸಾಮಾನ್ಯವಾಗಿ ಓಬೀರಾಯನ ಕಾಲದ ಪಳೆಯುಳಿಕೀಕೃತ ಹಾಗೂ ಸಮೂಹ ನಿಯಂತ್ರಿತವಾದ ಯೋಚನಾ ವಿಧಾನಗಳನ್ನೆ ಅಳವಡಿಸಿಕೊಂಡಿರುತ್ತಾರೆ. ಸಮೂಹ ಮಾಧ್ಯಮಗಳಲ್ಲಿ, ವಿಶೇಷವಾಗಿ ಟಿವಿ ಚ್ಯಾನೆಲ್‌ಗಳಲ್ಲಿ ಪ್ರಸಾರವಾಗುವ ಸಿನಿಮಾಗಳು ಹಾಗೂ ಹೆಣ್ಣನ್ನೆ ಗುರಿಯಾಗಿರಿಸಿಕೊಂಡು ತಯಾರಾಗುವ ಧಾರಾವಾಹಿಗಳು, ಅರಿಶಿನ-ಕುಂಕುಮ-ಸಪ್ತಪದಿ-ತಾಳಿ-ಸುಖಶಯನ-ತಾಯ್ತನ-ವಿರಹ ವೈಧವ್ಯದ ಸುತ್ತ ಗಿರಕಿ ಹೊಡೆಯುವ ಕಥಾನಕಗಳು ಹೆಣ್ಣು-ಸಂಪ್ರದಾಯ-ಧರ್ಮದ ಬಗ್ಗೆ ವೀಕ್ಷಕರು ಸ್ವಂತ ನೆಲೆಯಲ್ಲಿ ಯೋಚಿಸಲು ಸಾಧ್ಯವಾಗದಷ್ಟು ಮಟ್ಟಿಗೆ ಅವರ ಯೋಚನೆಯನ್ನು ನಿಯಂತ್ರಿಸುತ್ತವೆ. ಇದು ರಾಶ್ಯುತ್ಪನ್ನ (mass production)ದ ಹಾಗೆಯೇ ರಾಶಿ ಚಿಂತನೆ (mass thinking).

ಇಂತಹ ಯೋಚನೆಗೆ, ಯೋಚನೆಯ ನಿಯಂತ್ರಣಕ್ಕೆ ಕಡಿವಾಣ ಹಾಕಬೇಕಾದರೆ ಹೀಗೆಲ್ಲ ಯೋಚಿಸಲು ನೆರವಾಗುವ ಮಾಧ್ಯಮ ವ್ಯವಸ್ಥೆ ಬದಲಾಗಬೇಕು. ವ್ಯವಸ್ಥೆಯ ಅಸಾಂಸ್ಥೀಕರಣವಾಗಬೇಕು; ಅಂದರೆ ಪರ್ಯಾಯ ಚಿಂತನಾ ಕ್ರಮವನ್ನು ಪ್ರಚುರಪಡಿಸಬೇಕು.

## ಅಸಾಂಸ್ಥೀಕರಣದಲ್ಲಿ ಮಹಿಳೆಯರ ಪಾತ್ರ

ಈ ಅಸಾಂಸ್ಥೀಕರಣದಲ್ಲಿ ಶಾಲೆಯಲ್ಲಿ ಶಿಕ್ಷಕರು ಮತ್ತು ಮನೆಯಲ್ಲಿ ಮಹಿಳೆಯರು ಗಣನೀಯ ಪಾತ್ರವಹಿಸಬಲ್ಲರು. ಉದಾಹರಣೆಗೆ, 'ಅನ್ಯಕೋಮಿನ ಯುವಕ/ಯುವತಿ ಪ್ರೇಮ ಪ್ರಕರಣ'ವೊಂದು ನಡೆದಾಗ **ಹೊರಗೆ** ಸಾರ್ವಜನಿಕವಾಗಿ ಮತ್ತು ಮಾಧ್ಯಮದಲ್ಲಿ ಕೂಡ ಬಿಸಿ ವಾತಾವರಣ ಕಂಡುಬರುತ್ತದೆ. ಆಗ ಮನೆಯ **ಒಳಗೆ** ಮಹಿಳೆ ತನ್ನ ಮಕ್ಕಳ ಮತ್ತು ಪತಿಯ ಜತೆ ಚರ್ಚಿಸಿ, ಇಂತಹ ಘಟನೆಯ ರಾಜಕೀಯ ಲಾಭ ಪಡೆಯಲು ಸ್ವ-ಹಿತಾಸಕ್ತ ಗುಂಪುಗಳು ನಡೆಸುವ ಕರಾಮತ್ತನ್ನು ಅರ್ಥಮಾಡಿಕೊಳ್ಳಬೇಕು. ಭಾವನಾತ್ಮಕವಾಗಿ ತುಂಬ ಸೂಕ್ಷ್ಮವಾದ ಇಂತಹ ವಿಷಯದ ಬಗ್ಗೆ ಅತಿಭಾವುಕರಾಗದಂತೆ ಮಹಿಳೆಯರು ಕುಟುಂಬದ ಸದಸ್ಯರಿಗೂ, ತಮ್ಮ ನೆರೆಕರೆಯ ಮಹಿಳೆಯರಿಗೂ ಸಿಹಿ ಒತ್ತಾಯಮಾಡಬಹುದು; ಮನವರಿಕೆ ಮಾಡಿಸಬಹುದು.

ಸಾಮಾಜಿಕ ಬಿಗಿತಕ್ಕೆ ಕಾರಣವಾಗುವ ರೀತಿಯಲ್ಲಿ ಭಾವಾವೇಶದ ಮಾತುಗಳನ್ನಾಡುವ ಕುಟುಂಬದ ಸದಸ್ಯರಿಗೆ ಸಮಾಧಾನ ಹೇಳಿ ಅವರನ್ನು ಸಂತೈಸುವ ಮಹಿಳೆಯರು ಸಮೂಹ ನಿಯಂತ್ರಿತ ಯೋಚನಾ ವಿಧಾನದ ಅಸಾಂಸ್ಥೀಕರಣಕ್ಕೆ ಮಹತ್ವಪೂರ್ಣ ಕಾಣಿಕೆ ನೀಡಿದಂತಾಗುತ್ತದೆ.

**ಶಿಕ್ಷಕರ ಸೂಕ್ಷ್ಮಗ್ರಾಹೀಕರಣದ ಅವಶ್ಯಕತೆ**

ಮೌಲ್ಯ ಶಿಕ್ಷಣ, ಮಹಿಳೆಯರಿಗೆ ಗೌರವ ಮತ್ತು ಸೂಕ್ತ ಸ್ಥಾನಮಾನ, ಕೋಮುಸಾಮರಸ್ಯ – ಯಾವುದೇ ಇರಲಿ; ಶಿಕ್ಷಕರು ಸಮಸ್ಯೆಗಳ ಬಗ್ಗೆ ಸೂಕ್ಷ್ಮಗ್ರಾಹಿ, ಸೂಕ್ಷ್ಮಸಂವೇದಿ (sensitive)ಗಳಾಗದೆ ಇದ್ದರೆ ಶಿಕ್ಷಣದ ಉದ್ದೇಶ ಈಡೇರುವುದಿಲ್ಲ. ತಮ್ಮ ಪರಿಸರದಲ್ಲಿ ಕೋಮುಸೂಕ್ಷ್ಮವಾದ (communally sensitive) ಘಟನೆಯೊಂದು ನಡೆದಾಗ ವಿದ್ಯಾರ್ಥಿಗಳು ಆ ಘಟನೆಯ ಬಗ್ಗೆ ತರಗತಿಯಲ್ಲಿ ಕೆಲವು ನಿಮಿಷಗಳ ಕಾಲವಾದರೂ ಮುಕ್ತವಾಗಿ ಚರ್ಚಿಸಲು ಶಿಕ್ಷಕರು ಅವಕಾಶ ಮಾಡಿಕೊಡಬೇಕು. ಆಗ ವಿದ್ಯಾರ್ಥಿಗಳಿಂದ ಯಾವ ರೀತಿಯ ಪ್ರತಿಕ್ರಿಯೆಗಳು ಬರುತ್ತವೆಂಬುದನ್ನು ಗ್ರಹಿಸಬೇಕು. ಯಾವುದೇ ಕೋಮು ಗಲಭೆ ಎಲ್ಲೇ ನಡೆದರೂ ಅದರಿಂದ ಅಂತಿಮವಾಗಿ ತೊಂದರೆಗೊಳಗಾಗುವವರು ಅಮಾಯಕರು, ಮಕ್ಕಳು ಹಾಗೂ ಹೆಂಗಸರು, ಮುಗ್ಧ ಜನರು; ಆದ್ದರಿಂದ ಕೋಮುಘರ್ಷಣೆಗೆ ಆಸ್ಪದ ನೀಡುವಂತಹ ಯಾವುದೇ ಮಾತು ಹಾಗೂ ಕಾರ್ಯದಿಂದ ನಾವು ದೂರ ಉಳಿಯಬೇಕು ಎಂಬ ಸಂದೇಶ ವಿದ್ಯಾರ್ಥಿಗಳಿಗೆ ತಲುಪಿಸಬೇಕಾದವರು ಶಿಕ್ಷಕರು. ಆದ್ದರಿಂದ ಅವರು ಕೋಮು ಹಿಂಸೆಗೆ ಸೂಕ್ಷ್ಮಸಂವೇದಿಗಳಾಗಿರುವುದು ಅತ್ಯಗತ್ಯ.

ಶಿಕ್ಷಕರನ್ನು ಸೂಕ್ಷ್ಮಸಂವೇದಿಗಳಾಗಿಸಲು ಸರಕಾರ ಮತ್ತು ಆಡಳಿತ ಮಂಡಳಿಗಳು ತಜ್ಞರಿಂದ ಶಿಕ್ಷಕರಿಗೆ ಸೂಕ್ಷ್ಮಗ್ರಾಹೀಕರಣದ ಶಿಬಿರಗಳನ್ನು (sensitization camps) ನಡೆಸುವ ನೀಲಿನಕಾಶೆ ಹಾಕಿಕೊಳ್ಳಬೇಕು. ಇದನ್ನು ಅನುಷ್ಠಾನಗೊಳಿಸಬೇಕು.

## ಗಾಂಧೀ ಮೌಲ್ಯಗಳನ್ನು (Gandhian values) ಆಧರಿಸಿದ ಶಾಂತಿ ಶಿಕ್ಷಣದ ಕೋರ್ಸ್‌ನ ಒಂದು ಪಠ್ಯ

### ಪೀಠಿಕೆ

2005ರ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (ನ್ಯಾಶನಲ್ ಕರಿಕ್ಯುಲಂ ಫ್ರೇಮ್‌ವರ್ಕ್)ವಿನಲ್ಲಿ 'ಶಾಂತಿಗಾಗಿ ಶಿಕ್ಷಣ'ವನ್ನು ಶಾಲಾ ಹಂತದಲ್ಲಿ ಅಳವಡಿಸಬೇಕೆಂದು ಪ್ರಸ್ತಾವಿಸಲಾಗಿದೆ. ಈ ಹಿನ್ನೆಲೆಯಲ್ಲಿ ಗಾಂಧೀ ಮೌಲ್ಯಗಳನ್ನು ಆಧರಿಸಿದ ಶಾಂತಿ ಶಿಕ್ಷಣದ ಕೋರ್ಸ್‌ನ ಒಂದು ಪಠ್ಯವನ್ನು ತಯಾರಿಸುವುದು ಸಾಧ್ಯವೆ? ಎಂದು ಈ ಭಾಗದಲ್ಲಿ ಪರಿಶೀಲಿಸಲಾಗಿದೆ.

### ಗಾಂಧಿ: ವ್ಯಕ್ತಿ ಮತ್ತು ಶಕ್ತಿ

ಜಗತ್ತಿನಾದ್ಯಂತ ಇಂದು ಗಾಂಧೀಜಿಯವರನ್ನು ಸತ್ಯ ಮತ್ತು ಅಹಿಂಸೆಯ ಪ್ರವಾದಿ ಶಾಂತಿದೂತ, ಸಂತ ರಾಜಕಾರಣಿ ಎಂದು ಕೊಂಡಾಡಲಾಗುತ್ತಿದೆ. ವಿಶಿಷ್ಟ ವ್ಯಕ್ತಿತ್ವದ ಗಾಂಧೀಜಿ ಇಪ್ಪತ್ತನೇ ಶತಮಾನದ ಒಂದು ಪವಾಡ.

ಗಾಂಧೀಜಿಯವರ ಒಟ್ಟು ವ್ಯಕ್ತಿತ್ವದಲ್ಲಿ ಸಂವಾದವೇ ಸತ್ಯಶೋಧನೆಯ ಮುಖ್ಯ ವಿಧಾನವಾಗಿತ್ತು. ನಾಗರೀಕತೆಯ ಪಾಶ್ಚಾತ್ಯ/ಅಮೆರಿಕನ್ ಮಾದರಿಯಲ್ಲಿ ಸಂವಾದ ಇಲ್ಲ, ಸ್ವಗತ ಭಾಷಣ ಇದೆ. ತಾನು ಶ್ರೇಷ್ಠವೆಂದು ಪರಿಗಣಿಸುವುದನ್ನು ಇತರರ ಮೇಲೆ ಹೇರುವ ಒರಟು ಮನೋಭಾವ ಇದೆ. ಇದು ನಿಜವಾಗಿ ಹಳೆಯ ವಸಾಹತುಶಾಹಿ ವ್ಯವಸ್ಥೆಯ ಮುಂದುವರಿಕೆಯಲ್ಲದೆ ಬೇರೇನೂ ಅಲ್ಲ. ವಸಾಹತುಶಾಹಿ ಆಡಳಿತ ಕೊನೆಗೊಂಡಿದ್ದರೂ ನಮ್ಮ ದೇಶದಲ್ಲಿ ಪಾಶ್ಚಾತ್ಯ ಯಂತ್ರ ಸಂಸ್ಕೃತಿಯ ಪ್ರಾಬಲ್ಯ ಇನ್ನೂ ಇದೆ. ಪಾಶ್ಚಾತ್ಯ ಜಗತ್ತಿನ ವಿಚಾರ, ವಿಜ್ಞಾನ, ತಂತ್ರಜ್ಞಾನ ನಮ್ಮನ್ನು ಎಷ್ಟರಮಟ್ಟಿಗೆ ತನ್ನೊಳಗಾಗಿಸಿಕೊಂಡಿದೆಯೆಂದರೆ ನಮಗೆ ಈಗ ಇರುವ ಸಮಾಜಕ್ಕಿಂತ, ವಿಶ್ವವ್ಯವಸ್ಥೆಗಿಂತ ಭಿನ್ನವಾದ ಸಮಾಜವನ್ನು, ವಿಶ್ವವ್ಯವಸ್ಥೆಯನ್ನು ಕಲ್ಪಿಸಿಕೊಳ್ಳುವುದೇ ಕಷ್ಟವಾಗುತ್ತಿದೆ. ಟೂತ್‌ಪೇಸ್ಟ್ ಸಿಗಲಾರದ ಮಾರ್ನಿಂಗ್ ನಮಗೆ 'ಗುಡ್' ಮಾರ್ನಿಂಗ್ ಆಗುವುದಿಲ್ಲ ಅನ್ನಿಸುತ್ತದೆ. ಹೀಗಾಗಿ ಆಧುನಿಕ ವಿಜ್ಞಾನ ವೈದ್ಯಕೀಯವನ್ನು, ಯಂತ್ರಗಳನ್ನು ಹಾಗೂ ಯಂತ್ರಗಳಿಗಿಂತ ಹೆಚ್ಚಾಗಿ "ಯಂತ್ರ ಯಂತ್ರವೆಂಬ ಭ್ರಾಂತಿಯನ್ನು" ಖಂಡಿಸುವ ಗಾಂಧೀಜಿ ನಮಗೆ "ಅನಾಗರಿಕ" ಅಥವಾ "ಹಳೆಯ ಕಾಲದ ಗೊಡ್ಡು" ಅನ್ನಿಸಿದರೆ

ಆಶ್ಚರ್ಯವಿಲ್ಲ ಅಥವಾ ಕೇವಲ ಪೂಜಿಸಲ್ಪಡಬೇಕಾದ "ಪವಿತ್ರಹಸು" ಅನ್ನಿಸಿದರೂ ಆಶ್ಚರ್ಯವಿಲ್ಲ. ಆದರೆ ವಿಶಿಷ್ಟ ಹಾಗೂ ವಿಚಿತ್ರ ವ್ಯಕ್ತಿತ್ವದ ಗಾಂಧೀಜಿ 'ಆಧುನಿಕ ಭಾರತದ ಮತ್ತು ಜಗತ್ತಿನ ಉಳಿವಿಗೆ ಎಷ್ಟು ಅವಶ್ಯಕ ಮತ್ತು ಎಷ್ಟು ಅನಿವಾರ್ಯವೆಂದು ತಿಳಿಯಬೇಕಾದರೆ ಗಾಂಧೀಜಿಯವರ ವಿಚಾರಗಳ ಸಂಕೀರ್ಣತೆಯನ್ನು, ಒಳತಿರುಳನ್ನು ಅರ್ಥಮಾಡಿಕೊಳ್ಳಬೇಕು. ಉದಾಹರಣೆಗೆ, ಇವತ್ತಿನ ಪ್ರಪಂಚದ ಅಸ್ತಿತ್ವಕ್ಕೆ ಸವಾಲಾಗಿರುವ ಅಧಿಕಾರಪಿಪಾಸಿ ಸಂಘಟಿತ ಧರ್ಮ ಮತ್ತು ರಾಜಕೀಯವನ್ನೆ ತೆಗೆದುಕೊಳ್ಳೋಣ.

ಭಾರತವನ್ನು ವಸಾಹತುಶಾಹಿ ಆಡಳಿತದಿಂದ ಕಳಚುವ, ಬಿಡಿಸುವ ಅಂದರೆ ಡೀಕೊಲೋನೈಸ್ ಮಾಡುವ ಒಂದು ನಿರಂತರ ಪ್ರಕ್ರಿಯೆಯಾಗಿ ಗಾಂಧೀಜಿಯವರ ಇಡೀ ರಾಜಕೀಯ ಹೋರಾಟವನ್ನು ವಿಶ್ಲೇಷಿಸುವುದು ಸಾಧ್ಯ. ಸ್ಟಾರ್ ಟಿ.ವಿ. ಆದಿಯಾಗಿ ಬೃಹತ್ ಸಮೂಹ ಮಾಧ್ಯಮ ಜಾಲದ ಮೂಲಕ ಜಗತ್ತನ್ನು ನುಂಗಿ ನೊಣೆಯಲು ಹೊರಟಿರುವ ಪಾಶ್ಚಾತ್ಯ ವ್ಯವಸ್ಥೆಯ ವಿರುದ್ಧ ಸೆಟೆದು ನಿಲ್ಲಲು, ತನ್ನ ಅನನ್ಯತೆಯನ್ನು ಪ್ರತಿಪಾದಿಸಲು ಪೌರ್ವಾತ್ಯ ಜಗತ್ತಿಗೆ ಗಾಂಧೀಜಿ ತುಂಬ ಮುಖ್ಯವಾಗುತ್ತಾರೆ. ಪಾಶ್ಚಾತ್ಯ ಸಂಸ್ಕೃತಿಯ ಸಾರ್ವಭೌಮತೆಯನ್ನು ಪ್ರಶ್ನಿಸದೆ, ವಿರೋಧಿಸದೆ ಅ–ವಸಾಹತುಶಾಹೀಕರಣ, ನಮ್ಮ ಮನಸ್ಸುಗಳ ಡಿಕೊಲೊನೈಜೇಶನ್ ಅಸಾಧ್ಯ.

ಆಧುನಿಕ ಇತಿಹಾಸದ ಒಂದು ಅದ್ಭುತವೆನ್ನಬಹುದಾದ ಗಾಂಧೀಜಿ ಜಗತ್ತಿನ ಯಾವುದೇ ರಾಜಕೀಯ ಅಥವಾ ಧಾರ್ಮಿಕ ನಾಯಕ ಬಳಸದಷ್ಟು ಪರಿಣಾಮಕಾರಿಯಾಗಿ ಸತ್ಯ ಮತ್ತು ಅಹಿಂಸೆಯ ಅಸ್ತ್ರವನ್ನು ಬಳಸಿದವರು. ಅವರಿಗೆ ಸತ್ಯ ತಾನು ತಲುಪಬೇಕಾದ ಗುರಿಯಾದರೆ ಅಹಿಂಸೆ ಆ ಗುರಿ ತಲುಪಲು ಒಂದು ಮಾರ್ಗವಾಗಿತ್ತು ಮತ್ತು ಸತ್ಯ, ಅಹಿಂಸೆ, ಪ್ರೀತಿ ಹಾಗೂ ದೇವರು ಪರಸ್ಪರ ಅದಲುಬದಲು ಮಾಡಬಹುದಾದ ಶಬ್ದಗಳಾಗಿದ್ದವು. ಆದ್ದರಿಂದಲೆ ಧರ್ಮ ಮತ್ತು ರಾಜಕೀಯ ಕೂಡ ಅವರಿಗೆ ಪರಸ್ಪರ ಅದಲುಬದಲು ಮಾಡಬಹುದಾದ, ಒಂದೇ ಅರ್ಥ ಇರುವ, ಸಮಾನಮಟ್ಟದ ಪಾವಿತ್ರ್ಯ, ಪರಿಶುದ್ಧತೆ ಉಳ್ಳ ಶಬ್ದಗಳಾಗಿದ್ದವು. ಗಾಂಧೀಜಿ ರಾಜಕೀಯದಲ್ಲಿ ಧರ್ಮ ಬೆರೆಸಿದ ಮೊದಲಿಗ ಎನ್ನುವವರು ನೆನಪಿನಲ್ಲಿಡಬೇಕು: ಈಗಿನ ರಾಜಕಾರಣಿಗಳ ಹಾಗೆ ಧರ್ಮ ಗಾಂಧೀಜಿಗೆ ಸ್ವಂತಕ್ಕಾಗಿ ರಾಜಕೀಯ ಅಧಿಕಾರ ಪಡೆಯುವುದಕ್ಕೆ ಒಂದು ರಾಜಕೀಯ ರೂಟ್ ಆಗಿರಲಿಲ್ಲ. ಯಾವುದೇ ಬೆರಕೆ ಸಾಧ್ಯವಾಗಬೇಕಾದರೆ ಎರಡು ವಸ್ತು

/ ವಿಷಯಗಳಿರಬೇಕು. ಗಾಂಧೀಜಿಗೆ ಧರ್ಮ ಮತ್ತು ರಾಜಕೀಯ ಎರಡು ಬೇರೆ ಬೇರೆ ಸಂಗತಿಗಳಾಗಿರಲಿಲ್ಲ. ಅವರಿಗೆ ಎರಡೂ ಒಂದೇ ಆಗಿತ್ತು. ರಾಜಕೀಯ ಧರ್ಮವಾಗಿತ್ತು. ಧರ್ಮ ರಾಜಕೀಯವಾಗಿತ್ತು.

ಗಾಂಧೀಜಿಯವರಿಗೆ ಧರ್ಮದ ನೀತಿ, ಮಾನವೀಯತೆ, ಅನುಕಂಪ, ಪ್ರೇಮ ರಾಜಕೀಯದ ನೀತಿ, ಮಾನವೀಯತೆಗಿಂತ, ಅನುಕಂಪ ಪ್ರೇಮಕ್ಕಿಂತ ಭಿನ್ನವಾಗಿರಲಿಲ್ಲ. ಧರ್ಮದಲ್ಲಿ ಹೇಗೋ ಹಾಗೆಯೇ ರಾಜಕೀಯದಲ್ಲೂ ಗಾಂಧೀಜಿ ಸಂವಾದದ ಪ್ರತಿಪಾದಕರಾಗಿದ್ದರು. ಅವರಿಗೆ ಧರ್ಮ ಹೇಗೆ ಸತ್ಯ ಮತ್ತು ಅಹಿಂಸೆಯ ಮಂದಿರವಾಗಿತ್ತೋ ಹಾಗೆಯೇ ರಾಜಕೀಯವೂ ನೀತಿ, ಸತ್ಯ ಮತ್ತು ಅಹಿಂಸೆಯ ನಿಲಯವಾಗಿತ್ತು. ಇವತ್ತು ರಾಜಕೀಯವನ್ನಷ್ಟೇ ಅಲ್ಲ, ಧರ್ಮವನ್ನು ಕೂಡ ಅಪಾವಿತ್ರ್ಯ ಅಸತ್ಯದ, ಸಂಪತ್ತು ಹಾಗೂ ಅಧಿಕಾರ ಲಾಲಸೆಯ ಮೂಟೆಯಾಗಿ ಮಾಡಿರುವ ಕೆಲವು ರಾಜಕಾರಣಿಗಳು ತಾವು ಮಾಡುವುದನ್ನು ಸಮರ್ಥಿಸಲು ಗಾಂಧೀಜಿಯವರ ಹೆಸರನ್ನು ಉದ್ಧರಿಸುವುದು ಒಂದು ಕ್ರೂರ ಜೋಕ್. ರಾಜಕೀಯ ಮತ್ತು ಧರ್ಮ–ಎರಡೂ ಕೂಡ ಸಮಾನವಾಗಿ ಸತ್ಯ, ಪಾವಿತ್ರ್ಯ ಹಾಗೂ ಪರಿಶುದ್ಧವಾಗಿರತಕ್ಕದ್ದೆಂದು ತಿಳಿದಿದ್ದರಿಂದಲೆ ಗಾಂಧೀಜಿ "ರಾಜಕೀಯದಲ್ಲಿ ಕೂಡ ದೇವರರಾಜ್ಯ ಸ್ಥಾಪಿತವಾಗಬೇಕಾಗಿದೆ" ಎಂದರು. ಗಾಂಧೀಜಿಗೆ ದೈನಂದಿನ ವ್ಯವಹಾರ ಮತ್ತು ಧಾರ್ಮಿಕ ಆಚರಣೆ ಬೇರೆ ಬೇರೆಯಗಿರಲಿಲ್ಲ. ರಾಜಕೀಯ, ಆರ್ಥಿಕ ನೀತಿ, ಗ್ರಾಮೋದ್ಧಾರ, ಸಮಾಜ ಕಲ್ಯಾಣ ಎಲ್ಲವೂ ಧಾರ್ಮಿಕ ಚಟುವಟಿಕೆಯ ವಿಸ್ತರಣೆಗಳಾಗಿದ್ದವು. ಅವರ ಬದುಕು ಮತ್ತು ವಿಚಾರಗಳ ಮಧ್ಯೆ ಗೋಡೆ ಇರಲಿಲ್ಲ. ಆದ್ದರಿಂದಲೆ ಅವರಲ್ಲಿ ಅಸಾಮಾನ್ಯವಾದ ಪ್ರಾಮಾಣಿಕತೆ ಇತ್ತು. ತಾನು ತಪ್ಪುಗಳನ್ನು ಮಾಡಿದ್ದೇನೆ. ಆ ತಪ್ಪುಗಳಿಂದ ಪಾಠ ಕಲಿತಿದ್ದೇನೆ ಎಂಬ ಸೌಜನ್ಯ ಇತ್ತು.

ನೀತಿಯನ್ನು ಬಿಟ್ಟು ಧರ್ಮ ಎಂಬುದಿಲ್ಲ ಎಂದ ಗಾಂಧೀಜಿಗೆ ನೀತಿಯನ್ನು ಬಿಟ್ಟು ರಾಜಕೀಯವೆಂಬುದು ಇರಲು ಸಾಧ್ಯವೇ ಇಲ್ಲ ಅಂತಲೂ ಚೆನ್ನಾಗಿ ಗೊತ್ತಿತ್ತು. ಅದೇ ವೇಳೆ ಧರ್ಮದ ಹೆಸರಿನಲ್ಲಿ ನಡೆಯುವ ಎಲ್ಲ ಅಮಾನವೀಯ ಆಚರಣೆಗಳನ್ನು (ಉದಾ: ಅಸ್ಪೃಶ್ಯತೆ) ಅವರು ಉಗ್ರವಾಗಿ ಪ್ರತಿಭಟಿಸುವ ಕ್ರಾಂತಿಕಾರಿಯಾಗಿದ್ದರು: "ಬುದ್ಧಿ ಮತ್ತು ಹೃದಯಸಂವೇದನೆಗೆ ವಿರೋಧವಾದ ಎಲ್ಲ ಆಧ್ಯಾತ್ಮಿಕ ಅಧಿಕಾರವನ್ನು ನಿರಾಕರಿಸಲು ನಾನು ಹಿಂಜರಿಯಲಾರೆ" ಎಂದ

ಗಾಂಧೀಜಿ ಚರಕ ಜಪಸರಕ್ಕಿಂತ ಮೇಲು ಎಂದು ತಿಳಿದ ಅನುಭಾವಿ. ಈ 'ಆಧ್ಯಾತ್ಮಿಕ ಅಧಿಕಾರ' ಅಥವಾ 'ಸ್ಪಿರಿಚುವಲ್ ಅಥಾರಿಟಿ' ಈಗ 'ಕಮ್ಯೂನಲ್ ಅಥಾರಿಟಿ'ಯಾಗುತ್ತಿದೆ.

ಎಲ್ಲ ಧರ್ಮಗ್ರಂಥಗಳನ್ನು ತುಂಬ ತಾಳ್ಮೆಯಿಂದ ಅಧ್ಯಯನ ಮಾಡಿದ್ದ ಗಾಂಧೀಜಿ ಸರ್ವಧರ್ಮಗಳ ಬಗ್ಗೆ ಸಮಾನ ಗೌರವ ಹೊಂದಿದ್ದರೆಂಬುದನ್ನು ಕೋಮುದ್ವೇಷ ಹುಟ್ಟುಹಾಕಿ ಮತಬ್ಯಾಂಕ್ ನಿರ್ಮಿಸಿಕೊಳ್ಳುವ ಇವತ್ತಿನ ರಾಜಕಾರಣಿಗಳು ಗಮನಿಸಬೇಕು. ಗಾಂಧೀಜಿಯ ಹಿಂದೂ ಧರ್ಮದಲ್ಲಿ ಸ್ವಧರ್ಮಾಭಿಮಾನದ ಜತೆ ಪರಧರ್ಮ ಸಹಿಷ್ಣುತೆ ಹಾಗೂ ಗೌರವ ಇತ್ತು. ಅದೇ ವೇಳೆ "ಎಲ್ಲ ಧರ್ಮಗಳೂ ಅಪರಿಪೂರ್ಣ ಯಾಕೆಂದರೆ ಎಲ್ಲ ಧರ್ಮಗಳೂ ಅಪರಿಪೂರ್ಣನಾದ ಮಾನವನ ಮೂಲಕ ಬಂದಿವೆ" ಎಂಬ ಅರಿವೂ ಇತ್ತು. ಶಾಸ್ತ್ರಗ್ರಂಥದಲ್ಲಿ ಹೇಳಿದೆ, ಸಂಸ್ಕೃತದಲ್ಲಿ ಬರೆಯಲ್ಪಟ್ಟಿದೆ ಎಂಬ ಕಾರಣಕ್ಕಾಗಿ ಯಾವುದೇ ಧರ್ಮಗ್ರಂಥವನ್ನು ಒರೆಗೆ ಹಚ್ಚದೆ ಒಪ್ಪಿಕೊಳ್ಳುವ "ಸನಾತನಿ" ಅವರಾಗಿರಲಿಲ್ಲ.

ತನ್ನನ್ನು 'ಸನಾತನ ಹಿಂದು'ವೆಂದು ಕರೆದುಕೊಂಡ ಗಾಂಧೀಜಿಯವರ ಧರ್ಮ ಅವರನ್ನು ರಾಜಕೀಯಕ್ಕೆ ಕರೆದೊಯ್ದು ಸ್ವಾತಂತ್ರ್ಯಕ್ಕಾಗಿ, ನ್ಯಾಯಕ್ಕಾಗಿ, ನೀತಿಯುತ ಆಳ್ವಿಕೆಗಾಗಿ ಹೋರಾಡಲು ಸಿದ್ಧಗೊಳಿಸಿತು. ಆದರೆ ಈ 'ಸನಾತನ ಹಿಂದು' ಮತಾಧ ಹಿಂದುವಾಗಿರಲಿಲ್ಲ. ಬಡ ರೈತನ ಹಾಗೆ ತುಂಡುಬಟ್ಟೆಯುಟ್ಟ ಈ ಹಿಂದು, ತನ್ನ ಶಸ್ತ್ರಾಸ್ತ್ರ ಬಲದ ಮೇಲೆ ನಿಂತಿದ್ದ ಬ್ರಿಟಿಶ್ ಸಾಮ್ರಾಜ್ಯಶಾಹಿಯ ವಿರುದ್ಧ ಸತ್ಯಾಗ್ರಹ, ಸ್ವದೇಶೀ, ಸವಿನಯ ಕಾಯಿದೆ ಭಂಗದ ಮೂಲಕ ಹೋರಾಡುತ್ತಲೆ ಶಸ್ತ್ರಾಸ್ತ್ರಗಳು ಅತ್ಯಂತ ಕಡಿಮೆ ಬಳಕೆಯಾಗುವ ನಾಗರೀಕತೆಯ ನಿರ್ಮಾಣಕ್ಕಾಗಿ ಪ್ರಯತ್ನಿಸಿದರು. ಒಬ್ಬ ಹಿಂದು ಹೇಗೆ ಅನ್ಯಧರ್ಮೀಯರ ಉತ್ತಮ ಗೆಳೆಯನಾಗಬಲ್ಲನೆಂದು ತನ್ನ ನಡತೆಯ ಮೂಲಕ ತೋರಿಸಿಕೊಟ್ಟರು. ಅಸಂಖ್ಯ ಹಿಂದುಗಳು ಜನಿವಾರ ತೊಡದೆಯೇ ಹಿಂದುಗಳಾಗಿ ಉಳಿಯುವುದು ಸಾಧ್ಯವಾಗಿರುವಾಗ ತಾನು ಜನಿವಾರ ಧರಿಸುವ ಅವಶ್ಯಕತೆ ಏನಿದೆ? ಎಂದು ಹೇಳಿ ಜನಿವಾರ ಧರಿಸದಿರಲು ನಿರ್ಧರಿಸಿದರು. ಹೀಗೆ ಸಂಪ್ರದಾಯವಾದಿಯಾಗಿದ್ದುಕೊಂಡೇ ಜನಿವಾರ ಧರಿಸದಿರುವ ಆಧುನಿಕನಾಗಿದ್ದರು. ಪ್ರಾರ್ಥನೆ ಹಾಗೂ ದೇವರಲ್ಲಿ ಅತ್ಯಂತ ಗಾಢವಾದ ಶ್ರದ್ಧೆ ಹೊಂದಿದ್ದರೂ ಎರಡು ಹೊತ್ತಿನ ಊಟಕ್ಕೂ ಗತಿ ಇಲ್ಲದ ಬಡವರಿಗೆ ದೇವರ ಬಗ್ಗೆ ಭಾಷಣ ಮಾಡುವುದು ವ್ಯರ್ಥವೆಂಬ ಒಳತಿರುವು ಅವರಿಗಿತ್ತು.

ನಮ್ಮ ರಾಜಕೀಯ ಹಾಗೂ ಧಾರ್ಮಿಕ ವ್ಯವಸ್ಥೆಯ ವಿಕೃತಿಗಳು ನಮ್ಮನ್ನು ಕಾಡುತ್ತಿರುವ ಸಂದರ್ಭದಲ್ಲಿ ಗಾಂಧೀಜಿಯವರ ಧರ್ಮ ಹಾಗೂ ರಾಜಕೀಯದ ಪರಿಕಲ್ಪನೆ ನಮಗೆ ಬಿಡುಗಡೆಯ ಹಾದಿ ತೋರಬಲ್ಲದು. ವ್ಯಕ್ತಿಯೊಬ್ಬ ಧಾರ್ಮಿಕನಾಗಿದ್ದೂ ಗೊಡ್ಡು ಸಂಪ್ರದಾಯವಾದಿಯಾಗದೆ, ಮತೀಯ ಮೂಲಭೂತವಾದಿಯಾಗದೆ ಹೇಗೆ ಪುರೋಗಾಮಿಯಾಗುವುದು ಸಾಧ್ಯವೆನ್ನುವುದಕ್ಕೆ ಭಾರತೀಯ ಸಂಸ್ಕೃತಿಯ ಅತ್ಯುತ್ತಮ ಉದಾಹರಣೆ ಗಾಂಧೀಜಿ.

**"ಸಂತ ರಾಜಕಾರಣಿ"**

ಇವತ್ತಿನ ರಾಜಕೀಯ ಕೋಮುವಾದದಿಂದ ಛಿದ್ರವಾಗುತ್ತಿರುವಾಗ ಗಾಂಧೀಜಿಯಂತಹ 'ಸಂತ ರಾಜಕಾರಣಿ' ತಾನು ಯಾಕೆ ರಾಜಕೀಯ ಪ್ರವೇಶಿಸಿದೆ? ಎನ್ನುವ ಪ್ರಶ್ನೆಗೆ ನೀಡುವ ಉತ್ತರ ತುಂಬ ಪ್ರಸ್ತುತವಾಗುತ್ತದೆ.

"ವಿಶ್ವಾತ್ಮಕವೂ ವಿಶ್ವವ್ಯಾಪಿಯೂ ಆದ ಸತ್ಯವನ್ನು ಮುಖಾಮುಖಿಯಾಗಿ ಕಾಣಬೇಕಾದರೆ ಸೃಷ್ಟಿಯಲ್ಲಿ ಕ್ಷುದ್ರತಮವಾದುದನ್ನೂ ತನ್ನಂತೆಯೇ ಪ್ರೀತಿಸುವುದು ಸಾಧ್ಯವಾಗಲೇಬೇಕು. ಸತ್ಯವನ್ನರಸುವವನು ಜೀವನದ ಯಾವ ಕ್ಷೇತ್ರದಿಂದಲೂ ವಿಮುಖನಾಗಲು ಸಾಧ್ಯವಿಲ್ಲ. ನನ್ನ ಸತ್ಯ ಶ್ರದ್ಧೆ ನನ್ನನ್ನು ರಾಜಕೀಯಕ್ಕೆ ಎಳೆದು ತಂದಿರುವುದು ಈ ಕಾರಣದಿಂದಾಗಿಯೇ. ಆಧ್ಯಾತ್ಮಕ್ಕೂ ರಾಜಕೀಯಕ್ಕೂ ಏನೂ ಸಂಬಂಧವಿಲ್ಲ ಎನ್ನುವವರಿಗೆ ಆಧ್ಯಾತ್ಮವೆಂದರೇನು ಎಂಬುದೇ ತಿಳಿಯದೆಂದು ಸ್ವಲ್ಪವೂ ಅಳುಕದೆ, ಆದರೆ ವಿನೀತನಾಗಿ ಹೇಳಬಲ್ಲೆ."

ಈಗ ರಾಜಕೀಯವೆಂದರೆ 'ಘಟಿಂಗನ ಕೊನೆಯ ಆಸರೆ' ಎಂದು ಜನಸಾಮಾನ್ಯರು ತಿಳಿಯುವಂತಾಗಿದೆ. ಆದರೆ ಗಾಂಧೀಜಿಯ ಪ್ರಕಾರ ರಾಜಕೀಯ ರಾಷ್ಟ್ರಗಳ ಹಿತವನ್ನು ಕುರಿತದ್ದು. "ಯಾವುದು ರಾಷ್ಟ್ರಗಳ ಹಿತವನ್ನು ಕುರಿತದ್ದೋ ಅದು ಅಧ್ಯಾತ್ಮ ಪ್ರವೃತ್ತಿಯುಳ್ಳ ವ್ಯಕ್ತಿಯ, ಎಂದರೆ ಸತ್ಯದ ಮತ್ತು ಭಗವಂತನ ಅನ್ವೇಷಕನ ಸಾಧನೆಯ ಅಂಗಗಳಲ್ಲಿ ಒಂದಾಗಿರುವುದು ಅನಿವಾರ್ಯ." ಗಾಂಧೀಜಿಗೆ ಸತ್ಯ ಮತ್ತು ಅಹಿಂಸೆಯಲ್ಲಿ ಎಷ್ಟೊಂದು ಅಚಲ ವಿಶ್ವಾಸವಿತ್ತೆಂದರೆ "ಭಗವಂತ ಅಸತ್ಯದ ಮೂರ್ತಿಯೆಂದೂ ಹಿಂಸೆಯ ಮೂರ್ತಿಯೆಂದೂ ಯಾರಾದರೂ ಸ್ಥಿರಪಡಿಸಿದರೆ ಅಂತಹ ಭಗವಂತನನ್ನು ಪೂಜಿಸಲು ನಾನು ನಿರಾಕರಿಸುತ್ತೇನೆ" ಎಂದರು ಅವರು. ಅತ್ಯಂತ ಶ್ರದ್ಧಾಭಕ್ತಿಯ

ಆಸ್ತಿಕನಾಗಿದ್ದೂ ದೇವರನ್ನು ಪೂಜಿಸಲು ನಿರಾಕರಿಸುವ ಸಾಧ್ಯತೆ ಬಗ್ಗೆ ಕೂಡ ಯೋಚಿಸಬಲ್ಲವರಾಗಿದ್ದುದರಿಂದಲೇ ಗಾಂಧೀಜಿ ಹಿಂದೂ ಧರ್ಮದ ಅತ್ಯಂತ ಶ್ರೇಷ್ಠ ಹಾಗೂ ಸಾರ್ವಕಾಲಿಕ ಪ್ರತಿನಿಧಿಯಾಗುತ್ತಾರೆ, ಭಾರತದ ರಾಜಕೀಯ ಕಂಡ ಅದ್ವಿತೀಯ ರಾಜಕಾರಣಿಯಾಗುತ್ತಾರೆ.

ರಾಜಕೀಯ ಮತ್ತು ಧರ್ಮವನ್ನು ಬೆರೆಸುವ ಬಗ್ಗೆ ಉತ್ಸಾಹದಿಂದ ಮಾತಾಡುವವರು ತಮ್ಮ ನಿಲುವಿನ ಸಮರ್ಥನೆಗಾಗಿ ಗಾಂಧೀಜಿಯವರ ಹೆಸರನ್ನು ಬಳಸುವ ಮೊದಲು "ರಾಜಕೀಯದಲ್ಲಿ ಕೂಡ ಭಗವಂತನ ರಾಜ್ಯ ಸ್ಥಾಪಿತವಾಗಬೇಕಾಗಿದೆ" ಎಂದ ಗಾಂಧೀಜಿಯ ರಾಜಕೀಯ ಅಸತ್ಯದ ಹಾಗೂ ಅಧಿಕಾರದ ಕನಸು ಕಾಣುವ ರಾಜಕೀಯವಾಗಿರಲಿಲ್ಲವೆಂಬುದನ್ನು ನೆನಪಿಡಬೇಕು. "ನನ್ನ ಬದುಕಿನ ಅತ್ಯಂತ ಆತ್ಮೀಯ ವಸ್ತುಗಳಿಂದ ರಾಜಕೀಯವನ್ನು ಬೇರ್ಪಡಿಸಲಾರೆ. ಕಾರಣ ಇಷ್ಟೆ: ನನ್ನ ರಾಜಕೀಯ ಕಲುಷಿತವಲ್ಲ. ಈ ಎಲ್ಲವೂ ಸತ್ಯ, ಅಹಿಂಸೆಗಳೊಂದಿಗೆ ಜಟಿಲವಾಗಿ ಹೆಣೆದುಕೊಂಡಿವೆ" ಎಂದಿದ್ದರು ಗಾಂಧೀಜಿ. ಇತಿಹಾಸದಲ್ಲಿ ಒಬ್ಬ ಅಧ್ಯಾತ್ಮವಾದಿ, ರಾಜಕಾರಣಿ, ಸಂತ, ಸನಾತನಿ, ಸಮಾಜವಾದಿ, ಕ್ರಾಂತಿಕಾರಿ ಎಲ್ಲವೂ ಒಬ್ಬನಲ್ಲೇ ಕಾಣಿಸಿದ್ದು ಇದ್ದರೆ ಅದು ಗಾಂಧೀಜಿ. ಧರ್ಮಕ್ಕೆ ರಾಜಕೀಯ ಅರ್ಥ ನೀಡಿದ ಗಾಂಧೀಜಿ ಎಂದೂ ರಾಜಕೀಯ ಅಧಿಕಾರವನ್ನಾಗಲಿ, ಯಾವುದೇ ರಂಗದಲ್ಲಿ ಪ್ರಥಮ ಸ್ಥಾನವನ್ನಾಗಲಿ ಬಯಸಿದ ಮನುಷ್ಯನಲ್ಲ: "ನಾನು ನನ್ನನ್ನು ಒಂದು ಶೂನ್ಯದ ಮಟ್ಟಕ್ಕೆ ಇಳಿಸಿಕೊಳ್ಳಬೇಕು. ಮನುಷ್ಯ ಎಲ್ಲಿಯವರೆಗೆ ಸ್ವಇಚ್ಛೆಯಿಂದಲೇ ತನ್ನ ಸಹಜೀವಿಗಳಲ್ಲಿ ತನ್ನನ್ನು ಕೊನೆಯ ಸ್ಥಾನದಲ್ಲಿ ಇಟ್ಟುಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ಅವನಿಗೆ ಮೋಕ್ಷವಿಲ್ಲ" ಎಂದ ಮನುಷ್ಯ 'ರಾಜಕೀಯದಲ್ಲಿ ಧರ್ಮ ಬೆರೆಸಿದ' ಎನ್ನುವುದು ಮುಗ್ಧರನ್ನು ತಪ್ಪು ಹಾದಿಗೆಳೆಯುವ ಒಂದು ತಪ್ಪು ವಾಕ್ಯ. ರಾಜಕೀಯದಲ್ಲಿ ಗಾಂಧೀಜಿ ಧರ್ಮದ ಪರಿಭಾಷೆಯನ್ನು ಬಳಸಿದರೆನ್ನುವುದು ನಿಜ. ಉದಾಹರಣೆಗೆ ಸತ್ಯ, ಅಹಿಂಸೆ, ಬ್ರಹ್ಮಚರ್ಯ, ಸತ್ಯಾಗ್ರಹ, ಯಜ್ಞ, ಆದರೆ ಈ ಪ್ರತಿಯೊಂದು ಶಬ್ದವನ್ನು ಗಾಂಧೀಜಿ ತನ್ನದೇ ಆದ ರೀತಿಯಲ್ಲಿ ಬಳಸಿದರು. ಉದಾಹರಣೆಗೆ, ಗಾಂಧೀಜಿಯವರ ಪ್ರಕಾರ ಯಜ್ಞ ಎಂದರೆ "ಪ್ರತಿಫಲಾಪೇಕ್ಷೆ ಇಲ್ಲದೆ ಇತರರ ಕಲ್ಯಾಣಕ್ಕಾಗಿ ಮಾಡುವ ಕೆಲಸ." ಆದರೆ ಹಿಂದೂ ಧರ್ಮದ ಅತ್ಯಂತ ಶ್ರೇಷ್ಠ ಮೌಲ್ಯಗಳ ಸಾಕಾರಮೂರ್ತಿಯಂತಿದ್ದ ಗಾಂಧೀಜಿ ಹಿಂದೂ ಧರ್ಮದ ನೆರಳಿನಲ್ಲಿ

ನಡೆಯುತ್ತಿದ್ದ ಎಲ್ಲ ಅರ್ಥಹೀನ ಆಚರಣೆಗಳನ್ನು ಹಾಗೂ ಮೂಢನಂಬಿಕೆಗಳನ್ನು ಕೂಡ ಹಿಂದೂ ಪರಿಭಾಷೆಯಲ್ಲೆ ಖಂಡಿಸಿದರೆನ್ನುವುದು ಕೂಡ ಗಮನಾರ್ಹ.

ಆತ್ಮಸಾಕ್ಷಿ ಇಲ್ಲದ ಇಂದಿನ ರಾಜಕಾರಣ ಮತ್ತು ತನ್ನ ಆತ್ಮಸಾಕ್ಷಿಗೆ ಅನುಗುಣವಾಗಿಯೇ ಬದುಕಿದ ಗಾಂಧೀಜಿಯ ರಾಜಕಾರಣದ ಮಧ್ಯೆ ಅಗಾಧವಾದ ಅಂತರವಿದೆ. ಗಾಂಧೀಜಿ ಯಾವತ್ತೂ ಧರ್ಮ ಮತ್ತು ರಾಜಕೀಯವನ್ನು ಪ್ರತ್ಯೇಕಿಸಲೂ ಇಲ್ಲ; ಇವತ್ತಿನ ಕೋಮುವಾದಿಗಳು ಬೆರೆಸುತ್ತಿರುವ ಹಾಗೆ ಧರ್ಮ ಮತ್ತು ರಾಜಕೀಯವನ್ನು ಬೆರೆಸಲೂ ಇಲ್ಲ. ರಾಜಕೀಯ ಮತ್ತು ಧರ್ಮ – ಎರಡೂ ಕೂಡ ಗಾಂಧೀಜಿಯವರಿಗೆ ಆತ್ಮಶುದ್ಧಿ ಹಾಗೂ ಸಂಶೋಧನೆಗೆ ಹಾದಿಯಾಗಿತ್ತು. ಹೆಚ್ಚು ಹೆಚ್ಚು ಧಾರ್ಮಿಕನಾಗುವುದು ಮತ್ತು ರಾಜಕೀಯದಲ್ಲಿ ತನ್ನನ್ನು ಹೆಚ್ಚು ಹೆಚ್ಚು ತೊಡಗಿಸಿಕೊಳ್ಳುವುದು ಗಾಂಧೀಜಿಗೆ ಎರಡು ಬೇರೆ ಬೇರೆ ಕ್ರಿಯೆಗಳೆಂದು ಯಾವತ್ತೂ ಅನ್ನಿಸಲಿಲ್ಲ. ಆದ್ದರಿಂದ ರಾಜಕೀಯ ಕ್ರಿಯೆ ನಿಜವಾದ ಅರ್ಥದಲ್ಲಿ ಆಧ್ಯಾತ್ಮಿಕ ಕ್ರಿಯೆಯೇ ಎಂಬುದನ್ನು ಅರ್ಥಮಾಡಿಕೊಳ್ಳಲಾಗದ ರಾಜಕಾರಣಿಗಳು "ಗಾಂಧೀಜಿಯವರು ಮಾಡಿದ ಹಾಗೆ ನಾವು ಕೂಡ ರಾಜಕಾರಣದಲ್ಲಿ ಧರ್ಮ ಬೆರೆಸುತ್ತೇವೆ" ಅಂತ ಹೇಳುವುದು ಹಾಸ್ಯಾಸ್ಪದ ಮತ್ತು ಅಪಾಯಕಾರಿ ಕೂಡ. "ನಾನು ತೀರ ಸಾಮಾನ್ಯನಾದ ಒಬ್ಬ ಮನುಷ್ಯ; ಸಾಮಾನ್ಯನಿಗಿಂತಲೂ ಕಡಿಮೆ ಯೋಗ್ಯತೆ ಇರುವ ವ್ಯಕ್ತಿ" ಎಂದ ವಿನಯಶೀಲ ಗಾಂಧೀಜಿ ತಾನು ಆಡಿದ, ಬರೆದ ಮಾತುಗಳನ್ನು ಬದುಕಿ ತೋರಿಸಿದ ಅಪರೂಪದ ಮನುಷ್ಯ; ಮಾನವ ಇತಿಹಾಸದ ತುಂಬ ಅಪರೂಪದ ಮನುಷ್ಯ. ಇಂತಹ ಮನುಷ್ಯನೆಡೆಗೆ ಮರಳಿ ಹೋಗುವುದಲ್ಲದೆ ಈ ದೇಶಕ್ಕೆ ಬದುಕಿ ಉಳಿಯಲು ಬೇರೆ ದಾರಿ ಇಲ್ಲ.

ಹಾಗಾಗಿ ಬಡತನ, ಕೋಮು ಹಿಂಸೆಯೂ ಸೇರಿದಂತೆ ವಿವಿಧ ರೀತಿಯ ಹಿಂಸೆಗಳಿಂದ ನಲುಗುತ್ತಿರುವ ಸಮಾಜದ ಎಲ್ಲ ಸ್ತರಗಳಲ್ಲಿ ಹಾಗೂ ಎಲ್ಲ ಸಮುದಾಯಗಳ ನಡುವೆ ಸಾಮರಸ್ಯ ಮತ್ತು ಶಾಂತಿ ನೆಲೆಸುವಂತೆ ಮಾಡುವಲ್ಲಿ ಗಾಂಧೀ ಮೌಲ್ಯಗಳನ್ನಾಧರಿಸಿ ಶಾಂತಿ ಶಿಕ್ಷಣದ ಒಂದು ಕೋರ್ಸನ್ನು ಕರ್ನಾಟಕದ ಶಾಲಾ ಪಠ್ಯಕ್ರಮದಲ್ಲಿ ಅಳವಡಿಸಿದರೆ ಆದೀತೆ? ಇಂತಹ ಒಂದು ಕೋರ್ಸನ್ನು ಅಳವಡಿಸಲು ಸಾಧ್ಯವಾಗಬಹುದೆ? ಇಂತಹ ಒಂದು ಕೋರ್ಸನ್ನು ಶಿಕ್ಷಕರಿಗೆ ಒಂದು ಕಮ್ಮಟದ ಅಥವಾ ಶಿಬಿರದ ಮೂಲಕ ಪರಿಚಯಿಸಿ ಅವರು ಅದನ್ನು ತರಗತಿಗಳಲ್ಲಿ

ಅನುಷ್ಠಾನಗೊಳಿಸಲು ಅವರನ್ನು ಅಭಿಪ್ರೇರಿಸಬಹುದೆ? ಎಂದು ಶೋಧಿಸುವ ಒಂದು ಪ್ರಯತ್ನವನ್ನು ಈ ಭಾಗದಲ್ಲಿ ಮಾಡಲಾಗಿದೆ.

ಈ ಸಂಶೋಧಕನಿಗೆ ಇಂತಹ ಸರಳ, ಶೋಧನಾತ್ಮಕ ಹಾಗು ಅಂತರ್ ಸಂವಾದಿ (interactive) ಕೋರ್ಸ್‌ನ ಸಾಧ್ಯತೆಗಳು ಹೊಳೆದದ್ದು 2010ರ ಹೊಸವರ್ಷದಲ್ಲಿ ದಿ ಹಿಂದು ಪತ್ರಿಕೆ ಗಾಂಧೀ ಮೌಲ್ಯಗಳನ್ನಾಧರಿಸಿ ಶಾಂತಿ ಕುರಿತಾದ 52 ವಾರಗಳ ಒಂದು ಕೋರ್ಸ್ ಅನ್ನು ಆರಂಭಿಸಿದಾಗ (ದಿ ಹಿಂದು, ಜನವರಿ 5, 2010). ಮದರಾಸಿನ ಗಾಂಧಿ ಶಾಂತಿ ಪ್ರತಿಷ್ಠಾನದ ಮೂಲಕ 2010ರ ಜನವರಿಯಿಂದ ಡಿಸೆಂಬರ್‌ವರೆಗೆ ಪ್ರಕಟವಾಗುವ ಈ ಕೋರ್ಸ್‌ನ ಕೆಲವು ಪಠ್ಯಗಳನ್ನಾಧರಿಸಿ ಕನ್ನಡದ ಸಂದರ್ಭಕ್ಕೆ ಹೊಂದುವ ಹಾಗೆ ಒಂದು ಮಾದರಿ ಪಾಠವನ್ನು ರಚಿಸುವುದು ಈ ಸಂಶೋಧಕನ ಉದ್ದೇಶವಾಗಿದೆ. 2005ರ 'ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು' ಈಗಾಗಲೇ 'ಶಾಂತಿಗಾಗಿ ಶಿಕ್ಷಣ'ವನ್ನು ಶಾಲಾ ಹಂತದಲ್ಲಿ ಅಳವಡಿಸಬೇಕೆಂದು ಹೇಳಿರುವುದರಿಂದ ಇಂತಹ ಒಂದು ಪಾಠದ ಅವಶ್ಯಕತೆ ಕರ್ನಾಟಕದ ಪಠ್ಯಕ್ರಮದಲ್ಲಿ ಸದ್ಯದಲ್ಲೆ ಉಂಟಾಗಲಿದೆ ಎಂದು ತಿಳಿಯಲಾಗಿದೆ.

## ಮೂಲ ಕೋರ್ಸ್‌ನ ಬಗ್ಗೆ ಎರಡು ಮಾತು

ಡಕ್‌ಮನ್‌ನ ಕತೆಯೊಂದಿಗೆ ಕೋರ್ಸ್ ಆರಂಭವಾಗುತ್ತದೆ. ಡಕ್‌ಮನ್ ತನ್ನ ಬಾಲ್ಯದಿಂದ 'ಯಾವುದೋ ಒಂದು' (something) ಬೇಕೆಂದು ಅದಕ್ಕಾಗಿ ಹುಡುಕಾಡುತ್ತಿದ್ದ. ಆ 'ಯಾವುದೋ ಒಂದ'ನ್ನು ಪಡೆಯಲು ಆತ ಶಾಲೆಗೆ ಹೋದ. ಅಲ್ಲಿ ಅವನಿಗೆ ಸಿಕ್ಕಿದ್ದು ಮೊದಲ ರ್‍ಯಾಂಕ್. ಆ 'ಯಾವುದೋ ಒಂದ'ನ್ನು ಪಡೆಯಲು ಅವ ಕಾಲೇಜಿಗೆ ಹೋದ. ಅವನಿಗೆ ಸಿಕ್ಕಿದ್ದು ಡಾಕ್ಟರೇಟ್ ಪದವಿ ಮಾತ್ರ.

ಆಮೇಲೆ ಅವನಿಗೆ ಒಂದು ಉತ್ತಮ ನೌಕರಿ ಸಿಕ್ಕಿತು. ಒಬ್ಬಳು ಒಳ್ಳೆಯ ಹೆಂಡತಿ ಸಿಕ್ಕಿದಳು. ಅವ ತುಂಬ ಹಣ ಸಂಪಾದಿಸಿದ. ಅವನಿಗೆ ಬೇಕಾದ್ದೆಲ್ಲವೂ ಅವನ ಬಳಿ ಇತ್ತು. ಆದರೆ ಅವ ಇನ್ನೂ ಆ 'ಯಾವುದೋ ಒಂದ'ಕ್ಕಾಗಿ ಹುಡುಕಾಟ ನಡೆಸುತ್ತಲೇ ಇದ್ದ. ಡಕ್‌ಮನ್ ಮುದುಕನಾದ. ಅಂತಿಮವಾಗಿ, ಅವ ಅಷ್ಟೊಂದು ಸಮಯದಿಂದ ಹುಡುಕುತ್ತಿದ್ದ ಆ 'ಯಾವುದೋ ಒಂದು' ಏನೆಂದು ಅವನಿಗೆ ಗೊತ್ತಾಯಿತು. ಅದು ಶಾಂತಿ! ಆದರೆ ಅಷ್ಟರಲ್ಲೆ ಅವ ಅದನ್ನು ಪಡೆಯಲಾರದಷ್ಟು ಮುದುಕನಾಗಿದ್ದ.

ಪಶ್ಚಾತ್ತಾಪದಿಂದ ಅವ ಹೇಳಿದ: "ಎಳೆಯವನಾಗಿದ್ದಾಗಲೇ ನಾನಿದನ್ನು ಮನಗಾಣಬೇಕಾಗಿತ್ತು."

"ಶಾಂತಿಯುತವಾದ ಒಂದು ಪ್ರಪಂಚವನ್ನು ನಿರ್ಮಿಸಲು ಅವಕಾಶಗಳನ್ನು ಶೋಧಿಸಲು ನಿಮಗೆ ನೆರವಾಗುವ ಒಂದು ಕೋರ್ಸ್ ಇದು" ಎನ್ನುವ ಘೋಷಣಾ ವಾಕ್ಯದೊಂದಿಗೆ ಆರಂಭವಾಗುವ ಕೋರ್ಸ್ 6ರಿಂದ 12ನೇ ತರಗತಿಯ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಇದೆ. ಅವರು ತಮ್ಮ ದಿನ ದಿನದ ಅನುಭವಗಳನ್ನಾಧರಿಸಿ 'ಶಾಂತಿಗಾಗಿ ಒಂದು ಪಾಠ'ವನ್ನು ಸಿದ್ಧಗೊಳಿಸಬೇಕು.

"ನಿಮ್ಮ ಅನುಭವಗಳಿಂದ ಅಥವಾ ಇತರರ ಅನುಭವಗಳಿಂದ 'ನೀವು' ಏನನ್ನು ಕಲಿಯುತ್ತೀರೋ ಅದು ಪಾಠ" ಎಂದು ಪಾಠವನ್ನು ಅಲ್ಲಿ ವ್ಯಾಖ್ಯಾನಿಸಲಾಗಿದೆ. ಸಮಕಾಲೀನ

ಭಾರತೀಯ ಸಮಾಜಕ್ಕೆ ತುಂಬ ಪ್ರಸ್ತುತ ಹಾಗೂ ಸಕಾಲಿಕ ಎಂಬ ಕಾರಣಕ್ಕಾಗಿ ಆ ಕೋರ್ಸನ್ನು ಇಲ್ಲಿ ಬಳಸಿಕೊಳ್ಳಲಾಗಿದೆ.

ಮೂಲದಲ್ಲಿ ಒಂದು ಪಾಠ ಹೀಗಿದೆ:

ಪಾಠ: ೧

ಉದ್ದೇಶ: ಘರ್ಷಣೆ (conflict)ಯನ್ನು ಅರ್ಥಮಾಡಿಕೊಳ್ಳುವುದು:

ಪ್ರೀತಿಯ ಮಕ್ಕಳೆ

ನೀವು ಗೀಚಾನ ಬಗ್ಗೆ ಕೇಳಿದ್ದೀರಾ?

ಬನ್ನಿ, ನಾವು ಅವನ ಮನೆಗೆ ಹೋಗೋಣ.

ಗೀಚಾನ ತಂದೆ, ಬೂಚಾ ಒಬ್ಬ ಪ್ರತಿಷ್ಠಿತ ವ್ಯಕ್ತಿ.

ಅವನಿಗೆ ತನ್ನ ಕೆಳಗಿನವರ ಮೇಲೆ ಉತ್ತಮ ನಿಯಂತ್ರಣ ಇದೆ.

ಆದರೆ ಅವ ಕಚೇರಿಗೆ ಹೋಗುವಾಗ ಪ್ರಯಾಣ ಮಾಡುವ ಬಸ್ ಕಂಡಕ್ಟರನ ಮೇಲೆ ಅವನಿಗೆ ನಿಯಂತ್ರಣವಿಲ್ಲ.

ಪ್ರತಿ ದಿನ ಅವ ಮೂರು ರೂಪ್ಾಯಿಯ ಟಿಕೆಟ್ ಕೊಳ್ಳಲು

ಬಸ್ ಕಂಡಕ್ಟರನಿಗೆ 50 ರೂಪ್ಾಯಿಯ ಒಂದು ನೋಟು ಕೊಡುತ್ತಾನೆ.

ಕಂಡಕ್ಟರ್, ಮಾಮೂಲಿನ ಹಾಗೆಯೇ, ಅವನಿಗೆ ಬೈಯುತ್ತಾನೆ.

ಒಂದೋ ಸರಿಯಾದ ಚಿಲ್ಲರೆ ಕೊಡಿ, ಇಲ್ಲವಾದರೆ

ಬಸ್‌ನಿಂದ ಕೆಳಗಿಳಿಯಿರಿ ಎನ್ನುತ್ತಾನೆ. ಬೂಚಾ ತನಗೆ ಇರುವ

ಒಬ್ಬ ಅಧಿಕಾರಿಯ ಅಧಿಕಾರವನ್ನು ಬಳಸಲು ಪ್ರಯತ್ನಿಸುತ್ತಾನೆ,

ಆದರೆ ಅವ ಈ ಪ್ರಯತ್ನದಲ್ಲಿ ಯಾವಾಗಲೂ ಸೋಲುತ್ತಾನೆ. ಮತ್ತು

ಬಸ್‌ನಿಂದ ಅವನನ್ನು ಕೆಳಗಿಳಿಸಿಯೇ ಬಸ್ ಮುಂದಕ್ಕೆ ಹೋಗುತ್ತದೆ.

ಕಚೇರಿ ತಲುಪುವ ವೇಳೆಗೆ ಬೂಚಾನಿಗೆ ತುಂಬ ಕಿರಿಕಿರಿಯಾಗಿರುತ್ತದೆ.

ಅವ ತನ್ನ ಸಿಟ್ಟನ್ನು ತನ್ನ ಕೈಕೆಳಗೆ ಕೆಲಸ ಮಾಡುವವರ ಮೇಲೆ ತೋರಿಸುತ್ತಾನೆ.

ಅವ ಸಂಜೆ ಮನೆಗೆ ಹೋಗುವಾಗಲೂ ಅವ ಇನ್ನೂ ಸಿಟ್ಟಿನಲ್ಲೇ ಇರುತ್ತಾನೆ,

ಮನೆ ಮಂದಿಯನ್ನೆಲ್ಲ ಗೋಳು ಹೊಯ್ಯುತ್ತಾನೆ.

ಇದಕ್ಕೆಲ್ಲ ಕಾರಣ: ಬೂಚಾನಿಗೆ ಹೇಗೆ ಒಬ್ಬ ಅಧಿಕಾರಿಯಾಗಬೇಕೆಂದು ಗೊತ್ತಿದೆ,

ಆದರೆ ಹೇಗೆ ಒಬ್ಬ ಬಸ್ ಪ್ರಯಾಣಿಕನಾಗಬೇಕಂತ ಅವನಿಗೆ ಗೊತ್ತೇ ಇಲ್ಲ.

* * * * *

ಪಾಠ : ೩

ಉದ್ದೇಶ: ಶಾಂತಿಸ್ಥಾಪನೆಗಾಗಿ ಕೆಲಸ ಮಾಡುವುದು:

ಪ್ರೀತಿಯ ಮಕ್ಕಳೆ

ಒಂದು ದಿನ ಬೆಳಿಗ್ಗೆ ಏನಾಯಿತು ಅಂತ ನಿಮಗೆ ಗೊತ್ತಿದೆಯೇ?

ಗೀಚಾ ಒಂದು ಅಂಗಡಿಗೆ ಹೋಗಿ 50 ರೂಪ್ಯಾ ನೋಟನ್ನು ನಾಣ್ಯಗಳಾಗಿ ಪರಿವರ್ತಿಸಿದ. ನಾಣ್ಯಗಳನ್ನು ಅವ ಬೂಚಾನ ಕಿಸೆಗೆ ಹಾಕಿದ. ಬಸ್ ಹತ್ತಿದ ಮೇಲೆ ಬೂಚಾ 50 ರೂಪ್ಯಾ ನೋಟಿಗಾಗಿ ತನ್ನ ಕಿಸೆ ತುಂಬ ತಡಕಾಡಿದ. ಅಲ್ಲಿ ನೋಟಿನ ಬದಲು ನಾಣ್ಯಗಳಿರುವುದು ತಿಳಿದು ಅವನಿಗೆ ಆಶ್ಚರ್ಯವಾಯಿತು. ಅವ ಕಂಡಕ್ಟರನಿಗೆ ಸರಿಯಾದ ಚಿಲ್ಲರೆಯನ್ನೆ ಕೊಟ್ಟ. ಕಂಡಕ್ಟರನಿಗೆ ಸಂತೋಷವಾಯಿತು. ಅವ ಮುಗುಳುನಕ್ಕ. ಮುಗುಳ್ನಗುವ ಕಂಡಕ್ಟರ್‌ನನ್ನು ತನ್ನ ಬದುಕಿನಲ್ಲೆ ಮೊತ್ತ ಮೊದಲ ಬಾರಿಗೆ ನೋಡಿ ಬೂಚಾನಿಗೆ ಖುಶಿಯಾಯಿತು. ಅವ ಕಂಡಕ್ಟರನ ಮುಗುಳುನಗೆಗೆ ಪ್ರತಿಯಾಗಿ ಮುಗುಳು ನಗೆ ಬೀರಿದ. ಬಹಳ ದೀರ್ಘಕಾಲದಿಂದ ನಡೆಯುತ್ತಿದ್ದ ಜಗಳ ಕೊನೆಗೊಂಡಿತು. ಬೂಚಾ ಸಂತೋಷದ ಮುಖ ಹೊತ್ತು ತನ್ನ ಕಚೇರಿ ತಲುಪಿದ. ಕಚೇರಿಯಲ್ಲಿ ಕೂಡ ಪ್ರತಿಯೊಬ್ಬರೂ ಆರಾಮಾಗಿ ಸಂತೋಷವಾಗಿ ಇದ್ದರು. ಬೂಚಾ ಮನೆಗೆ ಹೋದಾಗ, ಪಪ್ಪಿ ಮತ್ತು ಕುಪ್ಪಿಯೂ ಸೇರಿ, ಅವನ ಕುಟುಂಬದ ಎಲ್ಲರೂ ಸಂತೋಷವಾಗಿ ಇದ್ದರು. ಈ ನಾಟಕೀಯ ಬದಲಾವಣೆಯಾಗಲು ಏನು ನಡೆಯಿತು? ಗೀಚಾನ ಚಿಕ್ಕ ವಿವೇಕಯುತವಾದ ಒಂದು ಸಣ್ಣ ಕೆಲಸ.

..............................................................................................................

ಈ ಪಾಠಕ್ಕೆ ಪೂರಕ ಸಾಮಗ್ರಿಯಾಗಿ ಈ ಕೆಳಗಿನ ಭಾಗಗಳಿವೆ.

ಗಾಂಧಿ ಏನು ಮಾಡಿದರು?

ಅವರು ಕೇವಲ ಒಬ್ಬ ವ್ಯಕ್ತಿಯ ಹಿತವನ್ನು ಪರಿಗಣಿಸಲಿಲ್ಲ. ಬದಲಾಗಿ ಅವರು ವಿದೇಶೀ ಆಳ್ವಿಕೆಯಲ್ಲಿದ್ದ ಜನರ ಒಂದು ರಾಷ್ಟ್ರದ ಹಿತವನ್ನು ಪರಿಗಣಿಸಿದರು. ಅವರ ಮೇಲೆ ಅದೆಂತಹ ಜವಾಬ್ದಾರಿ ಇತ್ತು ಎಂದು ಕಲ್ಪಿಸಿಕೊಳ್ಳಿ. ಶಾಂತಿ ನೆಲೆಸುವಂತೆ ನೋಡಿಕೊಳ್ಳಲಿಕ್ಕಾಗಿ ಅವರು ಮಾಡುತ್ತಿದ್ದ ಚಿಕಣಿ (micro) ಕ್ರಿಯೆಗಳಿಂದ ಅವರ ದಿನದ ಪ್ರತಿಯೊಂದು ಗಳಿಗೆಯೂ ತುಂಬಿತ್ತು. ಅವರ ಕ್ರಿಯೆಗಳು ಅಂತಿಮವಾಗಿ ನಮಗೆ ಸ್ವಾತಂತ್ರ್ಯ ದೊರಕಿಸಿಕೊಟ್ಟವು.

ಮುಂದಿನ ಹಂತದಲ್ಲಿನ ಗಾಂಧೀಜಿಯವರ ಬದುಕಿನ ವಿವರಗಳನ್ನಾಧರಿಸಿದ ಒಂದು ರಸಪ್ರಶ್ನೆ ಕೊಡಲಾಗಿದೆ.

**ಶಿಕ್ಷಕರಿಗೆ:**

ಚಟುವಟಿಕೆ: ಸೂಚ್ಯ ಶಬ್ದಗಳು ಹಾಗೂ ಸಂಜ್ಞೆಗಳನ್ನು ಬಳಸಿ ಶಾಂತಿಯುತವಾದ ಘಟನೆಗಳನ್ನು ತೋರಿಸುವ ಒಂದು ಪಾತ್ರ-ಪ್ರದರ್ಶನ (roleplay) ಮಾಡುವಂತೆ ವಿದ್ಯಾರ್ಥಿಗಳಿಗೆ ಹೇಳಿ

ಚರ್ಚೆ: ಇತರರ ಜತೆ ಆರಾಮವಾಗಿ ಇರಬೇಕಾದರೆ ನನಗೆ ಶಾಂತಿಯ ಅಗತ್ಯ ಇದೆಯೆ? ಶಾಂತಿ ಪಡೆಯಲು ಏನೇನು ಬೇಕೆಂದು ಪಟ್ಟಿ ಮಾಡಿ

ಕಂಡುಕೊಂಡದ್ದು (discovery): ದೊಡ್ಡ ಮಟ್ಟದ (macro level) ಮಾತುಗಳನ್ನು ದೂರಮಾಡಿ, ಇದಕ್ಕೆ ಬದಲಾಗಿ ಒಂದು ಸಣ್ಣ ಮಟ್ಟದಲ್ಲಿ (micro level) ಕೆಲಸ ಮಾಡಿ. ಆಗ ನಿಮಗೆ ದೊರಕುವ ಫಲಿತಾಂಶ: ಶಾಂತಿ.

ಯೋಚಿಸಿ: ಜಗತ್ತಿನಲ್ಲಿರುವ ಹಿಂಸೆಗೆ ನಾನು ಕೂಡ ಒಂದು ಕಾರಣವೆ?

ಸೃಷ್ಟಿಸಿ: 'ಶಾಂತಿಗೆ ಕೊಡುಗೆ ನೀಡಿದ ನನ್ನ ಚಿಕಣಿ ಕ್ರಿಯೆ' ಎಂಬ ವಿಷಯದಲ್ಲಿ ಒಂದು ಪಾಠ.

ಈಗ ಕರ್ನಾಟಕದ ಸಂದರ್ಭದಲ್ಲಿ ಇಲ್ಲಿಯ ಪಠ್ಯಪುಸ್ತಕಗಳಲ್ಲಿ ಇಂತಹ ಕೆಲವು ಪಾಠಗಳ ಒಂದು ಕೋರ್ಸ್ ತಯಾರಿಸುವ ಸಾಧ್ಯತೆಗಳ ಬಗ್ಗೆ ಗಮನಹರಿಸಬಹುದು.

* * * * *

ಪಾಠ : ೧

ಉದ್ದೇಶ: ಗಾಳಿಮಾತನ್ನು ಉದ್ವೇಗವಿಲ್ಲದೆ ಅರ್ಥಮಾಡಿಕೊಳ್ಳುವುದು.

ಪ್ರೀತಿಯ ಮಕ್ಕಳೆ

ನಿನ್ನೆ ನಿಮ್ಮ ಊರಿನಲ್ಲಿ ಏನು ನಡೆಯಿತೆಂದು ತಿಳಿದಿದ್ದೀರಾ?

ರವಿ: ಹೌದು, ಗುರುಗಳೆ.

ನಿನ್ನೆ ನಮ್ಮ ಕೇರಿಯಿಂದ ಬಸಪ್ಪನನ್ನು ಉಪ್ಪಾರ್‌ಕೇರಿಯವರು ಹೊತ್ತುಕೊಂಡು ಹೋದರಂತೆ. ಆಗ ಬಸಪ್ಪನ ಮನೆ ಮಂದಿ ಒಂದು ಗುಂಪಾಗಿ ಆ ಕೇರಿಗೆ ಹೋದರು.

ಅಲ್ಲಿ ಬಹಳ ಗಲಾಟೆ ನಡೀತು. ನಾಲ್ಕಾರ್ ಮಂದಿಗೆ ಏಟೂ ಬಿತ್ತು.

ಗುರುಗಳು: ಬಸಪ್ಪ ಸಿಕ್ಕಿದನೇನು?

ಇಲ್ಲ ಗುರುಗಳೆ. ಬಸಪ್ಪ ಆ ಕೇರಿಯಾಗ ಇರ್‌ಲಿಲ್ಲ.

ಪೊಲೀಸ್‌ಗೆ ದೂರು ಕೊಡ್ತೀವಿ ಅಂತ ಬಸಪ್ಪನ ಮನೆಮಂದಿ ಹಿಂದಕ್ಕ ಬಂದರು.

ಗುರುಗಳು: ಮಕ್ಕಳೇ, ಈಗ ಕೇಳಿ. ಬಸಪ್ಪ ಆ ಕೇರಿಯಾಗ ಇರ್ಲಿಲ್ಲ.

ಯಾಕಂದ್ರೆ ಅವ್ನನ್ನ ಯಾರೂ ಎಲ್ಲಿಗೂ ಹೊತ್ತುಕೊಂಡ್ ಹೋಗೇ ಇಲ್ಲ.

ಮಕ್ಕಳು: ಹಾಗಾದ್ರ ಬಸಪ್ಪ ಏನಾದ?

ಬಸಪ್ಪ ಅವ್ನ ಗೆಳೆಯ ರಹೀಮನ ಜತೆ

'ಗಂಧದ ಗುಡಿ' ಸಿನಿಮಾ ಸೆಕೆಂಡ್ ಶೋ ನೋಡಾಕ ಹೋಗಿದ್ದ.

ಗಲಾಟೆ ಎಲ್ಲ ಮುಗಿದ್ ಮೇಲೆ ಮನೆಗ್ ಬಂದ!

ಪಾಠ : ೨

ಉದ್ದೇಶ: ಗಾಳಿಮಾತನ್ನು ತಡೆಯುವುದು.

ಪ್ರೀತಿಯ ಮಕ್ಕಳೆ

ನಿನ್ನೆ ನಿಮ್ಮ ಊರಿನಲ್ಲಿ ಏನು ನಡೀತು ಅಂತ ಗೊತ್ತಾಯ್ತಲ್ಲ.

ಬಸಪ್ಪ, ಈಗ ನೀನೇ ಹೇಳಪ್ಪ. ನಿನ್ನೆ ನೀನು ಏನು ಮಾಡಿದೆ?

ಎಲ್ಲಿಗ್ ಹೋಗಿದ್ದೆ?

ಬಸಪ್ಪ: ನಾನು ಸ್ಕೂಲಿಗ್ ಬರ್ತಾ ಇದ್ದೆ. ಆವಾಗ ರಹೀಮ ಸಿಕ್ಕ.

ಅವ ಅಂದ, ಇವತ್ತು ನಾವು ಸಿನಿಮಾಕ್ಕೆ ಹೋಗೋಣ.

ಯಾವ ಸಿನಿಮಾ? ಅಂತ ನಾ ಕೇಳ್ದೆ.

ಗಂಧದ ಗುಡಿ, ಹೊಸ ಪ್ರಿಂಟ್ ಬಂದ್ಯೆತೆ ಅಂದ.

ನಾನು ನನ್ನ ಹತ್ರ ಕಾಸಿಲ್ಲ ಅಂದೆ. ಅದಕ್ಯಾಕ್ ಚಿಂತಿ ಮಾಡ್ತೀಯಾ?

ನನ್ ಹತ್ರ ಇದೆ ಅಂದ. ನಾನೂ ಅವ್ನೂ ನಮ್ ಸ್ಕೂಲ್ ಬ್ಯಾಗನ್ನ

ರಂಗಪ್ಪನ ಅಂಗಡಿಲಿಟ್ಟು ಸಿನಿಮಾಕ್ಕೆ ಹೋದ್ವಿ. ಸಿನಿಮಾ ಚಲೋದಾಗಿತ್ತು.

ನೀ ಯಾಕ ಮನೆ ಮಂದಿಗ್ ತಿಳಿಸ್ಲಿಲ್ಲ, ಸಿನಿಮಾಕ್ಕೆ ಹೋಗ್ತೀನಿ ಅಂತ?

ನನ್ ಮೊಬೈಲ್ ಬ್ಯಾಟ್ರಿ ವೀಕ್ ಆಗಿತ್ತು. ಹಂಗಾಗಿ ಆಗ್ಲಿಲ್ಲ, ಗುರುಗಳೇ

**ಚರ್ಚೆ:** ಯಾರೋ ಏನೋ ಸುದ್ದಿ ಕೊಟ್ಟಾಗ ಅದು ನಿಜವೇ ಸುಳ್ಳೇ ಎಂದು ಖಚಿತಪಡಿಸಿಕೊಳ್ಳಬೇಕೆ? ಹೇಗೆ ಹೇಗೆ ಖಚಿತಪಡಿಸಿಕೊಳ್ಳಬಹುದೆಂದು ಪಟ್ಟಿ ಮಾಡಿ.

ಕಂಡುಕೊಂಡದ್ದು: ಯಾರೋ ಹೇಳಿದ ಗಾಳಿಮಾತಿನ ಸುದ್ದಿಯನ್ನು ನಂಬಿ ಉದ್ವೇಗಕ್ಕೊಳಗಾಗಬಾರದು. ಸುದ್ದಿ ನಿಜವೇ ಸುಳ್ಳೇ ಎಂದು ಖಚಿತಪಡಿಸಿಕೊಂಡರೆ ಗಾಳಿಮಾತಿನಿಂದ ಆಗುವ ಅನಾಹುತವನ್ನು ತಡೆಯಬಹುದು.

ಸೃಷ್ಟಿ: ನಿಮ್ಮ ಮನೆಯಲ್ಲಿ ಗಾಳಿಮಾತಿನಿಂದಾಗಿ ನಡೆದ ಒಂದು ಘಟನೆಯನ್ನಾಧರಿಸಿ ಒಂದು ಪಾಠವನ್ನು ಸೃಷ್ಟಿಸಿ.

* * * * *

ಇದು ಕೇವಲ ಮಾದರಿ. ಇಂತಹ ಮಾದರಿಗಳನ್ನಾಧರಿಸಿ ಶಿಕ್ಷಕರು ತಮ್ಮ ತಮ್ಮ ಅನುಭವದ ನೆಲೆಯಲ್ಲಿ ಘಟನೆ (episode)ಗಳನ್ನಾಧರಿಸಿದ ಪಾಠಗಳನ್ನು ರಚಿಸಿ ತರಗತಿಯಲ್ಲಿ ಸೂಕ್ತವಾಗಿ ಬಳಸಿಕೊಳ್ಳಬಹುದು. ವಿದ್ಯಾರ್ಥಿಗಳನ್ನು ತಂಡಗಳಾಗಿ ವಿಂಗಡಿಸಿ ಪರಸ್ಪರ ತಂಡಗಳ ನಡುವೆ ಮತ್ತು ತಂಡಗಳ ಹಾಗೂ ಶಿಕ್ಷಕರ ನಡುವೆ ಚರ್ಚೆ, ಸಂವಾದ ನಡೆಯುವಂತೆ ನೋಡಿಕೊಂಡಲ್ಲಿ ಇಂತಹ ಒಂದು ಶಾಂತಿ ಶಿಕ್ಷಣದ ಕೋರ್ಸ್ ತುಂಬ ಆಸಕ್ತಿದಾಯಕವೂ ಸೃಜನಾತ್ಮಕವೂ ಆಗಬಲ್ಲದು.

## ಅಧ್ಯಾಯ ಏಳು: ಅಧ್ಯಯನದ ಫಲಶ್ರುತಿ ಮತ್ತು ಸಮಾರೋಪ

### ಪೀಠಿಕೆ

ಕರ್ನಾಟಕದ ಶಿಕ್ಷಣ ಕ್ರಮದಲ್ಲಿ ಭಾಷೆ/ಸಾಹಿತ್ಯ, ಸಮಾಜಶಾಸ್ತ್ರ ಮತ್ತು ಇತಿಹಾಸದ ಪಠ್ಯಪುಸ್ತಕಗಳಲ್ಲಿ ಪ್ರಾಥಮಿಕ ಹಂತದಿಂದ ಪದವಿಪೂರ್ವ ಹಂತದವರೆಗಿನ ಪಠ್ಯಕ್ರಮದಲ್ಲಿ ಬಳಸಲಾಗಿರುವ ಭಾಷೆಗೂ, ಆ ಭಾಷೆಯ ಮೂಲಕ ರವಾನಿಸಲಾಗಿರುವ ಸಂದೇಶಕ್ಕೂ, ಸಮಾಜದಲ್ಲಿ ಮಹಿಳೆಯರಿಗಿರುವ ಸ್ಥಾನಮಾನಕ್ಕೂ, ಪಠ್ಯಗಳಲ್ಲಿ ಚಿತ್ರಿತವಾಗಿರುವ ಮಹಿಳೆಯ ಚಿತ್ರಕ್ಕೂ ಹಾಗೂ ಸದ್ಯದ ಸಮಾಜದಲ್ಲಿ ಕಂಡುಬರುವ ಹಿಂಸೆಗೂ ಅಥವಾ ಕೋಮುಹಿಂಸೆಗೂ ಏನಾದರೂ ಸಂಬಂಧವಿದೆಯೆ? ಎಂದು ಶೋಧಿಸುವ ಒಂದು ಪ್ರಯತ್ನವಾಗಿ ಕೈಗೊಂಡ ಈ ಅಧ್ಯಯನದಲ್ಲಿ ಕೆಲವು ಪಠ್ಯಗಳ ಆಳಮೈ ಸಂರಚನೆಯ ವಿಶ್ಲೇಷಣೆ ನಡೆಸಲಾಯಿತು. ಆಳಮೈ ಸಂರಚನೆಯ ಮೂಲಕ ರಚಿತವಾಗುವ ಸುಪ್ತ–ಪಠ್ಯಗಳು ಹೇಗಿರುತ್ತವೆ? ಮತ್ತು ಅವುಗಳು ಏನನ್ನು ಹೇಳುತ್ತವೆ? ಎಂದೂ ಉದಾಹರಣೆಗಳ ಮೂಲಕ ಪರಿಶೀಲಿಸಲಾಯಿತು. ಸಮಾಜದಲ್ಲಿ ಕೋಮುಸಾಮರಸ್ಯ ಕಾಪಾಡುವ ದೃಷ್ಟಿಯಿಂದ ಇತಿಹಾಸದ ಪಠ್ಯಗಳಲ್ಲಿ ಇಸ್ಲಾಂ ಧರ್ಮಕ್ಕೆ ಸಂಬಂಧಿಸಿ ಭಾವನೆಗಳ ದೃಷ್ಟಿಯಿಂದ ಸೂಕ್ಷ್ಮ ಸಂವೇದಿ(sensitive)ಯಾದ ಭಾಗಗಳನ್ನು ಪುನರ್‌ಲೇಖಿಸಬಹುದೆ? ಪುನರ್‌ಲೇಖಿಸಬೇಕೆ? ಎಂಬ ಕುರಿತೂ ಚರ್ಚೆ ನಡೆಸಲಾಯಿತು.

ಇತಿಹಾಸದ ಪಠ್ಯಗಳಲ್ಲಿ ಕಂಡುಬರುವ ಮುಸ್ಲಿಂ ದೊರೆಗಳ ಕುರಿತಾದ ವಿವರಗಳಿಗೂ ಬ್ರಿಟಿಷ್ ದೊರೆ/ಆಳುವ ವರ್ಗದ ಕುರಿತಾದ ವಿವರಗಳಿಗೂ, ಭಾಷಾ ಬಳಕೆಯ ದೃಷ್ಟಿಯಿಂದ, ಇರುವ ವ್ಯತ್ಯಾಸ ಹಾಗೂ ಧ್ವನಿ ತಾರತಮ್ಯವನ್ನೂ ಗುರುತಿಸುವ ಪ್ರಯತ್ನ ಮಾಡಲಾಯಿತು.

'ರಾಜಕೀಯ ಸರಿತನ'ದ ಪರಿಕಲ್ಪನೆಯನ್ನು ಮಹಿಳೆಯರು, ದಲಿತರು ಮತ್ತು ಅಲ್ಪಸಂಖ್ಯಾಕ ಸಮುದಾಯದವರಿಗೆ ಸಂಬಂಧಿಸಿ ನಮ್ಮ ಪಠ್ಯಪುಸ್ತಕಗಳಲ್ಲಿ ಅಳವಡಿಸಿಕೊಳ್ಳುವುದರ ಅವಶ್ಯಕತೆ, ಔಚಿತ್ಯ, ಅನೌಚಿತ್ಯಗಳನ್ನು ಸೀಮಿತ ನೆಲೆಯಲ್ಲಿ ಚರ್ಚಿಸಲಾಯಿತು.

ಮತ್ತು ಕೋಮು ಸಾಮರಸ್ಯದ ದೃಷ್ಟಿಯಿಂದ ಗಾಂಧೀಜಿಯವರ ವಿಚಾರಗಳನ್ನಾಧರಿಸಿ ಶಾಂತಿ ಶಿಕ್ಷಣದ ಒಂದು ಕೋರ್ಸ್‌ನ್ನು ತಯಾರಿಸುವ ಸಾಧ್ಯತೆಗಳನ್ನು ಪರಿಶೀಲಿಸಿ ಆ ಕೋರ್ಸ್‌ನ

ಒಂದು ಮಾದರಿ ಪಠ್ಯವನ್ನು ನೀಡಲಾಯಿತು. ಹಾಗೂ ಶಿಕ್ಷಕರು ಕೋಮುವಾದಿಗಳಾಗದಂತೆ ತಡೆಯುವುದಕ್ಕಾಗಿ ಅವರನ್ನು ಸೂಕ್ಷ್ಮಸಂವೇದಿಗಳಾಗಿ ಮಾಡುವುದರ ಅವಶ್ಯಕತೆಯನ್ನು, ಇದಕ್ಕಾಗಿ ತೆಗೆದುಕೊಳ್ಳಬಹುದಾದ ಕ್ರಮಗಳನ್ನೂ ಸೂಚಿಸಲಾಯಿತು.

**ಫಲಶ್ರುತಿ**

ಈ ಮಹಾಪ್ರಬಂಧದಲ್ಲಿ ಭಾಷೆ/ಸಾಹಿತ್ಯ, ಇತಿಹಾಸ, ಪೌರನೀತಿ ಹಾಗೂ ಸಮಾಜಶಾಸ್ತ್ರ ಪಠ್ಯಪುಸ್ತಕಗಳ ಅಧ್ಯಯನದ ಮೂಲಕ ಕಂಡುಕೊಂಡ ಕೆಲವು ಪ್ರಮುಖ ಒಳನೋಟಗಳು, ಫಲಶೃತಿ ಮತ್ತು ಅವುಗಳಿಗೆ ಸಂಬಂಧಿಸಿದ ಚರ್ಚೆ ಇಲ್ಲಿದೆ:

- ಪಠ್ಯಗಳ ಮೇಲ್ಮೈ ಸಂರಚನೆಯಲ್ಲಿ ಕಂಡುಬರುವ ಹೆಣ್ಣಿನ ಚಿತ್ರಣ ಮತ್ತು ಪಠ್ಯದ ಆಳ ಸಂರಚನೆಯಲ್ಲಿ, ಸುಪ್ತ-ಪಠ್ಯದಲ್ಲಿ ಕಾಣಿಸಿಕೊಳ್ಳುವ ಹೆಣ್ಣಿನ ಚಿತ್ರಣದ ಮಧ್ಯೆ ಗಣನೀಯ ವ್ಯತ್ಯಾಸ ಕಂಡುಬರುತ್ತದೆ.

  ಮೇಲ್ಮೈ ಸಂರಚನೆಯಲ್ಲಿ ಹೆಣ್ಣಿಗೆ, ಪವಿತ್ರಸ್ಥಾನ ನೀಡಲಾಗಿರುವ ತಾಯಿಗೆ ಪಾರಂಪರಿಕವಾದ ಅಡಿಗೆಯವಳು, ಬಡಿಸುವವಳು ಮತ್ತು ಬಟ್ಟೆ ಒಗೆಯುವವಳು (ಧೋಬಿ) ಎಂಬ ಮೂರು ಪಾತ್ರಗಳನ್ನು ನೀಡಲಾಗಿರುವುದು ಸ್ಪಷ್ಟವಾಗುತ್ತದೆ. ಮತ್ತು ಸಾಮಾಜಿಕವಾಗಿ ಅಂಗೀಕೃತವಾದ ಈ ಪಾತ್ರಗಳನ್ನು ಸಹಜ ಹಾಗೂ ಸಾಮಾನ್ಯ (natural) ಎಂದು ಪುರುಷ ಪ್ರಧಾನ ಸಮಾಜ ಒಪ್ಪಿಕೊಂಡಿರುವುದು ವ್ಯಕ್ತವಾಗುತ್ತದೆ.

- ಪಠ್ಯದ ಆಳಸಂರಚನೆಯನ್ನು ವಿಶ್ಲೇಷಿಸಿದಾಗ ಹೆಣ್ಣಿಗೆ ನೀಡಲಾಗಿರುವ ಪಾತ್ರಗಳ ಹಿಂದೆ ಸೂಚ್ಯವಾಗಿ ವ್ಯಕ್ತವಾಗುವ ಹೆಣ್ಣಿನ ಕುರಿತಾದ ಪುರುಷಪ್ರಧಾನ ಸಮಾಜದ ಔದಾಸೀನ್ಯ, ಬದ್ಧತೆರಹಿತವಾದ (noncommitted)ಲೋಕಾಭಿರಾಮ (matter of fact) ಮನೋಧರ್ಮ, ಭೋಳೆತನ, ಡಾಂಭಿಕತೆ ಮತ್ತು ಸೂಕ್ಷ್ಮ ಕ್ರೌರ್ಯ ಗೋಚರಿಸುತ್ತದೆ.

- ಪಠ್ಯದ ಸುಪ್ತ-ಪಠ್ಯವನ್ನು ಪುನರ್‌ಲೇಖಿಸುವ ಸಾಧ್ಯತೆ ಇದೆ. ಹೀಗೆ ಪುನರ್‌ಲೇಖಿಸಿದಾಗ, ಪುನರ್‌ಲೇಖಿತ ಪಠ್ಯವು ಕುಟುಂಬದ ಒಳಗೆ ಮತ್ತು ಆ ಮೂಲಕ, ಪರೋಕ್ಷವಾಗಿ, ಕುಟುಂಬದ ಹೊರಗೆ ಲಿಂಗ ಸಮಾನತೆಯನ್ನು

ಸಾಧಿಸಲು ಹೇಗೆ ಪ್ರಯತ್ನಿಸಬಹುದು? ಎಂಬ ಬಗ್ಗೆ ಒಂದು ಒಳನೋಟ ನೀಡುತ್ತದೆ.

- ಮೂರು ದಶಕಗಳ ಅಂತರದಲ್ಲಿ (1980–2010) ಪಠ್ಯಗಳಲ್ಲಿ ಹೆಣ್ಣನ್ನು ಚಿತ್ರಿಸುವ ರೀತಿಯಲ್ಲಿ ವ್ಯತ್ಯಾಸ ಮತ್ತು ಬದಲಾವಣೆ ಕಂಡು ಬರುತ್ತದೆ. ಈ ಅವಧಿಯಲ್ಲಿ ಸಮಾಜದ ವಿವಿಧ ಸ್ತರಗಳಲ್ಲಿ (ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ) ಸಂಭವಿಸಿದ ಬದಲಾವಣೆಗಳ ಪರಿಣಾಮ ಪಠ್ಯಪುಸ್ತಕ ರಚನೆಕಾರರ ಮನೋಧರ್ಮದ ಮೇಲೂ ಆಗಿರುವುದು ಕಾಣಿಸುತ್ತದೆ (ಪಾಠ 11 – ನಮ್ಮ ಕುಟುಂಬ).

- ಪಠ್ಯಗಳಲ್ಲಿ ಹೆಣ್ಣಿಗೆ ಸ್ಥೂಲವಾಗಿ ನೀಡಲಾಗುತ್ತಿದ್ದ ಪಾತ್ರಗಳ ಹಂಚುವಿಕೆಯಲ್ಲಿ ಕಂಡು ಬರುವ ವ್ಯತ್ಯಾಸವು ಈ ಹಂಚುವಿಕೆಯಲ್ಲಿ ಲಿಂಗನ್ಯಾಯದ ಪರಿಕಲ್ಪನೆ ಕೆಲಸ ಮಾಡಿರುವುದನ್ನು ಸೂಚಿಸುತ್ತದೆ. ಇಲ್ಲಿ ಕೂಡ ತಾಯಿ ಅಡುಗೆ ಮಾಡುತ್ತಾಳಾದರೂ ಮೂರು ದಶಕಗಳ ಹಿಂದಿನ ತಂದೆಯಂತೆ ಇಲ್ಲಿ ತಂದೆ ಅಡುಗೆಯ ಮಟ್ಟಿಗೆ ಅಕ್ರಿಯ (passive) ಅಲ್ಲ; ಅವತೀರ ಸಕ್ರಿಯ (active) ನಲ್ಲದಿದ್ದರೂ ಅಕ್ರಿಯವಾಗಿ ಸಕ್ರಿಯ (passively active) ಎನ್ನಬಹುದಾದಷ್ಟು ಮಟ್ಟಿಗೆ ಅವ ಕೂಡ ಬದಲಾಗಿದ್ದಾನೆ: ಅಡಿಗೆ ಮಾಡುವ ವೇಳೆ ಪೇಟೆಗೆ ಹೋಗದೆ ಮನೆಯಲ್ಲೇ ಇದ್ದುಕೊಂಡು, (ಅಡಿಗೆ ಮನೆಯಲ್ಲೇ ಇರುತ್ತ) ಹೆಂಡತಿಗೆ–(ಈಕೆ ಮಕ್ಕಳಿಗೆ ತಾಯಿ ಮತ್ತು ಅಕ್ರಿಯವಾಗಿ ಸಕ್ರಿಯನಾಗಿರುವ ಗಂಡನಿಗೆ ಹೆಂಡತಿ ಎಂಬುದನ್ನು ಗಮನಿಸಬೇಕು) – ಅಡಿಗೆ ಕೆಲಸದಲ್ಲಿ ನೆರವಾಗುತ್ತಾನೆ. ಹೀಗೆ, ಇಲ್ಲಿ ಪಾತ್ರ ಅದಲಿಬದಲಿ (exchange of role) ಮತ್ತು ಕಾರ್ಯ ಅದಲಿಬದಲಿ (exchange of activity) – ಎರಡೂ ಏಕಕಾಲದಲ್ಲಿ ಕಾಣಿಸುತ್ತದೆ: ಅಡಿಗೆ ಮಾಡುವ ಮತ್ತು ಮನೆಯನ್ನು ಸ್ವಚ್ಛಗೊಳಿಸುವ ಕ್ರಿಯೆ ಕುಟುಂಬದ ಎಲ್ಲ ಸದಸ್ಯರ ಸಾಮೂಹಿಕ ಕೆಲಸ ಮತ್ತು ಸಾಮೂಹಿಕ ಜವಾಬ್ದಾರಿ ಎಂಬ ಧ್ವನಿ ಬದಲಾದ ಸಾಮಾಜಿಕ ಸನ್ನವೇಶದಲ್ಲಿ ಕಂಡುಬರುತ್ತದೆ.

ಪಾರಂಪರಿಕವಾದ ಮನೆಗೆಲಸದ ಹೊರೆಯಿಂದ ಹೆಣ್ಣಿಗೆ ಭಾಗಶಃ ಮುಕ್ತಿ ನೀಡುವ, ಮಹಿಳಾ ವಿಮೋಚನೆಯ ಹಾದಿಯಲ್ಲಿ ಆಕೆಯನ್ನು ಆಶಾವಾದಿಯಾಗಿಸುವ ಅಂಶ ಇದು.

- ಮನೆಯಲ್ಲಿ ಮಕ್ಕಳನ್ನು ಬೆಳೆಸುವಾಗ ಪೋಷಕರು ಗಂಡು ಮತ್ತು ಹೆಣ್ಣು ಮಗುವಿನ ನಡುವೆ ಮಾಡುವ ತಾರತಮ್ಯ ಮತ್ತು ಅವರನ್ನು ನಡೆಸಿಕೊಳ್ಳುವ ರೀತಿಯಲ್ಲಿ ತೋರುವ ವ್ಯತ್ಯಾಸ ಎಲ್ಲರಿಗೂ ತಿಳಿದಿರುವ ವಿಷಯ. 'ಕಸ-ಮುಸುರೆ ಮಾಡುವುದು' ಹೆಣ್ಣಿನ (ತಂಗಿಯ) ಕೆಲಸ – ಮನೆಯ ಹೊರಗೆ ಮೆರೆಯುತ್ತ ಸಾಹಸ ತೋರುವುದು ಗಂಡಿನ (ಅಣ್ಣನ) ಕ್ಷೇತ್ರ – ಎಂಬ ಮನೋಧರ್ಮ ಬಹಳಷ್ಟು ಬದಲಾಗಿರುವುದು ಪಠ್ಯದಲ್ಲಿ ದೃಶ್ಯಾತ್ಮಕವಾಗಿ (visually) ಕೂಡ ಕಾಣಿಸುತ್ತದೆ. ಉದಾಹರಣೆಗೆ, 'ನಮ್ಮ ಕುಟುಂಬ' ಪಾಠದಲ್ಲಿ ಇರುವ ಚಿತ್ರದಲ್ಲಿ ಅಣ್ಣ <u>ಬೆನ್ನು ಬಗ್ಗಿಸಿ</u> ಪೊರಕೆ ಹಿಡಿದು ಕಸಗುಡಿಸುತ್ತಾನೆ. ತಂಗಿ, ತುಂಬ ಸೂಚ್ಯವಾಗಿ, ಪುಸ್ತಕದ ಕಪಾಟಿನ ಮುಂದೆ <u>ನೆಟ್ಟಗೆ ನಿಂತು</u> ಅದ್ಯಾವುದೋ ಪುಸ್ತಕ ಹುಡುಕುವುದರಲ್ಲಿ ತಲ್ಲೀನಳಾಗಿದ್ದಾಳೆ. ಗ್ರಾಮೀಣ ಪರಸರದಲ್ಲಿ ಇಂತಹ ದೃಶ್ಯಾತ್ಮಕ (visual) ಹೇಳಿಕೆ, "ಈಗ ಹೆಣ್ಣು ಗಂಡಿಗೆ ಸಮಾನಳು, ಅವಳು ಕಸ-ಮುಸುರೆಗಾಗಿ ಇರುವವಳು ಎನ್ನುವ ಕಾಲ ಕಳೆದು ಹೋಗಿದೆ" ಎಂಬ ದೃಶ್ಯಾತ್ಮಕ ಸಂದೇಶವು ಪಠ್ಯಗಳು ಚಲನಶೀಲ ಸಮಾಜದ ಗತಿಗೆ ಅನುಗುಣವಾಗಿ ಹೆಜ್ಜೆ ಹಾಕುತ್ತಿರುವುದನ್ನು ಸಂಕೇತಿಸುತ್ತದೆ ಎಂದು ಹೇಳಲು ಸಾಧ್ಯವಿದೆ.

- ಪಾಠದಲ್ಲಿ ಬರುವ 'ಹಂಚಿಕೊಂಡು ಮಾಡು', 'ಸಹಾಯ ಮಾಡು', 'ನೆರವಾಗು' ಎಂಬ ಪುನರುಕ್ತಿಗಳು ಪರಸ್ಪರ ಸಹಕಾರ ಮತ್ತು ಸೌಹಾರ್ದತೆಯ ತತ್ವದ ಮಹತ್ವವನ್ನು ಮಕ್ಕಳಿಗೆ ಮನದಟ್ಟು ಮಾಡುತ್ತವೆ. ಹೆಣ್ಣಿನ ಪಾತ್ರದ ಕುರಿತು ಇಂತಹ ಸುಧಾರಿತ ನಿಲುವು ಇಂದಿನ ಪಠ್ಯರಚನಕಾರರಲ್ಲಿ ಕಂಡುಬಂದಿದೆ. ಹೆಣ್ಣಿನ ದೈಹಿಕ ಲಕ್ಷಣಗಳಿಗೆ ನೀಡುವ ಮಹತ್ವಕ್ಕಿಂತ ಆಕೆಯ ಸಾಮಾಜಿಕ ಲಕ್ಷಣಗಳಿಗೆ ಹೆಚ್ಚು ಮಹತ್ವ

ನೀಡಿರುವುದು, ಆಕೆ ಅಡಿಗೆ ಮನೆ ಜೀವಿಯಲ್ಲ, ಆಕೆ ಸಾಮಾಜಿಕ ಜೀವಿ ಅಥವಾ ಆಕೆ ಸಾಮಾಜಿಕ ಜೀವಿ (social being) ಕೂಡ ಹೌದು ಎಂಬ ಅಂಶಕ್ಕೆ ಹೆಚ್ಚಿನ ಮಹತ್ವ ನೀಡುತ್ತಿರುವುದು ಕಾಣಿಸುತ್ತದೆ.

- ಒಟ್ಟಾರೆಯಾಗಿ, ಮಹಿಳೆಯರು ಸಮಾಜದಲ್ಲಿ ನಿರ್ವಹಿಸುವ, ನಿರ್ವಹಿಸಬಹುದಾದ ಪಾತ್ರಗಳಲ್ಲಿ ಮಾದರಿ ಬದಲಾವಣೆ ಆಗಿರುವುದು ಇಂದಿನ ಪಠ್ಯಗಳಲ್ಲಿ ಸ್ಪಷ್ಟವಾಗಿ ಕಾಣಿಸುತ್ತದೆ. ಕಲ್ಪನಾ ಚಾವ್ಲಾ, ಕಿರಣ್ ಬೇಡಿ, ನೀರಜಾ ಬಾನೋಟ್ ರಂತಹ ಸಾಧನೆಗೈದ ಮಹಿಳೆಯರು ಪಠ್ಯಪುಸ್ತಕಗಳಲ್ಲಿ ಸ್ಥಾನ ಪಡೆಯುತ್ತಿದ್ದಾರೆ. ಇದು ಮಹಿಳಾ ಶಿಕ್ಷಣ ಮತ್ತು ಸ್ತ್ರೀ ಸಬಲೀಕರಣದ ಯಶಸ್ಸನ್ನು ಮತ್ತು ಮುಂದಿನ ಹಾದಿಯನ್ನು ಸೂಚಿಸುತ್ತದೆ. ಈ ಮಹಿಳೆಯರ ಬದುಕು ಮತ್ತು ಸಾಧನೆ ಅತ್ಯಂತ ಹೆಚ್ಚು ಪ್ರಭಾವಕ್ಕೊಳಗಾಗುವ ವಯೋಮಾನದ ಶಾಲಾ ವಿದ್ಯಾರ್ಥಿನಿಯರಿಗೆ ತಾವೂ ಏನನ್ನಾದರೂ ಸಾಧಿಸಿ ತೋರಿಸಬೇಕು ಎಂಬ ದಿಕ್ಕಿನಲ್ಲಿ ಸಾಗಲು ಸ್ಫೂರ್ತಿಯಾಗದಿರದು.

- ಸಾಹಿತ್ಯ, ಸಮಾಜಶಾಸ್ತ್ರ ಮತ್ತು ಇತಿಹಾಸ ಪಠ್ಯಪುಸ್ತಕಗಳ ತಯಾರಿಕೆಯಲ್ಲಿ ರಾಜಕೀಯ ಸರಿತನದ ಪರಿಕಲ್ಪನೆ ಅಷ್ಟಾಗಿ ಕಂಡುಬರುವುದಿಲ್ಲ. 'ಸೌಂದರ್ಯದ ದೃಷ್ಟಿಯಿಂದ ಭಿನ್ನ'ಳೂ,'ಶ್ರವಣ ಶಕ್ತಿರಹಿತಳೂ' ಆದ ಹೆಣ್ಣನ್ನು 'ಕುರೂಪಿ' ಹಾಗೂ 'ಕುರುಡಿ' ಎಂದು ಉಲ್ಲೇಖಿಸುವಾಗ ಆಕೆ ನೊಂದುಕೊಂಡಾಳು ಎಂಬ ಸೂಕ್ಷ್ಮಸ್ಪಂದನಾಶೀಲತೆ ನಮ್ಮ ಪಠ್ಯಗಳಲ್ಲಿ ಇನ್ನೂ ಕಾಣಿಸುವುದಿಲ್ಲ. ಸಮಾಜದಲ್ಲಿ ಹೆಣ್ಣು ಸಮಾನತೆ ಸಾಧಿಸುತ್ತ, ಎಲ್ಲ ರಂಗಗಳಲ್ಲೂ ಗಣನೀಯ ಪಾತ್ರವಹಿಸುತ್ತ ತನ್ನ ಅಸ್ತಿತ್ವದ ಸಂಭ್ರಮವನ್ನು ಸಾಬೀತುಪಡಿಸುತ್ತ ಮುಂದೆ ಸಾಗಿದ ಹಾಗೆ ಆಕೆಯನ್ನು ಉಲ್ಲೇಖಿಸುವ, ವಿವರಿಸುವ, ವ್ಯಾಖ್ಯಾನಿಸುವ ಶಬ್ದಗಳು ಕೂಡ ಬದಲಾಗಬೇಕಾಗುತ್ತದೆ. ಭಾಷೆ/ಸಾಹಿತ್ಯ ಪಠ್ಯಪುಸ್ತಕಗಳನ್ನು ರಚಿಸುವವರು ರಾಜಕೀಯ ಸರಿತನದ ಪರಿಕಲ್ಪನೆಗೆ ಗಮನ ನೀಡಿದ್ದು ಕಂಡುಬರುವುದಿಲ್ಲ.

- ಇತಿಹಾಸ ಪಠ್ಯಪುಸ್ತಕದಲ್ಲಿ ಮಧ್ಯಕಾಲೀನ ಭಾರತದಲ್ಲಿ ಮಹಮದ್ ಘಸ್ನಿ ಮತ್ತು ಮಹಮದ್ ಘೋರಿಯ ದಂಡಯಾತ್ರೆಗಳ ಕಥಾನಕ, ಮತ್ತು ಭಾರಕ್ಕೆ ಯುರೋಪಿಯನ್ನರ ಆಗಮನ ಹಾಗೂ ಭಾರತದಲ್ಲಿ ಬ್ರಿಟಿಷ್ ಪರಮಾಧಿಕಾರ ಸ್ಥಾಪನೆಯ ಕಥಾನಕಗಳನ್ನು ಹೋಲಿಸಿ ನೋಡಿದಾಗ ಇತಿಹಾಸ ಪಠ್ಯರಚನೆಕಾರರ 'ಮನೋಧರ್ಮ'ದಲ್ಲಿ ವ್ಯತ್ಯಾಸ ಕಂಡುಬರುತ್ತದೆ. ಮೊದಲ ಕಥಾನಕದಲ್ಲಿ ದರೋಡೆಯ ಭಾಷೆ ಕಂಡುಬಂದರೆ ಎರಡನೆಯ ಕಥಾನಕದಲ್ಲಿ ವಾಣಿಜ್ಯದ ಭಾಷೆ ಕಾಣಿಸುತ್ತದೆ.

- ಮುಸ್ಲಿಮ್ ದೊರೆಗಳ 'ದಾಳಿ' ಮತ್ತು ಬ್ರಿಟಿಷ್ ದಂಡನಾಯಕರ 'ಆಗಮನ' – ಎರಡು ಕೂಡ ಮೂಲತಃ ಒಂದೇ ಉದ್ದೇಶಕ್ಕಾಗಿ (ಭಾರತದ ಸಂಪತ್ತನ್ನು ಸಾಧ್ಯವಾದಷ್ಟು ಮಟ್ಟಿಗೆ ತಮ್ಮೊಂದಿಗೆ ಒಯ್ಯುವುದಕ್ಕಾಗಿ) ಎಂಬ ಅಂಶವನ್ನು ಇತಿಹಾಸ ಪಠ್ಯಗಳು ಸ್ಪಷ್ಟಪಡಿಸುವುದಿಲ್ಲ. 'ದಾಳಿ', 'ದಂಡಯಾತ್ರೆ', ಎನ್ನುವ ಪದಗಳು ಮತ್ತು 'ಆಗಮನ' ಎನ್ನುವ ಪದ, ಐತಿಹಾಸಿಕವಾಗಿ, ಅದೆಷ್ಟು ಭಿನ್ನವಾದ ಅರ್ಥಗಳನ್ನು ಸ್ಫುರಿಸುತ್ತವೆ ಎಂಬುದರ ಕಲ್ಪನೆ ಪಠ್ಯರಚನೆಕಾರರಿಗೆ ಇದ್ದಂತೆ ಕಾಣಿಸುವುದಿಲ್ಲ. ಈ 'ದಾಳಿ', 'ಆಗಮನ' ಮತ್ತು 'ಪರಮಾಧಿಕಾರ ಸ್ಥಾಪನೆ'ಯ ನಡುವಣ ವ್ಯತ್ಯಾಸ ಇಂದಿಗೂ ಭಾರತೀಯ ಸಮಾಜದಲ್ಲಿ ಅಲ್ಪಸಂಖ್ಯಾಕರ ಬಗ್ಗೆ ಬಹುಸಂಖ್ಯಾತರಲ್ಲಿರುವ ಬಲಪಂಥೀಯರ ಪೂರ್ವಾನುಗ್ರಹಕ್ಕೆ ಕಾರಣವಾಗಿರಬಹುದು ಎಂಬ ಅನುಮಾನ ಪಠ್ಯರಚನೆಕಾರರನ್ನು ಕಾಡಿದ್ದು ಪಠ್ಯಗಳಲ್ಲಿ ವ್ಯಕ್ತವಾಗಿಲ್ಲ ಎಂದು ಹೇಳಬಹುದಾಗಿದೆ.

- ಶಾಲಾ ಪಠ್ಯಗಳಲ್ಲಿ ಇತಿಹಾಸವನ್ನು ತಿರುಚುವ ಪ್ರಯತ್ನ ನಡೆದಿರುವುದು ಪಾಕಿಸ್ತಾನದ ಪಠ್ಯಪುಸ್ತಕಗಳಲ್ಲಿ ಭಾರತದ ಸ್ವಾತಂತ್ರ್ಯ ಹೋರಾಟವನ್ನು ವಿವರಿಸುವಲ್ಲಿ ಸ್ಪಷ್ಟವಾಗುತ್ತದೆ. ಮೂಲಶಿಕ್ಷಣಕ್ಕೆ ಸಂಬಂಧಿಸಿದಂತೆ ವಾರ್ಧಾಯೋಜನೆಯನ್ನು ಪರಿಚಯಿಸುವಾಗ ಅಲ್ಲಿ ಪೂರ್ವಾನುಗ್ರಹಪೀಡಿತ ನಿಲುವು ಇದೆ. ಗಾಂಧೀಜಿಯ

ಚಿತ್ರಕ್ಕೆ ವಂದಿಸುವಂತೆ ಮುಸ್ಲಿಂ ವಿದ್ಯಾರ್ಥಿಗಳನ್ನು ಬಲಾತ್ಕರಿಸಲಾಗುತ್ತಿತ್ತು ಎನ್ನುವಂತಹ ಹೇಳಿಕೆಗಳು ಉಭಯ ದೇಶಗಳ ನಡುವೆ ವಿದ್ಯಾರ್ಥಿಗಳ ಮನಸ್ಸಿನಲ್ಲಿ ದ್ವೇಷವನ್ನು ಹರಡಲು ಬಳಸಿದ ಸಲಕರಣೆಗಳಾಗಿವೆ.

- 'ವಂದೇ ಮಾತರಂ' ಗೀತೆಯಲ್ಲಿ ಮುಸ್ಲಿಮರ ಬಗ್ಗೆ ದ್ವೇಷದ ಭಾವನೆಗಳಿದ್ದವು, ತರಗತಿಗಳು ಆರಂಭವಾಗುವ ಮೊದಲು ಮಹಾತ್ಮಾಗಾಂಧಿಯವರ ಚಿತ್ರಕ್ಕೆ ವಂದಿಸುವಂತೆ ಮುಸ್ಲಿಂ ವಿದ್ಯಾರ್ಥಿಗಳನ್ನು ಬಲಾತ್ಕರಿಸಲಾಗುತ್ತಿತ್ತು ಎನ್ನುವ ಅಪ್ಪಟ ಸುಳ್ಳುಗಳು ಪಾಕಿಸ್ತಾನದ ಇತಿಹಾಸ ಪಠ್ಯಪುಸ್ತಕಗಳಲ್ಲಿರುವುದು ಇತಿಹಾಸ ಬೋಧನೆಯ ಅಪಾಯಗಳನ್ನು ಸೂಚಿಸುತ್ತದೆ. ಪಾಕಿಸ್ತಾನದಂತಹ ಒಂದು ಪ್ರಭುತ್ವದ ಕೈಯಲ್ಲಿ ಇತಿಹಾಸ ಪಠ್ಯವು ಸರಕಾರಿ ಮಿಥ್ಯೆಗಳನ್ನು ವಿದ್ಯಾರ್ಥಿಗಳಿಗೆ ರವಾನಿಸಲು ಇರುವ ಒಂದು ಸಾಧನವಾಗುತ್ತದೆ ಎಂದರೆ ತಪ್ಪಾಗಲಾರದು.

- ಇತಿಹಾಸ ಪಠ್ಯವು ಆಳುವವರ್ಗ ತನ್ನ ಹಿತಾಸಕ್ತಿಗಳ ರಕ್ಷಣೆಗಾಗಿ ಬರೆಸುವ ಇತಿಹಾಸವಾಗಿಬಿಡುವ ಅಪಾಯ ಎಲ್ಲ ಪ್ರಭುತ್ವಗಳಲ್ಲೂ ಇದೆ.

- 'ಕರ್ನಾಟಕದ ಹುಲಿ' ಟಿಪ್ಪು ಸುಲ್ತಾನನ ಬಗ್ಗೆ ಬ್ರಿಟಿಷ್ ಆಳ್ವಿಕೆಯಲ್ಲಿ ಕರ್ನಾಟಕದಲ್ಲಿ ಬಳಕೆಯಲ್ಲಿದ್ದ ಇತಿಹಾಸ ಪಠ್ಯ ಮತ್ತು ಈಗ ಬಳಕೆಯಲ್ಲಿರುವ ಇತಿಹಾಸ ಪಠ್ಯ ಹೇಳುವುದನ್ನು ವಿಶ್ಲೇಷಿಸುವಾಗ ಇತಿಹಾಸದ ಸತ್ಯಗಳ ಬಗ್ಗೆ ಅಪನಂಬಿಕೆಯಲ್ಲವಾದರೂ ಅನುಮಾನ ಮೂಡುತ್ತದೆ. ಇತಿಹಾಸ ಪಠ್ಯರಚನಕಾರರನ್ನು ಇಂತಹ ಅನುಮಾನ ಸದಾ ಕಾಡುತ್ತಿದ್ದರೆ ಅವರು ವಸ್ತುನಿಷ್ಠವಾಗಿ ಇತಿಹಾಸ ಪಠ್ಯಪುಸ್ತಕಗಳನ್ನು ಬರೆಯುವ ಸಾಧ್ಯತೆ ಉಜ್ವಲಗೊಳ್ಳುತ್ತದೆ ಎನ್ನಲು ಸಾಧ್ಯವಿದೆ.

- ಸಮಾಜದಲ್ಲಿ ಕೋಮು ಸಾಮರಸ್ಯ ಕಾಪಾಡಲು ಇತಿಹಾಸ ಪಠ್ಯದ ಭಾವನಾತ್ಮಕವಾಗಿ ಸೂಕ್ಷ್ಮಸಂವೇದನಾಶೀಲವಾದ ಭಾಗಗಳನ್ನು ಪುನರ್‌ಲೇಖಿಸುವ ಅಗತ್ಯವಿದೆ. ಎಂದೋ ನಡೆದ, ಯಾರೋ ಮಾಡಿದ ತಪ್ಪುಗಳಿಗಾಗಿ ಇಂದಿನ ತಲೆಮಾರುಗಳು

ರಕ್ತದ ಹೊಳೆ ಹರಿಸುವುದರಲ್ಲಿ ಯಾವ ಅರ್ಥವೂ ಇಲ್ಲವಾದ್ದರಿಂದ ಈ ಪುನರ್‌ಲೇಖನ ಅಪೇಕ್ಷಣೀಯವೆಂಬ ತೀರ್ಮಾನಕ್ಕೆ ಬರಬಹುದಾಗಿದೆ.

- ರಾಜಕೀಯ ಪಕ್ಷಗಳು ಕೋಮು ರಾಜಕಾರಣಕ್ಕೆ ವಿದಾಯ ಹೇಳುವವರೆಗೆ ಶಿಕ್ಷಕರು ಕೋಮುವಾದಿಗಳಾಗುವುದನ್ನು ತಡೆಯುವುದು ಅಸಾಧ್ಯ. ತಮ್ಮ ಹತ್ತು ಹಲವು ಕೆಲಸಗಳಿಗಾಗಿ ರಾಜಕಾರಣಿಗಳ ಮೊರೆಹೋಗಬೇಕಾಗುವ ಶಿಕ್ಷಕರು ತಮಗೆ 'ಸಹಾಯ' ಮಾಡಿದ ರಾಜಕಾರಣಿಯ ಪಕ್ಷಕ್ಕೆ ಕೃತಜ್ಞರಾಗಿ, ನಿಧಾನವಾಗಿ, ಆ ಪಕ್ಷದ ಪರೋಕ್ಷ ವಕ್ತಾರರೇ ಆಗಿಬಿಡುತ್ತಾರೆ. ಆ ರಾಜಕೀಯ ಪಕ್ಷದ, ಅಥವಾ ಅದರ 'ಕೊಡೆ ಸಂಘಟನೆ'ಗಳ ಕಾರ್ಯಕ್ರಮಗಳಿಗೆ 'ಸ್ವಯಂಸೇವಕ'ರಾಗುತ್ತಾರೆ. ಇದು ಸೆಕ್ಯುಲರ್ ಶಿಕ್ಷಣದ ಚೌಕಟ್ಟಿಗೆ ಅಪಾಯಕಾರಿಯಾಗಬಹುದು.

- ಕೋಮು ಸಾಮರಸ್ಯ ಕಾಪಾಡುವಲ್ಲಿ ಮಹಿಳೆಯರು ಮನೆಯ <u>ಒಳಗೆ</u> ಸೆಕ್ಯುಲರ್ ವಾತಾವರಣ ಕಾಯ್ದುಕೊಳ್ಳುವ ಮೂಲಕ ಮನೆಯ <u>ಹೊರಗೂ</u> ಸೆಕ್ಯುಲರ್ ವಾತಾವರಣ ನೆಲಸುವಂತೆ ಮಾಡುವಲ್ಲಿ ಪ್ರಮುಖ ಪಾತ್ರವಹಿಸಬಲ್ಲರು. 'ಕೋಮು ಹಿಂಸೆಯೂ ಸೇರಿದಂತೆ ಯಾವುದೇ ಹಿಂಸೆ ನಡೆದಾಗ ಅತ್ಯಾಚಾರಕ್ಕೆ, ಅತ್ಯಂತ ಕ್ರೂರವಾದ ದೌರ್ಜನ್ಯಕ್ಕೆ ಗುರಿಯಾಗುವವರು ಮಹಿಳೆಯರು' (ಧರಣೀ ದೇವಿ ಮಾಲಗತ್ತಿ, ಉದಯವಾಣಿ, 26.3.2010) ಎಂಬ ಎಚ್ಚರದಿಂದ ಕೋಮುಗಲಭೆಯ ವೇಳೆ ಮಹಿಳೆಯರು ಪುರುಷರನ್ನು ನಿಭಾಯಿಸಿದರೆ ಕೋಮುಸಾಮರಸ್ಯಕ್ಕೆ ಮಹಿಳೆಯರು ಬಹಳ ದೊಡ್ಡ ಕೊಡುಗೆ ನೀಡಿದಂತಾಗುತ್ತದೆ.

- ಮೌಲ್ಯಶಿಕ್ಷಣ/ನೀತಿ ಶಿಕ್ಷಣದ ಹೆಸರಿನಲ್ಲಿ ಹಲವು ಶಿಕ್ಷಣ ಸಂಸ್ಥೆಗಳಲ್ಲಿ ಧಾರ್ಮಿಕ ಶಿಕ್ಷಣ ನುಸುಳಿಕೊಳ್ಳುತ್ತಿದೆ. ಇದು ಶಿಕ್ಷಣ ಸಂಸ್ಥೆಗಳಲ್ಲಿ ಅಸಹನೆ ಮತ್ತು ಕೋಮುದ್ವೇಷಕ್ಕೆ ಕಾರಣವಾಗಬಹುದು. ಧಾರ್ಮಿಕನಾಗಿರುವುದೆಂದರೆ ದೇವರಲ್ಲಿ ನಂಬಿಕೆ ಹೊಂದಿರುವುದು ಎಂದು ತಿಳಿಯಲಾಗಿದೆಯಾದರೂ, ನೈತಿಕನಾದ ವ್ಯಕ್ತಿಯೊಬ್ಬನಿಗೆ, ತಾರ್ಕಿಕವಾಗಿ, ದೇವರು/ಧರ್ಮದಲ್ಲಿ ನಂಬಿಕೆ ಇರಬೇಕಾದ

ಅವಶ್ಯಕತೆ ಇಲ್ಲ; ಯಾವುದೇ ಧಾರ್ಮಿಕ ನಂಬಿಕೆಗೆ ನಿಷ್ಠನಾಗದೆ ವ್ಯಕ್ತಿಯೊಬ್ಬ ನೈತಿಕನಾಗಿ ಇರಬಲ್ಲ ಎಂಬುದನ್ನು ಪ್ರಭುತ್ವದ ಪರಮಾಧಿಕಾರಿಗಳಿಗೆ ಮತ್ತು, ಮಿಗಿಲಾಗಿ, ಶಿಕ್ಷಕರಿಗೆ ಮನದಟ್ಟು ಮಾಡಿಸಬೇಕಾಗಿದೆ. ಇದಕ್ಕಾಗಿ ಶಿಕ್ಷಕರಿಗೆ ಆಧ್ಯಾತ್ಮಿಕ ಶಿಬಿರಗಳನ್ನು, ಸೂಕ್ಷ್ಮಗ್ರಾಹೀಕರಣದ ಕಮ್ಮಟಗಳನ್ನು, ನೀತಿ ಶಿಕ್ಷಣದ ಕಾರ್ಯಾಗಾರಗಳನ್ನು ನಡೆಸುವ ತುರ್ತು ಅಗತ್ಯ ಇದೆ. ಶಿಕ್ಷಕರು ನೀತಿ ಮತ್ತು ಸಂಘಟಿತ (organized) ಧರ್ಮದ ಸ್ವಹಿತಾಸಕ್ತ ಆಚರಣೆಗಳ ನಡುವೆ ಇರುವ ವ್ಯತ್ಯಾಸವನ್ನು ಮನಗಾಣುವಂತೆ ಮಾಡಿದಾಗ ಅವರು ಸ್ವತಃ ಕೋಮುನೆಲೆಯಲ್ಲಿ ಯೋಚಿಸದಂತೆ, ಧಾರ್ಮಿಕವಾಗಿ ಅತಿಭಾವುಕರಾಗದಂತೆ ತಡೆಯುವುದು ಸಾಧ್ಯವಾದೀತು.

- ಸಮಾಜದಲ್ಲಿ ಕೋಮುಸಾಮರಸ್ಯ ಕಾಪಾಡುವ ದೃಷ್ಟಿಯಿಂದ ಶಾಲಾ ವಿದ್ಯಾರ್ಥಿಗಳಿಗೆ ಗಾಂಧೀ ಮೌಲ್ಯಗಳನ್ನು ಆಧರಿಸಿದ ಶಾಂತಿಪಾಠದ ಒಂದು ಕೋರ್ಸ್ ಅನ್ನು ಆರಂಭಿಸುವ ಅವಶ್ಯಕತೆ ಇದೆ. ಈ ಕೋರ್ಸ್ ಹೇಗಿರಬೇಕು? ಹೇಗಿರಬಹುದು? ಇದನ್ನು ಮಕ್ಕಳಿಗೆ ಹೊರೆಯಾಗದಂತೆ ಹೇಗೆ ಒಂದು ಜೀವ ತುಂಬಿದ (lively) ಕೋರ್ಸ್ ಆಗಿ ಮಾಡಬಹುದು? ಎಂಬ ಬಗ್ಗೆ ಗಾಂಧೀ ಮೌಲ್ಯತಜ್ಞರೊಂದಿಗೆ ಶಿಕ್ಷಣತಜ್ಞರು ಕುಳಿತು ಚರ್ಚಿಸಿ ಒಮದು ತೀರ್ಮಾನ ತೆಗೆದುಕೊಳ್ಳಬಹುದು. ಮಕ್ಕಳ ದೈನಂದಿನ ಬದುಕಿನ ಘಟನೆಗಳಿಂದಲೇ ಗಾಂಧಿ ಪಾಠಸೃಷ್ಟಿಯಾಗುವಂತೆ ನೋಡಿಕೊಳ್ಳಬೇಕು. ಗಾಂಧೀ ತತ್ವ ಒಣ ಉಪದೇಶವಾಗದೆ ಬದುಕಿನಲ್ಲಿ ಯಪಯೋಗಕ್ಕೆ ಬರುವ ಪ್ರಾಯೋಗಿಕ ಜೀವನಸೂತ್ರವಾಗಬೇಕು, ಹೀಗಾಗುವಂತೆ ಈ ಕೋರ್ಸ್ ರಚಿಸಲ್ಪಡಬೇಕು.

**ಇಂಗಿತಗಳು (Implications)**

ಪ್ರಸ್ತುತ ಅಧ್ಯಯನದ ಇಂಗಿತಗಳನ್ನು ಹೀಗೆ ಸಂಕ್ಷೇಪಿಸಬಹುದು:

- ಒಂದು ಪಠ್ಯಕ್ರಮದಲ್ಲಿ ಬಳಸಲಾಗುವ ಪಠ್ಯಪುಸ್ತಕಗಳಲ್ಲಿ ವಿಷಯ ಮಂಡನೆಯ ಭಾಷೆ/ಶೈಲಿಗೂ ಆ ಪಠ್ಯಕ್ರಮವನ್ನು ರೂಪಿಸಿದ ಸಮಾಜದ ಮಹಿಳೆಯರ ಸ್ಥಾನಮಾನಕ್ಕೂ ಸಂಬಂಧವಿರುತ್ತದೆ. ಮಹಿಳೆಯ ಕುರಿತಾದ ಪುರುಷ ಸಮಾಜದ ಮನೋಧರ್ಮವು ಆ ಸಮಾಜದಲ್ಲಿ ರಚನೆಯಾಗುವ ಪಠ್ಯಗಳಲ್ಲಿ ಪ್ರತಿಬಿಂಬಿತವಾಗುತ್ತದೆ.

- ಭಾಷೆಯ ಮೂಲಕ ಒಂದು ವಿಷಯವು/ಸಂದೇಶವು ಅಭಿವ್ಯಕ್ತಗೊಳ್ಳುವಾಗ/ ಗವಾನೆಯಾಗುವಾಗ ಆಳ ಸಂರರಚನೆಯು ಮೇಲ್ಮೈ ಸಂರಚನೆಯಷ್ಟೇ, ಅಥವಾ ಅದಕ್ಕಿಂತ ಹೆಚ್ಚು, ಮುಖ್ಯವೆಂಬ ಅರಿವು ಬಹುಪಾಲು ಪಠ್ಯಲೇಖಕರಿಗೆ ಇರುವುದಿಲ್ಲ. ಪರಿಣಾಮವಾಗಿ, ಅವರು ರಚಿಸುವ ಪಠ್ಯವು ಅವರು ಹೇಳದೇ ಇರುವ ಅಥವಾ ಹೇಳಿದ್ದೇವೆಂದು ಅವರಿಗೇ ತಿಳಿಯದಿರುವ ಪಠ್ಯವೊಂದನ್ನು ಸ್ವಯಂ ಆಗಿಯೇ ರಚಿಸಿಕೊಂಡುಬಿಡುತ್ತದೆ.

- ಇತಿಹಾಸದ ಪಠ್ಯಗಳಲ್ಲಿ ನೀಡಲಾಗಿರುವ ಕೆಲವು ಮುಸ್ಲಿಂ ದೊರೆಗಳ ಕುರಿತಾದ ಕಥಾನಕವು ಬ್ರಿಟಿಷ್ ಆಳ್ವಿಕೆಯ ಕುರಿತಾದ ಕಥಾನಕಕ್ಕಿಂತ ಮನೋಧರ್ಮ, ಧೋರಣೆ ಮತ್ತು ಧ್ವನಿಯ ದೃಷ್ಟಿಯಿಂದ ಭಿನ್ನವಾಗಿದೆ.

- 'ರಾಜಕೀಯ ಸರಿತನ'ದ ಪರಿಕಲ್ಪನೆಯನ್ನು ಮಹಿಳೆಯರು, ದಲಿತರು ಮತ್ತು ಸಲ್ಪಸಂಖ್ಯಾಕರಿಗೆ ಸಂಬಂಧಿಸಿ ನಮ್ಮ ಪಠ್ಯಗಳಲ್ಲಿ ಅಳವಡಿಸಿಕೊಳ್ಳುವ ಕಾಲ ಸನ್ನಿಹಿತವಾಗಿದೆ. ಸಮಾಜದ ವಿವಿಧ ಜಾತಿ/ಪಂಗಡ/ಸಮುದಾಯಗಳು ತೀವ್ರವಾದ ರಾಜಕೀಯ ಪ್ರಜ್ಞೆಯನ್ನು ಬೆಳೆಸಿಕೊಂಡು ಸಂಘಟಿತವಾಗಿ ತಮ್ಮ ಪಾಲಿಗೆ ಬರಬೇಕಾದ ಸವಲತ್ತುಗಳನ್ನು ಹಕ್ಕಿನಿಂದ ಕೇಳುತ್ತಿವೆ. ಇಂತಹ ಸನ್ನಿವೇಶದಲ್ಲಿ ರಚಿತವಾಗುವ ಪಠ್ಯಗಳು ಎಲ್ಲ ಜಾತಿ/ಪಂಗಡಗಳ ಭಾವನೆಗಳಿಗೆ ಸೂಕ್ತವಾಗಿ ಸ್ಪಂದಿಸುವಂತಿರದಿದ್ದಲ್ಲಿ ಸಾಮಾಜಿಕ ಬಿಗಿತ ಕಾಣಿಸಕೊಳ್ಳಬಹುದು.

ಆದ್ದರಿಂದ ಪಠ್ಯಪುಸ್ತಕ ರಚನೆಕಾರರಿಗೆ 'ರಾಜಕೀಯ ಸರಿತನ'ದ ಕುರಿತು ಕಮ್ಮಟ, ಶಿಬಿರ, ವಿಚಾರಸಂಕಿರಣಗಳನ್ನು ನಡೆಸುವ ಅವಶ್ಯಕತೆ ಕಂಡುಬರುತ್ತದೆ.

- ಗಾಂಧೀಜಿಯವರ ವಿಚಾರಗಳನ್ನಾಧರಿಸಿ ಶಾಂತಿಶಿಕ್ಷಣದ ಒಂದು ಕೋರ್ಸ್ ತಯಾರಿ ಮತ್ತು ಶಾಲೆಗಳಲ್ಲಿ ಅದರ ಅನುಷ್ಠಾನ ಸದ್ಯದ ಸಾಮಾಜಿಕ ಸಂದರ್ಭದಲ್ಲಿ ಸೂಕ್ತ ಮತ್ತು ಸಕಾಲಿಕ.

ಈ ಅಧ್ಯಯನದ ಗುರಿಗಳಿಗನುಗುಣವಾಗಿ ಈ ಅಧ್ಯಯನದಲ್ಲಿ ಕರ್ನಾಟಕದ ಪಠ್ಯಕ್ರಮದಲ್ಲಿ ಬಳಕೆಯಲ್ಲಿದ್ದ ಮತು ಈಗ ಬಳಕೆಯಲ್ಲಿ ಇರುವ ಭಾಷೆ/ಸಾಹಿತ್ಯ, ಸಮಾಜ ವಿಜ್ಞಾನ ಮತ್ತು ಇತಿಹಾಸ ಪಠ್ಯಪುಸ್ತಕಗಳನ್ನು ಸ್ಥೂಲ ವಿಮರ್ಶೆಗೊಳಪಡಿಸಲಾಗಿದೆ. ಪಠ್ಯಗಳ ತೌಲನಿಕ ಅಧ್ಯಯನ ನಡೆಸಿ, ಒಂದೇ ವಿಷಯಕ್ಕೆ ಸಂಬಂಧಿಸಿದಂತೆ ಪಠ್ಯರಚನೆಯಲ್ಲಾಗಿರುವ ಬದಲಾವಣೆಯನ್ನು ಗುರುತಿಸುವುದಕ್ಕಾಗಿ ಹೀಗೆ ಮಾಡಲಾಗಿದೆ.

ಪಠ್ಯಮಸ್ತಕಗಳಲ್ಲಿ ಹೆಣ್ಣಿನ ಚಿತ್ರಣ, ಆ ಚಿತ್ರಣದಲ್ಲಿ ಮೂರು ದಶಕಗಳ ಅಂತರದಲ್ಲಿ ಕಂಡುಬರುವ ವ್ಯತ್ಯಾಸವನ್ನು ಉದಾಹರಣೆ ಸಹಿತವಾಗಿ ಗುರುತಿಸಲಾಗಿದೆ.

ಪಠ್ಯಗಳಲ್ಲಿ ಹೆಣ್ಣು ಚಿತ್ರಿತವಾಗಿದ್ದ ರೀತಿಗೂ ಆಕೆಯ ಸಾಮಾಜಿಕ ಸ್ಥಾನಮಾನ, ಕೋಮುಹಿಂಸೆ, ಕೋಮು ಸಾಮರಸ್ಯಕ್ಕೂ ಪರೋಕ್ಷವಾಗಿ ಸಂಬಂಧ ಇದೆಯಾದ್ದರಿಂದ ಆಕೆ ಕೋಮು ಸಾಮರಸ್ಯ ಕಾಪಾಡುವಲ್ಲಿ ವಹಿಸಬಹುದಾದ ಪಾತ್ರದ ಬಗ್ಗೆ ಅಧ್ಯಯನದಲ್ಲಿ ಚರ್ಚಿಸಲಾಗಿದೆ.

ಅದೇ ರೀತಿಯಾಗಿ, ಒಂದು ಕಾಲದ ಮುಸ್ಲಿಂ ದೊರೆಗಳನ್ನು ಇತಿಹಾಸ ಪಠ್ಯಗಳಲ್ಲಿ ದಾಳಿಕೋರರೆಂದೂ ಬ್ರಿಟಿಷರನ್ನು ಭಾರತದ ಉದ್ಧಾರಕ್ಕಾಗಿ ಬಂದ ಆಪದ್ಬಾಂದವರೆಂದೂ ಚಿತ್ರಿಸುವುದರಿಂದ ಇಂದಿನ ಭಾರತೀಯ ಸಮಾಜದ ಕೋಮು ಸಾಮರಸ್ಯಕ್ಕೆ ಆಗಬಹುದಾದ ಹಾನಿಯ ಕಡೆಗೆ ಶಿಕ್ಷಣತಜ್ಞರ ಹಾಗೂ ಪ್ರಭುತ್ವದ ಗಮನ ಸೆಳೆಯಲಾಗಿದೆ.

ಕೋಮು ಸಾಮರಸ್ಯ ಕಾಪಾಡುವ ನಿಟ್ಟಿನಲ್ಲಿ ಮಹಿಳೆಯರು ವಹಿಸಬಹುದಾದ ಪಾತ್ರವನ್ನು ಚರ್ಚಿಸಲಾಗಿದೆ.

ಶಿಕ್ಷಕರು ಕೋಮುವಾದಿಗಳಾಗದಂತೆ ತಡೆಯಲು ಏನು ಮಾಡಬಹುದೆಂದು ಹೇಳಲಾಗಿದೆ.

## ಸಲಹೆಗಳು

ತೋರಿಕೆಗೆ, ಮೊದಲ ನೋಟಕ್ಕೆ ಪರಸ್ಪರ ಸಂಬಂಧವಿಲ್ಲದಂತೆ ತೋರಬಹುದಾದ ಮೂರು ವಿಷಯಗಳನ್ನು, (ಅಂದರೆ ಕರ್ನಾಟಕದ ಶಿಕ್ಷಣ ಕ್ರಮದಲ್ಲಿ ಬಳಸಲಾಗಿರುವ ಭಾಷೆ, ಸಮಾಜದಲ್ಲಿ ಮಹಿಳೆಯರ ಸ್ಥಾನಮಾನ ಮತ್ತು ಕೋಮುಸಾಮರಸ್ಯವನ್ನು,) ಆಯ್ದುಕೊಂಡು ಅವುಗಳ ನಡುವೆ ಇರಬಹುದಾದ ಕೊಂಡಿಗಳನ್ನು ಹುಡುಕುವ ಒಂದು ಪ್ರಯತ್ನವಾಗಿ ಕೈಗೊಂಡ ಈ ಅಧ್ಯಯನವನ್ನಾಧರಿಸಿ ವಿನಮ್ರವಾಗಿ ಈ ಕೆಳಗಿನ ಸಲಹೆಗಳನ್ನು ನೀಡಲಾಗಿದೆ. ಈ ಸಲಹೆಗಳು ಶಿಕ್ಷಣಕ್ರಮದ ನಾಲ್ಕು ಪ್ರಮುಖ ಘಟಕಗಳಾದ, ತಮ್ಮ ತಮ್ಮ ನೆಲೆಯಲ್ಲಿ ಅಧಿಕಾರದ ನಾಲ್ಕು ಕೇಂದ್ರಗಳಾದ ನಾಲ್ಕು ತಂಡಗಳಿಗೆ ನೀಡಲಾಗಿರುವ ಸಲಹೆಗಳು. ಅಧಿಕಾರದ ದೃಷ್ಟಿಯಿಂದ, ಅತ್ಯಂತ ಹೆಚ್ಚು ಅಧಿಕಾರದಿಂದ ಅತ್ಯಂತ ಕಡಿಮೆ ಅಧಿಕಾರ ಹೊಂದಿರುವ ಅವರೋಹಣ ಕ್ರಮ (descending order) ದಲ್ಲಿರುವ ಘಟಕಗಳಿವು: ಪ್ರಭುತ್ವ, ಪಠ್ಯಪುಸ್ತಕ ರಚನೆಕಾರರು, ಶಿಕ್ಷಕರು ಮತ್ತು ಪೋಷಕರು. ಹಾಗಾಗಿ ಸಲಹೆಗಳನ್ನು ಕಾರ್ಯಗತಗೊಳಿಸುವ ಗರಿಷ್ಠ ಸಂಭಾವ್ಯತೆ ಮತ್ತು ಕನಿಷ್ಠ ಸಂಭಾವ್ಯತೆಗಳ ನಾಲ್ಕು ಕ್ಷೇತ್ರಗಳಿವು ಎಂಬ ಎಚ್ಚರದಲ್ಲೆ ಈ ಸಲಹೆಗಳನ್ನು ಪರಿಶೀಲಿಸಬೇಕಾಗುತ್ತದೆ.

### ಪ್ರಭುತ್ವಕ್ಕೆ

- ಭಾಷೆ/ಸಾಹಿತ್ಯ, ಸಮಾಜಶಾಸ್ತ್ರ ಮತ್ತು ಇತಿಹಾಸದ ಪಠ್ಯಪುಸ್ತಕಗಳ ವಿಷಯ (content)ದ ಹಿಂದೆ ಸಾಮಾಜಿಕ, ಧಾರ್ಮಿಕ ಹಾಗೂ ರಾಜಕೀಯ ಇಂಗಿತಗಳಿರುತ್ತವಾದ್ದರಿಂದ ಈ ಪಠ್ಯಗಳ ರಚನೆಕಾರರಿಗೆ ವಿಶೇಷ ರೀತಿಯ ಪಠ್ಯರಚನಾ ಕಮ್ಮಟಗಳನ್ನು ನಡೆಸಬೇಕು.

- ಪಠ್ಯಪುಸ್ತಕ ರಚನಾ ಕಮ್ಮಟಗಳು ಪ್ರಭುತ್ವದ ಅಧಿಕಾರಶಾಹೀ ನಿಯಮಗಳ ಸಿಕ್ಕಿನಲ್ಲಿ ಸಿಕ್ಕಿಹಾಕಿಕೊಳ್ಳದಂತೆ ನೋಡಿಕೊಳ್ಳುವುದಕ್ಕಾಗಿ ಪಠ್ಯರಚನಾ ಪ್ರಕ್ರಿಯೆಯನ್ನು ವಿಕೇಂದ್ರೀಕರಿಸಬೇಕು.

- ಪಠ್ಯರಚನಾ ಕಮ್ಮಟಗಳಿಗೆ ಬರುವ ಅನುಭವೀ ಶಿಕ್ಷಕರಿಗೆ ಪ್ರಯಾಣ ಭತ್ಯೆ, ದೈನಂದಿನ ಭತ್ಯೆ ಪಡೆಯುವುದೇ ಒಂದು ಹೋರಾಟವಾಗದಂತೆ

ನೋಡಿಕೊಳ್ಳಬೇಕು. ಈ ಸಂಶೋಧಕನಿಗೆ ಇಂತಹ ಹೋರಾಟಗಳ ಅನುಭವ ಸಾಕಷ್ಟು ಆಗಿದೆ.

- ಕರ್ನಾಟಕ ಎಂದರೆ ಬೆಂಗಳೂರು ಅಥವಾ ಬೆಂಗಳೂರು ಮಾತ್ರ ಎಂಬ ಭ್ರಮೆಯಿಂದ ಶಿಕ್ಷಣ ಇಲಾಖೆಯ ಉನ್ನತಾಧಿಕಾರಿಗಳು ಹೊರಬರುವಂತೆ ಮಾಡಲು ಪ್ರಭುತ್ವವು ಸೂಕ್ತ ಕ್ರಮ ಕೈಗೊಳ್ಳಬೇಕು.

**ಪಠ್ಯಪುಸ್ತಕ ರಚನೆಕಾರರಿಗೆ**

- ಪಠ್ಯಪುಸ್ತಕ ರಚನೆಕಾರರು ಸರಕಾರ ಅವರ ಕೈಗೆ ಕೊಡುವ ಪಠ್ಯಕ್ರಮಕ್ಕೆ ಅನುಗುಣವಾಗಿ ಪಠ್ಯಗಳನ್ನು ರಚಿಸುವ ಆಜ್ಞಾನುವರ್ತಿಗಳಷ್ಟೇ ಆಗಿರುವುದರಿಂದ ತಮಗೆ ನೀಡಲಾದ ಪಠ್ಯಕ್ರಮದ ಪರಿಧಿಯೊಳಗೆ ಅತ್ಯುತ್ತಮ ಪಠ್ಯ ತಯಾರಿಗೆ ಬೇಕಾದ ಶೈಕ್ಷಣಿಕ, ಮಾನಸಿಕ ಹಾಗೂ ಧೀಮಂತ (intellectual) ಸಿದ್ಧತೆಗಳನ್ನು ಮಾಡಿಕೊಳ್ಳಬೇಕು.

- ಯಾವುದೇ ತರಹದ ಪೂರ್ವಾನುಗ್ರಹದಿಂದ ಮತ್ತು ಮತೀಯ ಭಾವನೆಗಳಿಂದ ಮುಕ್ತವಾಗಿರುವಂತೆ ತಮ್ಮನ್ನು ತಾವೇ ಕಾಯ್ದುಕೊಳ್ಳಬೇಕು.

- ಕೋಮು ಸೂಕ್ಷ್ಮ (communally sensitive) ವಿಷಯಗಳನ್ನು ಪಠ್ಯದಲ್ಲಿ ಸೇರಿಸುವಾಗ ವಿಶೇಷವಾದ ಜಾಗ್ರತೆವಹಿಸಬೇಕು.

**ಶಿಕ್ಷಕರಿಗೆ**

- ವಿದ್ಯಾರ್ಥಿಯೊಬ್ಬ ಯಾವುದೇ ಜಾತಿ/ಧರ್ಮ/ಪಂಗಡಕ್ಕೆ ಸೇರಿದ ಒಬ್ಬ ವಿದ್ಯಾರ್ಥಿ/ನಿ ಯನ್ನು ಜಾತೀಯವಾಗಿ ಮತೀಯವಾಗಿ/ಅವಮಾನಿಸುವ ಪದಬಳಸಿ ಉಲ್ಲೇಖಿಸಿದಲ್ಲಿ ಅಂತಹ ವಿದ್ಯಾರ್ಥಿಗೆ ತಿಳಿಯಹೇಳಿ ಸನ್ನಿವೇಶವನ್ನು ತುಂಬ ಜಾಗರೂಕತೆಯಿಂದ ನಿಭಾಯಿಸುವುದನ್ನು ಕಲಿತುಕೊಳ್ಳಬೇಕು.

- ವಿದ್ಯಾರ್ಥಿಗಳಲ್ಲಿ ಸೆಕ್ಯುಲರ್ ಮನೋಧರ್ಮವನ್ನು ಬೆಳೆಸಬೇಕಾದವರು ಶಿಕ್ಷಕರಾದ್ದರಿಂದ ಶಿಕ್ಷಕರು 'ಕೋಮುವಾದಿ' ಎಂಬ ಹಣೆಪಟ್ಟಿ ತಮಗೆ ತಗುಲದಂತೆ (ತರಗತಿಯ ಒಳಗೂ ಹೊರಗೂ) ನಡೆದುಕೊಳ್ಳಬೇಕು.

- ಯಾವುದೇ ಪಠ್ಯಪುಸ್ತಕವು ವಿದ್ಯಾರ್ಥಿಗಳ ಪಾಲಿಗೆ ವಾಸ್ತವವಾಗುವುದು, ಪುಸ್ತಕದಲ್ಲಿ ಅಕ್ಷರಗಳಲ್ಲಿ ಅಡಗಿರುವ ಜ್ಞಾನ ವಿದ್ಯಾರ್ಥಿಗೆ ದಕ್ಕುವುದು ಶಿಕ್ಷಕ ಎಂಬ ಮಾಧ್ಯಮದ ಮೂಲಕವಾದ್ದರಿಂದ ಶಿಕ್ಷಕರು ಪಠ್ಯವನ್ನು ವಿದ್ಯಾರ್ಥಿಗಳಿಗೆ ರವಾನಿಸುವ ಕೆಲಸವನ್ನು ಪ್ರಾಮಾಣಿಕವಾಗಿ ಮತ್ತು ದಕ್ಷವಾಗಿ ಮಾಡಬೇಕು.

- 'ನ್ಯಾಯ ಏನೇ ಮಾಡಿದರೂ ವಿದ್ಯಾರ್ಥಿಗಳಿಗೆ ಪಾಠದ ಮಟ್ಟಿಗೆ ನ್ಯಾಯ ಒದಗಿಸಬೇಕು' ಎಂಬ ಕನಿಷ್ಠ ಧ್ಯೇಯವಾಕ್ಯಕ್ಕೆ ಶಿಕ್ಷಕರು ಬದ್ಧರಾಗಿರಬೇಕು.

**ಪೋಷಕರಿಗೆ**

- ತಮ್ಮ ಮಕ್ಕಳು ಶಾಲೆಯಿಂದ ಬಂದ ಬಳಿಕ ಯಾವ ಬಗ್ಗೆ, ಯಾರ ಬಗ್ಗೆ, ಯಾವ ಜಾತಿ/ಧರ್ಮ/ಸಮುದಾಯದ ಬಗ್ಗೆ ಏನು ಹೇಳುತ್ತವೆ; ತಮ್ಮ ಗೆಳೆಯ ಗೆಳತಿಯರ ಜೊತೆ ಏನು ಮಾತಾಡುತ್ತವೆ, ಎಲ್ಲಿಗೆ ಹೋಗುತ್ತವೆ, ಯಾರ ಜತೆ ಹೋಗುತ್ತವೆ ಎಂಬ ಕುರಿತು ಪೋಷಕರು ತುಸು ನಿಗಾ ಇಡಬೇಕು.

- ಮಕ್ಕಳು ಪರಸ್ಪರ ಜಗಳ ಆಡುವಾಗ, ಬೈದುಕೊಳ್ಳುವಾಗ ಯಾವ ಯಾವ ಶಬ್ದಗಳನ್ನು ಬಳಸುತ್ತವೆ? ಜಾತಿ/ಕೋಮು ಸೂಚಕವಾದ ಪದಗಳು ಆ ಶಬ್ದಗಳಲ್ಲಿ ಸೇರಿವೆಯೇ? ಎಂದು ತಿಳಿಯುವ ಪ್ರಯತ್ನ ಮಾಡಬೇಕು.

- ತಮ್ಮ ಮಕ್ಕಳು ಜಾತಿ/ಕೋಮು ಸೂಚಕ ಶಬ್ದಗಳನ್ನು ಬಳಸಿದಲ್ಲಿ ಅವರನ್ನು ಕರೆದು ಬುದ್ಧಿ ಹೇಳಬೇಕು. ಅಗತ್ಯವಿದ್ದರೆ ಗದರಿಸಿ, ಪರೋಕ್ಷವಾಗಿ ಶಿಕ್ಷಿಸಿ ಅವರ ಮಾತು ಮತ್ತು ವರ್ತನೆಯಲ್ಲಿ ಬದಲಾವಣೆ ತರಲು ಶ್ರಮಿಸಬೇಕು.

ತಾವು ಮನೆಯಲ್ಲಿ ಮಕ್ಕಳ ಮುಂದೆ ಮಾತಾಡುವಾಗ ಹೆಣ್ಣನ್ನಾಗಲಿ, ಯಾವುದೇ ಜಾತಿ/ಧರ್ಮ/ಪಂಗಡಕ್ಕೆ ಸೇರಿದವನನ್ನಾಗಲಿ ನಿಂದಿಸಿ, ಅವಹೇಳನಕಾರಿ ಯಾಗುವಂತೆ ಮತಾಡಬಾರದು. ಧನಾತ್ಮಕ (positive) ಅಂಶಗಳಿಗೇ ಒತ್ತುನೀಡಿ ಮತಾಡುವುದನ್ನು ರೂಢಿಸಿಕೊಂಡು ಮಕ್ಕಳಲ್ಲೂ ಇದು ರೂಢಿಯಾಗುವಂತೆ ಪ್ರಯತ್ನಿಸಬೇಕು.

## ಭಾವೀ ಸಂಶೋಧನೆಗೆ ಶಿಫಾರಸುಗಳು

ಈ ಸಂಶೋಧನಾ ಅಧ್ಯಯನದ ಸಂದರ್ಭದಲ್ಲಿ ಸಂಶೋಧಕನು ಕಂಡುಕೊಂಡ ಕೆಲವು ಸಂಶೋಧನಾ ಕ್ಷೇತ್ರಗಳು ಭವಿಷ್ಯದ ಸಂಶೋಧಕರಿಗೆ ಸಂಶೋಧನೆಗೆ ವಿಷಯವಾಗಬಲ್ಲವು. ಅವರಿಗಾಗಿ, ಅಂತಹ ಕೆಲವು ಸಂಶೋಧನೆಗಳಿಗೆ ಈ ಕೆಳಗೆ ಕಾಣಿಸಿದ ವಿಷಯಗಳನ್ನು ಶಿಫಾರಸುಗಳನ್ನು ಮಾಡಲಾಗಿದೆ.

- ಮಹಿಳೆಯರ ಸಬಲೀಕರಣ ಸಂಪೂರ್ಣ ಯಶಸ್ವಿಯಾಗುವಂತೆ ಮಾಡಲು ಶಾಲೆಗಳಲ್ಲಿ ವಿದ್ಯಾರ್ಥಿನಿಯರಿಗೆ ಮಾತ್ರ ಸಬಲೀಕರಣದ ಕುರಿತು ಕೋರ್ಸ್‌ಗಳನ್ನು ನೀಡುವ ಸಾಧ್ಯಾಸಾಧ್ಯತೆಗಳು.
- ಓರ್ವ ಮತೀಯವಾದಿಯನ್ನು ಆಯ್ಕೆಮಾಡಿಕೊಂಡು ಅವ ಅಷ್ಟೊಂದು ತೀವ್ರವಾದ ಮತೀಯವಾದಿ ಯಾಕೆ ಆದನೆಂದು ಒಬ್ಬನ-ಕೇವಲ ಒಬ್ಬ ಉಗ್ರಮತೀಯವಾದಿಯ – ಅಧ್ಯಯನ.
- ಇತಿಹಾಸ ಪಠ್ಯಗಳಲ್ಲಿ ಕಾಣಿಸುವ ಪೂರ್ವಾನುಗ್ರಹಗಳಿಂದ ಅವುಗಳನ್ನು ಮುಕ್ತವಾಗಿಸಿ ಅವು ಸೆಕ್ಯುಲರ್ ಪಠ್ಯಗಳಾಗುವಂತೆ ಮಾಡುವ ಕ್ರಮಗಳ ಒಂದು ಶೋಧನಾತ್ಮಕ ಅಧ್ಯಯನ.
- ಗಾಂಧೀಜಿಯ ವಿಚಾರಗಳನ್ನು ಶಾಲಾಮಕ್ಕಳಿಗೆ ತಲಪಿಸಲು ವಿವರವಾದ ಒಂದು ಶಾಂತಿ ಕೋರ್ಸ್: ಸಾಧ್ಯತೆಗಳು ಮತ್ತು ಸಮಸ್ಯೆಗಳು.

**ಸಾರಾಂಶ**

ಕರ್ನಾಟಕದ ಶಿಕ್ಷಣ ಕ್ರಮದಲ್ಲಿ ಭಾಷೆ, ಮಹಿಳೆಯರ ಸ್ಥಾನಮಾನ ಹಾಗೂ ಕೋಮು ಸಾಮರಸ್ಯದ ಕುರಿತು ನಡೆಸಲಾದ ಈ ಸಂಶೋಧನಾ ಅಧ್ಯಯನದ ಒಟ್ಟು ಸಾರಾಂಶವನ್ನು ಅಧ್ಯಾಯಾನುಕ್ರಮದಲ್ಲಿ ಕೆಳಗೆ ಕೊಡಲಾಗಿದೆ.

ಮೊದಲನೆಯ ಅಧ್ಯಾಯದಲ್ಲಿ ಸಮಕಾಲೀನ ಸಾಮಾಜಿಕ ಹಾಗೂ ಶೈಕ್ಷಣಿಕ ಪರಿಸರವನ್ನು ವಿವರಿಸಿ ಈ ಪರಿಸರದಲ್ಲಿ ಪ್ರಸ್ತುತ ಅಧ್ಯಯನದ ಹಿನ್ನೆಲೆ, ಸೈದ್ಧಾಂತಿಕ ಚೌಕಟ್ಟು, ಅಧ್ಯಯನದ ಸಂದರ್ಭ ಮತ್ತು ಅವಶ್ಯಕತೆಯನ್ನು ಸ್ಪಷ್ಟಪಡಿಸಲಾಯಿತು. ಬಳಿಕ, ಅಧ್ಯಯನದ ಉದ್ದೇಶವನ್ನು ಪ್ರಸ್ತಾಪಿಸಿ ಸಮಸ್ಯೆಯ ಹೇಳಿಕೆಯನ್ನು ವಿಷದೀಕರಿಸಲಾಯಿತು. ತದನಂತರ ಅಧ್ಯಯನದಲ್ಲಿ ಉತ್ತರಿಸಲು ಉದ್ದೇಶಿಸಿರುವ ಸಂಶೋಧನಾ ಪ್ರಶ್ನೆಗಳನ್ನು ಪಟ್ಟಿಮಾಡಿ ಅಧ್ಯಯನಕ್ಕೊಳಪಡಬೇಕಾದ ನಿರ್ದಿಷ್ಟ ಸಮಸ್ಯೆಗಳನ್ನು ಗುರುತಿಸಿ, ಅಧ್ಯಯನದ ಗುರಿಗಳೇನು ಎಂದು ಹೇಳಲಾಯಿತು. ಅಧ್ಯಯನವು ಯಾವ ಊಹೆಗಳನ್ನು ಆಧರಿಸಿದೆ ಎಂದು ವಿವರಿಸಿದ ಬಳಿಕ ಅಧ್ಯಯನದ ಮಹತ್ವ ಮತ್ತು ಅಧ್ಯಯನದ ಮಿತಿಗಳನ್ನು ವಿವರಿಸಿ, ಅಂತಿಮವಾಗಿ ಅಧ್ಯಾಯಗಳ ವಿಂಗಡಣೆಯನ್ನು ಮಾಡಲಾಯಿತು.

ಎರಡನೆಯ ಅಧ್ಯಾಯದಲ್ಲಿ ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿ ಸಂಶೋಧನಾ ಸಾಹಿತ್ಯದ ಅವಲೋಕನ ನಡೆಸಲಾಯಿತು. ಪಠ್ಯಕ್ರಮವನ್ನು ವ್ಯಾಖ್ಯಾನಿಸಿದ ಬಳಿಕ ಪಠ್ಯರಚನಾ ಪ್ರಕ್ರಿಯೆಯನ್ನು ಪರಿಶೀಲಿಸಿ ಪಠ್ಯಪುಸ್ತಕಗಳ ಸಿಂಹಾವಲೋಕನ ಮಾಡಲಾಯಿತು. ಕರ್ನಾಟಕದ ಪಠ್ಯಕ್ರಮದಲ್ಲಿರುವ ಭಾಷೆ/ಸಾಹಿತ್ಯ, ಇತಿಹಾಸ ಮತ್ತು ಸಮಾಜ ವಿಜ್ಞಾನ ಪಠ್ಯಪುಸ್ತಕಗಳನ್ನು ಆಯ್ದುಕೊಂಡು ಅವುಗಳ ಸಂಕ್ಷಿಪ್ತ ವಿಮರ್ಶೆ ಮಾಡಿ ಪಠ್ಯಪುಸ್ತಕಗಳ ಹಿಂದಿರುವ ಗ್ರಹಿಕೆಗಳನ್ನು ಹಾಗೂ ಪಠ್ಯಪುಸ್ತಕ ರಚನೆಕಾರರ ವಾಚ್ಯ ಹಾಗೂ ಸೂಚ್ಯ ಮನೋಧರ್ಮಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಲಾಯಿತು. ಇದಕ್ಕಾಗಿ ಆಳಸಂರಚನೆಯನ್ನು ಬಳಸಿಕೊಳ್ಳಲಾಯಿತು. ಲಭ್ಯ ಅಧ್ಯಯನಗಳ ಪರಾಮರ್ಶೆ ನಡೆಸಿ ಸಂಶೋಧನಾ ಅಂತರವನ್ನು ಗುರುತಿಸಲಾಯಿತು.

ಮೂರನೆಯ ಅಧ್ಯಾಯದಲ್ಲಿ ಈ ಅಧ್ಯಯನಕ್ಕೆ ಬಳಸಿಕೊಂಡ ಸಂಶೋಧನಾ ವಿಧಾನವನ್ನು ವಿವರಿಸಲಾಯಿತು. ಅಧ್ಯಯನಕ್ಕಾಗಿ ಸಂಗ್ರಹಿಸಿದ ಪಠ್ಯಪುಸ್ತಕಗಳ ಹಾಗೂ ವಾರ್ತಾಪತ್ರಿಕೆಗಳಲ್ಲಿ ಪ್ರಕಟವಾದ ಅಧ್ಯಯನ ಸಂಬಂಧೀ ಲೇಖನಗಳ ಯಾದಿಯನ್ನು ಮಾಡಿ ಆನುಷಂಗಿಕ (secondary) ದತ್ತಾಂಶಗಳನ್ನು ಕಲೆಹಾಕಿ ಅವುಗಳ ವಿಶ್ಲೇಷಣೆ ನಡೆಸಲಾಯಿತು.

ನಾಲ್ಕನೆಯ ಅಧ್ಯಾಯದಲ್ಲಿ ಮಹಿಳೆಯರ ಸ್ಥಾನಮಾನ ಹಾಗೂ ಲಿಂಗನ್ಯಾಯ ಪರಿಕಲ್ಪನೆಯನ್ನು ಚರ್ಚಿಸಲಾಯಿತು. ಸ್ತ್ರೀವಾದ, ಮಹಿಳಾ ವಿಮೋಚನೆ, ಮಹಿಳಾ ಸಬಲೀಕರಣದ ಪರಿಕಲ್ಪನೆಗಳ ವಿಸ್ತಾರವಾದ ಚರ್ಚೆಯ ಬಳಿಕ ಸಾಹಿತ್ಯ ಹಾಗೂ ಸಾಹಿತ್ಯೇತರ ಪಠ್ಯಗಳಲ್ಲಿ ಮಹಿಳೆಯರ ಚಿತ್ರಣ ಮೂರು ದಶಕಗಳ ಹಿಂದೆ ಹೇಗಿತ್ತು? ಮತ್ತು ಈಗ ಹೇಗಿದೆ ಎಂಬುದನ್ನು 1980ರಲ್ಲಿ ಬಳಕೆಯಲ್ಲಿದ್ದ ಪಠ್ಯಪುಸ್ತಕವನ್ನು 1986ರ ರಾಷ್ಟ್ರೀಯ ಶಿಕ್ಷಣ ನೀತಿಯನ್ವಯ ಜಾರಿಗೆ ಬಂದ ಪಠ್ಯಪುಸ್ತಕದೊಂದಿಗೆ ತುಲನೆ ಮಾಡಿ ಉದಾಹರಣೆಗಳ ಮೂಲಕ ಪಠ್ಯಗಳ ಆಳಸಂರಚನೆಯ ವಿಶ್ಲೇಷಣೆ ನಡೆಸಿ ವಿವರಿಸಲಾಯಿತು. ಮೇಲ್ಮೈ ಸಂರಚನೆ ಮತ್ತು ಆಳ ಸಂರಚನೆಯ ಪಠ್ಯಗಳು ಹೇಗೆ ಪಠ್ಯರಚನೆಕಾರರ ಮನೋಧರ್ಮದಲ್ಲಾಗಿರುವ ಬದಲಾವಣೆಯನ್ನು ಧ್ವನಿಸುತ್ತವೆ ಎಂದು ಗುರುತಿಸಲಾಯಿತು. ಮಹಿಳೆಯರಿಗೆ ನೀಡಲಾದ ಹಾಗೂ ಅವರು ನಿರ್ವಹಿಸುವ ಪಾತ್ರಗಳಲ್ಲಿ ಆಗಿರುವ ಮಾದರಿ ಬದಲಾವಣೆಯನ್ನು ದಾಖಲಿಸಿದ ಬಳಿಕ ಪಠ್ಯಪುಸ್ತಕಗಳಲ್ಲಿ ರಾಜಕೀಯ ಸರಿತನದ ಪರಿಕಲ್ಪನೆಯ ಮಹತ್ವವನ್ನು ಚರ್ಚಿಸಲಾಯಿತು.

ಐದನೆಯ ಅಧ್ಯಾಯದಲ್ಲಿ ಪಠ್ಯಪುಸ್ತಕಗಳ ಮತ್ತು ಕೋಮುಸಾಮರಸ್ಯದ ನಡುವೆ ಇರಬಹುದಾದ ಸಂಬಂಧವನ್ನು ಕೈಗೆತ್ತಿಕೊಳ್ಳಲಾಯಿತು. ಶಿಕ್ಷಣದಲ್ಲಿ ಕೋಮುವಾದ ಹಾಗೂ ಕೋಮುವಾದಿ ಮನೋಧರ್ಮದ ಅಪಾಯಗಳು, ಪಠ್ಯಪುಸ್ತಕಗಳ ಮೂಲಕ ವಿದ್ಯಾರ್ಥಿಗಳ ಯೋಚನಾ ಪ್ರಕ್ರಿಯೆಯ ಭಾವನಾತ್ಮೀಕರಣ ನಡೆಯುವ ಸಾಧ್ಯತೆ, ಇತಿಹಾಸ ಹಾಗೂ ಸಮಾಜ ವಿಜ್ಞಾನ ಪಠ್ಯಗಳಲ್ಲಿರಬಹುದಾದ ಭಾವನಾತ್ಮಕವಾಗಿ ಸೂಕ್ಷ್ಮವಾದ ಭಾಗಗಳ ಪುನರ್‌ಲೇಖನದ ಪ್ರಶ್ನೆಯನ್ನು ಚರ್ಚಿಸಲಾಯಿತು. ಬಳಿಕ ಕೋಮುಸಾಮರಸ್ಯಕ್ಕೆ ಪಠ್ಯಪುಸ್ತಕಗಳ ಕೊಡುಗೆ, ವದಂತಿ ಹರಡುವಿಕೆಯನ್ನು ತಡೆಯುವ ಕ್ರಮಗಳ ಬಗ್ಗೆ ಪ್ರಸ್ತಾಪಿಸಿ ಅಂತಿಮವಾಗಿ ಕೋಮುಸಾಮರಸ್ಯದಲ್ಲಿ ಮಹಿಳೆಯರು ವಹಿಸಬಹುದಾದ ಪಾತ್ರದ ಬಗ್ಗೆ ಗಮನಹರಿಸಲಾಯಿತು.

ಅಧ್ಯಾಯ ಆರರಲ್ಲಿ ಕೋಮು ಸಾಮರಸ್ಯ ಕಾಪಾಡುವಿಕೆಯಲ್ಲಿ ಮಾನವೀಯ ಮೌಲ್ಯಗಳ ಮಹತ್ವವನ್ನು ಚರ್ಚಿಸಲಾಯಿತು. ಶಿಕ್ಷಣದ ಗುರಿಗಳು, ಸೆಕ್ಯುಲರಿಸಂನ ವ್ಯಾಖ್ಯಾನ, ಮೌಲ್ಯಗಳ ವ್ಯಾಖ್ಯಾನದ ಬಳಿಕ ಬಹುಮುಖೀ ಸಂಸ್ಕೃತಿಯಲ್ಲಿ ನೀತಿ ಶಿಕ್ಷಣದ ನೆಪದಲ್ಲಿ ನೀಡುವ ಧಾರ್ಮಿಕ ಶಿಕ್ಷಣದ ಅಪಾಯವನ್ನು ಗುರುತಿಸಿ, ಶಿಕ್ಷಕರ ಕೋಮುವಾದಿ ಮನೋಧರ್ಮ ಮತ್ತು ಮೌಲ್ಯಗಳ ಆಕೃತೀಕರಣದಲ್ಲಿ ಪಠ್ಯಪುಸ್ತಕಗಳ ಬಳಕೆಯನ್ನು ಚರ್ಚಿಸಲಾಯಿತು. ಸಮೂಹನಿಯಂತ್ರಿತ ಯೋಚನಾ ವಿಧಾನದಲ್ಲಿ ಅ–ಸಾಂಸ್ಥೀಕರಣ ಮತ್ತು ಈ ಅ–ಸಾಂಸ್ಥೀಕರಣದಲ್ಲಿ ಮಹಿಳೆಯರು ವಹಿಸಬಹುದಾದ ಪಾತ್ರವನ್ನು ವಿವರಿಸಿದ ತರುವಾಯ ಶಿಕ್ಷಕರ ಸೂಕ್ಷ್ಮಗ್ರಾಹೀಕರಣದ ಅವಶ್ಯಕತೆಯನ್ನು ಮತ್ತು ಶಾಲೆಗಳಲ್ಲಿ ಗಾಂಧೀ ವಿಚಾರಗಳನ್ನಾಧರಿಸಿದ ಶಾಂತಿ ಶಿಕ್ಷಣದ ಒಂದು ಕೋರ್ಸ್‌ನ ಅಳವಡಿಕೆಯ ಸಾಧ್ಯತೆಯನ್ನು ಚರ್ಚಿಸಲಾಯಿತು.

ಏಳನೆಯ ಅಧ್ಯಾಯದಲ್ಲಿ ಅಧ್ಯಯನದ ಫಲಿತಾಂಶಗಳನ್ನು ಪಟ್ಟಿಮಾಡಿ ಸಮಾರೋಪ ಮಾಡಲಾಯಿತು. ಜೊತೆಗೆ, ಅಧ್ಯಯನದ ಇಂಗಿತಗಳನ್ನು ಗುರುತಿಸಿ, ಅಧ್ಯಯನದ ಒಟ್ಟು ಫಲಿತಾಂಶದ ನೆಲೆಯನ್ನಾಧರಿಸಿ ಪ್ರಭುತ್ವಕ್ಕೆ, ಪಠ್ಯಪುಸ್ತಕ ರಚನೆಕಾರರಿಗೆ, ಶಿಕ್ಷಕರಿಗೆ ಹಾಗೂ ಪೋಷಕರಿಗೆ ಕೆಲವು ಸಲಹೆಗಳನ್ನು ನೀಡಲಾಯಿತು. ಭಾವೀ ಸಂಶೋಧನೆಗೆ ಶಿಫಾರಸುಗಳನ್ನೂ ಮಾಡಲಾಯಿತು.

## ಅಧ್ಯಯನದ ಮಿತಿಗಳು

ಯಾವುದೇ ರಾಜ್ಯದ ಪಠ್ಯಕ್ರಮ ಹಾಗೂ ಪಠ್ಯಪುಸ್ತಕಗಳ ಅಧ್ಯಯನವು ಹಲವು ಆಯಾಮಗಳಿಂದ ನಡೆಸಬಹುದಾದ ಬಹಳ ವಿಸ್ತಾರವಾದ ಒಂದು ಅಧ್ಯಯನ ಕ್ಷೇತ್ರ. ಶಾಲೆ ಕಾಲೇಜುಗಳಲ್ಲಿ ಬೋಧಿಸಲಾಗುವ ವಿಷಯಗಳ ಲಿಖಿತ ದಾಖಲೆಗಳಾಗಿರುವ ಪಠ್ಯಪುಸ್ತಕಗಳ ತಯಾರಿ ತುಂಬ ಶ್ರಮದ ಕೆಲಸ. ಭಾಷೆ ಮತ್ತು ಸಾಹಿತ್ಯ ವಿಷಯದಲ್ಲಂತೂ ಈ ಶ್ರಮ ಇನ್ನಷ್ಟು ಹೆಚ್ಚು ಎಂದರೆ ತಪ್ಪಾಗಲಾರದು. ಯಾಕೆಂದರೆ ಕಳೆದ ಮೂರು-ನಾಲ್ಕು ದಶಕಗಳಲ್ಲಿ ಸಮಾಜದಲ್ಲಿ ಕಂಡುಬಂದಿರುವ ಹಲವಾರು ಬದಲಾವಣೆಗಳು ಪಠ್ಯ ತಯಾರಕರ ಜವಾಬ್ದಾರಿಯನ್ನು ಬಹಳಷ್ಟು ಹೆಚ್ಚಿಸಿದೆ. ಯಾವುದೇ ಒಂದು ಪಠ್ಯಭಾಗವನ್ನು ನಿಗದಿಪಡಿಸುವಾಗ ಅದರಲ್ಲಿರುವ ಯಾವುದೇ ಪದ, ಪದಪುಂಜ ಅಥವಾ ವಾಕ್ಯವು ರಾಜಕೀಯವಾಗಿ ಸಾಮಾಜಿಕವಾಗಿ ಜಾಗೃತಗೊಂಡ ಯಾವುದೇ ಒಂದು ನಿರ್ದಿಷ್ಟ ಸಮುದಾಯವನ್ನು ಅವಹೇಳನ ಮಾಡುವಂತೆ ಕಾಣುವ, ಅಪಮಾನಿಸುವಂತೆ ತೋರುವ, ಅಪಹಾಸ್ಯ ಮಾಡುವಂತೆ ಅನ್ನಿಸುವ ಭಾಗಗಳನ್ನು ಕೈಬಿಡಬೇಕಾಗುತ್ತದೆ. ಪಠ್ಯಭಾಗಗಳು ಸ್ಫುರಿಸುವ ಮೌಲ್ಯಗಳನ್ನು, ಸೂಚಿಸುವ ದ್ವಂದ್ವಾರ್ಥಗಳನ್ನು ಪರಾಮರ್ಶಿಸಬೇಕಾಗುತ್ತದೆ. ಹೀಗಿರುವಾಗ, ಪಠ್ಯಗಳ ಮೌಲ್ಯಮಾಪನ, ಮರುಮೌಲ್ಯಮಾಪನ ನಡೆಸಬೇಕಾಗುತ್ತದೆ.

ಪ್ರಸ್ತುತ ಅಧ್ಯಯನವು ಇಂತಹ ಒಂದು ವಿನಯ ಪೂರ್ವಕವಾದ ಪ್ರಯತ್ನ. ಅಧ್ಯಯನವನ್ನು ಕರ್ನಾಟಕದ ಪಠ್ಯಕ್ರಮದಲ್ಲಿ ಪ್ರಾಥಮಿಕ ಶಾಲಾ ಹಂತದಿಂದ ಪದವಿಪೂರ್ವ ಹಂತದವರೆಗಿನ 1980-2010ರ ಅವಧಿಯ ಭಾಷೆ/ಸಾಹಿತ್ಯ, ಸಮಾಜ ಶಾಸ್ತ್ರ ಮತ್ತು ಇತಿಹಾಸದ ಪಠ್ಯ ಪುಸ್ತಕಗಳಿಗೆ ಸೀಮಿತ ಉದಾಹರಣೆಗಳೊಂದಿಗೆ ಸೀಮಿತಗೊಳಿಸಲಾಗಿದೆ. ಈ ಮಿತಿಯೊಳಗೂ ಒಂದು ಪಠ್ಯಪುಸ್ತಕದ ಎಲ್ಲ ಪಾಠಗಳನ್ನು ವಿಮರ್ಶಿಸುವುದು, ವಿಶ್ಲೇಷಿಸುವುದು ಈ ಅಧ್ಯಯನದ ವ್ಯಾಪ್ತಿಗೆ ಮೀರಿದ್ದಾಗಿದೆ. ಸ್ತ್ರೀವಾದ, ಲಿಂಗ ನ್ಯಾಯ, ಮಹಿಳೆಯರ ಸ್ಥಾನಮಾನ, ಸಾಮಾಜಿಕ ಸಾಮರಸ್ಯಕ್ಕೆ ಸಂಬಂಧಿಸಿದ, ಇತಿಹಾಸದ ಆಭಾಸಗಳ ಗುರುತಿಸುವಿಕೆಯಲ್ಲಿ ಪಠ್ಯಪುಸ್ತಕಗಳ ಮುಖ್ಯವಾದ ಭಾಗಗಳನ್ನಷ್ಟೆ ಅಧ್ಯಯನದ ವ್ಯಾಪ್ತಿಯೊಳಗೆ ತರಲಾಗಿದೆ.

## ಸಮಾರೋಪ

ಸಾಮಾನ್ಯವಾಗಿ ಶಿಕ್ಷಣ ರಂಗದಲ್ಲಿ ಭಾಷೆ, ಸಂಸ್ಕೃತಿ ಹಾಗೂ ಸಮಾಜಕ್ಕೆ ಸಂಬಂಧಿಸಿ ನಡೆಯುವ ಸಂಶೋಧನೆಗಳಿಗಿಂತ ಭಿನ್ನವಾದ ಒಂದು ನೆಲೆಯಲ್ಲಿ ಸಂಶೋಧನೆ ನಡೆಸುವ ಉದ್ದೇಶದಿಂದ ಈ ಅಧ್ಯಯನವನ್ನು ಕೈಗೊಳ್ಳಲಾಯಿತು.

ಪಠ್ಯಪುಸ್ತಕಗಳ ಅಧ್ಯಯನ ಮತ್ತು ವಿಶ್ಲೇಷಣೆಯಲ್ಲಿ ಬಹಳಷ್ಟು ವಿಶ್ಲೇಷಣೆಗಳು 'ವಿಷಯ ವಿಶ್ಲೇಷಣೆ' (content analysis) ಗಳಾಗಿರುತ್ತವೆ. ಪಠ್ಯಕ್ಕೆ ಅಥವಾ ಪಾಠಕ್ಕೆ ಆಯ್ದುಕೊಂಡ ವಿಷಯದ ಔಚಿತ್ಯ, ಅನೌಚಿತ್ಯ, ವಿಷಯಕ್ಕೆ ಇರುವ ವಿದ್ಯಾರ್ಥಿಗಳಲ್ಲಿ ಆಸಕ್ತಿ ಹುಟ್ಟಿಸುವ ಗುಣ, ವಿಷಯದ ನಿರೂಪಣಾ ಶೈಲಿ, (ಸಾಹಿತ್ಯ ಪಠ್ಯದಲ್ಲಾದರೆ) ಪಾತ್ರ ಪರಿಚಯ ಹಾಗೂ ಪಾಠದ ಸಂದೇಶ–ಇತ್ಯಾದಿಗಳೇ ವಿಶ್ಲೇಷಣೆಗೆ ಮತ್ತೆ ಮತ್ತೆ ಒಳಗಾಗುವ ಅಂಶಗಳಾಗಿರುತ್ತವೆ. ಇದಕ್ಕೆ ವ್ಯತಿರಿಕ್ತವಾಗಿ ಪಠ್ಯದ ಆಳಸಂರಚನೆಯನ್ನು ವಿಶ್ಲೇಷಿಸಿ, ಪಠ್ಯವು ಪರೋಕ್ಷವಾಗಿ ಹಾಗೂ ಸೂಚ್ಯವಾಗಿ ಕಟ್ಟಿಕೊಡುವ ಸುಪ್ತ–ಪಠ್ಯವನ್ನು ಬರೆದು ವಿಶ್ಲೇಷಿಸಿ, ಆ ವಿಶ್ಲೇಷಣೆಯ ನೆಲೆಯಲ್ಲಿ ಕೆಲವು ತೀರ್ಮಾನಗಳಿಗೆ ಬರುವ ವಿನಮ್ರ ಪ್ರಯತ್ನ ಈ ಸಂಶೋಧನೆ. ಈ ಕಾರಣಕ್ಕಾಗಿ ಇದು ಕರ್ನಾಟಕದ ಶಿಕ್ಷಣ ಕ್ರಮದಲ್ಲಿ ಭಾಷೆ, ಮಹಿಳೆಯರ ಸ್ಥಾನಮಾನ ಹಾಗೂ ಕೋಮು ಸಾಮರಸ್ಯದ ಅಧ್ಯಯನದಲ್ಲಿ ಒಂದು ಹೊಸದಾದ (ಅಥವಾ ಕನಿಷ್ಠ ಪಕ್ಷ ಕುತೂಹಲಕಾರಿಯಾದ) ಸಂಶೋಧನಾ ಮಾರ್ಗ ಎನ್ನಬಹುದೋ ಏನೋ.

ಈ ಅಧ್ಯಯನದಲ್ಲಿ ಬಳಸಲಾದ ಮೇಲ್ಮೈ ಸಂರಚನೆ ಮತ್ತು ಆಳಸಂರಚನೆಯ ಪರಿಕಲ್ಪನೆಯನ್ನು ಕನ್ನಡ ಭಾಷೆ ಹಾಗೂ ಸಾಹಿತ್ಯದ ಅಧ್ಯಯನದಲ್ಲಿ ವಿಪುಲವಾಗಿ ಬಳಸಿಕೊಳ್ಳಬಹುದಾದ ಸಾಧ್ಯತೆಗಳಿವೆ.

ಕನ್ನಡದ ವಚನ ಸಾಹಿತ್ಯದಲ್ಲಿ ವಚನಕಾರರ ಆಯ್ದ ವಚನಗಳನ್ನು ಸುಪ್ತ–ಪಠ್ಯದ ದೃಷ್ಟಿಯಿಂದ ಅಧ್ಯಯನ ನಡೆಸಿದಾಗ ವಚನಗಳ ಅರ್ಥಲೋಕದಲ್ಲಿ ಹೊಸ ಬೆಳಕಿನ ಕೋಲೊಂದು ಕಾಣಿಸುವ ಸಾಧ್ಯತೆ ಇದೆ. ಉದಾಹರಣೆಗೆ 'ಉಳ್ಳವರು ಶಿವಾಲಯದ ಮಾಡುವರು ….' ಎಂಬ ವಚನ ಸುಪ್ತ–ಪಠ್ಯದ ಮಟ್ಟದಲ್ಲಿ ಹೊಸ ಅರ್ಥಲೋಕವನ್ನೇ ತೆರೆಯಬಲ್ಲದು:

ಉಳ್ಳವರು ಶಿವಾಲಯವ ಮಾಡಿದರೆ ಇಲ್ಲದವರು ಏನು ಮಾಡುವರು? ಏನು ಮಾಡಬೇಕು ಅವರು? ಉಳ್ಳವರು ಎಂದರೆ ಏನು ಉಳ್ಳವರು? ಅವರು ಶಿವಾಲಯವ ಮಾಡಿದರೆ ನಾನು ಏನು ಮಾಡಲಿ? ಅವರು ಶಿವಾಲಯವ ಮಾಡಿದರೆ ನಾನು ಯಾಕಾದರೂ ಏನನ್ನಾದರೂ ಮಾಡಲೇಬೇಕು? ಅವರು ಉಳ್ಳವರು, ಇರುವುದನ್ನು ಪ್ರದರ್ಶಿಸುವುದಲ್ಲದೆ ಅವರಿಗೆ ಬೇರೇನೂ ತಿಳಿದಿಲ್ಲ. ಅದಕ್ಕಾಗಿಯೇ ಅವರು ಶಿವಾಲಯವ ಮಾಡುವರು. ಅವರಿಗೆ ಮಾಡಲು ಬೇರೇನೂ ಕೆಲಸವಿಲ್ಲ. ಕೆಲಸ ಮಾಡುವ ಮಂದಿ ಅವರಲ್ಲ, ಅವರು ಕಾಯಕ ಜೀವಿಗಳಲ್ಲ, ಪೀಡಕ ಜೀವಿಗಳು. ಹಾಗಾಗಿ ಅವರು ಕಾಯಕವೇ ಕೈಲಾಸ ಎನ್ನುವ ಜನಗಳಲ್ಲ. ಆದ್ದರಿಂದ ಅವರು ಬೇಕಾದ್ದು ಮಾಡಿಕೊಳ್ಳಲಿ. ಶಿವಾಲಯವನ್ನಾದರೂ ಮಾಡಲಿ ಭವಾಲಯವನ್ನಾದರೂ ಮಾಡಲಿ. ಅದು ನಿಜಕ್ಕೂ ಭವಾಲಯವೇ. ನಾನ್ಯಾಕೆ ಆ ಬಗ್ಗೆ ಚಿಂತೆ ಮಾಡಲಿ? ಅವರು ಮೂರ್ಖರು: ಅವರಿಗೆ ನನ್ನ ದೇಹವೇ ದೇಗುಲ ಅಂತ ತಿಳಿದಿಲ್ಲ. ನನಗೆ ಇದು ತಿಳಿದಿದೆ. ಆದ್ದರಿಂದ ನನಗೆ ಶಿವಾಲಯದ ಬಗ್ಗೆ ಕಾಳಜಿ ಇಲ್ಲ. ಶಿವಾಲಯ ನನ್ನೊಳಗೇ ಇದೆ. ಶಿವನೂ ನಾನೇ, ಆಲಯವೂ ನಾನೇ .....”

ವಚನದ ಸುಪ್ತ-ಪಠ್ಯ ಹೀಗೆಯೇ ಮುಂದುವರಿಯಬಹುದು. ಇಂತಹ ಸುಪ್ತ-ಪಠ್ಯಗಳು ಪಠ್ಯದ ಸಂದರ್ಭ ಸಾಮಾಜಿಕ-ಸಾಂಸ್ಕೃತಿಕ ಸನ್ನಿವೇಶಗಳನ್ನು ಅವಲಂಬಿಸಿ ಪಠ್ಯದ ವಿಮರ್ಶೆಯ, ವಿಶ್ಲೇಷಣೆಯ ದಿಕ್ಕನ್ನೆ ಬದಲಿಸಬಲ್ಲವು.

ಜಾಗತೀಕರಣ ಮತ್ತು ಉದಾರೀಕರಣದ ಪರಿಣಾಮವಾಗಿ ಪ್ರಾದೇಶಿಕ ಸಾಂಸ್ಕೃತಿಕ ಸೌಧಗಳು ಕುಸಿದು ಬೀಳುವ, ಆಧುನಿಕ ಜಗತ್ತು ತಂದಿರುವ ಸುಖಭೋಗದ ಆಸೆಬುರುಕತನದಿಂದಾಗಿ ಎಲ್ಲವೂ ಆಂಗ್ಲೀಕರಣ (Anglicization)ಗೊಳ್ಳುವ ಅಪಾಯದಲ್ಲಿರುವ ಒಂದು ಸಮಾಜದಲ್ಲಿ ಹೋರಾಡಿ ಉಳಿಯಬೇಕಾದ ಸ್ಥಿತಿಗೆ ತಲುಪಬಹುದಾದ ಕನ್ನಡ ಭಾಷೆಗೆ ಈ ಅಧ್ಯಯನದ ಮೂಲಕ ಅಳಿಲಸೇವೆ ಸಲ್ಲಿಸಿದ ಧನ್ಯತಾಭಾವ ಈ ಸಂಶೋಧಕನದ್ದಾಗಿದೆ.

# ಗ್ರಂಥಋಣ


ಅಯ್ಯಂಗಾರ್, ಮಾಸ್ತಿ ವೆಂಕಟೇಶ, ಸಾವಿಯಬ್ಬೆ, ಕನ್ನಡ ಭಾರತಿ – ೧೦, ಸುಭಾಷ್ ಪಬ್ಲಿಶಿಂಗ್ ಹೌಸ್, ಬೆಂಗಳೂರು, 1994

ಆ್ಯಗ್ನೆಸ್, ಫ್ಲಾವಿಯಾ, ಇಲ್ಯೂಶನ್ ಆಫ್ ಈಕ್ವಿಟಿ, ದಿ ಟೈಮ್ಸ್ ಆಫ್ ಇಂಡಿಯಾ, 26.08.2006

ಅಯ್ಯರ್, ವಿ. ಆರ್. ಕೃಷ್ಣ, ಫಾರ್ ಎ ಫೇರ್ ಡೀಲ್ ಇನ್ ಹಯರ್ ಎಜುಕೇಶನ್, ದಿ ಹಿಂದು, 27.07.2006

ಅಯ್ಯರ್, ವಿ. ಆರ್. ಕೃಷ್ಣ, ಪ್ರೈಮರಿ ಎಜುಕೇಶನ್ ಫಾರ್ ದಿ ಪುವರ್, ದಿ ಹಿಂದು, 15.07.2006

ಅಕ್ಬರ್, ಎಂ.ಜೆ., ಫಂಡಮೆಂಟಲಿಸ್ಟ್ ಫ್ಲರಿಶ್ ಇನ್ ಸೆಕ್ಯೂಲರ್ ವ್ಯಾಕ್ಯೂಂ, ಸಂಡೇ ಟೈಮ್ಸ್ ಆಫ್ ಇಂಡಿಯಾ, ಮ್ಯಾಂಗಲೋರ್, ಸೆಪ್ಟೆಂಬರ್ 7, 2008.

ಒ'ಬ್ರಿಯನ್, ಪೆಟ್ರಿಶಿಯಾ ಆ್ಯನ್, 'ಯ್ಯಾನ್ ಎಕ್ಸ್‌ಪ್ಲೋರೇಶನ್ ಆಫ್‌ದ ಪರ್ಸೆಪ್ಷನ್ಸ್ ಆ್ಯಂಡ್ ಎಕ್ಸ್‌ಪೀರಿಯನ್ಸಸ್ ಆಫ್ ಲೀಡರ್‌ಶಿಪ್ ಬೈ ಟೀಚರ್ಸ್ ಆ್ಯಂಡ್ ದೆಯರ್ ಅಪೊರ್ಚುನಿಟೀಸ್ ಫಾರ್ ಲೀಡರ್‌ಶಿಪ್ ಡೆವಲಪ್‌ಮೆಂಟ್, 2005, ಆಸ್ಟ್ರೇಲಿಯನ್ ಕ್ಯಾಥೊಲಿಕ್ ಯುನಿವರ್ಸಿಟಿ

ಕುಮಾರ್, ಕೃಷ್ಣ (2001), ಪ್ರಿಜುಡಿಸ್ ಆ್ಯಂಡ್ ಪ್ರೈಡ್, ನ್ಯೂಡೆಲ್ಲಿ, ಪೆಂಗ್ವಿನ್ ಬುಕ್ಸ್

ಕನ್ನಡ ಭಾರತಿ – 5, ಐದನೆಯ ತರಗತಿ, ಕರ್ನಾಟಕ ಸರಕಾರ, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ನಿರ್ದೇಶನಾಲಯ (ಪಠ್ಯಪುಸ್ತಕಗಳು), 1980

ಕನ್ನಡ ಭಾರತಿ–9, ಕರ್ನಾಟಕ ರಾಜ್ಯ ಸರ್ಕಾರ ಪಠ್ಯಪುಸ್ತಕ ನಿರ್ದೇಶನಾಲಯ, 2002

ಕನ್ನಡ ಗಂಗೋತ್ರಿ–1, ಎಂಟನೆಯ ತರಗತಿ, ಕರ್ನಾಟಕ ಸರಕಾರ, ಸರ್ಕಾರಿ ಪಠ್ಯಪುಸ್ತಕ ಮುದ್ರಣಾಲಯ, ಮೈಸೂರು, 2003

ಕನ್ನಡ ಭಾರತಿ – 9, ಆರನೆಯ ತರಗತಿ, ಪ್ರಥಮ ಭಾಷೆಯ ಪಠ್ಯಪುಸ್ತಕ, ಶ್ರೀ ಸುಬ್ರಮಣ್ಯೇಶ್ವರ ಬುಕ್ ಡಿಪೊ, 1992

ಕರ್ನಾಟಕ ಸರಕಾರ, ಕನ್ನಡ ಭಾರತಿ – 5, 1992

ಕರ್ನಾಟಕ ಸರಕಾರ, ಸಮಾಜ ವಿಜ್ಞಾನ, ಭಾಗ–1, ಇತಿಹಾಸ ಮತ್ತು ಪೌರನೀತಿ, ಎಂಟನೆಯ ತರಗತಿ 2002.

ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.), ಬೆಂಗಳೂರು, ಪರಿಸರ ಅಧ್ಯಯನ, (1) ಒಂದನೇಯ ತರಗತಿ, 2009

ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.), ಬೆಂಗಳೂರು, ಪರಿಸರ ಅಧ್ಯಯನ, (4) ನಾಲ್ಕನೇಯ ತರಗತಿ, 2009

ಕುಮಾರ್, ಕೃಷ್ಣ, ವಿಂಡ್ಸ್ ಆಫ್ ಚೇಂಜ್ ಇನ್ ಯುಪಿ, ದಿ ಟೈಮ್ಸ್ ಆಫ್ ಇಂಡಿಯಾ, 07.12.2006

ಕುಮಾರ್, ಕೃಷ್ಣ, ಡೆಡನಿಂಗ್ ರೊಟೀನ್, ದಿ ಟೈಮ್ಸ್ ಆಫ್ ಇಂಡಿಯಾ, 05.09.2006

ಕುಮಾರ್, ಕೃಷ್ಣ, ಲರ್ನಿಂಗ್ ಟು ಫಿಟ್ ಇನ್, ದಿ ಟೈಮ್ಸ್ ಆಫ್ ಇಂಡಿಯಾ, 21.06.2006

ಕುಮಾರ್, ಕೃಷ್ಣ, ಎನ್‌ಶೂರಿಂಗ್ ಎಲಿಮೆಂಟರಿ ಎಜುಕೇಶನ್ ಫಾರ್ ಆಲ್, ದಿ ಹಿಂದು, 27.07.2006

ಖೇರ್, ಹರೀಶ್, ದಿ ಓನಸ್ ಈಸ್ ಆನ್ ದಿ ಸೆಕ್ಯುಲರಿಸ್ಟ್, ದಿ ಹಿಂದು, 19.07.2006

ಗುಹಾ, ರಾಮಚಂದ್ರ, ಮೆಕಾಲೇ'ಸ್ ಮಿನಿಟ್ ರಿವಿಸಿಟೆಡ್, ದಿ ಹಿಂದು, 04.02.2007

ಗಾಂಧಿ, ದಿವ್ಯಾ, ಕ್ಯಾಸ್ಟ್ ಅಟ್ರಾಸಿಟೀಸ್ ಇನ್ ಕರ್ನಾಟಕ, ದಿ ಹಿಂದು, 27.11.2006

ಗೋಸ್ವಾಮಿ, ಓಂಕಾರ್ ಆ್ಯಂಡ್ ಮಲಿಕ್, ಕಬೀರ್, ಮುಸ್ಲಿಮ್ ಎ ಶಾಕಿಂಗ್ ಡಿವೈಡ್, ಇಂಡಿಯಾ ಟುಡೆ, 14.08.2006

ಗೋವಿಂದು, ವೇಣು ಮಾಧವ್, ಆ್ಯಂಡ್ ಮಲ್‌ಫನ್, ದೀಪಕ್, ದಿ ಅದರ್ 9/11, ದಿ ಹಿಂದು, 10.09.2006

ಚಂದ್ರ, ಬಿಪನ್, (1986), ಕಮ್ಯೂನಲಿಸಂ ಇನ್ ಇಂಡಿಯಾ, ನ್ಯೂಡೆಲ್ಲಿ, ವಿಕಾಸ್ ಪಬ್ಲಿಶಿಂಗ್ ಹೌಸ್ ಪ್ರೈ.ಲಿ.

ಚಂದ್ರ, ಅರವಿಂದ, (1977), ಕರಿಕ್ಯುಲಮ್ ಡೆವಲಪ್‌ಮೆಂಟ್ ಆ್ಯಂಡ್ ಇವ್ಯಾಲ್ಯುವೇಷನ್ ಇನ್ ಎಜುಕೇಶನ್, ನ್ಯೂಡೆಲ್ಲಿ, ಸ್ಟರ್ಲಿಂಗ್ ಪಬ್ಲಿಶರ್ಸ್ ಪ್ರೈ. ಲಿ.

ಚಂದ್ರಶೇಖರ್, ಬಿ.ಕೆ., ಟಿಪ್ಪು ಸುಲ್ತಾನ್, ದಿ ಬ್ರಿಟಿಷ್ ಆ್ಯಂಡ್ ಅವರ್ ಫಂಡಮೆಂಟಲಿಸ್ಟ್ಸ್, ದಿ ಟೈಮ್ಸ್ ಆಫ್ ಇಂಡಿಯಾ, 02.01.2007

ಚಿನ್ನಸ್ವಾಮಿ, ಮೂಡ್ನಾಕೂಡು, ನಾನೊಂದು ಮರವಾಗಿದ್ದರೆ, ಕನ್ನಡ ಕಸ್ತೂರಿ, ಎಂಟನೆಯ ತರಗತಿ, ಪಠ್ಯಪುಸ್ತಕ ನಿರ್ದೇಶನಾಲಯ, ಬೆಂಗಳೂರು, 2004

ಚಕ್ರವರ್ತಿ, ದೀಪೇಶ್, ಫಾಲ್ಸ್ ಅಪೊಸಿಶನ್, ದಿ ಟೈಮ್ಸ್ ಆಫ್ ಇಂಡಿಯಾ, 9.12.2006

ಚಂದ್ರಶೇಖರ್, ಪ್ರೊ. ಬಿ.ಕೆ., ಸತ್ಯದ ಗೋರಿಯಲ್ಲಿ ಟಿಪ್ಪು ಸುಲ್ತಾನ್, ಪ್ರಜಾವಾಣಿ, 10.11.2006

ಚಂದ್ರ, ಬಿಪನ್ ಅನ್‌ಫೇರ್ ಟು ಫೇರ್ ಸೆಕ್ಸ್, ದಿ ಟೈಮ್ಸ್ ಆಫ್ ಇಂಡಿಯಾ, 13.08.2006

ಚರ್ಚ್ ದಾಳಿ ಪ್ರಕರಣ; ಮಧ್ಯಾಂತರ ವರದಿ ಸಲ್ಲಿಕೆ, ವರದಿ, ಉದಯವಾಣಿ, 02.02.2010

ಜೋನ್ಸ್, ಎಮ್. ಮೆಲಿಟಾ, 'ರೀ–ಎಂಗೇಜಿಂಗ್ ಸ್ಟೂಡೆಂಟ್ಸ್ ಇನ್ ದೆಯರ್ ಲರ್ನಿಂಗ್ ಥ್ರೂ ಮಿಡ್ಲ್ ಸ್ಕೂಲ್ ರಿಫಾರ್ಮ್: ಎ ಕೇಸ್ ಸ್ಟಡಿ ಇವ್ಯಾಲ್ಯುವೇಶನ್ ಆಫ್ ಎ ವರ್ಟಿಕಲಿ ಸ್ಟ್ರಕ್ಚರ್ಡ್ ಕರಿಕ್ಯುಲಂ, 2005, ಆಸ್ಟ್ರೇಲಿಯನ್ ಕ್ಯಾಥೊಲಿಕ್ ಯುನಿವರ್ಸಿಟಿ, ವಿಕ್ಟೋರಿಯಾ, ಆಸ್ಟ್ರೇಲಿಯಾ

ಜೋಸೆಫ್, ಅಮ್ಮು, ಕನ್‌ಫೆಶನ್ಸ್ ಆಫ್ ಎ ಹೋಪ್–ಅ–ಹಾಲಿಕ್, ದಿ ಹಿಂದು, 04.02.2007

ಜೋಶಿ, ಕಿರೀಟ್, (2000), ಎ ನ್ಯಾಶನಲ್ ಅಜೆಂಡಾ ಫಾರ್ ಎಜುಕೇಶನ್, ಮೈಸೂರು, ದಿ ಮದರ್ಸ್ ಇನ್‌ಸ್ಟಿಟ್ಯೂಟ್ ಆಫ್ ರಿಸರ್ಚ್,

ಟಾಬಾ, ಹಿಲ್ಡಾ, (1962), ಕರಿಕ್ಯುಲಂ ಡೆವಲಪ್‌ಮೆಂಟ್ ಥಿಯರಿ ಆ್ಯಂಡ್ ಪ್ರಾಕ್ಟಿಸ್, ನ್ಯೂಯಾರ್ಕ್, ಹಾರ್‌ಕೋರ್ಟ್, ಬ್ರೇಸ್ ಆ್ಯಂಡ್ ವರ್ಲ್ಡ್, ಐಎನ್.

ಡಿ.ವಿ.ಜಿ., ಮಿರ್ಜಾರ ಮಾನವೀಯತೆ, ಕನ್ನಡ ಕಸ್ತೂರಿ, ಎಂಟನೆಯ ತರಗತಿ, ಪಠ್ಯಪುಸ್ತಕ ನಿರ್ದೇಶನಾಲಯ, ಬೆಂಗಳೂರು, 2004

ಡಾ। ಎಸ್. ಕುಳಂದಸ್ವಾಮಿ, ಎ ಕೋರ್ಸ್ ಆನ್ ಪೀಸ್ ಎಜುಕೇಶನ್ ಬೇಸ್ಡ್ ಆನ್ ಗಾಂಧಿಯನ್ ವ್ಯಾಲ್ಯೂಸ್, ದಿ ಹಿಂದು, ಯಂಗ್ ವರ್ಲ್ಡ್, ಪು.4, ಜನವರಿ 26, 2010

ಡಾ। ಎಸ್. ಕುಳಂದಸ್ವಾಮಿ, ಎ ಕೋರ್ಸ್ ಆನ್ ಪೀಸ್ ಎಜುಕೇಶನ್ ಬೇಸ್ಡ್ ಆನ್ ಗಾಂಧಿಯನ್ ವ್ಯಾಲ್ಯೂಸ್, ದಿ ಹಿಂದು, ಯಂಗ್ ವರ್ಲ್ಡ್, ಪು.4, ಫೆಬ್ರವರಿ 2, 2010

ತರೂರ್, ಶಶಿ, ಚೇಸಿಂಗ್ ಎ ಡ್ರೀಮ್, ದಿ ಟೈಮ್ಸ್ ಆಫ್ ಇಂಡಿಯಾ, 12.12.2006

ದೇಸ್ಯಾ, ಸಂತೋಷ್, ಗಾಂಧಿ ಇನ್ ಬೇಬಿ ಸ್ಟೆಪ್ಸ್, ದಿ ಟೈಮ್ಸ್ ಆಫ್ ಇಂಡಿಯಾ, 30.09.2006

ದೇಸ್ಯಾ, ಸಂತೋಷ್, ಗಾಂಧಿ, ಮಾರಲ್ ಟೆರರಿಸ್ಟ್, ದಿ ಟೈಮ್ಸ್ ಆಫ್ ಇಂಡಿಯಾ, 12.08.2006

ಧಾವನ್, ರಾಜೀವ್, ಲಾಯಲ್ಟಿ ಟೆಸ್ಟ್, ದಿ ಟೈಮ್ಸ್ ಆಫ್ ಇಂಡಿಯಾ, 13.09.2006

ಧಿಂಗ್ರಾ, ಮನಿಶಾ, ಇನ್ ದಿ ನೇಮ್ ಆಫ್ ದಿ ಫಾದರ್, ದಿ ಟೈಮ್ಸ್ ಆಫ್ ಇಂಡಿಯಾ, 03.10.2006

ನಿರ್ದೇಶಕರು, ಪಠ್ಯಪುಸ್ತಕ ನಿರ್ದೇಶನಾಲಯ, ಬೆಂಗಳೂರು, ಸಾಹಿತ್ಯ ಮಂಜರಿ–೧, (ದ್ವಿತೀಯ/ತೃತೀಯ ಭಾಷೆಯ ಕನ್ನಡ ಪಠ್ಯಪುಸ್ತಕ, ಎಂಟನೆಯ ತರಗತಿ, 1992

ನಾಯಕ್ ಎಸ್. ಆರ್., ಮಾನವ ಹಕ್ಕು ಆಯೋಗದಿಂದ ನೋಟೀಸು, ಉದಯವಾಣಿ, 19.02.2010

ನ್ಯಾರ್, ಜಾನಕಿ, ವೆನ್ ವಿಲ್ ದೆ ಎವರ್ ಲರ್ನ್, ದಿ ಟೈಮ್ಸ್ ಆಫ್ ಇಂಡಿಯಾ, 19.01.2007

ನೇಮಿಚಂದ್ರ, ಭಾಂಪ್ರಿದೇವಿ, ಕನ್ನಡ ಕಸ್ತೂರಿ–೯, ಪಠ್ಯಪುಸ್ತಕ ನಿರ್ದೇಶನಾಲಯ, ಬೆಂಗಳೂರು, 2004

ನಂದಿ, ಅಶಿಶ್, ಬರ್ತ್ ಪ್ಯಾಂಗ್ಸ್, ದಿ ಟೈಮ್ಸ್ ಆಫ್ ಇಂಡಿಯಾ, 14.08.2006

ನ್ಯಾರ್, ಜಾನಕಿ, ಮೆನ್ ಎಟ್ ವರ್ಕ್, ದಿ ಟೈಮ್ಸ್ ಆಫ್ ಇಂಡಿಯಾ, 16.08.2006

ಪ್ರಹಲ್ಲಾದ, ಎನ್. ಎನ್. (2000), ಕಂಟೆಂಪರರಿ ಸಿಗ್ನಿಫಿಕನ್ಸ್ ಆಫ್ ವ್ಯಾಲ್ಯೂ ಎಜುಕೇಶನ್, 'ವ್ಯಾಲ್ಯೂ ಎಜುಕೇಶನ್ ಇನ್ ಇಂಡಿಯಾ, ನ್ಯೂ ಡೆಲ್ಲಿ, ಅಸೋಸಿಯೇಶನ್ ಆಫ್ ಇಂಡಿಯನ್ ಯನಿವರ್ಸಿಟೀಸ್

ಪ್ರಕಾಶ ಬಿ., (2009), ದಕ್ಷಿಣ ಕನ್ನಡದ ಪ್ರಾಥಮಿಕ ಮತ್ತು ಪ್ರೌಢಶಾಲಾ ಕನ್ನಡ ಪಠ್ಯಪುಸ್ತಕಗಳ – ರಾಚನಿಕ, ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಸ್ವರೂಪಗಳ ಅಧ್ಯಯನ, ಮಂಗಳೂರು ವಿಶ್ವವಿದ್ಯಾಲಯಕ್ಕೆ ಪಿ.ಎಚ್.ಡಿ. ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ

ಪದ್ಮನಾಭನ್, ಅನಿಲ್, 2003, ಕಲ್ಪನಾ ಚಾವ್ಲಾ ಎ ಲೈಫ್, ಫಫಿನ್ ಬುಕ್ಸ್, ಪೆಂಗ್ವಿನ್ ಬುಕ್ಸ್ ಇಂಡಿಯಾ (ಪಿ) ಲಿಮಿಟೆಡ್, ನ್ಯೂಡೆಲ್ಲಿ, ಇಂಡಿಯಾ

ಪುಟ್ಟಪ್ಪ, ಪಾಟೀಲ, ಗಂಗೂಬಾಯಿ ಹಾನಗಲ್ಲ, ಕನ್ನಡ ಭಾರತಿ, ಎಂಟನೆಯ ತರಗತಿ, ಕರ್ನಾಟಕ ಸರಕಾರ ಪಠ್ಯಪುಸ್ತಕ ನಿರ್ದೇಶನಾಲಯ, ನವಕರ್ನಾಟಕ ಪಬ್ಲಿಕೇಶನ್ಸ್ ಪ್ರೈ.ಲಿ., ಬೆಂಗಳೂರು, 1994.

ಪಡ್‌ಗಾಂವ್‌ಕರ್, ದಿಲೀಪ್, ರೂಟ್ಸ್ ಆಫ್ ಗಾಂಧಿಗಿರಿ, ದಿ ಟೈಮ್ಸ್ ಆಫ್ ಇಂಡಿಯಾ, 11.10.2006

ಪಥಿಯನ್, ಪ್ರಿಯಾ, ಗಾಂಧಿ ಕೌನ್ ಹೈ!, ದಿ ಟೈಮ್ಸ್, 17.09.2006

ಬುಲಕ್, ಅಲನ್, ಒಲಿವರ್ ಸ್ಟಾಲಿಬ್ರಾಸ್ ಮತ್ತು ಸ್ಟೀವನ್ ಟ್ರಾಂಬ್ಲಿ ದ ಫೊಂಟಾನಾ ಡಿಕ್ಷನರಿ ಆಫ್ ಮಾಡರ್ನ್ ಥಾಟ್, ಸೆಕೆಂಡ್ ಎಡಿಶನ್, ಸಂಪಾದಿತ ಕೃತಿ, ಫೊಂಟಾನಾ ಪ್ರೆಸ್, ಲಂಡನ್

ಭಟ್, ಪ್ರೇಮಾ, 1995, ಅಧ್ಯಕ್ಷ ಭಾಷಣ, ದ.ಕ. ಜಿಲ್ಲಾ ಎಂಟನೆಯ ಸಾಹಿತ್ಯ ಸಮ್ಮೇಳನ, ಉಡುಪಿ

ಭಟ್, ಎಸ್. ಆರ್., ಗೋವು–ಸತ್ಯ ಮತ್ತು ಮಿಥ್ಯ, ವಾರ್ತಾ ಭಾರತಿ, 22.10.2006

ಬ್ರಾಸ್, ಪಾಲ್ ಆರ್., ಆರ್ಗನೈಸ್ಡ್ ರಯಟ್ಸ್ & ಸ್ಟ್ರಕ್ಚರ್ಡ್ ವಯೊಲೆನ್ಸ್ ಇನ್ ಇಂಡಿಯಾ, ದಿ ಹಿಂದು, 23.08.2006

ಭಂಡಾರಿ, ಎಂ.ಎಸ್., (2000), ವ್ಯಾಲ್ಯೂ ಎಜುಕೇಶನ್, ಸೆಕ್ಯುಲರಿಸಂ ಆ್ಯಂಡ್ ರಿಲಿಜಿಯನ್, ನ್ಯೂಡೆಲ್ಲಿ, ವ್ಯಾಲ್ಯೂ ಎಜುಕೇಶನ್ ಇನ್ ಇಂಡಿಯಾ, ಅಸೋಸಿಯೇಶನ್ ಆಫ್ ಇಂಡಿಯನ್ ಯುನಿವರ್ಸಿಟೀಸ್

ಭಟ್, ಎಸ್.ಆರ್., ರಾಜಶೇಖರ್, ಜಿ., ಫಣಿರಾಜ್ ಕೆ. (2005), ಕೋಮುವಾದದ ಕರಾಳ ಮುಖಗಳು, ಬೆಂಗಳೂರು, ನವಕರ್ನಾಟಕ ಪ್ರಕಾಶನ

ಮಲ್ಹೋತ್ರ ಪಿ.ಎಲ್. ಕರಿಕ್ಯುಲಂ ಆ್ಯಂಡ್ ಇವ್ಯಾಲ್ಯುವೇಷನ್, 1984, ನ್ಯೂಡೆಲ್ಲಿ, ನ್ಯಾಶನಲ್ ಆಫ್ ಎಜುಕೇಶನಲ್ ರಿಸರ್ಚ್ ಆ್ಯಂಡ್ ಟ್ರೈನಿಂಗ್

ಮೈಥಿಲಿ ಎಸ್, ಸಾಧಕಿಯರೇ ಸಲಾಂ, ಮಣಿಪಾಲ, ತರಂಗ, 18 ಮಾರ್ಚ್ 2010

ಮಾಲಗತ್ತಿ, ಧರಣೀ ದೇವಿ, ಜೆನಿಬ್, ಇಸ್ಮತ್, ಲಕ್ಷ್ಮಮ್ಮ ಮತ್ತು ಅಸಂಖ್ಯ ಅನಾಮಿಕರು, ಉದಯವಾಣಿ, 26.03.2010

ಮೋಹನ್, ಕೆ. ಆರ್., ಮಹಿಳಾ ಸಬಲೀಕರಣ: ಗುಂಪಿನಿಂದ ಕ್ಲಸ್ಟರ್ ಕಡೆಗೆ, ವಾರ್ತಾ ಭಾರತಿ, 11.01.2007

ಮೈರಾ, ಅರುಣ್, ಲ್ಯಾಕ್ ಆಫ್ ವ್ಯಾಲ್ಯೂಸ್, ದಿ ಟೈಮ್ಸ್ ಆಫ್ ಇಂಡಿಯಾ, ಮ್ಯಾಂಗಲೋರ್, 30.10.2006

ಮಾರ್ಟಿರಿಸ್, ನೀನಾ, ಲೀವ್ ದೋಸ್ ಕಿಡ್ಸ್ ಅಲೋನ್, ದಿ ಟೈಮ್ಸ್ ಆಫ್ ಇಂಡಿಯಾ, 19,09.2006

ಮಿಸ್ರಾ, ಲೀನಾ, ಹೂ' ಸ್ ಫಾರ್ ಕನ್‌ವರ್ಶನ್, ಸೋನಿಯಾ ಆರ್ ದಿ ಪೋಪ್, ದಿ ಟೈಮ್ಸ್ ಆಫ್ ಇಂಡಿಯಾ, 09.08.2006

ಯಾದವ್, ಯೋಗೇಂದ್ರ, ಮತ್ತು ಕುಮಾರ್, ಸಂಜಯ್, ದಿ ಯುತ್ : ದೆಯರ್ ಥಾಟ್ಸ್ ಆ್ಯಂಡ್ ಆ್ಯಸ್ಪಿರೇಷನ್ಸ್, ದಿ ಹಿಂದು, 16.08.2006

ರಾಜ್‌ಪುತ್ ಜೆ.ಎಸ್. (2003), ಲರ್ನಿಂಗ್ ಬೇಸಿಕ್ಸ್ ಆಫ್ ಆಲ್ ರಿಲಿಜನ್ಸ್, ನ್ಯೂಡೆಲ್ಲಿ, ಜರ್ನಲ್ ಆಫ್ ವ್ಯಾಲ್ಯೂ ಎಜುಕೇಶನ್, ಎನ್‌ಸಿಇಆರ್‌ಟಿ. ಸಂಪುಟ 3, ಸಂಚಿಕೆ 1, ಜನವರಿ 2003

ರಾಮಕೃಷ್ಣ ಜಿ. (2005), ಮುನ್ನುಡಿ, ಕೋಮುವಾದದ ಕರಾಳ ಮುಖಗಳು, ಭಟ್ ಎಸ್. ಆರ್., ಬೆಂಗಳೂರು, ನವಕರ್ನಾಟಕ ಪಬ್ಲಿಕೇಶನ್ಸ್

ರಾವ್, ಮಹಾಬಲೇಶ್ವರ, 'ಆಧುನಿಕ ಶಿಕ್ಷಣದ ಒಲವುಗಳು, ಗದಗ, ಪ್ರದೀಪ ಪ್ರಕಾಶನ, 2007

ರ್‍ಯಾನ್, ಕೆ ಮಿಚೆಲ್, 'ಎ ಜೆಂಡರ್ಡ್ ಸೆಲ್ಫ್ ಆರ್ ಎ ಜೆಂಡರ್ಡ್ ಕಾಂಟೆಕ್ಸ್ಟ್? ಎ ಸೋಶಿಯಲ್ ಐಡೆಂಟಿಟಿ ಅಪ್ರೋಚ್ ಟು ಜೆಂಡರ್ ಡಿಫರೆನ್ಸಸ್, 2003, ದಿ ಆಸ್ಟ್ರೇಲಿಯನ್ ನ್ಯಾಶನಲ್ ಯುನಿವರ್ಸಿಟಿ, ಆಸ್ಟ್ರೇಲಿಯಾ

ರೆನ್ನೀ, ರಾಬರ್ಟ್, ಡಬ್ಲ್ಯು, 'ಸ್ಕೂಲ್ ರೆಫ್ಯೂಸಲ್: ಎಕೇಸ್ ಸ್ಟಡಿ, (ಎಂ. ಎಡ್. ಮಹಾಪ್ರಬಂಧ), 2003, ಆಸ್ಟ್ರೇಲಿಯನ್ ಕ್ಯಾಥೊಲಿಕ್ ಯುನಿವರ್ಸಿಟಿ.

ರಾಧಾಕೃಷ್ಣ, ಸಾಯನ್ಸ್ ಆ್ಯಂಡ್ ಸೂಪರ್‌ಸ್ಟಿಶನ್, ದಿ ಹಿಂದು, 14.01.2007

ರ್‍ಯಾಂಡರ್ಸನ್, ಜೇಮ್ಸ್, ಇಂಟಲಿಜಂಟ್ ಡಿಸ್ಯಾನ್ ಈಸ್ ಕ್ರಿಯೇಶನಿಸಮ್, ದಿ ಹಿಂದು, 14.12.2006

ರಾವ್, ಸಿ.ಎನ್.ಆರ್., ಅವರ್ ವ್ಯಾಲ್ಯೂ ಸಿಸ್ಟಮ್ ಆ್ಯಂಡ್ ದಿ ಫ್ಯೂಚರ್ ಆಫ್ ಇಂಡಿಯಾ, ದಿ ಹಿಂದು, 27.11.2001

ರಾಣಿ, ಸೀಮಾ (2000), ಅಪ್ರೋಚಸ್ ಟು ವ್ಯಾಲ್ಯೂ ಎಜುಕೇಶನ್ ಆ್ಯಂಡ್ ದ ರೋಲ್ ಆಫ್ ದ ಸ್ಕೂಲ್ ಆ್ಯಂಡ್ ದ ಕರಿಕ್ಯುಲಂ, ವ್ಯಾಲ್ಯೂ ಎಜುಕೇಶನ್ ಇನ್ ಇಂಡಿಯಾ, ನ್ಯೂ ಡೆಲ್ಲಿ, ಅಸೋಸಿಯೇಷನ್ ಆಫ್ ಇಂಡಿಯನ್ ಯುನಿವರ್ಸಿಟೀಸ್

ರಾವ್, ಮಹಾಬಲೇಶ್ವರ, (1999), ಪೇರ ಮುಗೇರು, ದ.ಕ., ಶಿಕ್ಷಣ ಸಂವಹನ, ಕೈಂತಜೆ ಪ್ರಕಾಶನ

ರಾವ್, ಮಹಾಬಲೇಶ್ವರ, (2004), ಸ್ಥಿತ್ಯಂತರ, ಪುತ್ತೂರು, ದ.ಕ., ಕನ್ನಡ ಪುಸ್ತಕ ಪ್ರಕಾಶನ

ರಾವ್, ಸಿ.ಎನ್.ಆರ್. 'ಐಟಿ ಹ್ಯಾಸ್ ಡಿ ಸ್ಟಾಯ್ಡ್ ಇಂಡಿಯನ್ ಸಾಯನ್ಸ್, ದಿ ಹಿಂದು, ಫೆಬ್ರವರಿ 15, 2010)

ರಾವ್, ಮೋಹನ್, ಕಾರ್ಪ್ ಚೌತ್ ಕ್ಯಾಪಿಟಲಿಸಂ, ದಿ ಟೈಮ್ಸ್ ಆಫ್ ಇಂಡಿಯಾ, 26.12.2006

ರಾಜ್, ಅಲೋಕ್, ಎಜುಕೇಟಿಂಗ್ ಸೀತಾ, ದಿ ಟೈಮ್ಸ್ ಆಫ್ ಇಂಡಿಯಾ, 05.10.2006

ರಿಂಪಲ್, ವಿಲಿಯಂ ಡಾಲ್, ದಿ ಜೆಹಾದ್ ಆಫ್ 1857, ದಿ ಟೈಮ್ಸ್ ಆಫ್ ಇಂಡಿಯಾ, 05.11.2006

ಲಾಲ್, ಅಮೃತ್, ಮ್ಯಾಟರ್ಸ್ ಆಫ್ ಫೆಯ್ತ್, ದಿ ಟೈಮ್ಸ್ ಆಫ್ ಇಂಡಿಯಾ, 07.08.2006

ವ್ಹೇಲನ್, ಆಂಥನಿ ಪೀಟರ್, 'ಎ ಸ್ಟಡಿ ಆಫ್ ಕ್ಯಾಥೊಲಿಕ್ ಸ್ಕೂಲ್ಸ್ ಕನ್ಸಲ್ಟಂಟ್ಸ್ ಇನ್ ನ್ಯೂ ಸೌತ್‌ವೇಲ್ಸ್ : ದೆಯರ್ ಲೀಡರ್‌ಶಿಪ್, ರಿಲೇಶನ್‌ಶಿಪ್ ವಿದ್ ಪ್ರಿನ್ಸಿಪಾಲ್ಸ್ ಆ್ಯಂಡ್ ಇನ್‌ಫ್ಲುಯೆನ್ಸಸ್ ಆನ್ ಸ್ಕೂಲ್ಸ್, 2000, ಆಸ್ಟ್ರೇಲಿಯನ್ ಕ್ಯಾಥೊಲಿಕ್ ಯುನಿವರ್ಸಿಟಿ, ವಿಕ್ಟೋರಿಯಾ, ಆಸ್ಟ್ರೇಲಿಯಾ

ವೆನ್‌ಹ್ಯಾಂ, ಆ್ಯನ್ ಮರಿಯಾ, 'ಜಂಡರ್ ಆ್ಯಂಡ್ ಸ್ಕೂಲ್ : ಪಾಲಿಸಿ ಡೈರೆಕ್ಷನ್ಸ್, ಪ್ರಾಕ್ಟಿಸ್ ಆ್ಯಂಡ್ ಲೀಡರ್‌ಶಿಪ್, 2002, ಆಸ್ಟ್ರೇಲಿಯನ್ ಕ್ಯಾಥೊಲಿಕ್ ಯುನಿವರ್ಸಿಟಿ, ವಿಕ್ಟೋರಿಯಾ, ಆಸ್ಟ್ರೇಲಿಯಾ

ವೆಂಕಟೇಶ್, ಪ್ರೊ. ಮಲ್ಲೇಪುರಂ, ಜಿ. ಧರ್ಮಜ್ಯೋತಿ, ಕನ್ನಡ ಪ್ರಭ, 04.01.2007

ವಾಲ್ಟರ್, ನಟಾಶಾ, ಕರ್ಬಿಂಗ್ ದಿ ಫಿಲ್ಮ್ ವರ್ಲ್ಡ್ಸ್ ಮೇಲ್ ಬಯಾಸ್, ದಿ ಹಿಂದು, 27.09.2006

ವಿರಾನಿ, ಪಿಂಕಿ, ಲಿಬರಲ್ಸ್ ಲೈಕ್ ಅಸ್, ದಿ ಟೈಮ್ಸ್ ಆಫ್ ಇಂಡಿಯಾ, 08.09.2006

ವಿಶ್ವನಾಥನ್, ಶಿವ್, ಬ್ರಾಂಡ್ ಮಹಾತ್ಮಾ, ದಿ ಟೈಮ್ಸ್ ಆಫ್ ಇಂಡಿಯಾ, 23.09.2006

ವೆಂಕಟಯ್ಯ ಎನ್ (1998), ವ್ಯಾಲ್ಯೂ ಎಜುಕೇಶನ್ ಆ್ಯನ್ ಓವರ್‌ವ್ಯೂ, ನ್ಯೂ ಡೆಲ್ಲಿ, ವ್ಯಾಲ್ಯೂ ಎಜುಕೇಶನ್, ಎಪಿಎಚ್ ಪಬ್ಲಿಶಿಂಗ್ ಕಾರ್ಪೊರೇಶನ್

ವೆಂಕಟರಾಮ್ ಎಸ್. (1983), ನಮ್ಮ ಪಠ್ಯಪುಸ್ತಕಗಳು, ಬೆಂಗಳೂರು, ದುಡಿಯುವವರ ದನಿ ಮತ್ತು ಇತರ ಲೇಖನಗಳು, ಪ್ರಿಂಟರ್ಸ್ ಪ್ರಕಾಶನ

ವಾರಿಯರ್, ಬಿ.ಎಸ್., ದಿ ಆರ್ಟ್ ಆಫ್ ರೈಟಿಂಗ್ ಎ ಥೀಸಿಸ್, ದಿ ಹಿಂದು, 27.11.2006

ಶೇಕ್ ಆಲಿ ಬಿ., ಫೋರ್‌ವರ್ಡ್, ವ್ಯಾಲ್ಯೂ ಎಜುಕೇಶನ್, ಡಾ। ಎನ್. ವೆಂಕಟಯ್ಯ, ಪು. (VIII), ನ್ಯೂ ಡೆಲ್ಲಿ, APH Publishing Corporation, (1998).

ಶೈಲಜಾ, ಶ್ರೀಮತಿ ಡಾ|, 2008, ಪರಿಸರ ಅಧ್ಯಯನ (4) ನಾಲ್ಕನೇ ತರಗತಿ, ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.) ಬೆಂಗಳೂರು.

ಶಂಕರಮೂರ್ತಿ, ಡಿ.ಎಚ್., ಟಿಪ್ಪು ಕನ್ನಡ ದ್ರೋಹಿ, ಸಚಿವ ವಾರ್ತಾ ಭಾರತಿ, 26.09.2006

ಶೇಕ್, ಕ್ಯಾಥರಿನ್, ಲೆಟ್ ಅಸ್ ಜ್ಯಾನ್ ಹ್ಯಾಂಡ್ಸ್ ಟು ರೀಕ್ಲೆಯ್ಮ್ ಫೆಮಿನಿಸಂ, ದಿ ಹಿಂದು, 09.08.2006

ಶಂಕರಮೂರ್ತಿ, ಮಕ್ಕಳಿಗೆ ತಪ್ಪು ಪಾಠ ಹೇಳಿಕೊಡಲಾಗುತ್ತಿದೆ, ಉದಯವಾಣಿ, 16.07.2006

ಶಾ, ಮಿಹಿರ್, ಗಾಂಧಿಗಿರಿ – ಎ ಫಿಲಾಸಫಿ ಫಾರ್ ಅವರ್ ಟೈಮ್ಸ್, ದಿ ಹಿಂದು, 28.09.2006

ಸಮಾಜ ವಿಜ್ಞಾನ, ಕರ್ನಾಟಕ ಸರಕಾರ, ಪಪು ನಿರ್ದೇಶನಾಲಯ, ಭಾಗ, 10ನೆಯ ತರಗತಿ, 1998

ಸೇತಿ, ಅತುಲ್, (2008), ವ್ಹೈವೀ ಹೇಟ್, ಸಂಡೇ ಟೈಮ್ಸ್ ಆಫ್ ಇಂಡಿಯಾ, ಮ್ಯಾಂಗಲೋರ್, ಸೆಪ್ಟೆಂಬರ್ 7, 2008, ಪು. 11

ಸೀತಾರಾಮ್, ಎ. ಆರ್., (1998), ವ್ಯಾಲ್ಯೂಸ್ – ವ್ಹಾಟ್ ಆ್ಯಂಡ್ ವ್ಹೈ?, ನ್ಯೂಡೆಲ್ಲಿ, ವ್ಯಾಲ್ಯೂ ಎಜುಕೇಶನ್, ಸಂ. ವೆಂಕಟಯ್ಯ ಎನ್. ಎಪಿಎಚ್ ಪಬ್ಲಿಶಿಂಗ್ ಕಾರ್ಪೊರೇಶನ್

ಸುರೈಯಾ, ಜಗ್, ಡಿಸ್‌ಯುನ್ಯಾಟಿಂಗ್ ಕಲರ್ಸ್ ಆಫ್ ಫನಾಟಿಸಿಸಂ, ಟೈಮ್ಸ್ ಆಫ್ ಇಂಡಿಯಾ, 7.09.2008)

ಶೇಖಾವತ್, ಭೈರೊನ್ ಸಿಂಗ್, ದ ಟಾಸ್ಕ್ಸ್ ಆನ್ ದಿ ಎಜುಕೇಶನ್ ಫ್ರಂಟ್ – ದಿ ಹಿಂದು, 12.04.2007

ಸಿಕಂದ್, ಯೋಗಿಂದರ್, ಇನ್ ದಿ ನೇಮ್ ಆಫ್ ಫೈತ್ –ದಿ ಟೈಮ್ಸ್ ಆಫ್ ಇಂಡಿಯಾ, 19.04.2007

ಸುರೂರ್, ಹಾಸನ್, ಲಿವಿಂಗ್ ಇಂಟ್ರಡಕ್ಷನ್ ಟು ಇಸ್ಲಾಂ, ದಿ ಹಿಂದು, 05.03.2007

ಸೇನ್, ರೊನೊಜ್ಯಾ, 150 ಇಯರ್ಸ್ ಲೇಟರ್, ದಿ ಟೈಮ್ಸ್ ಆಫ್ ಇಂಡಿಯಾ, 26.01.2007

ಸೊರಬ್‌ಜೀ, ಸೋಲಿ, ಯುನಿವರ್ಸಿಟಿಸ್ ಮಸ್ಟ್ ಟೀಚ್ ಮಾರಲ್ ಆ್ಯಂಡ್ ಸ್ಪಿರಿಚುವಲ್ ವ್ಯಾಲ್ಯೂಸ್: ದಿ ಹಿಂದು, 14.01.2007

ಸುರೇಂದ್ರನ್, ಸಿ.ಪಿ., ಚಿಲ್ಡ್ರನ್ ಆಫ್ ಎ ಲೆಸರ್ ಗಾಡ್, ದಿ ಟೈಮ್ಸ್ ಆಫ್ ಇಂಡಿಯಾ, 06.1.2006

ಸ್ಪೈಯ್ಸ್‌ಮಿಯರ್, ಫ್ರಾಂಕ್ ವಾಲ್ಟರ್, ಫಾರಿನ್ ಮಿನಿಸ್ಟರ್ಸ್ ಆಫ್ ದಿ ಆರ್ಟ್ಸ್, ದಿ ಹಿಂದು, 09.10.2006

ತಿಲಕ್, ಸುಧಾ ಜಿ., ಸ್ಟಿಲ್ ದಿ ಸೆಕೆಂಡ್ ಸೆಕ್ಸ್, ದಿ ಟೈಮ್ಸ್ ಆಫ್ ಇಂಡಿಯಾ, 27.10.2006

ಸಿಂಗರ್, ಪೀಟರ್, ಜೀನ್ ಥೆರಪಿ, ದಿ ಟೈಮ್ಸ್ ಆಫ್ ಇಂಡಿಯಾ, 19.10.2006

ಸ್ವಾಮಿನಾಥನ್, ಪದ್ಮಿನಿ, ಡೀಕನ್‌ಸ್ಟ್ರಕ್ಟಿಂಗ್ ಮೂವ್‌ಮೆಂಟ್ಸ್, ದಿ ಹಿಂದು, 15.08.2006

ಶ್ರೀವಾತ್ಸವ, ಅ. ಭಾ., ಆಲ್ ಸೆಕ್ಸ್‌ಡ್ ಅಪ್ & ರೇರಿಂಗ್ ಟು ಗೊ, ದಿ ಟೈಮ್ಸ್ ಆಫ್ ಇಂಡಿಯಾ, 30.07.2006

ಸ್ಯಾನಾಥ್, ಪಿ., ತ್ರೀ 9/11ಸ್ – ಚೂಸ್ ಯುವರ್ ಓನ್, ದಿ ಹಿಂದು, 11.09.2006

ಶ್ರೀ ಕೃಷ್ಣ, (1998), ಡ್ಯಾಮಿಂಗ್ ವರ್ಡಿಕ್ಟ್, ಜಸ್ಟಿಸ್ ಬಿ. ಎನ್. ಶ್ರೀ ಕೃಷ್ಣ ಆಯೋಗದ ವರದಿ (ಮುಂಬಯಿ ಗಲಭೆಗಳು ಡಿಸೆಂಬರ್ 1992, ಜನವರಿ 1993), ಸಬ್ರಂಗ್ ಕಮ್ಯುನಿಕೇಶನ್ಸ್ ಆ್ಯಂಡ್ ಪಬ್ಲಿಶಿಂಗ್ ಪ್ರೈವೇಟ್ ಲಿ.

ಹ್ಯಾಮಿಲ್ಟನ್, ಮೌರಿಸೆಟ್ ಆ್ಯನ್, 'ವಿ ಗ್ರೋ ಇನ್ ದ ಶೇಡ್ ಆಫ್ ಈಚ್ ಅದರ್: ಎ ಕೇಸ್ ಸ್ಟಡಿ ಆಫ್ ಕನೆಕ್ಟೆಡ್‌ನೆಸ್, ಎಂಪವರ್‌ಮೆಂಟ್ ಆ್ಯಂಡ್ ಲರ್ನಿಂಗ್ ಇನ್ ದ ಮಿಡ್ಲ್ ಇಯರ್ಸ್ ಆಫ್ ಸ್ಕೂಲಿಂಗ್, 2005, ಸ್ಕೂಲ್ ಆಫ್ ಎಜುಕೇಶನ್, ಆಸ್ಟ್ರೇಲಿಯನ್ ಕ್ಯಾಥೋಲಿಕ್ ಯುನಿವರ್ಸಿಟಿ, ವಿಕ್ಟೋರಿಯಾ, ಆಸ್ಟ್ರೇಲಿಯಾ

ಹೊಸ್ಕೋಟೆ, ರಂಜಿತ್, ಇನ್ ಡಿಫೆನ್ಸ್ ಆಫ್ ಸೆಕ್ಯುಲರಿಸಂ, ದಿ ಹಿಂದು, 21.11.2006

ಹೊಸ್ಕೋಟೆ, ರಂಜಿತ್, ರೆಸಿಲಿಯನ್ಸ್ ಈಸ್ ಗುಡ್, ಬಟ್ ಅಮ್ನೇಸಿಯಾ ಈಸ್ ಫೇಟಲ್, ದಿ ಹಿಂದು, 14.07.2006

ಅನುಬಂಧ-೧

ಪಾಠ - 11

# ನಮ್ಮ ಕುಟುಂಬ

[illegible] : • ಕುಟುಂಬದ ಸದಸ್ಯರೊಂದಿಗೆ ಸಂಬಂಧವನ್ನು ಅರಿಯುವರು.
• ಮನೆಕೆಲಸಗಳಲ್ಲಿ ಪರಸ್ಪರ ಸಹಕರಿಸುವುದನ್ನು ಕಲಿಯುವರು.

ನಮ್ಮ ಮನೆಯಲ್ಲಿರುವವರ ಪರಿಚಯವನ್ನು ನಿಮಗೆ ಮಾಡಿಸುತ್ತೇನೆ.




ನಮ್ಮ ಮನೆಯಲ್ಲಿ ನನ್ನ ಅಪ್ಪ ಅಮ್ಮ ಇದ್ದಾರೆ. ಅಜ್ಜ ಅಜ್ಜಿಯೂ ಇದ್ದಾರೆ. ಅವರೊಂದಿಗೆ ನನ್ನ ಅಣ್ಣ ನಾನು, ನನ್ನ ತಮ್ಮ ಇದ್ದೇವೆ. ಇದು ನಮ್ಮ ಕುಟುಂಬ.

ಈ ಚಿತ್ರದಲ್ಲಿ ನಮ್ಮ ಕುಟುಂಬದವರೆಲ್ಲರೂ ಇದ್ದಾರೆ.

ನಿಮ್ಮ ಕುಟುಂಬದಲ್ಲಿ ಯಾರು ಯಾರು ಇದ್ದಾರೆ?

ರಾಜು ಮತ್ತು ರಮಾ ಅಣ್ಣ ತಂಗಿ.
ಅವರು ಮನೆಯನ್ನು ಸ್ವಚ್ಛ ಮಾಡುತ್ತಿದ್ದಾರೆ.
ಯಾರು ಕಸ ಗುಡಿಸುತ್ತಿದ್ದಾರೆ ?





ಅವರ ತಾಯಿ ಏನು ಮಾಡುತ್ತಿದ್ದಾರೆ ?

ಅವರ ತಂದೆ ಯಾವ ಕೆಲಸ ಮಾಡುತ್ತಿದ್ದಾರೆ ?

ಅವರ ಕುಟುಂಬದಲ್ಲಿ ಎಲ್ಲರೂ ಮನೆಯ ಕೆಲಸಗಳನ್ನು ಹಂಚಿಕೊಂಡು ಮಾಡುತ್ತಾರೆ.

ನೀನು ಯಾವ ಯಾವ ಕೆಲಸಗಳನ್ನು ಮಾಡುವೆ ? ಮನೆಯ ಕೆಲಸಗಳನ್ನು ಏಕೆ ಹಂಚಿಕೊಂಡು ಮಾಡಬೇಕು ?

### ತಿಳಿ - ಕಲಿ

ಅ. ಈ ಪ್ರಶ್ನೆಗಳಿಗೆ ಉತ್ತರ ಹೇಳು

1. ನೀನು ನಿನ್ನ ತಾಯಿಗೆ ಹೇಗೆ ನೆರವಾಗುವೆ ?
2. ನಿನ್ನ ತಂದೆಯ ಕೆಲಸಗಳಲ್ಲಿ ಹೇಗೆ ಸಹಾಯ ಮಾಡುವೆ ?
3. ತಮ್ಮನಿಗೆ ಹೇಗೆ ಸಹಾಯ ಮಾಡುವೆ ?

ಆ. [illegible]

1. ನನ್ನ ಅಪ್ಪ ನನ್ನ ತಂದೆಗೆ......................
2. ನನ್ನ ಅಪ್ಪ ಅಜ್ಜನಿಗೆ ......................

3. ನನ್ನ ಅಪ್ಪ, ಅಮ್ಮನಿಗೆ ನಾನು .................. ನನ್ನ ತಮ್ಮ ..................

4. ನನ್ನ ತಮ್ಮನಿಗೆ ನಾನು .....................

5. ನನ್ನ ಅಪ್ಪನ ತಮ್ಮ ನನಗೆ ..................

6. ನನ್ನ ಅಪ್ಪನ ಅಣ್ಣ ನನಗೆ ....................

7. ನನ್ನ ಅಪ್ಪನ ತಂಗಿ ನನಗೆ ......................

8. ನನ್ನ ಅಮ್ಮನ ಅಣ್ಣ ನನಗೆ ...................

9. ನನ್ನ ಅಮ್ಮನ ತಂಗಿ ನನಗೆ ...................

ಇ. ಆಟ ಆಡು

ಅಪ್ಪ ಆಗಿ, ಅಮ್ಮ ಆಗಿ, ಅಣ್ಣ ತಂಗಿ ಅಥವಾ ಅಕ್ಕ ತಮ್ಮ ಆಗಿ, ಅಜ್ಜ ಅಜ್ಜಿಯರಾಗಿ 'ಮನೆ ಆಟ' ಆಡು.

ಈ. ಹಾಡಿ - ನಲಿ

ಅಪ್ಪನ ಅಪ್ಪ ಅಜ್ಜ
ಅಜ್ಜನ ಹೆಂಡತಿ ಅಜ್ಜಿ
ಅಜ್ಜಿಯ ಮಗ ನಮ್ಮಪ್ಪ
ಅಪ್ಪನ ಹೆಂಡತಿ ನಮ್ಮಮ್ಮ

ಅಮ್ಮನ ಮಗ ನಾನು
ನನ್ನ ಅಕ್ಕ ಪುಟ್ಟಂಗಿ
ಇಬ್ಬರೇ ಮಕ್ಕಳು ನಾವು
ಎಲ್ಲರ ಕಣ್ಮಣಿ ನಾವು

ಅಪ್ಪನ ತಂಗಿ ಅತ್ತೆ
ಅತ್ತೆಯ ಗಂಡ ಮಾವ
ಅಕ್ಕನ ಗಂಡ ಭಾವ
ಎಲ್ಲರ ಪ್ರೀತಿಯ ಭಾವ

ಅಪ್ಪನ ತಮ್ಮ ಚಿಕ್ಕಪ್ಪ
ಅಪ್ಪನ ಅಣ್ಣ ದೊಡ್ಡಪ್ಪ
ದೊಡ್ಡಪ್ಪನ ಜೊತೆ ದೊಡ್ಡಮ್ಮ
ಚಿಕ್ಕಪ್ಪನ ಜೊತೆ ಚಿಕ್ಕಮ್ಮ

ಎಲ್ಲರ ಜೊತೆಯಲಿ ನಾನು
ಮನೆಯಲಿ ದಿನಾ ನಗುವೆವು

## ಗದ್ಯಪಾಠ

# ೧೧. ಧೀರೆ ನೀರಜಾ



ಮಕ್ಕಳೇ, ಸ್ತ್ರೀ ಅಬಲೆಯಲ್ಲ; ಸಂದರ್ಭ ಬಂದಾಗ ಎಂತಹ ತ್ಯಾಗಕ್ಕೂ ಸಿದ್ಧಳು ಎಂಬುದನ್ನು ತೋರಿಸಿಕೊಟ್ಟವರಲ್ಲಿ ನೀರಜಾ ಬಾನೋಟ್ ಒಬ್ಬಳು. ನೀರಜಾಬಾನೋಟ್ ಸುಪ್ರಸಿದ್ಧ ಪತ್ರಕರ್ತ ಹರೀಶ್ ಬಾನೋಟ್ ಮತ್ತು ರಮಾಬಾನೋಟ್ ಅವರ ಮಗಳು. ಅತ್ಯಂತ ಸುಂದರಿ. ತನ್ನ [illegible]ನೇ ವಯಸ್ಸಿನಲ್ಲೇ ಪ್ರಸಿದ್ಧ ರೂಪದರ್ಶಿ ಎನಿಸಿದ್ದಳು.


ನೀರಜಾ ಅವಳ ಮದುವೆಯಾಯಿತು. ಗಂಡ ವರದಕ್ಷಿಣೆಗಾಗಿ ಪೀಡಿಸಿದಾಗ ಅವಳ ವೈವಾಹಿಕ ಜೀವನ ಮುರಿದುಬಿತ್ತು. ದುಃಖದಲ್ಲಿದ್ದ ತಂದೆಗೆ ಸಮಾಧಾನ ಹೇಳಿದಳು. 'ಅಪ್ಪಾ ಒಂದಲ್ಲ ಒಂದು ದಿನ ನೀವು ನನ್ನ ಬಗ್ಗೆ ಹೆಮ್ಮೆ ಪಡುವಂತೆ ಸಾಧಿಸಿ ತೋರಿಸುತ್ತೇನೆ' ಎಂದು ಸಂತೈಸಿದಳು. ಎಂತಹ ಕಷ್ಟದಲ್ಲಿಯೂ ನೀರಜಾ [illegible]

ಕೆಲವೇ ದಿನಗಳಲ್ಲಿ ನೀರಜಾ 'ಪ್ಯಾನ್ ಅಮ್' ವಿಮಾನ ಸಂಸ್ಥೆಯಲ್ಲಿ ಗಗನ ಸಖಿಯಾಗಿ ಕೆಲಸಕ್ಕೆ ಸೇರಿದಳು. ಗಗನಸಖಿಯ ಕರ್ತವ್ಯ ನಿರ್ವಹಿಸುತ್ತಾ, ತನ್ನ ಸ್ವಂತ ನೋವನ್ನು ಮರೆತಳು. ಎಲ್ಲರಿಗೂ ಅಚ್ಚುಮೆಚ್ಚಿನವಳಾದಳು.

[illegible] ಸೆಪ್ಟೆಂಬರ್ [illegible] ವಿಮಾನ ಮುಂಬಯಿಯಿಂದ ನ್ಯೂಯಾರ್ಕಿಗೆ ಹೊರಟಿತ್ತು. [illegible]

[illegible] ಧೀರೆ ನೀರಜಾ!

ಭಾರತ ಸರ್ಕಾರ [illegible] ನೀರಜಾಬಾನೋಟ್ [illegible]



[illegible]

[illegible]

ರೂಪದರ್ಶಿ – ಸೌಂದರ್ಯದಿಂದ ಕೂಡಿದ್ದು ಪ್ರದರ್ಶಿಸುವವಳು

ಗಗನಸಖಿ – ವಿಮಾನದಲ್ಲಿ ಪ್ರಯಾಣಿಕರನ್ನು ಉಪಚರಿಸುವವಳು

ಅಗ್ನಿಪರೀಕ್ಷೆ – ತುಂಬಾ ಕಷ್ಟಕ್ಕೆ ಒಳಗಾಗ ಮಾಡುವ ಪರೀಕ್ಷೆ

[illegible] – [illegible]

ತುರ್ತುದ್ವಾರ – ಪ್ರಯಾಣಿಕರನ್ನು ಹೊತ್ತು ಚಲಿಸುವ ವಾಹನಗಳು ಅಪಾಯಕ್ಕೆ ಸಿಕ್ಕಿದಾಗ ಶೀಘ್ರವಾಗಿ ಹೊರಬರಲು ಅನುಕೂಲವಾಗುವಂತೆ ಜೋಡಿಸಿರುವ ಬಾಗಿಲು

[illegible] – ನಡೆಸು, ಜವಾಬ್ದಾರಿ ಹೊತ್ತು ಮಾಡು

ಗುಂಡಿನ ಮಳೆಗರೆದ – ಗುಂಡುಗಳನ್ನು ಮೇಲಿಂದ ಮೇಲೆ ಹಾರಿಸಿದ


[illegible] – ತ್ಯಾಗ ಮಾಡು, ಒಂದು ಉದ್ದೇಶಕ್ಕಾಗಿ ಪ್ರಾಣ ಅರ್ಪಿಸು

ಸಮಯಪ್ರಜ್ಞೆ – ಸಂದರ್ಭಕ್ಕೆ ತಕ್ಕಂತಹ ನಡವಳಿಕೆ

ಅಭ್ಯಾಸ

[illegible]

ಉಚಿತ ವಿತರಣೆಗಾಗಿ


ಶಿಕ್ಷಕರಿಗೆ
ಸಮಾಜ ಸೇವಕರಿಗೆ
ಯುದ್ಧದಲ್ಲಿ ಹೋರಾಡಿದ ಸೈನಿಕರಿಗೆ
ಸಾಹಿತಿಗಳಿಗೆ

# ಅನುಬಂಧ-೩

## ೧೯. ಬಹುರೂಪಿಗಳು

ತಮ್ಮ ಕಲೆ–ಕುಶಲತೆಯನ್ನು ಪ್ರದರ್ಶಿಸಿ, ಮನರಂಜನೆ ಒದಗಿಸಿ ಹೊಟ್ಟೆ ಹೊರೆಯುವ 'ಕರಡಿಯಾಟ', 'ಮಂಗನಾಟ', 'ದೊಂಬರಾಟ'ದಂಥ ಕೆಲವು ಕುಲಕಸುಬು ಇಂದು ಕಣ್ಮರೆಯಾಗುತ್ತಿವೆ. ಇಂಥವುಗಳಲ್ಲಿ ಒಂದಾದರೂ ಇವುಗಳಿಂದ ವಿಭಿನ್ನವೂ ವಿಶಿಷ್ಟವೂ ಆದ ಕಲೆ ಬಹುರೂಪಿಗಳದ್ದು.

'ಬಹುರೂಪಿ'ಗಳು ಹೆಸರಿಗೆ ತಕ್ಕ ಹಾಗೆ ಬಹುರೂಪ ಅಂದರೆ ಬಗೆ–ಬಗೆಯ ಸೋಗು ಹಾಕುವವರು. ಇವರನ್ನು ವೇಷಗಾರರೆಂದೂ, ಹಾಸ್ಯಗಾರರೆಂದೂ ಕರೆಯುವುದುಂಟು. ಇವರು ತಲೆತಲಾಂತರದಿಂದ ಈ ಕಲೆಗೆ ತಮ್ಮ ಬದುಕನ್ನು ಸಮರ್ಪಿಸುತ್ತ ಬಂದಿರುವವರು. ನೀರಿನಲ್ಲಿ ಹುಟ್ಟಿದ ಮೀನು ಸಹಜವಾಗಿಯೇ ಈಜು ಕಲಿಯುವಂತೆ ಈ ಸಮಾಜದ ಮನೆತನದ ಪ್ರತಿಯೊಬ್ಬರೂ ಸೋಗು ಹಾಕುವ ಕಲೆಯನ್ನು ಕ್ರಮೇಣ ಕರತಲಾಮಲಕ ಮಾಡಿಕೊಳ್ಳುವರು. ಇದರಿಂದಾಗಿ ಈ ಮನೆತನದ ಹೆಣ್ಣು–ಗಂಡು, ಹಿರಿ–ಕಿರಿಯರು ಎಲ್ಲರೂ ಸೇರಿಯೇ ಒಂದು 'ಕಲಾಮೇಳ'ವಾಗಿ ಪರಿಣಮಿಸುವರು. ಇಂದಿನ 'ನಾಟಕಕಂಪನಿ' ಅಥವಾ 'ಸಾಂಸ್ಕೃತಿಕ ಶಿಷ್ಟಮಂಡಲ'ದಂತೆ ಇವರು ಊರಿಂದೂರಿಗೆ ಸುತ್ತುತ್ತ ಹೋಗುವರು. ಆದರೆ ಇವರಿಗೆ ಅಂಥ ಯಾವ ಸಾಮಾನು–ಸರಂಜಾಮು ಬೇಕಿಲ್ಲ. ಸಿದ್ಧ ರಂಗಭೂಮಿಯ ಅವಶ್ಯಕತೆಯೂ ಇವರಿಗಿಲ್ಲ. ಯಾವುದೇ ಒಂದು ಹಳ್ಳಿಯೆದುರಿನ ಅಂಗಳ ಇಲ್ಲವೆ ಬೀದಿಯೊಳಗಿನ ಸ್ಥಳ ಇವರಿಗೆ ಬಯಲು ರಂಗಭೂಮಿಯಾಗಿ ಬಿಡುವುದು.

ಬಹುರೂಪಿಗಳ ಕುಟುಂಬ ಒಂದು ಊರಿಗೆ ಬಂದರೆ ಮುಗಿಯಿತು : ಅಲ್ಲಿಯ ಜನರ ರಸಿಕತೆ, ಆಶ್ರಯದಾತರಾಗುವ ಹೃದಯವಂತಿಕೆ ತೋರಿಬರುವುದನ್ನು ನೋಡಿಕೊಂಡು ಸುಮಾರು ಒಂದು ತಿಂಗಳವರೆಗೆ ಇವರು ಅಲ್ಲಿ ನೆಲೆನಿಲ್ಲುವರು.

ಇವರು ಸಾಮಾನ್ಯವಾಗಿ ಸುಗ್ಗಿ ಮುಗಿದ [illegible] ತಮ್ಮ ಸಂಚಾರ ಪ್ರಾರಂಭಿಸುವರು. ಊರ ಹೊರಗಿನ ಒಂದು ಮರದ ಕೆಳಗೆ ಹೊಲದ ಗುಡಿಯಲ್ಲಿಯೋ, ಧರ್ಮಶಾಲೆಯಲ್ಲಿಯೋ ಬೀಡು ಬಿಡುವರು. ಬೆಳಗಿನ ಊಟ–ಉಪಾಹಾರ ಮುಗಿಸಿಕೊಂಡು ಅಂದು ಹಾಕಬೇಕಾಗುವ ವಿಶಿಷ್ಟ 'ವೇಷ'ದ ಬಣ್ಣಗಾರಿಕೆ ಹಾಗೂ ಉಡುಗೆ–ತೊಡುಗೆಗಳಲ್ಲಿ ಕೆಲಹೊತ್ತು ಕಳೆಯುವರು. ನಮ್ಮಲ್ಲಿರುವ ಸಾಮಾನ್ಯ



ಅನುಬಂಧ-೪

## ೧. ಸಾವಿಯಬ್ಬೆ

ಸಾವಿಯಬ್ಬೆ ಕಾಳಗದಲ್ಲಿ ಜೀವವಳಿದ ವಾರ್ತೆಯನ್ನು ಅವಳ ತಮ್ಮ ಮಾಧವನು ಬಂಕಾಪುರದಲ್ಲಿದ್ದ ಅರಸನಿಗೆ ತಂದು ತಿಳಿಸಿದನು.

ಚಲದುತ್ತರಂಗ ಗಂಗವಜ್ರದೇವರಸನ ಭೂಪನಿಗೆ ಸಾವಿನ ಸುದ್ದಿ ಕೇಳುವುದು ತಡೆಯಲಿಲ್ಲ. ಆದರೂ ನೋಡದಹೊಸ ಮಡಿದ ಮಗಳನ್ನು ಕೇಳಿ ಅವನು ಬಹು ದುಃಖಿಸಿದ್ದನು.

ಸಾವಿ ಮನೆದೇವರಿಗೆ ಹೋದದಹೊಸದಾಗಿ ಹುಟ್ಟಿ, ಮಗನೂ ಮಗಳೂ ಆಗಿ ಬೆಳೆದಿದ್ದಳು. ತಾಯಿತಂದೆಗೆ ಚಿಕ್ಕಂದೇ ಹೊಂದಿದ್ದು ಮಡಿದು ಸಂಸಾರದಲ್ಲಿ ವೈರಾಗ್ಯ ಹುಟ್ಟಿತು. ರಾಜನಾದ ಕಾರಣದಿಂದ ತನ್ನ ಕರ್ತವ್ಯದಿಂದ ಭ್ರಷ್ಟನಾಗಬಾರದೆಂದು ಅವನು ರಾಜ್ಯಲಕ್ಷ್ಮಿಯಲ್ಲಿ ನಿಂತಿದ್ದನು. ವಂಶವನ್ನು ಬೆಳೆಸುವುದಕ್ಕೆ ತಂಗಿ ಹುಟ್ಟಿದ ಮಗು ಒಂದನ್ನು ದತ್ತು ಮಾಡಿಕೊಳ್ಳುವುದೆಂದು ಅವನು ಯೋಚಿಸಿದನು. ಆಗ ಗರ್ಭಿಣಿಯಾಗಿದ್ದ ಸಾವಿಯಬ್ಬೆ ಈ ಹೆಣ್ಣು ಮಗುವನ್ನು ಹೆತ್ತಳು. ಅರಸನು ಅದನ್ನೇ ತನ್ನದೆಂದು ತಂದು ಸಾಕಿದನು.

ವಿರಕ್ತನಾದ ವೀರ ಮಹಾಪುರುಷನ ರಕ್ಷಣೆಯಲ್ಲಿ ಸಾವಿ ಒಬ್ಬ ಕುಮಾರನ ಶಿಕ್ಷೆಯನ್ನು ಪಡೆದಳು. ಎಳೆಯ ಹುಡುಗಿ ಸಾಕು ತಂದೆಯೊಡನೆ ನಿಂತು ಸಮರಸನ್ನಾಹ ಯುದ್ಧ ಕೋಲಾಹಲಗಳ ಸಂಭ್ರಮದ ಗಾಳಿಯಲ್ಲಿ ಬೆಳೆದಳು. ಹನ್ನೆರಡು ವರ್ಷದ ಬಾಲೆ ಅಂಗವಡರೊಡನೆ ಬೇಟೆಯಾಡಹೋಗಿ, ಕುದುರೆ ಏರುವುದರಲ್ಲಿ ಶರಗಳನ್ನು ಎಸೆಯುವುದರಲ್ಲಿ, ಗುರಿಯನ್ನು ಬಿಡುವುದರಲ್ಲಿ ಜೊತೆಯ ತರುಣರಿಗೆ ಸಮ ಎಂಬ, ಮಿಗಿಲಾದ, ಸಾಮರ್ಥ್ಯವನ್ನು ತೋರಿಸಿದಳು. ಗಂಗವಜ್ರನು ತನ್ನ ಈ ಸೊಸೆ ಮಗಳಿಂದ ಚಿತ್ತಾಂಗದೆಯು ಅರ್ಜುನನ ಮಗಳಿದ್ದು, ಮಗಳಾದರೂ ಮಹಾಪುರುಷನೆಂಬ ಜನ್ಮದಲ್ಲಿ ಬೆಳೆಯಲೆಂದು ಈ ಹುಡುಗಿಯಾಗಿ ಬಂದಿರುವಳೆಂದು ಇನ್ನೊಮ್ಮೆ ಹೆಮ್ಮೆಯಿಂದುಬ್ಬಿದನು.

ಹದಿನಾರು ವರ್ಷ ಬೆಳೆದ ಹುಡುಗಿಗೆ ಅರಸು ಮದುವೆ ಮಾಡಲು ಬಯಸಿದನು. ಅರಸನ ಜ್ಞಾತಿವರ್ಗದಲ್ಲಿ ಹಲವರು ತಕ್ಕ ತರುಣರುಂಟು. ಇವರಲ್ಲಿ ಯಾವನ್ನಾದರೂ ಒಪ್ಪುವೆಯಾ ಎನ್ನಲು ತರುಣಿ ಅವರೊಂದಿಗೆ ತಾನು ದ್ವಂದ್ವ ಯುದ್ಧಮಾಡಿ ವಿಕ್ರಮ ತನಗೆ ಒಪ್ಪಿದರೆ ಅವರನ್ನು ಮದುವೆಯಾಗುವೆನೆಂದಳು.

ಅರಸನು ತರುಣರನ್ನು ಒಂದು ದಿನ ಅರಮನೆಯ ಮುಂದಣ ಅಂಗಳಕ್ಕೆ ಬರಮಾಡಿ ಪರನಾಡಿನ ಒಬ್ಬ ಯೋಧನು ಬಂದಿರುವನೆಂದೂ ಅವರು ಅವನೊಂದಿಗೆ ಕಾದಬೇಕೆಂದೂ ಅವರಿಗೆ ತಿಳಿಸಿದನು. ಅವರು ಆಗಬಹುದೆಂದರು.

ಸಾವಿ ಗಂಡುಡಿ ಉಟ್ಟು ಯೋಧವೇಷವನ್ನು ಧರಿಸಿ ಬಿಡಾರದಿಂದ ಬಂದು ತ ಕಣವನ್ನು ಹಿಡಿದಳು. ನಾಲ್ವರು ತರುಣರು ಒಬ್ಬರಾದ ಮೇಲೆ ಒಬ್ಬರು ಅವಳೊಡನೆ ಸ್ಪರ್ಧಿಸಿ ಸೋತು ಹಿಮ್ಮೆಟ್ಟಿದರು. ವಾರಸಿಂಹನು ನೋಡದದ ಕಾಳಗದ ಬೋಗಣ್ಣನೊಬ್ಬನು ಮಾತ್ರ ಅವಳ ಬೆಳ್ಳಗೆ ಸೋಲದೆ ದೃಢವಾಗಿ ನಿಂತನು.

೧

ಮುಂದರಿಯಬೇಡಿ. ನೀವಿಲ್ಲಿರಿ. ನಾನು ಮುಂದೆ ಹೋಗಿ ಹಗೆಯನ್ನು ಹಿಮ್ಮೆಟ್ಟಿಸಿ ಬರುವೆನು.' ಎಂದಳು.

ಮಾಧವನು ಬೋರನ ಪಕ್ಕದಲ್ಲಿ ಕುಳಿತನು; ಸಾವಿ ಮುಂದರಿದಳು.

ಮತ್ತೆ ಅಷ್ಟರಲ್ಲಿ ಹಾಹಾಕಾರವೆದ್ದಿತು. ಹಗೆಯ ಆನೆ ಈ ದಳದ ಮೇಲೆ ನುಗ್ಗಿ ಬಂದಿತು. [illegible] ಒಂದಕ್ಕೆ ಹಾರಿತು. ಸಾವಿ ಅದನ್ನು [illegible] ವೇಳೆಗೆ [illegible] ಬಂದು ಸೇರಿದ್ದಿತು.

ಸಾವಿ ಕುದುರೆಗೆ ಸಾಂತ್ವನ ಹೇಳಿದಳು; ಓಡದಂತೆ ಅದನ್ನು ನಿಲ್ಲಿಸಿ ಹಿಂತಿರುಗಿಸಿದಳು.

ಎದುರಿಗೆ ಮತ್ತೆ ಆ ಆನೆ. ಅದರ ಮೇಲಿದ್ದ ಆ ಯೋಧನು ಸಾವಿಯನ್ನು ಕುರಿತು ಒಂದು [illegible].

ಮಾಧವನು, '[illegible]?' [illegible] ಎಂದು [illegible].

[illegible] ಅವನು ಮತ್ತೆ [illegible]. ಅದರ [illegible] ತೂರಿ ಸಿಕ್ಕಿಕೊಂಡಿತು, [illegible] ಕುದುರೆಯಿಂದ [illegible] ಅದನ್ನು ಮುಟ್ಟಿದಳು.

[illegible] ಹೋಗಿರಲಿಲ್ಲ, ಆದರೂ ಅವನು [illegible]. ಸಾವಿ ಮಾಧವನನ್ನು ಕರೆದು ತನ್ನ [illegible] ಒಂದು [illegible] ತೆಗೆದುಕೊಂಡು [illegible]. ಅದು ಏನೆಂದು ತಿಳಿಯದೆ [illegible] ಅದನ್ನು ತೆಗೆದುಕೊಟ್ಟನು. [illegible] ಅದನ್ನು ತೆಗೆದು ಅದರಿಂದ ಒಂದು [illegible].

[illegible] ಮಾಧವನು ಅದನ್ನು ಸಾವಿ [illegible] ಎಂದು [illegible]. [illegible] ಅವಳೇ ಅದನ್ನು [illegible] ಆಗ ಅವನಿಗೆ, ಅದು ವಿಷ [illegible].

ಈ ಮಧ್ಯೆ [illegible] ಮತ್ತೆ [illegible] ಬಂದಿತು; [illegible]; [illegible] ಮುಂದಕ್ಕೆ ಹೋಗಿದ್ದಿತು.

[illegible] ಗಂಡನ [illegible]; [illegible]

[illegible] ಅವಳ [illegible]

[illegible] ಅವನು [illegible]: '[illegible]' [illegible]

[illegible] ಅವಳ [illegible]. [illegible]

ಬೋಳನು, 'ತೀರಿಕೊಂಡಳೆ?' ಎಂದನು. ಮಾಧವನು ಹೌದು ಎಂದು ತಲೆ ಆಡಿಸಿದನು.

ಬೋಳನು ವೈದ್ಯನಿಗೆ, 'ಇದನ್ನು ಎಳೆ ಬಾ,' ಎಂದನು. ಮಾಧವನು, 'ಸ್ವಾಮಿ, ಬರಲಿ, ರಕ್ತ ಸೋರದಂತೆ ಕಟ್ಟಿ ಮತ್ತೆ ಸರಳನ್ನು ಎಳೆಯುತ್ತೇನೆ' ಎಂದನು.

ಬೋಳನು, 'ನಾನು ಅಲ್ಲಿ ಹೋದೆನೆಂದು ನಾನು ಒಬ್ಬಂಟಿಗನಾಗದಂತೆ ನಾವಿ [illegible]. ಬಾ, ಇದನ್ನು ಎಳೆ. ತಡವಾದರೆ [illegible], ಎಳೆದುದಕ್ಕೆ [illegible]. ಹಾಗೆ ಹಿಡಿದಿಟ್ಟರೆ ಮೇಲೆ ಮತ್ತೆ ಇತ್ತ ಬಾ. ಬಾ ತಪ್ಪು, ಬೇಗ' ಎಂದನು.

ಮಾಧವನು ಅವನ ಮಾತನ್ನು ಮೀರಲಾರದೆ ಆ ಸರಳನ್ನು ಎಳೆದು ಹಾಕಿದನು; ತನ್ನ ಭಾವನ ಜೀವವನ್ನು ತಾನೆ ತೆಗೆದನು.

ಹಾಗೆ ಬೋಳನು ಹಿಡಿದಿಟ್ಟಿದನು. [illegible] ಬೋಳನ್ನು, ನಾವಿ ಮಾತ್ರ ತೀರಿಕೊಂಡಿದ್ದರು.

ತನ್ನ ಅಳಿಯ ಹೇಳಬಾರದೆ ಹೇಳಿದ ಆ ಕತೆಯನ್ನು [illegible] ಗಂಗಪ್ಪನು ಕೇಳಬಾರದೆ ಕೇಳಿದನು. ನಾವಿ ಮಡಿದು ಅವನಿಗೆ ತನ್ನ ಜೀವ ಹೋದಂತೆ ತೋರಿತು. [illegible], ತನ್ನ [illegible] ಎಂದು [illegible], ತನ್ನ [illegible] ಹೀಗೆ [illegible] ಹೋಯಿತು. ಇನ್ನು ತಾನು ಇದ್ದೂ ಇಲ್ಲದಂತೆಯೇ.

ಬಾಳೇನು, ಸಾವೇನು, [illegible], [illegible], ಇವೆಲ್ಲವನ್ನೂ ಅರಿತು ಮೀರಿ ಹೋಗದೆ ನಡೆಯುವ ಬಗೆಯೇನು ಎಂದು ಒಂದು ತಿಂಗಳ ಕಾಲ [illegible] ಉಪದೇಶ [illegible]. ತನ್ನಂಥ ಬಾಳಿಗೆ ಬಗೆಯೇನು ಎಂಬುದನ್ನು ಅರಸನಿಗೆ ಅವನು ಹಾಕಿದ ನಾವಿ ತೋರಿದ್ದಳು.

ಭಟ್ಟಾರಕರು ಹೇಳಿದರು; ಕೃಷ್ಣದಲ್ಲಿ, ಸಲ್ಲೇಖನ ಕರ್ತವ್ಯ ಎಂದು. ಆಗ ಕೃಷ್ಣ [illegible], ಗಂಗಪ್ಪನು ಸಲ್ಲೇಖನವನ್ನು ನಿಶ್ಚಯಿಸಿದನು. ಆಗಲೆ [illegible] ಗುರುವಿನ ಅನುಮತಿಯನ್ನು ಪಡೆದನು. ಅಂದೆ ಉಪವಾಸವನ್ನು ಆರಂಭಿಸಿ ಮೂರು ದಿನದ ಮೇಲೆ [illegible].

ಮಾಸ್ತಿ ವೆಂಕಟೇಶ ಅಯ್ಯಂಗಾರ್

## ಅಭ್ಯಾಸ

### ಕೃತಿ ಕರ್ತೃ ವಿಚಾರ

ಮಾಸ್ತಿ ವೆಂಕಟೇಶ ಅಯ್ಯಂಗಾರರು [illegible]

## ಅನುಬಂಧ - ೩

# ೩. ಗಂಗೂಬಾಯಿ ಹಾನಗಲ್ಲ

[illegible]

[illegible]

[illegible]

[illegible]

# ಅನುಬಂಧ - ೬

## ೮. ಬಾಲ್ಯವಿವಾಹವನ್ನು ತಡೆದ ಭಾಂವ್ರಿ ದೇವಿ

ಭಾಂವ್ರಿದೇವಿ ರಾಜಸ್ಥಾನದ ಹಳ್ಳಿಗಾಡಿನ ಓರ್ವ ಮಹಿಳೆ. [illegible]

[illegible]

[illegible]

[illegible]

'ಕಂಪ್ಯೂಟರ್' (ವಿಜ್ಞಾನ), 'ಒಂದು ಕ್ಯಾಮರಾ ಸುತ್ತ' (ಕಥಾ ಸಂಕಲನ), 'ನೊಬೆಲ್ ಪ್ರಶಸ್ತಿ ವಿಜೇತ ಮಹಿಳಾ ವಿಜ್ಞಾನಿಗಳು' ಮುಂತಾದ ಕೃತಿಗಳನ್ನು ಪ್ರಕಟಿಸಿದ್ದಾರೆ.

ಇವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ರತ್ನಮ್ಮ ಹೆಗ್ಗಡೆ ಪ್ರಶಸ್ತಿ, ಗೊರೂರು ಸಾಹಿತ್ಯ ಪ್ರಶಸ್ತಿ ಮತ್ತು ಆರ್ಯಭಟ ಪ್ರಶಸ್ತಿಗಳು ದೊರೆತಿವೆ.

ಆಶಯ :

ಭಾರತದಲ್ಲಿ ಅನೇಕ ಶತಮಾನಗಳಿಂದ ರೂಢಿಯಲ್ಲಿರುವ ಸಾಮಾಜಿಕ ಪಿಡುಗುಗಳಲ್ಲಿ ಬಾಲ್ಯ ವಿವಾಹವೂ ಒಂದು. ಗಂಗವ್ವ ಬಾಲ್ಯ ವಿವಾಹಕ್ಕೆ ತಾನೂ ಬಲಿಯಾಗಿ, ತನ್ನ ಹೆಣ್ಣುಮಕ್ಕಳಿಗೂ ಇದೇ ಗತಿ ಒದಗಿದಾಗ, ಬಾಲ್ಯ ವಿವಾಹದ ವಿರುದ್ಧ ಸಿಡಿದೆದ್ದು, ಹೋರಾಟಕ್ಕಿಳಿದ ಮಹಿಳೆಯೊಬ್ಬಳು ಸಮಾಜದಿಂದ ಅನುಭವಿಸಿದ ಕಷ್ಟಕೋಟಲೆಗಳು ಹಾಗೂ ಪುರಸ್ಕಾರಗಳ ಕಥೆ ಇದು. ಸ್ವಾತಂತ್ರ್ಯಾನಂತರವೂ, ಇದು ಶಿಕ್ಷಾರ್ಹ ಅಪರಾಧವಾಗಿರುವ ಈ ಸಂದರ್ಭದಲ್ಲಿ, 'ಇಂತಹ ಮದುವೆಗಳು ನಡೆಯುತ್ತಿರುವುದಕ್ಕೆ ಅನಕ್ಷರತೆ ಕಾರಣ ಎನ್ನಬೇಕೇ? ಅಜ್ಞಾನ ಎನ್ನಬೇಕೇ? ಅಥವಾ ಮೂಢನಂಬಿಕೆ ಎನ್ನಬೇಕೇ ? ಎಂಬ ಪ್ರಶ್ನೆಗಳ ಸರಮಾಲೆ ನಮ್ಮ ಮುಂದಿದೆ.

## ಅಭ್ಯಾಸ

೧. ಶಬ್ದಾರ್ಥ :

ಬೋಳಿಸು - ಗುಡಿಸಲು ; ಅಬ್ಬರಿಸು - ಗಟ್ಟಿಯಾಗಿ ಹೇಳು ; ಖಾನಾಪ್ - ಮದುವೆ ಗಂಡು; ಉಜ್ವಲ - ಪ್ರಕಾಶಮಾನ ; ಹಿರಿ - ಜನ್ಮಕೊಡು ; ದಿಟ್ಟತನ - ಧೈರ್ಯದಿಂದ ಕೂಡಿದ ನಡವಳಿಕೆ.

೨. ಟಿಪ್ಪಣಿ :

ಸಾಥಿನ್ : ಸಾಮಾಜಿಕ ಬದಲಾವಣೆಗಾಗಿ ಸರ್ಕಾರದೊಂದಿಗೆ ದುಡಿಯುವ ಗ್ರಾಮೀಣ ಮಹಿಳೆಯನ್ನು ರಾಜಸ್ಥಾನದಲ್ಲಿ 'ಸಾಥಿನ್' ಎಂದು ಕರೆಯುತ್ತಾರೆ.

ಭತೇರಿ : ರಾಜಸ್ಥಾನದ ಒಂದು ಗ್ರಾಮ. ಇದು ರಾಜಸ್ಥಾನದಲ್ಲಿದೆ.

ನೀರ್ಜಾ ಭಾನೋಟ್ ಪ್ರಶಸ್ತಿ : ನೀರ್ಜಾ, ಸಾಹಸ ಪ್ರದರ್ಶನಕ್ಕಾಗಿ ಭಾರತ ಸರ್ಕಾರ ನೀಡುವ ಉನ್ನತ ಪ್ರಶಸ್ತಿ ಎಂದರೆ 'ಅಶೋಕ ಚಕ್ರ'. ಇಂತಹ ಗೌರವಕ್ಕೆ ಪಾತ್ರಳಾದ

ಅನುಬಂಧ - 2

# ೨೨. ನಾನೊಂದು ಮರವಾಗಿದ್ದರೆ

[illegible]

[illegible]



[illegible]

## ೧೫. ಮಿರ್ಜಾರ ಮಾನವೀಯತೆ

ಡಿ.ವಿ.ಜಿ.

[illegible]



[illegible]

[illegible]

[illegible]

[illegible]

ವೇಳೆಗೆ ರಾತ್ರಿ ಒಂಬತ್ತು - ಹತ್ತು ಘಂಟೆಯಾಗಿತ್ತು, ಜನಸಂದಣಿ ಬಹಳ ದೊಡ್ಡದಾಗಿತ್ತು, ಆ ಗದ್ದಲದಲ್ಲಿ ಎಂ. ಪಿ. ಸೋಮಶೇಖರರಾದಿಯಾಗಿ ನಾನೂ ಬೇರೆಬೇರೆಯಾದೆವು. ನಾನು ಅವರನ್ನು ಹುಡುಕುತ್ತ ಶ್ಮಶಾನ ಪ್ರದೇಶದ ಗೇಟಿನವರೆಗೆ ಬಂದೆ. ಅಲ್ಲಿ ಒಬ್ಬಾತ ಬಿಕ್ಕಿಬಿಕ್ಕಿ ಅಳುತ್ತ ನಿಂತಿದ್ದ, ಆತನ ಬಟ್ಟೆಯ ರೀತಿಯಿಂದ ಆತ ಹಿಂದೂ ಎಂದು ನನಗೆ ತೋರಿತು. ನಾನು ಆತನನ್ನು ಮಾತಾಡಿಸಿದೆ -

ನಾನು : 'ನೀವು ಯಾರು?'

ಆತ : 'ಸ್ವಾಮಿ, ನಾನು ಡ್ರೈವರ್ ಕೆಲಸದವನು. ಒಂದು ದಿನ ಬೆಳಿಗ್ಗೆ ನನ್ನ ಹೆಂಡತಿ ನೀರಿಗಾಗಿ ಬಸವನ್ನ ಪಾರ್ಕಿನ ಪಕ್ಕದ ಕೊಳಾಯಿಗೆ ಹೋದಳು. ಬಹಳ ಹೊತ್ತಾದರೂ ಹಿಂದಿರುಗಲಿಲ್ಲ. ಆ ದಿನ ನೀರು ಹಿಡಿಯುವುದಕ್ಕೆ ಹೋದವರು ಬಹುಮಂದಿ ಅಲ್ಲಿ ಸೇರಿದ್ದರು. ಅದ್ದರಿಂದ ಜಗಳಗಳೂ ಗಲಾಟೆಯೂ ನಡೆಯಿತು. ಸುಮಾರು ಒಂದು ಘಂಟೆ ಕಾದ ಮೇಲೆ ನನ್ನ ಹೆಂಡತಿಗೆ ನೀರು ಸಿಕ್ಕಿತು.

'ಆಕೆ ಬಡವಿ. ಆ ದೊಡ್ಡ ಕೊಡವನ್ನು ಹೊರಲಾರದೆ ಹೊತ್ತುಕೊಂಡು ಬಂದಳು. ಅಲ್ಲಿ ಜಗಳವಾದದ್ದರಿಂದಲೂ ಯಾರೋ ಆಕೆಯನ್ನು ಬೈದದ್ದರಿಂದಲೂ ಆಕೆಗೆ ಮೈಸ್ವಸ್ಥವಿಲ್ಲದೆ ರೋಗವಾಗಿದ್ದದ್ದರಿಂದಲೂ ಆಕೆ ಕಣ್ಣೀರು ಹಾಕುತ್ತ ಮನೆಗೆ ಬಂದಳು. ಆಕೆಯ ಹಿಂದೆ ಒಬ್ಬ ಸರಕಾರದ ಜವಾನ ಬಂದು, 'ಈ ಮನೆ ಯಾರದು?' ಎಂದು ಕೇಳಿದ. ನಾನು 'ಏಕೆ?' ಎಂದೆ. ಆತ ಹೇಳಿದ : 'ದಿವಾನ್ ಸಾಹೇಬರ ಸವಾರಿ ಸೇಂಟ್ ಮಾರ್ಥಾ ಆಸ್ಪತ್ರೆಯ ಹತ್ತಿರ ನಿಂತಿದೆ. ಸಾಹೇಬರು ಈ ಹೆಂಗಸಿನ ಜೊತೆಯಲ್ಲಿ ಹೋಗಿ ಮನೆ ತಿಳಿದುಕೊಂಡು ಬರುವಂತೆ ಹೇಳಿದರು. ಅದಕ್ಕಾಗಿ ಬಂದಿದ್ದೇನೆ' ಎಂದ.

'ಅದನ್ನು ಕೇಳಿ ನನಗೆ ಗಾಬರಿಯಾಗಿ ಏನು ಅನಾಹುತವಾದರೋ ನೋಡೋಣವೆಂದು ಆ ಜವಾನನ ಜೊತೆಯಲ್ಲಿ ದಿವಾನರಿದ್ದಲ್ಲಿಗೆ ಹೋದೆ. ನಾನು ಹೋಗಿ ಕೈಮುಗಿಯುತ್ತಲೇ ಸಾಹೇಬರು 'ನೀನು ಯಾರು?' ಎಂದು ಮೆಲ್ಲಗೆ ಕೇಳಿದರು. ನಾನು ಇದ್ದ ಸಂಗತಿ ಹೇಳಿದೆ. ಅವರು 'ನಿಮ್ಮ ಮನೆಯಲ್ಲಿ ಕೊಳಾಯಿ ಇಲ್ಲವೋ?' ಎಂದು ಕೇಳಿದರು. ನಾನು 'ಇಲ್ಲ, ಸ್ವಾಮಿ. ಅಷ್ಟಕ್ಕೆ ಅನುಕೂಲವಿಲ್ಲ. [illegible] ನೀರು [illegible] ಎಂದೆ. ಸಾಹೇಬರು 'ನೀರು ಕೊಳಾಯಿಗೆ ನಿಮ್ಮ ಮನೆಗೂ ಎಷ್ಟು ದೂರ?' ಎಂದು ಕೇಳಿದರು. ನಾನು 'ಇನ್ನೂ ಮೈಲಿ ಆಗಬಹುದು ಸ್ವಾಮಿ. ನನ್ನ ಮನೆ [illegible] ಓಣಿಯ ಕೊನೆಯಲ್ಲಿ. [illegible]' ಎಂದೆ.

* ಆಶಯ *

[illegible]

### ಅಭ್ಯಾಸ

ಪದಾರ್ಥ :

[illegible]

### ಪ್ರಶ್ನೆಗಳು

ಅ. ಒಂದು ಅಥವಾ ಎರಡು ವಾಕ್ಯಗಳಲ್ಲಿ ಉತ್ತರಿಸಿ.

೧. [illegible]?
೨. [illegible]?
೩. [illegible]?
೪. [illegible]?
೫. [illegible]?
೬. [illegible]?
೭. [illegible]?
೮. [illegible]?
೯. [illegible]?

ಆ. ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

೧. [illegible]?
೨. [illegible]?
೩. [illegible]?
೪. [illegible]?

[illegible]